ಮೇ 1998 ಮಾಸ ಪತ್ರಿಕೆ ರೂ. 10

ಸತ್ತ ಡಿ.ಸಿ. ಪ್ರತ್ಯಕ್ಷ !

ಬಿಸಿಲ ಬದುಕು

• ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ



ಜೀವತೆತ್ತ ರೈತರು
ಹೊಣಗೇಡಿ ಸರ್ಕಾರ

❖

ಸಿಝೇರಿಯನ್ ಹೆರಿಗೆ ಬೇಕೆ ? ಏಕೆ ?

❖

NDA
ಸಂಪೂರ್ಣ ವಿವರ

ಮೇ ೧೯೯೮ ಸಂಪುಟ ೧ ಸಂಚಿಕೆ ೧೧

ಬಿಸಿಲ ಬದುಕು

ಮಾಸಪತ್ರಿಕೆ

• ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ



ವಿದ್ಯೆ-ಉದ್ಯೋಗ

ಸ್ಥಿರ ಶೀರ್ಷಿಕೆಗಳು

ಸತ್ತ ಬಿ.ಸಿ. ಪ್ರತ್ಯಕ್ಷ!

ಪಂಜಾಬ್‌ನಲ್ಲಿ ಸತ್ತ ಜಿಲ್ಲಾಧಿಕಾರಿ ಕರ್ನಾಟಕದಲ್ಲಿ ಹುಟ್ಟಿದ ಬಗೆಗಿನ ವರದಿಗಳು ತೀವ್ರ ಕುತೂಹಲ ಕೆರಳಿಸಿವೆ. ಈ ಹಿನ್ನೆಲೆಯಲ್ಲಿ ಬಾಲಕನನ್ನು ಮಾತನಾಡಿಸಿ ಸಿದ್ಧಪಡಿಸಿದ ಲೇಖನ ಹಾಗೂ ವಿಚಾರವಾದಿ ಡಾ. ಅಬ್ರಹಾಂ ಕೋವೂರ್ ಅವರ ಅಭಿಪ್ರಾಯ.

ಸಂಪಾದಕ
ಚಂದ್ರಕಾಂತ ವಡ್ಡು

ಸಂಪಾದಕೀಯ ನೆರವು
ಎಚ್.ಎಂ. ಪಂಡಿತಾರಾಧ್ಯ

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ವೈ.ಬಿ. ವಿಜಯಕುಮಾರ

ಅಕ್ಷರ ಜೋಡಣೆ
ಜಿ. ಸುರೇಶ್
ಕೋಕಿಲ

ಲೇಖಕರು :
ನಗರಿ ಬಾಬಯ್ಯ
ಡಾ. ವಿಜಯ್ ಅಂಗಡಿ
ಹೇಮಲತಾ ದೇಸಾಯಿ
ಎನ್. ಆರ್. ಪಾಟೀಲ
ಮೊಗಳ್ಳಿ ಗಣೇಶ್
ಡಾ. ವಸಂತ ಕುಲಕರ್ಣಿ
ವೀರೇಶ ಯಂಗಟಿ
ಕೆ. ಲೀಲಾವತಿ
ದೀಪಾ ರವೀಂದ್ರ
ಮಾಧವ ಐತಾಳ್
ಡಾ. ಹೆಚ್.ಎಸ್. ವೆಂಕಟೇಶ
ಆರೂರು ಲಕ್ಷ್ಮಣ್ ಶೇಟ್
ಅಂಕೋಲಾ ದೇವಿದಾಸ ಸುವರ್ಣ
ಎಂ. ಮೊಹ್ಮದ್ ಬಾಷ ಗೂಳ್ಯಂ
ನಾರಾಯಣ ಎಂ. ಭಟ್
ಡಾ. ಸುನಂದಾ ಕುಲಕರ್ಣಿ
ಉತ್ತನೂರು ವ್ಯಾನ್ಸ್
ಕೋ. ಚೆನ್ನಬಸಪ್ಪ
ಚಂದ್ರಕಾಂತ ಭಟ್
ಡಾ. ಎಸ್.ಸಿ. ಶರ್ಮಾ
ಉಷಾ ನವರತ್ನರಾಮ್
ವಸಂತ ಮುರ್ಡೇಶ್ವರ

ಮುಖಪುಟ ವಿನ್ಯಾಸ
ಚಂದ್ರಶೇಖರ ಗುಬ್ಬಿ

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ : ೩೩೦೭೮೧೦

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Fax : 080 5091136 Pager : 9622 738638 Printed at M.N.S. Enterprises, Bhattarahalli, Old Madras Road, Bangalore - 49 Editor : Chandrakanta Vaddu

ಟಪಾಲು

ಮೊದಲ ಮುಖ್ಯಮಂತ್ರಿ

ಮಾರ್ಚ್ ಸಂಚಿಕೆಯ 'ವಿದ್ಯೆ ಉದ್ಯೋಗ' ವಿಭಾಗದಲ್ಲಿ (ಪುಟ೫೭) ಕರ್ನಾಟಕದ ಮೊದಲ ಮುಖ್ಯಮಂತ್ರಿ ಯಾರು ಎಂಬ ಪ್ರಶ್ನೆಗೆ ಎಸ್. ಆರ್. ಕುಂಠಿ ಎಂದು ಉತ್ತರಿಸಲಾಗಿದೆ. ಸರಿಯುತ್ತರ ದೇವರಾಜ ಅರಸ್ ಅಲ್ಲವೆ?

- ಜಿ. ಸುಮ ಕೃಷ್ಣಮೂರ್ತಿ, ಕುಂಸಿ.

[ಎಸ್.ಆರ್.ಕಂಠಿ ಎಂಬುದೇ (ಎಸ್.ಆರ್.ಕುಂಠಿ ಅಲ್ಲ) ಸರಿ. ಕರ್ನಾಟಕ ಎಂದು ನಾಮಕರಣವಾದ ನಂತರದ ಮೊದಲ ಮುಖ್ಯಮಂತ್ರಿ ದೇವರಾಜ ಅರಸ್ - ಸಂ]

◆

ಮನೆ ವಿವಾದದ ಮೂಲ ಪ್ರಶ್ನೆ ಎಂಬ ಶೀರ್ಷಿಕೆ ನೋಡಿ 'ಮನೆ' ಪತ್ರಿಕೆ ವಿಷಯವಿರಬೇಕೆಂದು ಓದುತ್ತಾ ಹೋದರೆ ವಿಷಯವೇ ಬೇರೆ.

ಸಾಹಿತಿಗಳಿಗೆ ಹಣದ ಹುಚ್ಚು ಆಸ್ತಿಯ ಹುಚ್ಚು ಹಿಡಿದಿದೆ ಎನ್ನುವುದಕ್ಕೆ ಲೇಖನ ಕೈಗನ್ನಡಿಯಾಗಿದೆ.

- ಮೈತ್ರಾ, ಹದಡಿ, ಬೆಂಗಳೂರು

◆

ಜೆ.ಹೆಚ್. ಪಟೇಲ್ ಅವರು ಡಾಲರ್ ಕಾಲೋನಿಯಲ್ಲಿ ಯು.ಆರ್. ಅನಂತಮೂರ್ತಿ ಯವರಿಗೆ ಅಗ್ಗದ ಬೆಲೆಯಲ್ಲಿ ಮನೆ ಕೊಟ್ಟದ್ದು ಎಂಥ ನಾಚಿಕೆಗೇಡಿತನ? ಪಾಟೇಲ್‌ರ ಕೀಳು ಬುದ್ಧಿಗೆ ಇದು ಒಂದೇ ಉದಾ: ಸಾಕು. ಇವರ ಲೋಹಿಯಾವಾದಿ ರಾಜಕೀಯಕ್ಕೆ ಬೆಂಕಿ ಹಾಕ, ನೀತಿಗೆಟ್ಟ ಆಡಳಿತ ಮಾಡುವ ಇವರಿಗೆ, ಇವರ ಸರಕಾರಕ್ಕೆ ಧಿಕ್ಕಾರ!

- ಬಾಬು ಬೆಟ್ಟದೂರು, ಕಪ್ಪಗಲ್ಲು

ಕ್ವಿಜ್ ೧೦

ಕ್ವಿಜ್ ೧೦ರ ೫ನೇಯ ಪ್ರಶ್ನೆ ಹೀಗಿದೆ. ಭಾರತದ ಪ್ರವಾಸದಲ್ಲಿರುವ ಆಸ್ಟ್ರೇಲಿಯಾ ದೇಶದ ಕ್ರಿಕೆಟ್ ತಂಡದ ನಾಯಕ ಯಾರು? ಇದಕ್ಕೆ ಉತ್ತರವಾಗಿ ಎರಡು ಹೆಸರು ಬರೆಯಬೇಕಾಗುತ್ತದೆ. ಏಕೆಂದರೆ ಆಸ್ಟ್ರೇಲಿಯಾ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಮಾರ್ಕ್ ಟೇಲರ್ ಆದರೆ ಒಂದು ದಿನದ ಅಂತರ್‌ರಾಷ್ಟ್ರೀಯ ಪಂದ್ಯಗಳ ನಾಯಕ ಸ್ಟೀವ್ ವಾ.

-ಜಿ. ಇಮ್ತಿಯಾಜ್, ಹರಪನಹಳ್ಳಿ

[ಈ ಕಾರಣಕ್ಕಾಗಿಯೇ ಮಾರ್ಕ್ ಟೇಲರ್ ಹಾಗೂ ಸ್ಟೀವ್ ವಾ ಎರಡೂ ಹೆಸರನ್ನು ಸರಿಯುತ್ತರ ಎಂದು ಪರಿಗಣಿಸಿದ್ದೇವೆ. ಸಂ]

ಖುಷಿ ತಂದ ಸಂಗತಿ

ಬಹಳ ಸಮಯಗಳ ನಂತರ ಇಂತಹ ಒಂದು ಪತ್ರ ಬರೆಯಲು ನೀವು ಹೊರತಂದ 'ಬಿಸಿಲ ಬದುಕು' ಮುಖ್ಯ ಕಾರಣ. ಯುಗಾದಿ ಸಂಚಿಕೆ ಓದುತ್ತಿದ್ದಾಗ ನನಗೆ ಅತೀವ ಸಂತಸ ಆಯಿತು. ನಮ್ಮ ಗೆಳೆಯನೊಬ್ಬ ಒಂದು ಉತ್ತಮ ಮ್ಯಾಗಜಿನ್ ತರುತ್ತಿದ್ದಾರಲ್ಲ ಎನ್ನುವುದಕ್ಕಾಗಿ. ಅದರಲ್ಲೂ ವಿಶೇಷ ಸಂಚಿಕೆಯ ಪ್ರತಿಯೊಂದು ಲೇಖನ ನನಗೆ ಬಹಳ ಹಿಡಿಸಿತು. ನನ್ನ ಆತ್ಮೀಯ ಗೆಳೆಯನ ಕಥೆ 'ಪಟ್ಟಾ' ಬಹುಮಾನಿತ ಕತೆಯಾಗಿ ಆಯ್ಕೆಗೊಂಡಿರುವುದು ಇನ್ನಷ್ಟು ಖುಷಿ ತಂದ ಸಂಗತಿ.

- ಸದಾನಂದ ಪೆರ್ಲ, ಗುಲಬರ್ಗಾ.

ಯುಗಾದಿ ವಿಶೇಷಾಂಕ ಸುಂದರವಾಗಿ ಮೂಡಿ ಬಂದಿದೆ. ಆದರೆ ಅದಕ್ಕೊಂದು ಕಪ್ಪು ಚುಕ್ಕೆಯಿಟ್ಟಂತೆ ಶಂಕರಗೌಡ ವೈ. ಪಾಟೀಲರ ಸಮಯ ಪ್ರಜ್ಞೆ (ಸರ್ ಎಂ.ವಿ. ಯವರನ್ನು ಕುರಿತು) ಎಂಬ ಪುಟ್ಟ ಬರಹ ಪುಟ ೯೫ರಲ್ಲಿ ಮೂಡಿ ಬಂದಿದೆ. ಇದೇ ರೀತಿಯ ಲೇಖನವೊಂದು ಸ್ವಲ್ಪ ಮಾರ್ಪಾಟು ಹೊಂದಿ ಕಸ್ತೂರಿ ಮಾಸಿಕ ಪುಟ-೭೮ರಲ್ಲಿ 'ದೊಡ್ಡವರ ಜೀವನದಿಂದ ಅಂಕಣದಡಿಯಲ್ಲಿ ಬಂದಿದೆ. ಸುಭಾಷಚಂದ್ರ ಬೋಸ್‌ರ ಕುರಿತ ಈ ಬರಹ ಸ್ವರ್ಣಮಾ ಅವರದಾಗಿದೆ.

ನನ್ನ ಪ್ರಶ್ನೆ ಏನೆಂದರೆ, ಕೇವಲ ಒಂದೇ ತಿಂಗಳ ಅವಧಿಯಲ್ಲಿ ಎರಡು ಉತ್ತಮ ಪತ್ರಿಕೆಗಳು ಇಬ್ಬರು ಶ್ರೇಷ್ಠ ವ್ಯಕ್ತಿಗಳ ಜೀವನಕ್ಕೆ ಸಂಬಂಧಿಸಿದ ಸಂಗತಿಯನ್ನು ಈ ರೀತಿ ತಿರುಚಿ ಪ್ರಕಟಿಸುವದು ಸೂಕ್ತವೇ? ಅಥವಾ ಬೋಸ್ ಹಾಗೂ ಎಂ. ವಿ. ಯವರಿಬ್ಬರ ಜೀವನದಲ್ಲೂ ಈ ಘಟನೆ ನಡೆದಿತ್ತೇ?

- ಮ.ಶಿ. ನಿಂಬರಗಿ, ಬಳಗಾನೂರ

ಮಕ್ಕಳಲ್ಲಿ ಪತ್ರಿಕೆ ಓದುವ, ನೋಡುವ ಹವ್ಯಾಸ ಅಹಮಿಕೆಯನ್ನು ಜಾಗೃತಗೊಳಿಸುವುದಕ್ಕಾಗಿ ಪುಟ ಮೀಸಲಿಟ್ಟಿದ್ದಕ್ಕೆ ಧನ್ಯವಾದ ಸಲ್ಲಿಸದೆ ಇರಲಾರೆ. ಅವರಿಗೆ ಬೇಕಾದ ಸಾಹಿತ್ಯದ ಕಡೆಗೂ ಅವರನ್ನು ತಿರುಗಿಸುವ ಕಾರ್ಯವಾಗಬೇಕಾಗಿದೆ. ಆ ದಿಶೆಯಲ್ಲೂ ಚಿಂತನ ಮಾಡಿರಿ.

- ಸಿಸು ಸಂಗಮೇಶ, ವಿಜಾಪುರ

ಪ್ರತಿ ಸಲ ನಾನು ೧೫ನೇ ತಾರೀಖಿಗೆ ಹೋಗಿ ಬಿಸಿಲ ಬದುಕು ತರುತ್ತಿದ್ದೆ. ಈ ಸಲ ೧೫ನೇ ತಾರೀಖು ಆಗಿ ಹೋಗಿ ೨೬.೩.೯೮ ಬಂದರೂ ಹೊನ್ನಾವರಕ್ಕೆ ಪತ್ರಿಕೆ ಬರಲಿಲ್ಲ. ಬಿಸಿಲ ಬದುಕು ಇಲ್ಲದಿದ್ದರೆ ನನ್ನ ಮನಸ್ಸಿಗೆ ಬೇಜಾರಾಗುತ್ತದೆ.

ತಮ್ಮಲ್ಲಿ ಕಳಕಳಿಯಾಗಿ ಬಹಳ ದುಃಖದಿಂದ ಕೇಳುತ್ತಿದ್ದೇನೆ. ಈ ಸಲ ಬಿಸಿಲ ಬದುಕು ಹೊನ್ನಾವರಕ್ಕೆ ಏಕೆ ಬರಲಿಲ್ಲ?

- ವಿಜೇತ ವಿ.ಪೈ, ಹೊನ್ನಾವರ

[ಪ್ರತಿ ತಿಂಗಳು ೧೫ನೇ ತಾರೀಖು ಮಾರುಕಟ್ಟೆಗೆ ಬರುತ್ತಿದ್ದ 'ಬದುಕು' ಇನ್ನುಮೇಲೆ ೨೯ನೇ ತಾರೀಖು ನಿಮ್ಮನ್ನು ತಲುಪುತ್ತದೆ. ಈ ಬಗ್ಗೆ ನಿಮಗೆ ಮುಂಚಿತವಾಗಿ ತಿಳಿಸಲು ಸಾಧ್ಯವಾಗದ್ದಕ್ಕೆ ವಿಷಾದಿಸುತ್ತೇವೆ. ಸಂ.]

೨೮ರ ರಾತ್ರಿ ೯ ಗಂಟೆ. ವಿಪರೀತ ಕಾಲು ನೋವಿನಿಂದ ನರಳುತ್ತ ಕುಳಿತಿದ್ದೆ. ನಮ್ಮವರು 'ಬಿಸಿಲ ಬದುಕು' ಉಗಾದಿ ವಿಶೇಷಾಂಕ ತಂದು ಕೈಗೆ ಕೊಟ್ಟು ಉಗಾದಿ ಹಬ್ಬದ ಉಡುಗೊರೆ ಇದರಲ್ಲಿದೆ. ನಿನ್ನ ಕತೆಗೆ ಬಹುಮಾನ ಬಂದಿದೆ ಅಂದರು. ನೋಡುವವರೆಗೂ ನನಗೆ ನಂಬಿಕೆಯಿಲ್ಲ. ಕಂಡದ್ದೇ ಕಾಲು ನೋವಿನ ಬೇವು ಮರೆಯಾಗಿ ಸಂತಸದ ಬೆಲ್ಲದ ಸಿಹಿ ಮೈಮನಗಳಲ್ಲಿ ತುಂಬಿತು. ದುಃಖವನ್ನಾದರೂ ಪದಗಳಲ್ಲಿ ಹಿಡಿದಿಡಬಹುದು. ಆದರೆ ಸಂತೋಷವನ್ನು ಸಮರ್ಥವಾಗಿ ಹೇಗೆ ಅಭಿವ್ಯಕ್ತಿಸುವುದು? ಬಹುಮಾನದ ಮೊತ್ತ ಹೆಚ್ಚಿದ್ದಾಗ, ಪ್ರತಿಷ್ಠಿತ ಸ್ಪರ್ಧೆ ಎನಿಸಿಕೊಂಡಾಗ ವಶೀಲಿ ಪ್ರಭಾವಗಳು ತುಂಬಾ ನಡೆಯುತ್ತವೆ ಎನ್ನುತ್ತಾರೆ. ಇಲ್ಲಿ ಹಾಗೇನೂ ಆಗದೆ ಇರುವುದನ್ನು ಕಾಣುವಾಗ ನಿಮ್ಮ ಬಗ್ಗೆ ಇದ್ದ ಗೌರವ ಹೆಚ್ಚಿದೆ.

- ಯು. ಆರ್. ಲಲಿತಾ, ಬೆಂಗಳೂರು

ತಮ್ಮಲ್ಲಿ ನನದೊಂದು ಮನವಿ. ಯಾವುದೇ ಕಾರಣಕ್ಕೂ ತಮ್ಮ ಮಾಸಪತ್ರಿಕೆಯಲ್ಲಿ ರಾಜಕೀಯದ ವಿಷಯ ಪ್ರವೇಶ ಆಗಕೂಡದು.

- ಅಂಜು ಶೆಟ್ಟಿ, ಕೊಪ್ಪಳ

ಧನ್ಯವಾದಗಳು

ಮೊಟ್ಟ ಮೊದಲಿಗೆ ಧನ್ಯವಾದಗಳು. ಏಕೆಂದರೆ ನಾನು ಎಫ್.ಡಿ.ಎ. ಪರೀಕ್ಷೆಯಲ್ಲಿ ಪಾಸಾಗಬಹುದು. ಅದಕ್ಕೆ ಕಾರಣ 'ಬಿಸಿಲ ಬದುಕು' ಎಂದರೆ ಅತಿಶಯೋಕ್ತಿಯಲ್ಲ. ಮೊದಲ ಸಂಚಿಕೆಯಿಂದ ನಿಯಮಿತವಾಗಿ ಓದುತ್ತಿದ್ದೇನೆ.

- ಅಶೋಕರಾಜ ಮಜ್ಜಿಗಿ, ಬಾಗಲಕೋಟ

ಅಪೂರ್ಣ ಮಾಹಿತಿ

ಮಾರ್ಚ್ ೯೮ರ ಸಂಚಿಕೆಯ ಪುಟ ೪೨ರಲ್ಲಿ 'ಕನ್ನಡ-ಕನ್ನಡಿಗ-ಕರ್ನಾಟಕ' ಕುರಿತು ೯ನೇ ಪ್ರಶ್ನೆಗೆ

ನೀಡಿದ ಉತ್ತರದಲ್ಲಿ ಮಾಹಿತಿ ಅಪೂರ್ಣವೆಂದೆನಿಸಿದ್ದರಿಂದ ಈ ಪತ್ರ ಬರೆಯುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಮೈಸೂರು, ಕರ್ನಾಟಕ, ಬೆಂಗಳೂರು, ಮಂಗಳೂರು, ಗುಲ್ಬರ್ಗಾ, ಕುವೆಂಪು, ಹಂಪಿ ಕನ್ನಡ ವಿಶ್ವವಿದ್ಯಾನಿಲಯಗಳಲ್ಲದೇ ಕರ್ನಾಟಕ-ಮುಕ್ತ ವಿಶ್ವವಿದ್ಯಾನಿಲಯವು ಮೈಸೂರಿನಲ್ಲಿದೆ. ರಾಜೀವಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿ ಬೆಂಗಳೂರಿನಲ್ಲಿದೆ. ಇದಲ್ಲದೇ ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು (Indian Institute of Science, Bangalore), ಭಾರತೀಯ ವ್ಯವಸ್ಥಾಪನಾ ನಿರ್ವಹಣ ಸಂಸ್ಥೆ. (Indian Institute of Management, Bangalore), ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಷನ್ (MAHE) ಇವು ಘೋಷಿತ ವಿಶ್ವವಿದ್ಯಾನಿಲಯಗಳಾಗಿವೆ (Deemed University). ಜೊತೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಸ್ಥಾಪನೆಯ ಪ್ರಾರಂಭಿಕ ಕೆಲಸಗಳೆಲ್ಲವೂ ಮುಗಿದಿವೆ. (ಹೆಬ್ಬಾಳ ಮತ್ತು ಧಾರವಾಡದಲ್ಲಿ ಪ್ರತ್ಯೇಕ ಕೃಷಿ ವಿಶ್ವವಿದ್ಯಾನಿಲಯಗಳು ಇವೆ) ಬೆಂಗಳೂರಿನಲ್ಲಿರುವ NIMHANS ಕೂಡ ಒಂದು Deemed University.

- ಆರ್.ವಿ. ಹೆಗಡೆ, ಭದ್ರಾವತಿ.

ನಿಷ್ಕರ್ಷ ಅಲ್ಲ

ಮಾರ್ಚ್ ಸಂಚಿಕೆಯ 'ತಾರಾ ಬದುಕು' ವಿಭಾಗದಲ್ಲಿ ದಕ್ಷ ಪೋಲಿಸ್ ಅಧಿಕಾರಿ, ನಟ, ನಿರ್ಮಾಪಕರ ಬಗ್ಗೆ ಉತ್ತಮ ಮಾಹಿತಿ ನೀಡಿದ್ದು ಆದರೆ ಆ ಲೇಖನದಲ್ಲಿ ಅವರ 'ನಿಷ್ಕರ್ಷ' ಚಿತ್ರೀಕರಣ ಸಮಯದಲ್ಲಿ ಕ್ಯಾಮೆರಾ ಒಡೆದು ೧೨ ಲಕ್ಷ ನಷ್ಟವಾಗಿದೆ ಎಂದಿದೆ. ಆದರೆ ಇದು ನಡೆದದ್ದು ಅವರ ನಿರ್ಮಾಣದ 'ನಿರ್ಬಂಧ' ಚಿತ್ರದ ಚಿತ್ರೀಕರಣದಲ್ಲಿ ಎಂದಿರಬೇಕು.

-ಕೆಂ. ಕ. ಕುಮಾರ, ಬೆಂಗಳೂರು

ಇತ್ತೀಚಿನ ಸಂಚಿಕೆಗಳು ಆಕರ್ಷಕವಾಗಿ ಹೊರಬರುತ್ತಿದ್ದು ಇದರಲ್ಲಿ ಎಲ್ಲರಿಗೂ ಬೇಕಾಗಿರುವ ಮಾಹಿತಿ, ಲೇಖನ, ವಿಷಯ ಬಹಳ ಅತ್ಯುತ್ತಮವಾಗಿದೆ. ಕನ್ನಡದಲ್ಲಿ ಈ ರೀತಿ ನೀಡುವ ಇದೊಂದೆ ಪತ್ರಿಕೆ. 'ಬಿಸಿಲ ಬದುಕು' ಇನ್ನು ಯಶಸ್ವಿಯಾಗುತ್ತ ಸಾಗಲಿ.

- ವಿಜಯಾನಂದ ಕಾಲವಾಡ, ಧಾರವಾಡ

ನಿಮ್ಮ 'ಬಿಸಿಲ ಬದುಕು' ಪತ್ರಿಕೆಯನ್ನು ಮೊದಲಿನಿಂದಲೂ ಗಮನಿಸುತ್ತಿದ್ದೇನೆ ಕನ್ನಡದಲ್ಲಿ ಇಂಥದೊಂದು ಪತ್ರಿಕೆಯ ಅಗತ್ಯವಿತ್ತು, ಬದುಕನ್ನು ಎಳೆ ಬಿಸಿಲಿನಂತೆ ಸ್ವಚ್ಛವಾಗಿಡಲು ಇದೊಂದು ಮಾರ್ಗದರ್ಶಿ.

-ರೇಖಾ ಕಾಖಂಡಕಿ, ಬೆಂಗಳೂರು

ಅರ್ಥ - ಅಪಾರ್ಥ

ಸಾರ್ವಜನಿಕ ಗ್ರಂಥಾಲಯ ಇಲಾಖೆಯವರು ಪುಸ್ತಕಗಳು ಆಯ್ಕೆಗೊಂಡ ಬಗ್ಗೆ ಸಂಬಂಧಿಸಿದ ಲೇಖಕ-ಪ್ರಕಾಶಕರಿಗೆ ತಿಳಿಸುವ ವ್ಯವಸ್ಥೆ ಮಾಡಿದರೆ ತುಂಬಾ **ಅಪಕಾರಿಯಾಗುತ್ತದೆ.**

[*ಕನ್ನಡಪ್ರಭ,* ಜನನಾಡಿ ವಿಭಾಗ] **- ಸಂಗೀತಾ,** ಬೆಂಗಳೂರು.

ಲೋಕಶಕ್ತಿ ನಾಯಕ ಹಾಗೂ ಕೇಂದ್ರ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಅವರ ವಿರುದ್ಧ ಜಯಲಲಿತಾ ಅವರು ಮಾಡಿರುವ **ಅಪರಾಧಗಳು** ನಿರಾಧಾರವೆಂದು ಜೀವರಾಜ ಆಳ್ವ ಅವರು ಹೇಳಿದ್ದಾರೆ.

[*ಉದಯವಾರ್ತೆ,* ೨೧.೪.೧೯೯೮] **- ಗೋಪಾಲಕೃಷ್ಣ,** ಉಡುಪಿ.

ಅಜರುದ್ದೀನ್ ''ಬೇರೆಯವರಿಗಿಂತ ನಾವು **ಅವರನ್ನು** ಉತ್ತಮವಾಗಿ ಆಡುವೆವು' ಎನ್ನುವ ವಿಶ್ವಾಸ ವ್ಯಕ್ತಪಡಿಸಿದರು.

[*ಪ್ರಜಾವಾಣಿ,* ೮.೩.೧೯೯೮] **-ರಾಧಾ ಶ್ರೀರಾಮ ಪಾಟೀಲ್,** ಗೋಕಾಕ್.

ಲೋಕಶಕ್ತಿ ಮತ್ತು ಐದು ರಾಜ್ಯಗಳ ವಿಧಾನಸಭೆಗಳ ಚುನಾವಣಾ ಪ್ರಕ್ರಿಯೆಯ ಮೊದಲ ಹಂತದ ಮತದಾನಕ್ಕೆ ಅಧಿಸೂಚನೆ ಹೊರಡಿಸುವುದರೊಂದಿಗೆ.......

[*ಸಂಯುಕ್ತ ಕರ್ನಾಟಕ,* ೧೯.೧.೧೯೯೮] **- ಚಂದ್ರಶೇಖರ ಎಸ್. ಕೋಳೆಕರ,** ಆಲಮಟ್ಟಿ.

೨೦೦೦ ಬಸ್ಸುಗಳನ್ನು ರಾಜ್ಯಾದ್ಯಂತ ಓಡಿಸುವುದಾಗಿ **ಪಿ.ಜಿ.ಆರ್. ಸಂಧ್ಯಾ** ರವರು ತಿಳಿಸಿದರು.

[*ದೂರದರ್ಶನ ವಾರ್ತೆ,* ೭.೩.೧೯೯೮] **- ಗೌರೀಶ್ ಕಿಣಿ,** ಶಿರಸಿ.

ಸಾರ್ವಜನಿಕರಿಗಾಗಿ **ಹೆದ್ದಾರಿಯಲ್ಲಿ** ಪುರಸಭೆ ಮೂತ್ರಾಲಯ ಕಟ್ಟದಲ್ಲಿ ಆಸ್ಪತ್ರೆಗೆ ಜನರ ನುಗ್ಗಾಟ ತಪ್ಪಬಹುದೇನೋ?

[*ಪ್ರಜಾವಾಣಿ,* ೨೧.೨.೧೯೯೮] **- ಸುಸ್ಮಿತಾ ರಾ. ಜೋಶಿ,** ಗದಗ.

ಶ್ರೀಮತಿ ಅದ್ವಾನಿ ಅವರು ಜಯಲಲಿತಾರನ್ನು ಪುಷ್ಪಗುಚ್ಛ ನೀಡಿ ಬರಮಾಡಿಕೊಂಡರು.

[*ಸಂಯುಕ್ತ ಕರ್ನಾಟಕ,* ೧೦.೩.೧೯೯೮] **-ಶಿವಕುಮಾರ ಹಡಪದ,** ಮುದ್ದೇಬಿಹಾಳ.

ಸಂಯುಕ್ತರಂಗದ ಮುಖ್ಯ ಉದ್ದೇಶಗಳಲ್ಲಿ **without corruption free** ಸರ್ಕಾರ ನೀಡುವುದೂ ಒಂದು. - ಸಿ.ಎಂ. ಇಬ್ರಾಹಿಂ.

[*ಸ್ಟಾರ್ ಟಿ.ವಿ. (ವೀಕೆಂಡ್ ಕಾರ್ಯಕ್ರಮ),*೨೮.೨. ೧೯೯೮] **- ಕೆ. ಮೋಹನ್,** ಹಾಸನ.

ಇದೊಂದು ಹೊಸ ಅಂಕಣ. ನೀವು ಓದುವ ದಿನಪತ್ರಿಕೆಗಳಲ್ಲಿ ವಾಕ್ಯದ ಅರ್ಥವನ್ನೇ ಕಳೆಯುವ ಇಂಥ ಹಲವು ಸಾಲುಗಳು ಆಗಾಗ ನುಸುಳುವುದುಂಟು. ಹೀಗೆ ಉಂಟಾಗುವ ದೋಷಗಳು ಮೇಲ್ನೋಟಕ್ಕೆ ತಮಾಷೆಯಾಗಿ ಕಂಡರೂ ಗಂಭೀರ ಪರಿಣಾಮ ಬೀರಬಲ್ಲವು. ಸ್ಥಳೀಯ ಪತ್ರಿಕೆಗಳಲ್ಲಿ, ರಾಜ್ಯ-ರಾಷ್ಟ್ರ ಮಟ್ಟದ ಪತ್ರಿಕೆಗಳಲ್ಲಿ ಇಂಥ ದೋಷಗಳನ್ನು ಹುಡುಕಿ ನಮಗೆ ಕಳಿಸಿಕೊಡಿ. ನಿಮ್ಮ ಹೆಸರಿನೊಂದಿಗೆ ಪ್ರಕಟಿಸಲಾಗುವುದು. ನೀವು ದೋಷ ಗಮನಿಸಿದ ಪತ್ರಿಕೆಯ ಅರ್ಥಾಂತರವಾದ ಭಾಗವನ್ನು ಕತ್ತರಿಸಿ ಕಳಿಸುವುದು ಅತ್ಯಗತ್ಯ. ಪತ್ರಿಕೆಯ ಹೆಸರು, ದಿನಾಂಕವೂ ಇರಬೇಕು.

-ಸಂ.

ಜೀವ ತೆತ್ತ ರೈತರು ಹೊಣೆಗೇಡಿ ಸರ್ಕಾರ

ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಸಂಭವಿಸಿದ ರೈತರ ಆತ್ಮಹತ್ಯೆ ಪ್ರಕರಣಗಳಿಗೆ 'ಬೆಳೆಹಾನಿ'ಯೇ ಕಾರಣವೆಂದು ಭಾವಿಸಲಾಗಿದೆ. ಆದರೆ ಇದು ಮೇಲ್ನೋಟದ ಸಾಂದರ್ಭಿಕ ಕಾರಣವಷ್ಟೇ. ರೈತರ ಇಂಥ ಮನಃಸ್ಥಿತಿಯ ಆಳಕ್ಕಿಳಿದು ಇಣಿಕಿದರೆ ನಮ್ಮ ವ್ಯವಸ್ಥೆಯ ಹುಳುಕುಗಳು, ರಾಜಕಾರಣಿಗಳ ಹೊಣೆಗೇಡಿತನ, ವ್ಯಾಪಾರಿಗಳ ವಂಚನೆ ಎದ್ದು ಕಾಣುತ್ತವೆ.

ಬೀದರ್, ಗುಲಬರ್ಗಾ ಭಾಗಗಳಲ್ಲಿ ಸ್ವತಃ ಸುತ್ತಾಡಿ ಸಂಗ್ರಹಿಸಿದ ಮಾಹಿತಿಯನ್ನು **ನಗರಿ ಬಾಬಯ್ಯ** ಅವರು ಇಲ್ಲಿ ಸಾದರಪಡಿಸಿದ್ದಾರೆ. ರೈತಾಪಿ ಜನರ ಈ 'ಸ್ಥಿತಿ'ಯ 'ಹಿನ್ನೆಲೆ' ಬಗ್ಗೆ ಗಂಭೀರ ಚಿಂತನೆ ನಡೆಸುವುದು ಅನ್ನ ತಿನ್ನುವ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ.

○ **ನಗರಿ ಬಾಬಯ್ಯ**

ಉತ್ತರ ಕರ್ನಾಟಕದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದು ಪತ್ರಿಕೆಗಳಲ್ಲಿ ವರದಿಯಾದಂತೆ ಇದುವರೆಗೆ ಅದು ೩೫ಕ್ಕೆ ಏರಿದೆ. ಬೀದರ್ ಜಿಲ್ಲೆಯೊಂದರಲ್ಲೇ ೧೪ ಹಾಗೂ ಗುಲಬರ್ಗಾದಲ್ಲಿ ೪. ಈ ಸುದ್ದಿ ನೆರೆಯ ಜಿಲ್ಲೆಗಳಾದ ಸಿಂಧನೂರು, ಕೊಪ್ಪಳ, ರಾಯಚೂರು, ಬಳ್ಳಾರಿ ಮತ್ತು ಧಾರವಾಡಗಳವರೆಗೂ ವ್ಯಾಪಿಸಿ ಅಲ್ಲೂ ರೈತರ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ. ಆದರೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೈತರ ಉಳಿವಿಗಾಗಿ ಯಾವ ಭರವಸೆಯನ್ನು ನೀಡಿ ಕ್ರಿಯಾಶೀಲವಾಗಿಲ್ಲದಿರುವುದು ಆಶ್ಚರ್ಯ.

ಈ ಬಗ್ಗೆ ಮೊದಲೇ ಪರಿಹಾರ ಪ್ರಕಟಿಸಿದ್ದರೆ, ಈ ತನಕ ಆದ ಆತ್ಮಹತ್ಯೆಗಳನ್ನು ತಪ್ಪಿಸಬಹುದಿತ್ತು. ಒಟ್ಟಾರೆ ಸರ್ಕಾರ ರೈತರ ಬಗ್ಗೆ ದಿವ್ಯ ನಿರ್ಲಕ್ಷ್ಯ ತೋರಿದ್ದು ಇಲ್ಲಿ ಸ್ಪಷ್ಟ. ರೈತರ ಸಾವಿಗೆ ಪರಿಹಾರ ಧನ ನೀಡುವ ಪ್ರಕಟಣೆಯೊಂದೇ ಪರಿಹಾರವಲ್ಲ. ಬದಲಾಗಿ, ಪೂರ್ಣ ಪ್ರಮಾಣದಲ್ಲಿ - ಶಾಶ್ವತ ಪರಿಹಾರ ಯೋಜನೆ ಕೈಗೊಳ್ಳಬಹುದಾಗಿತ್ತು. ಸತ್ತ ನಂತರ ಪರಿಹಾರ ನೀಡುವುದಕ್ಕಿಂತ ಸಾಯಲಾರದ ಹಾಗೆ ಯೋಜನೆ ರೂಪಿಸುವುದು ಮುಖ್ಯ. ರೈತರ ಆತ್ಮಹತ್ಯೆಗಳು ಅವರ ಅವಲಂಬಿತರನ್ನು ಅನಾಥರನ್ನಾಗಿ ಮಾಡಿವೆ. ಹೆಂಗಸರು, ಮಕ್ಕಳು ಅವರನ್ನೇ ನಂಬಿದ್ದ ಉಳಿದ ಸಂಬಂಧಿಕರ ಭವಿಷ್ಯ ಕತ್ತಲು ಕವಿದು ನಿರಾಶಾದಾಯಕವಾಗಿದೆ.



ಪ್ರಜಾತಾಂತ್ರಿಕ ಜನರ ವೇದಿಕೆ (ಪೀಪಲ್ಸ್ ಡೆಮಾಕ್ರಟಿಕ್ ಫೋರಂ)ಯ ಒಂದು ತಂಡ ೧೯೯೮ರ ಮಾರ್ಚ ೨೪ ಹಾಗೂ ೨೫ರಂದು ಬೀದರ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಭೇಟಿ ನೀಡಿತ್ತು. ಆ ಹೊತ್ತಿಗೆ ೧೩ ಆತ್ಮಹತ್ಯೆ ಪ್ರಕರಣಗಳು ಸಂಭವಿಸಿದ್ದವು. ಆಗಲೇ ಸರ್ಕಾರ ಮುಂಜಾಗ್ರತಾ ಕ್ರಮವಾಗಿ ಸೂಕ್ತ ಪರಿಹಾರ ಸೂತ್ರ ರೂಪಿಸಿದ್ದರೆ, ನಂತರದ ಸಾವುಗಳನ್ನು ತಪ್ಪಿಸಬಹುದಿತ್ತು. ರೈತರ ಸಾವಿಗೆ ಈಗ ಯಾರು ಹೊಣೆ?

ಬೀದರ ಜಿಲ್ಲೆಯೊಂದರಲ್ಲಿಯೇ ನಾವು ೭ ಹಳ್ಳಿಗಳನ್ನು ಸಂದರ್ಶಿಸಿದೆವು. ಬೆಮಲಖೇಡ್,

ಹಜ್‌ನಾಲಾ, ಸಿದ್ದೇಶ್ವರ, ಕುಂಟೆಸಿರ್ಸಿ, ಭಟಮಾರ, ಕಸರತ್‌ಗಾಂವ್ ಮತ್ತು ಕಲ್ವಾಡಿ. ಗುಲ್ಬರ್ಗಾ ಜಿಲ್ಲೆಯಲ್ಲಿ ತುಮಕುಂಟೆ ಹಳ್ಳಿಯೊಂದನ್ನು ಸಂದರ್ಶಿಸಲಾಯಿತು. ನಮ್ಮ ಪ್ರಮುಖ ಗಮನ ಬೀದರ ಜಿಲ್ಲೆಯನ್ನು ಸಂದರ್ಶಿಸುವುದಾಗಿತ್ತು. ಹುಮನಾಬಾದ್ ತಾಲೂಕಿನ ನೆಮಲಖೇಡ ಗ್ರಾಮದ ಭೀಮರಾವ ಶಿವಪ್ಪ ಪಾಟೀಲ (೫೫ ವರ್ಷ) ಅವರು ೨೨.೩.೯೮ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಅದು ನಮ್ಮ ಭೇಟಿಯ ಎರಡು ದಿನಗಳಿಗೆ ಮುಂಚೆ. ಅವರ ಸ್ನೇಹಿತ ವಿಶ್ವನಾಥ ಪಾಟೀಲ ಎನ್ನುವವರಿಗೆ ತನ್ನ ಸಾವಿನ ಹಿಂದಿನ ದಿನ, ಅಂದರೆ ೨೧.೩.೯೮ರಂದು ಪತ್ರ ಬರೆದು, ತನ್ನ ಸಾವಿಗೆ ೩ ಜನ ವ್ಯಾಪಾರಿಗಳೇ ಕಾರಣರಾಗಿದ್ದಾರೆಂದು ಪ್ರಸ್ತಾಪಿಸಿದ್ದಾನೆ. ಅವರುಗಳೆಂದರೆ ಸೂರ್ಯನಾಥ ಬಿರನಳ್ಳಿ, ವಿದ್ಯಾಸಾಗರ ಬಿರನಳ್ಳಿ ಮತ್ತು ಬಸವರಾಜ ಹಾಲದೊಡ್ಡಿ. ಪತ್ರದಲ್ಲಿ ಬರೆದ ವಿವರಗಳಂತೆ ಕೊಟ್ಟ ಸಾಲಕ್ಕಿಂತ ಹತ್ತು ಪಟ್ಟು ಹೆಚ್ಚು ಹಣ ತಿರುಗಿ ಕೊಟ್ಟಿದ್ದರೂ, ಸಾಲ ತೀರಿರಲಿಲ್ಲವಂತೆ ಎಂದು ಹೇಳುವುದರ ಜೊತೆಗೆ ತನ್ನ ಮಗನ ಬಗೆಗೆ ನಿಗಾವಹಿಸುವಂತೆ ಮೃತನು ಅದರಲ್ಲಿ ಕೋರಿದ್ದಾನೆ.

ಇಲ್ಲಿ ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಸದ್ರಿ ಭೀಮರಾವ್ ಕಬ್ಬು ಬೆಳೆಗಾರರಾಗಿದ್ದು, ೧೯೯೪-೯೫ರಲ್ಲಿ ೧೫೦ ಟನ್ ಕಬ್ಬು ಬೆಳೆದು ಬೀದರಿನ ಬಿ.ಎಸ್. ಎಸ್. ಕೆ. ಸಹಕಾರಿ ಸಕ್ಕರೆ ಕಾರ್ಖಾನೆಗೆ ಪೂರೈಸಲು ನಿರ್ಧರಿಸಿದ್ದರು. ಆತ ಆ ಕಾರ್ಖಾನೆಯ ಪಾಲುದಾರ ಕೂಡ. ಆದರೆ ಆ ವರ್ಷ ಕಾರ್ಖಾನೆಯವರು ಕಬ್ಬನ್ನು ನಿರಾಕರಿಸಿದ್ದರಿಂದ ೧೫೦ ಟನ್ ಕಬ್ಬನ್ನು ಸುಟ್ಟು ಹಾಕಿ ಸುಮಾರು ೯೦ ಸಾವಿರ ರೂ. ಗಳಷ್ಟು ನಷ್ಟ ಅನುಭವಿಸಿದರು. ಆಗ ತಮಗೆ ೯೦ ಸಾವಿರ ರೂ. ನಷ್ಟು ಹಣ ಸಿಕ್ಕಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲವೆಂದೂ ಅವರು ಆ ಪತ್ರದಲ್ಲಿ ಶೋಕಿಸಿದ್ದಾರೆ. ಅದರ ಬಡ್ಡಿ ತೀರಿಸಲು ೩ ಎಕರೆ ಹೊಲ ಮಾರಿದರೂ ಪ್ರಯೋಜನವಾಗಲಿಲ್ಲ. ಭೀಮರಾವ್ ತಮ್ಮೂರು ನೆಮಲಖೇಡ್ ಪೋಲಿಸ್ ಇನ್‌ಸ್ಪೆಕ್ಟರ್‌ಗೆ ಕೂಡ ಪತ್ರ ಬರೆದಿದ್ದು, ತನ್ನ ಸಾವಿಗೆ ಕಾರಣರಾದವರ ಹೆಸರುಗಳನ್ನು ಅದರಲ್ಲಿ ಹೇಳಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳೀಯ ಈ ಬಡ್ಡಿ ವ್ಯಾಪಾರಿಗಳ ವಿರುದ್ಧ ಕ್ರಮ ಕೈಗೊಂಡಿದ್ದಾರೆಯೆ? ಹಳ್ಳಿಗರು ಹೇಳುವಂತೆ ಖಾಸಗಿ ಬಡ್ಡಿ ವ್ಯಾಪಾರಿಗಳ ಬಡ್ಡಿ ದರ ಸಾಮಾನ್ಯವಾಗಿ ಶೇ. ೩ ರಿಂದ ೫ರಷ್ಟು ಆಗಿದ್ದರೆ ಬಸವರಾಜ ಹಾಲದೊಡ್ಡಿ ಎಂಬ ಬಡ್ಡಿ ವ್ಯಾಪಾರಿಯು, ಭಾರೀ ಬಡ್ಡಿಯನ್ನು ಹೇರುತ್ತಿದ್ದ. ಆ ಕಾರಣಕ್ಕೆ ಆತ 'ಬಡ್ಡಿ ಬಸವ' ನೆಂದೇ ಅಲ್ಲಿಕುಖ್ಯಾತನಾಗಿದ್ದ.



ಸ್ಮಶಾನ ಸದೃಶ ಭಾಲ್ಕಿ ತಾಲ್ಲೂಕಿನ ಹಸನಾಳ ಗ್ರಾಮ.



ತೊಗರಿಬೆಳೆ

ಭೀಮರಾವ್‌ನ ಮಗ ರಾಜಶೇಖರ (೨೮ ವರ್ಷ) ತಾಯಿ ಮತ್ತು ಅಜ್ಜಿಯೊಂದಿಗಿದ್ದು ಈಗ ನಿಸ್ಸಹಾಯಕ ಸ್ಥಿತಿಯಲ್ಲಿ ಬಳಲುತ್ತಿದ್ದಾರೆ. ಕೊಳವೆ ಬಾವಿಯಲ್ಲಿ ನೀರಿಲ್ಲ. ತೊಗರಿ ಬೆಳೆ ನಾಶವಾಗಿದೆ. ಹೈಬ್ರಿಡ್ ಜೋಳ ಕೈಗೆ ಬರಲಿಲ್ಲ. ತನ್ನ ಸ್ವಂತ ಜಮೀನು ೮ ಎಕರೆ ಅಲ್ಲದೆ ಬಡ್ಡಿಯಲ್ಲಿ ಹಾಕಿಕೊಂಡ ಬೇರೆಯವರ ೧೨ ಎಕರೆ ಜಮೀನಿನಲ್ಲಿನ ಬೆಳೆಯೂ ಕೈಗೆ ಬರಲಿಲ್ಲ. ಅಷ್ಟೊತ್ತಿಗೆ ಆತ ಮಾಡಿದ್ದ ಸಾಲ ಒಟ್ಟು ೪೨ ಸಾವಿರ ರೂ.ಗಳು ಮತ್ತು ಅದರ ಮೇಲಿನ ಬಡ್ಡಿಯನ್ನು ತೀರಿಸಲು ಅನ್ಯ ದಾರಿ ಕಾಣದೇ ಭೀಮರಾವ್ ಆತ್ಮಹತ್ಯೆ ಮಾಡಿಕೊಂಡರು. ಉತ್ತರ ಕರ್ನಾಟಕದಲ್ಲಿ ಚಾಲ್ತಿಯಲ್ಲಿರುವಂತೆ 'ಉಗಾದಿ' ಸಾಲಗಳನ್ನು ಚುಕ್ತಾ ಮಾಡುವ ಕಾಲವಾಗಿದ್ದು, ಸಾಮಾನ್ಯವಾಗಿ ಸಾಲಗಳಲ್ಲಿ ಮುಳುಗಿರುವ ನಮ್ಮ ರೈತರಿಗೆ ಉಗಾದಿಯು ತಗಾದಿಯಾಗಿ ಪರಿಣಮಿಸುವುದುಂಟು. ಉಗಾದಿಯ ನಂತರ ಹಳೆಯ ಸಾಲಕ್ಕೆ ಬಡ್ಡಿಯೂ ಸೇರಿ ಅದು ಬೆಳೆಯುತ್ತ



ಬೀದರ್ ಜಿಲ್ಲೆಯ ಬರಗಾಲಕ್ಕೆ ಪ್ರಥಮ ಬಲಿಯಾದ ಬಸವರಾಜ ಪೊಲೀಸ ಪಾಟೀಲನ ವಿಧವಾ ಪತ್ನಿ ಚೆನ್ನಮ್ಮ ತನ್ನ ಅನಾಥ ಮಕ್ಕಳೊಂದಿಗೆ. ಪಕ್ಕದಲ್ಲೇ ಬಸವರಾಜನ ತಾಯಿ.

ಹೋಗುತ್ತದೆ. ಇದರಿಂದ ರೈತರು ಅನುಭವಿಸುವ ದುರ್ದೆಸೆಯನ್ನು ಊಹಿಸಬಹುದು. ಈ ತೆರನಾದ ಸಾಲದ ಹೊರೆಯಿಂದಾಗಿ ಸೂಕ್ಷ್ಮ ಮತಿ ಉಳ್ಳ ಹಾಗೂ ಸಭ್ಯರೂ ಆಗಿರುವ ರೈತರು ಅಂತಿಮವಾಗಿ ಆತ್ಮಹತ್ಯೆಯಲ್ಲಿಯೇ ಪರಿಹಾರ ಕಂಡುಕೊಳ್ಳಲೆತ್ನಿಸುತ್ತಾರೆ.

ಕೀಟಗಳನ್ನು ಕೊಲ್ಲದ ಕ್ರಿಮಿನಾಶಕಗಳಿಂದಾಗಿ ರೈತರೇ ಅವನ್ನು ಸೇವಿಸಿ ಸಾಯುವಂತಾಗಿರುವುದು ಇಲ್ಲಿನ ದುರಂತ.

ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಹಜ್‌ನಾಲಾ ಗ್ರಾಮದ ಫಂಡರಿನಾಥ (೪೦ವರ್ಷ) ಎನ್ನುವ ರೈತನು ಕೂಡ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈತನಿಗೆ ೩ ಜನ ಹೆಣ್ಣುಮಕ್ಕಳೂ, ಒಂದು ಗಂಡುಮಗುವೂ ಇದೆ. ೧೨ ವರ್ಷದ ಹಿರಿಯ ಮಗಳು ಸಂಗೀತಾಳಿಗೆ ಇಳಿಗಣ್ಣು ಖಾಯಿಲೆ. ಹಜ್‌ನಾಲಾದಲ್ಲಿ ಆಸ್ಪತ್ರೆಯಿಲ್ಲದ್ದರಿಂದಾಗಿ, ನೆರೆಯ ಔರಾಫಾಲಕ್ಕೆ ಹೋಗಲು ೩ ಮೈಲಿ ಕಚ್ಚಾ ರಸ್ತೆಯಲ್ಲಿ ನಡೆಯಬೇಕು. ಕೊನೆಯ ಮಗನಿಗೆ ೪ ವರ್ಷ. ಈ ಮಕ್ಕಳ ಭವಿಷ್ಯವೇನು? ಇವರಿಗೆ ಶಿಕ್ಷಣ ಕೊಡಿಸುವವರಾರು? ಮುದಿ ತಾಯಿ ಮತ್ತು ಪತ್ನಿಯರನ್ನು ನೋಡಿಕೊಳ್ಳುವವರಾರು? ಗಂಡ ಸರಿಗೇ ಬದುಕು ದುರ್ಭರವಾಗಿರುವಾಗ ನಿರ್ಗತಿಕ ಹೆಂಗಸರು ಬದುಕುವುದೆಂತು? ಈ ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕರಿಗೇನಾದರೂ ಈ ಬಗ್ಗೆ ಕಾಳಜಿಯಿದೆಯೆ?

ತನಿಖಾದಳದ (ಸಿ.ಓ.ಡಿ) ತಂಡ ಕೂಡ ಈ ಹಳ್ಳಿಗೆ ಬಂದಿಲ್ಲ. ಇಲ್ಲಿನ ಶಾಸಕರಾದ ವಿಜಯಕುಮಾರ ಖಂಡ್ರೆ ಈ ಹಳ್ಳಿಗೆ ಭೇಟಿ ನೀಡಿಲ್ಲ. ತಹಶೀಲ್ದಾರರನ್ನು ಕಂಡು ಮಾತನಾಡಿಸಿದರೆ ಹಜ್‌ನಾಲಾದಲ್ಲಿ ಆದ ಆತ್ಮಹತ್ಯೆಯ ಬಗೆಗೆ ತಮಗೇನೂ ತಿಳಿದಿಲ್ಲವೆಂದು ಹೇಳಿದರು. ತಮ್ಮಿಂದಲೇ ಅವರಿಗೆ ಮೊದಲ ಮಾಹಿತಿ ಸಿಕ್ಕಂತಾಯಿತು. ಸರ್ಕಾರ ನೀಡುವ ೫ ಸಾವಿರ, ೧೦ ಸಾವಿರ ಪರಿಹಾರ ಹಣ ಕೂಡ ಕಂಗಾಲಾದ ಆ ರೈತ ಕುಟುಂಬಗಳಿಗೆ ಪೂರ್ತಿ ತಲುಪುತ್ತದೆನ್ನುವುದೂ ಅನುಮಾನವೇ. ಈ ಹಳ್ಳಿಯಲ್ಲಿನ ಜನರು ಕುಡಿಯುವ ನೀರಿಗಾಗಿ ಅರ್ಧ ಮೈಲಿ ದೂರ ನಡೆದು ಹೋಗಿ ಹೊತ್ತು ತರಬೇಕು.

ಫಂಡರಿನಾಥನು ೧೧ ಎಕರೆ ಜಮೀನನ್ನು ಲಾವಣಿ (ಭೋಗ್ಯಕ್ಕೆ) ಹಾಕಿಕೊಂಡಿದ್ದ. ಖಾಸಗಿಯವರಲ್ಲಿ ೬೦ ಸಾವಿರ ರೂ.ಸಾಲ ಮಾಡಿದ್ದ. ಈ ಹಳ್ಳಿಯಲ್ಲಿ ಅಂಜುಮನ್ ಬ್ಯಾಂಕು ಇದೆ. ಆದರೆ, ಅವರು ಕೊಡುವುದು ಪ್ರತಿ ಎಕರೆಗೆ ೨ ಸಾವಿರ ರೂ. ಮುಂಗಡ ಹಣವನ್ನು ಮಾತ್ರ. ಆದರೆ ಫಂಡರಿನಾಥನ ಸ್ವಂತ ಭೂಮಿ ಬರೀ ೩೦ ಗುಂಟೆಯಾಗಿತ್ತು. ಅದಕ್ಕಾಗಿಯೇ ಆತ ೧೧ ಎಕರೆ ಜಮೀನು ಲಾವಣಿ ಹಾಕಿಕೊಂಡಿದ್ದು.

ಮಂಜುರಾ ನದಿಯಲ್ಲಿ ನೀರಿಲ್ಲ. ಕೊಳವೆ ಬಾವಿಯಲ್ಲಿ ನೀರಿಲ್ಲ. ಬೆಳೆ ನಾಶವಾಗಿದೆ. ಇಂಥ ದುಃಸ್ಥಿತಿಯಲ್ಲಿ ಸ್ಥಳೀಯ ಬಡ್ಡಿ ವ್ಯಾಪಾರಿಗಳು ಮಾತ್ರ ಯುಗಾದಿಯಲ್ಲಿ ರೈತರ ಈ ಪರಿಸ್ಥಿತಿಗೆ ಸ್ವಲ್ಪವೂ ಕನಿಕರಿಸಲಿಲ್ಲ. ಆಗ ಫಂಡರಿನಾಥ ಪರಿಸ್ಥಿತಿಯ ಬಲಿಪಶುವಾದ. ಆತನ ೩ ಹೆಣ್ಣುಮಕ್ಕಳು, ೪ ವರ್ಷದ ಮಗ, ಪತ್ನಿ ಮತ್ತು ವಯಸ್ಸಾದ ತಾಯಿಯ ಗತಿಯೇನು? ವಯಸ್ಸಾದ ತಾಯಿಗೆ ಎದ್ದು ಕೂರಲು ಆಗದು. ಇದು ಒಟ್ಟಾರೆ ನಮ್ಮ ಹಳ್ಳಿಗಳ ಪರಿಸ್ಥಿತಿಯನ್ನು ಸಾಂಕೇತಿಸುತ್ತದೆ. ಈ ರೀತಿ ಒಂದು ಕಡೆ ರೈತರ ಮಕ್ಕಳೆಲ್ಲ ಅನಾಥರಾಗುತ್ತಿದ್ದರೆ, ಇನ್ನೊಂದು ಕಡೆ ಜನನಾಯಕರ ಪುಡಾರಿಗಳ ಮಕ್ಕಳು ಬಡಾಯಿಸುತ್ತ ಅಟ್ಟಹಾಸಗೈಯುತ್ತಿದ್ದಾರೆ.

ಸಿದ್ದೇಶ್ವರ ಗ್ರಾಮದ ಶಿವರಾಜ ಮೈನಾಳೆ (೪೫



ಹಸನಾಳದ ಪಾಂಡುರಂಗ ಕೆರೋಬಾ ಘಟ್‌ಕರ್‌ನ ವಿಧವಾ ಪತ್ನಿ ಮತ್ತು ಮಕ್ಕಳು

ವರ್ಷ, ಎಂಬ ರೈತನು ೧೯೯೭ರ ಡಿಸೆಂಬರ್‌ನಲ್ಲಿ ಮೃತಪಟ್ಟ. ಈತ ಹೆಂಡತಿ, ತಾಯಿ ಮತ್ತು ೫ ಮಕ್ಕಳನ್ನು ತೊರೆದಿದ್ದಾನೆ. ಶಿವರಾಜನ ಮಗ ರೇವಣೆಪ್ಪ ಹಳ್ಳಿ ಬಿಟ್ಟು ಹೊರಗೆ ಹೋದವನಲ್ಲ. ಕೈ ಕುಲಕಲು ಹೋದರೆ, ಆತನ ಕೈ ಕಲ್ಲಿನಂತಿದ್ದುದನ್ನು ಕಂಡು ಕೇಳಿದಾಗ, ಅದು ತಮ್ಮ ತಂದೆಯ ಸಾವಿನ ವಿಚಾರಣೆಯ ಸಮಯದಲ್ಲಿ ಪೋಲೀಸರ ಏಟಿನಿಂದಾಗಿದ್ದೆಂದು ತಿಳಿದು ಬಂತು. ಈಗ ರೇವಣೆಪ್ಪನಿಗೆ ೫ ಸಾವಿರ ರೂ. ಪರಿಹಾರ ಧನ ದೊರೆತಿದೆ. ರೇವಣ್ಣಪ್ಪನು ತಂದೆಯನ್ನು ಕಳೆದುಕೊಂಡ ದುಃಖದಲ್ಲಿ, 'ಕೀಟಗಳನ್ನು ಕೊಲ್ಲದ ಕ್ರಿಮಿನಾಶಕ ತಂದೆಯನ್ನು ಕೊಂದಿತಲ್ಲ' ಎನ್ನುತ್ತಾನೆ. ಕಲಬೆರಕೆ/ಕಳಪೆ ಕ್ರಿಮಿನಾಶಕದಿಂದಾಗಿ ಬೆಳೆಯಲ್ಲ ನಾಶವಾಯಿತು. ಇಷ್ಟೆಲ್ಲ ಆದರೂ ಬಡ್ಡಿ ವ್ಯಾಪಾರಿಗಳಿಗಂತೂ ಕರುಣೆ ಬರಲಿಲ್ಲ.

ಭಾತಮರಾ ಗ್ರಾಮದ ಭೋಜರಾಜ (೩೫ ವರ್ಷ) ೧೪.೨.೯೮ರಂದು ಮೃತನಾದ. ಈ ಭಾಗದಲ್ಲಿ ಸಹಕಾರಿ ಬ್ಯಾಂಕುಗಳ ಸಾಲದ ವ್ಯವಸ್ಥೆಯಿಲ್ಲ. ಹಾಗಾಗಿ ಸ್ಥಳೀಯ ಬಡ್ಡಿ ವ್ಯಾಪಾರಿಗಳಲ್ಲಿ ಸಾಲ ಮಾಡುವುದು ಅನಿವಾರ್ಯ. ಈ ರೈತ ಭಾಲ್ಕಿಯಲ್ಲಿ ೨೫ ಸಾವಿರ ರೂ. ಮೊತ್ತದ ಕ್ರಿಮಿನಾಶಕವನ್ನು ಸಾಲದ ರೂಪದಲ್ಲಿ ಕೊಂಡು ತಂದು ಬಳಸಿದರೂ, ಬೆಳೆ ಹಾನಿಯಾಯಿತು. ಕ್ರಿಮಿನಾಶಕ ಅಂಗಡಿ ಮಾಲೀಕರು ಮನೆಗೆ ಬಂದು ಅವಾಚ್ಯವಾಗಿ ಬಯ್ದು ಹೋದದ್ದಕ್ಕೆ ಅವಮಾನ ತಾಳದೆ ಕ್ರಿಮಿನಾಶಕ ಸೇವಿಸಿ ಮೃತಪಟ್ಟನು. ಈತನಿಗೆ ೨ ವರ್ಷದ ಚಿಕ್ಕ ಗಂಡುಮಗು, ೩ ವರ್ಷದ ಇನ್ನೊಂದು ಮಗು ಕೊನೆಯ ಹಸುಗೂಸಿಗೆ ೩ ತಿಂಗಳು.

ಸ್ಥಳೀಯರು ಹೇಳಿದ ಒಂದು ಘಟನೆ ಇಂತಿದೆ. ಒಂದೂವರೆ ವರ್ಷ ಹಿಂದೆ ಇದೇ ಊರಲ್ಲಿ ಸತ್ತ ಮಗುವಿನ ಶವವೊಂದು ಬೀದಿಯಲ್ಲಿಯೇ ಮೂರು ದಿನಗಳ ಕಾಲ ಕೊಳೆಯುತ್ತ ಬಿದ್ದಿದ್ದರೂ, ಮರಣೋತ್ತರ ಪರೀಕ್ಷೆ, ಶವಸಂಸ್ಕಾರಕ್ಕೆ ಪೋಲಿಸರು ಮುಂದಾಗಲಿಲ್ಲ. ಯಾಕೆಂದರೆ ಸಂಬಂಧಪಟ್ಟವರು ದುಡ್ಡುಕೊಡಲು ಮುಂದೆ ಬರಲಿಲ್ಲವೆನ್ನುವುದು. ಹೀಗಾಗಿ ಇಲ್ಲಿನ ಜನರ ಮುಗ್ಧತೆ/ಅಜ್ಞಾನವೇ ಪೋಲಿಸರಿಗೆ ವರದಾನ. ಉಳ್ಳವರಿಗೇ ಸರ್ಕಾರದ ಸವಲತ್ತುಗಳು, ಕಾನೂನು ರಕ್ಷಣೆ ಎಲ್ಲ. ಆದರೆ ಬಡವರ ಪಾಲಿಗೆ ಅವು ಯಾವುವೂ ಇಲ್ಲ.

ಭೋಜರಾಜನಿಗೆ ಲಾವಣಿ ಹಾಕಿಕೊಂಡ ೧೨ ಎಕರೆಯಷ್ಟು ಭೂಮಿಯಿತ್ತು. ತನ್ನ ಸೋದರರ ಹೊಲವನ್ನು ಉಳುಮೆ ಮಾಡಿಕೊಂಡಿದ್ದ. ೨೫ ಸಾವಿರ ರೂ.ಗಳ ಮೊತ್ತದ ಕ್ರಿಮಿನಾಶಕಗಳನ್ನು ಉದ್ರಿ ತಂದಿದ್ದ. ಭೋಜರಾಜನ ಸಹೋದರ ವಾಹನ ಚಾಲಕ ಯುವರಾಜನ ಹೇಳಿಕೆಯ ಪ್ರಕಾರ, ಕ್ರಿಮಿನಾಶಕ ಅಂಗಡಿಯ ಮಾಲೀಕ ಮನೆಯ ಮುಂದೆ ಬಂದು ಜಗಳವಾಡಿ ಬೈದು ಹೋದ ಕಾರಣಕ್ಕೆ ನನ್ನಣ್ಣ ಆತ್ಮಹತ್ಯೆ ಮಾಡಿಕೊಂಡನೆಂದು ತಿಳಿಸಿದ್ದಾನೆ.

ದಿನಾಂಕ ೧೧.೨.೯೮ ರಂದು ಖಸಲ್‌ಗಾಂವ್ ಗ್ರಾಮದ ಪ್ರಭುರಾವ್ (೪೦ ವರ್ಷ) ಎಂಬ ರೈತ ಮೃತಪಟ್ಟಿದ್ದಾನೆ. ಆತ ಮೂರು ಗಂಡು ಮಕ್ಕಳನ್ನು ಅಗಲಿದ್ದಾನೆ. ಹಿರಿಯ ಮಗನಿಗೆ ೧೯ ವರ್ಷ ವಯಸ್ಸು. ಇಲ್ಲಿ ಈ ತನಕ ಪ್ರಸ್ತಾಪಿಸಲಾದ ಎರಡು ಪ್ರಕರಣಗಳಲ್ಲಿ ಐದು ಲಿಂಗಾಯತ ಕೋಮಿಗೆ ಸೇರಿದವುಗಳಾಗಿದ್ದು. ಇವರಿಗೆ ಚಿತ್ರದುರ್ಗ ಮಠದ ಸ್ವಾಮಿಗಳು ೫ ಸಾವಿರ ರೂ. ಗಳ ಪರಿಹಾರಧನ ಕಳಿಸಿದ್ದಾರೆ.

ಭಾಲ್ಕಿ ತಾಲೂಕಿನ ಕುಂಟೆಸಿರ್ಸಿ ಗ್ರಾಮದ ದಿಲೀಪ (೩೦ ವರ್ಷ) ೩.೨.೯೮ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈತನಿಗೆ ಇಬ್ಬರು ಹೆಣ್ಣುಮಕ್ಕಳು (೫ ವರ್ಷದ ಮತ್ತು ೫ ತಿಂಗಳ ವಯಸ್ಸಿನವು). ಈತ ೧ ಲಕ್ಷ ೨೫ ಸಾವಿರ ರೂ. ಸಾಲ ಪಡೆದು ೧೫ ಎಕರೆ ಜಮೀನನ್ನು ಲಾವಣಿಗೆ ಹಾಕಿಕೊಂಡಿದ್ದ. ಅದರಲ್ಲಿ ತೊಗರಿ, ಜೋಳ, ಮತ್ತು ಕಡಲೆ ಬೆಳೆಯುವ ಉದ್ದೇಶವನ್ನು ಹೊಂದಿದ್ದ. ಆದರೆ ಬೆಳೆ ನಾಶವಾಯಿತು. ಮೇಲಾಗಿ ಕಾರಂಜಾ ಅಣೆಕಟ್ಟಿನಿಂದ ಬರುವ ಕಾಲುವೆಯಲ್ಲಿಯೂ ನೀರು ಹರಿಯಲಿಲ್ಲ. ಹಳ್ಳಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರು ದೊರಕುತ್ತಿದ್ದರೂ ಕೃಷಿಗೆ ಸಾಕಾಗುಸುವಷ್ಟು ನೀರಿನ ಲಭ್ಯತೆಯಿರಲಿಲ್ಲ.

ಕಲ್ವಾಡಿ ಗ್ರಾಮದ ಬಸವಪ್ಪ (೫೦ ವರ್ಷ) ಎಂಬ ರೈತನು ೧೮.೨.೯೮ರಂದು ಆತ್ಮಹತ್ಯೆ ಮಾಡಿಕೊಂಡ. ಆತನ ನಿರ್ಗತಿಕ ೪ ಗಂಡು ಮಕ್ಕಳು ಕೆಲಸ ಹುಡುಕಿಕೊಂಡು ಪುಣೆಗೆ ವಲಸೆ ಹೋಗಬೇಕಾಯಿತು. ಇನ್ನೊಬ್ಬ ಮಗ ವೆಂಕಟೇಶ (೨೫ ವರ್ಷ) ಸ್ವಗ್ರಾಮದಲ್ಲಿಯೇ ವಾಸವಾಗಿದ್ದಾನೆ.



ಸಿದ್ದೇಶ್ವರ ಶಿವರಾಜನ ವಿಧವಾ ಪತ್ನಿ ಚಿನ್ನಮ್ಮ ಮತ್ತು ತಾಯಿ ಸಿದ್ದಮ್ಮ

ಗುಲ್ಬರ್ಗ ಜಿಲ್ಲೆಯ ತುಮಕುಂಟೆ ಗ್ರಾಮದ ಸುಬ್ಬಣ್ಣ ಹಡಪದ (೩೫ ವರ್ಷ) ಎಂಬ ರೈತನು ೧೩.೩.೯೮ರಂದು ಎಂಡ್ರಿನ್ ಕೀಟನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ. ಈತನಿಗೆ ೩ ಮಕ್ಕಳಿದ್ದು, ೨ ಹೆಣ್ಣು ಒಂದು ಗಂಡು. ಹುಡುಗಿಯರಿಬ್ಬರೂ ನಾಲ್ಕು ವರ್ಷದ ಒಳಗಿನವರೇ ಇದ್ದು, ಮಗ ಮಾತ್ರ ಎಂಟು ವರ್ಷದವನು. ಸುಬ್ಬಣ್ಣನ ಪತ್ನಿ ಈಗ ಎಂಟು ತಿಂಗಳ ಗರ್ಭಿಣಿ. ಮಾಡಿದ್ದ ೪೦ ಸಾವಿರ ರೂ.ಗಳ ಮರುಪಾವತಿ ಮಾಡಲಾಗಲಿಲ್ಲ. ತನ್ನೆಲ್ಲ ಆಸ್ತಿಯನ್ನು ಮಾರಿದರೂ ಸಾಲ ತೀರಲಿಲ್ಲ. ಮೃತನ ಈ ಕುಟುಂಬಕ್ಕೆ ಈಗ ಸರ್ಕಾರ ೧೦ ಸಾವಿರ ಪರಿಹಾರ ಧನ ನೀಡಿದೆ. ಅಲ್ಲದೆ ಒಂದು ಲಕ್ಷ ಪರಿಹಾರ ಧನದ ಭರವಸೆ ನೀಡಲಾಗಿದೆ.

ಆತ್ಮಹತ್ಯೆ ಮಾಡಿಕೊಂಡ ಈ ಎಲ್ಲ ೮ ಜನ ರೈತರ ಸರಾಸರಿ ವಯಸ್ಸು ೩೬ರಿಂದ ೩೭ ವರ್ಷಗಳು. ಅವರು ಮಾಡಿದ ಸಾಲದ ಮೊತ್ತ ಸರಾಸರಿ ೪೦ರಿಂದ ೭೫ಸಾವಿರ ರೂ.ಗಳು. ಬಡ್ಡಿ ವ್ಯಾಪಾರಿಗಳಿಗೆ ಇವರೆಲ್ಲ ಜೀತದಾಳಾಗಿ ದುಡಿದು ಬಡ್ಡಿ ತೆತ್ತರೂ ಮಾನಸಿಕ ಹಿಂಸೆ ಅನುಭವಿಸಬೇಕಾಯಿತು. ಉಗಾದಿಯ ದಿನಗಳಂದು

ಸಾರ್ವಜನಿಕರೆದುರು ಅವಮಾನ-ನಿಂದನೆಗೊಳಗಾಗಬೇಕಾಯಿತು.

ಕಳಪೆ ಮತ್ತು ನಕಲಿ ಕೀಟನಾಶಕ ಮಾರಿದವರ ಒಟ್ಟು ೧೭ ಮಂದಿಯ ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು ಹಿಂಬಾಗಿಲಿನ ವ್ಯವಹಾರ ಜೋರಾಗಿಯೇ ನಡೆದಿತ್ತೆನ್ನುವುದು ಸರ್ವವಿಧಿತ.

ಬೆಂಗಳೂರಿನ ಪ್ರಜಾತಾಂತ್ರಿಕ ಜನರ ವೇದಿಕೆಯ (ಪೀಪಲ್ಸ್ ಡೆಮಾಕ್ರಟಿಕ್ ಫೋರಂ) ತಂಡವು ಇಷ್ಟೆಲ್ಲ ಪರಿಶೀಲನೆಯ ನಂತರ, ಈ ಕೆಳಕಂಡ ಸಂಗತಿಗಳ ಬಗೆಗೆ ಸರ್ಕಾರದ ಗಮನ ಸೆಳೆದು ಹಕ್ಕೊತ್ತಾಯ ಮಂಡಿಸಲು ನಿರ್ಧರಿಸಿದೆ.

೧. ಸಾಲದ ಪ್ರಮಾಣಕ್ಕೆ ತಕ್ಕಂತೆ ಪರಿಹಾರ ಧನ ನೀಡುವುದು. ೨. ದುಡಿಯುವ ವ್ಯಕ್ತಿಯ ಸಾವಿನಿಂದಾಗಿ ಉಂಟಾದ ನಷ್ಟ ಭರ್ತಿ ತುಂಬಿ ಕೊಡುವುದು. ೩. ಕ್ರಿಮಿನಾಶಕಗಳಲ್ಲಿನ ಕಲಬೆರಕೆಯನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಲು ಅಧಿಕಾರಿಗಳನ್ನು ನೇಮಿಸುವುದು. ೪. ಆದ್ಯತೆಯ ಮೇರೆಗೆ ಹಣಕಾಸು ಸಂಸ್ಥೆಗಳಿಂದ ಕಡಿಮೆ ಬಡ್ಡಿದರ ದೀರ್ಘಾವಧಿ ಸಾಲ ಮಂಜೂರಾತಿ ನೀಡಿ ನೆರವಾಗುವುದು. ೫. ಸ್ಥಳೀಯ (ಖಾಸಗಿ) ಬಡ್ಡಿ ವ್ಯಾಪಾರಿಗಳ ಮೇಲೆ ನಿಯಂತ್ರಣ ಸಾಧಿಸುವುದು. ಅಂದರೆ ಕಡಿಮೆ ಬಡ್ಡಿದರ ನಿಗದಿಪಡಿಸುವುದು. ೬. ಮಧ್ಯವರ್ತಿಗಳ ಹಿಡಿತದಿಂದ ಪಾರು ಮಾಡಲು ರಾಜ್ಯವು ದಾಸ್ತಾನು ಮಳಿಗೆಗಳ ಸೌಲಭ್ಯ ಒದಗಿಸುವುದು. ೭. ಉಚಿತ ವಿದ್ಯುತ್ ಪೂರೈಕೆ ಮತ್ತು ನೀರಾವರಿ ಯೋಜನೆಗಳನ್ನು ಚುರುಕುಗೊಳಿಸುವುದು. ೮. ಉಳಿದ ಖುಷ್ಕಿ ಜಮೀನಿಗೂ ನೀರಾವರಿ ಯೋಜನೆಯನ್ನು ರೂಪಿಸುವುದು. ೯. ಹೈದರಾಬಾದ ಕರ್ನಾಟಕ ಪ್ರದೇಶವು ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಆಡಳಿತಾತ್ಮಕವಾಗಿ ಪ್ರಗತಿ ಹೊಂದುವಲ್ಲಿ ಇನ್ನಾದರೂ ಅಗತ್ಯ ಕ್ರಮ ಕೈಗೊಳ್ಳುವುದು.

●

ಈಜು

ಹೆಂಗಸರ ಹೃದಯ
ಸಮುದ್ರಕ್ಕಿಂತ
ಆಳ
ಗಂಡಸರು
ಈಜಬೇಕೆ ಹೊರತು
ಶೋಧಿಸಬಾರದು!

-ಬಾಬು ಬೆಟ್ಟದೂರು

ಆಂಧ್ರ, ರೈತರ ಆತ್ಮಹತ್ಯೆ!!

ಆಂಧ್ರಪ್ರದೇಶದಲ್ಲಿ ಅನ್ನ ಕೊಡುವ ರೈತರು ಹತ್ತಿ ಬೆಳೆಯನ್ನು ಬೆಳೆದು ಹಾಳಾಗುತ್ತಿರುವುದನ್ನು ಪ್ರತಿ ವರ್ಷವೂ ಕೇಳುತ್ತಿದ್ದೇವೆ. ಆದರೆ ಈ ವರ್ಷ ಅಲ್ಲಿಯ ರೈತರ ಸ್ಥಿತಿ ಭಯಾನಕ. 'ಬಿಳಿ ಬಂಗಾರ' ಎಂದೇ ಹೆಸರಾಗಿರುವ ಹತ್ತಿಯನ್ನು ಬೆಂಬತ್ತಿ ಬೆಲೆ ಕಾಣದೇ, ಸಾಲ ತೀರಿಸಲಾಗದೇ, ತಾವು ಹೊಡೆಯುವ ಔಷಧಿಗಳನ್ನೇ ಕುಡಿದು ಆತ್ಮಹತ್ಯೆ ಮಾಡಿಕೊಂಡದ್ದು ಜಗತ್ತಿಗೇ ಸುದ್ದಿ ಮಾಡಿತು. ಸುಮಾರು ೭೫ಕ್ಕೂ ಹೆಚ್ಚು ರೈತರನ್ನು ಬಲಿ ತಗೆದುಕೊಂಡ ವಿಷ ರಾಸಾಯನಿಕಗಳು ಕೊನೆಗೂ ಕೀಟಗಳನ್ನು ಸಾಯಿಸದೇ ಮನುಷ್ಯರನ್ನೇ ಸಾಯಿಸಿದವು!

ಸಾವಿನ ಸರದಿ

ದೇಶದಲ್ಲಿ 'ಸಂಕ್ರಾಂತಿ'ಯ ಸಡಗರ ಇರುವಾಗ 'ಸುಗ್ಗಿ ಆಚರಿಸಿ ಹಿಗ್ಗುವ' ಬದಲು ಆಂಧ್ರದ ರೈತರು ಸಾವಿನ ಸರದಿಯನ್ನು ಹಿಡಿದರು. ಇದು ನಮ್ಮ ವೈಜ್ಞಾನಿಕ ಬೆಳವಣಿಗೆಯ ಲೋಪದೋಷಗಳಿಂದಾದ ಹಲವು ದುಷ್ಪರಿಣಾಮಗಳಲ್ಲಿ ಒಂದು. ವಾರಂಗಲ್, ಕರೀಂನಗರ, ನಲ್ಗೊಂಡ, ಕರ್ನೂಲ್, ಮೇದಕ್, ಆದಿಲಾಬಾದ್, ಅನಂತಪುರ, ಮೆಹಬೂಬ್‌ನಗರ, ಗುಂಟೂರು ಹಾಗೂ ಖಮ್ಮಂ ಜಿಲ್ಲೆಗಳಲ್ಲಿ ಹೇರಳವಾಗಿ ಬೆಳೆಯುತ್ತಿರುವ ಹತ್ತಿಗೆ ಈ ವರ್ಷ ಹಲವು ರೀತಿಯ ಕುತ್ತು. ಮುಂಗಾರಿ ಮಳೆ ಸರಿಯಾಗಿ ಬರಲಿಲ್ಲ, ತಡವಾಗಿ ಮಳೆ ಬಂದರೂ ಸತತವಾಗಿ ಸುರಿಯಿತು. ಹೆಚ್ಚಾದ ಕೀಟಗಳ ಹಾವಳಿ, ಹಾನಿಕಾರಕ ಕೀಟಗಳನ್ನು ಸಾಯಿಸಲು ಲೆಕ್ಕವಿಲ್ಲದ ದುಡ್ಡು ವ್ಯಯ, ಕೊನೆಗೆ ಮಾರುಕಟ್ಟೆಯಲ್ಲಿ ಬೆಲೆ ಕುಸಿತ. ಇವೆಲ್ಲಾ ಸಾಲ ಮಾಡಿದ ರೈತನಿಗೆ ಜೀವ ಹಿಂಡಿದವು. ಕೊನೆಗೆ ಸರದಿ ರೂಪದಲ್ಲಿ ಸಾವು ಆವರಿಸಿತು.

ಆತ್ಮಹತ್ಯೆಯ ಪ್ರಕರಣಗಳು ಹೆಚ್ಚಾಗಿ ವಾರಂಗಲ್ ಜಿಲ್ಲೆಯಲ್ಲಿ ಆಗಿವೆ. ಈ ಜಿಲ್ಲೆಯ ೫೧ ಮಂಡಲ ಪಂಚಾಯಿತಿ ವ್ಯಾಪ್ತಿಯ ಪ್ರದೇಶವನ್ನು ಮುಂಗಾರಿ ಹಂಗಾಮಿನಲ್ಲೇ 'ಬರಪೀಡಿತ' ಎಂದು ಸರ್ಕಾರವು ಘೋಷಿಸಿದರೂ ಹಳ್ಳಿಗರಿಗೆ ಉದ್ಯೋಗದ ಅವಕಾಶ ಸಿಗಲಿಲ್ಲ. ನಂತರ ಬಂದ ಅಕಾಲಿಕ ಮಳೆ, ಹೆಚ್ಚಾದ ಕೀಟಗಳ ಹಾವಳಿಯಿಂದ ರೈತರ ಬದುಕು ಅಸ್ಥಿರವಾಯಿತು.

ಕುಂದಿದ ಭತ್ತದ ಪ್ರದೇಶ

ಬರೀ ವಾರಂಗಲ್ ಜಿಲ್ಲೆಯಲ್ಲಿ ಸುಮಾರು ೧.೩೦ಲಕ್ಷ ಹೆಕ್ಟೇರ್ ಜಮೀನಿನಲ್ಲಿ ಭತ್ತವನ್ನು ಬೆಳೆಯಬಹುದು. ಆದರೆ ಅನೇಕ ಕಾರಣಗಳಿಂದ ವರ್ಷ ವರ್ಷಕ್ಕೆ ಭತ್ತ ಬೆಳೆಯುವ ಪ್ರದೇಶ ಕಡಿಮೆಯಾಗುತ್ತಿದೆ.

೧೯೯೪ರಲ್ಲಿ ೨೦,೦೦೦ ಹೆಕ್ಟೇರ್, ೧೯೯೫ರಲ್ಲಿ ೨೧,೦೦೦ ಹೆಕ್ಟೇರ್ ಪ್ರದೇಶವನ್ನು ಬೀಳು ಬಿಡಲಾಯಿತು. ಆದರೆ ೧೯೯೬ರಲ್ಲಿ ರೈತರು ಉತ್ಸುಕರಾಗಿ ೧.೨೦ ಲಕ್ಷ ಹೆಕ್ಟೇರ್‌ನಲ್ಲಿ ಭತ್ತ ಬೆಳೆದರು. ದುರಾದೃಷ್ಟವಶಾತ್ ಇಲ್ಲಿಯೂ ರೈತರು ನೆರೆಹಾವಳಿಗೆ ತುತ್ತಾಗಿ ಸಾಕಷ್ಟು ಬೆಳೆಯನ್ನು ಕಳೆದುಕೊಂಡರು. ೧೯೯೭ರಲ್ಲಿ ಇದೇ ತೆರನಾದ ವಿಕೋಪ ಎದುರಾಯಿತು. ಇದರ ಮಧ್ಯ ಸಮರ್ಪಕ ವಿದ್ಯುತ್ ಸರಬರಾಜಿನಿಂದ ಹಲವರ ನೀರೆತ್ತುವ ಯಂತ್ರಗಳು ಸುಟ್ಟವು. ಈ ಪರಿಣಾಮವಾಗಿ ೧೯೯೭ರ ಮುಂಗಾರಿಯಲ್ಲಿ ಕೇವಲ ೧೬ ಸಾವಿರ ಹೆಕ್ಟೇರ್‌ನಲ್ಲಿ ಮಾತ್ರ ಭತ್ತವನ್ನು ಬೆಳೆಸಲಾಯಿತು, ಸುಮಾರು ಒಂದು ಲಕ್ಷ ಹೆಕ್ಟೇರ್ (ಎರಡುವರೆ ಲಕ್ಷ ಎಕರೆ) ಜಮೀನು ಬೀಳಾಗಿ ಉಳಿಯಿತು. ಇದೇ ಸಂದರ್ಭಕ್ಕೆ ಹತ್ತಿಯ ಬೆಲೆ ಏರಿಕೆಯಲ್ಲಿತ್ತು. ಇದನ್ನು ಕಂಡು ಇಲ್ಲಾದರೂ ಸಂಪಾದನೆ ಮಾಡೋಣವೆಂದು ಕೈಹಾಕಿದರು. ಆದರೆ ದುರಂತ ಕಾದಿತ್ತು. ಹತ್ತಿಯ ರಸ ಹೀರುವ ಬಿಳಿ ನೊಣ ಹಾಗು ಕಾಯಿ ತಿನ್ನುವ ಹುಳುಗಳ ಕಾಟ ಹೆಚ್ಚಾಯಿತು. ಇದನ್ನು ದೂರವಿಡಲು ಔಷಧಿಗಳನ್ನು ತೀವ್ರಗತಿಯಲ್ಲಿ ಸಿಂಪಡಿಸಿದರು. ಕಳಪೆ ಔಷಧಿಗಳು ಎಲ್ಲೆಡೆ ಬಿಕರಿಯಾದವು. ಆಶ್ಚರ್ಯವೆಂದರೆ ಬರೀ ವಾರಂಗಲ್ ಜಿಲ್ಲೆಯಲ್ಲೇ ೧೩,೦೦೦ ಔಷಧಿ ಅಂಗಡಿಗಳು ಇವೆಯಂತೆ. ಸುಮರು ೯೩ ಕಂಪನಿಗಳು ಇನ್ನೂರು ನಕಲೀ ಔಷಧಿಗಳನ್ನು ಅಸಲೀ ಔಷಧಿಗಳ ಜೊತೆ ಸೇರಿಸಿ ಮಾರಾಟ ಮಾಡಲಾಯಿತಂತೆ!

ಕೀಟನಾಶಕಗಳ ಕಳಪೆ

ಔಷಧಿಗಳ ಸಿಂಪರಣೆಯು ರೈತರಿಗೆ ವರವಾಗಲಿಲ್ಲ, ಮಾರಕವಾಯಿತು. ನಿಸರ್ಗದಲ್ಲಿರುವ ಉಪಕಾರಿ ಜೀವಿಗಳು ಸತ್ತವು. ಅಪಕಾರಿ ಕೀಟಗಳು ಕೀಟನಾಶಕಗಳ ವಿರುದ್ಧ ಸೆಟೆದು

ನಿಂತವು! ಹತ್ತಿಯಲ್ಲಿ ಬಳಸುವ ಕೀಟನಾಶಕಗಳು ಬೆಳೆಯ ಬೆಳವಣಿಗೆಯನ್ನು ವೃದ್ಧಿಸುತ್ತವೆ ಎಂಬ ತಪ್ಪು ಕಲ್ಪನೆಯಿಂದ ೨೦-೩೦ ಸಾರಿ ಔಷಧಿಗಳನ್ನು ಸಿಂಪಡಿಸಲಾಯಿತು. ಬೀಜ, ಗೊಬ್ಬರ, ಔಷಧಿಗಳ ಕಳಪೆ ಗುಣವು ರೈತರನ್ನು ಬಲಿಪಶು ಮಾಡಿಕೊಂಡಿತು. ಎಲ್ಲೆಲ್ಲೋ ಸಾಲ ಮಾಡಿ ಬೆಳೆದ ಹತ್ತಿಯಲ್ಲಿ ಉಳುಮೆ ಖರ್ಚು ಹೆಚ್ಚಾಗಿ ಮಾರುಕಟ್ಟೆಯಲ್ಲಿ ಬೆಲೆ ಇಳಿದ ಪ್ರಯುಕ್ತ ರೈತರಿಗೆ ನುಂಗಲಾರದ ತುತ್ತಾಯಿತು. ತಾವು ತಂದ ವಿಷ ರಾಸಾಯನಿಕಗಳನ್ನೆ ಗಟ ಗಟ ಕುಡಿದು ಸತ್ತರು.

ಸಾಲಕೊಡದ ಬ್ಯಾಂಕ್‌ಗಳು

ಬರೀ ವಾರಂಗಲ್ ಜಿಲ್ಲೆಯಲ್ಲಿ ೩,೮೫,೪೮೮ ಜನ ಸಣ್ಣ ಮತ್ತು ಅತೀ ಸಣ್ಣ ರೈತರಿದ್ದಾರೆ. ಇಂತಹ ಕೃಷಿಕರಿಗೆ ಸಾಲ-ಸೌಲಭ್ಯ ನೀಡುವುದು ರಾಷ್ಟ್ರೀಕೃತ ಬ್ಯಾಂಕ್‌ಗಳ ಕರ್ತವ್ಯ. ಆದರೆ ಈ ವರ್ಷ ಹಾಗಾಗಲಿಲ್ಲ. ಕೊಟ್ಟ ಸಾಲ ವಾಪಾಸು ಬರುವುದು ಅನುಮಾನ ಎಂದು ಹತ್ತಿ ಬೆಳೆಯುವ ಕಡೆ ಅನೇಕ ಬ್ಯಾಂಕ್‌ಗಳು ಸಾಲ ನೀಡಲಿಲ್ಲ. ಹಣ ಅಗತ್ಯವಿದ್ದವರಿಗೆ ಸಾಲ ನೀಡದೇ ದೊಡ್ಡ ರೈತರಿಗೆ ಸಾಲ ಕೊಟ್ಟು ತಮ್ಮ ಕರ್ತವ್ಯದಲ್ಲಿ ಜಾರಿಕೊಂಡವು. ಇದರಿಂದ ಹಲವಾರು ರೈತರು ಹೆಚ್ಚು ಬಡ್ಡಿಯ ಕೈಸಾಲ ಮಾಡಿದರು.

ಕೃಷಿಕರಿಗೆ ಸುರಕ್ಷಿತ ಬೇಸಾಯ ಕ್ರಮಗಳ ಬಗ್ಗೆ ತಿಳುವಳಿಕೆ ಕೊಡುವ ವಿಸ್ತರಣಾ ಸಿಬ್ಬಂದಿಯ ಕೊರತೆಯೂ ಈ ಸಮಸ್ಯೆ ಉಲ್ಬಣಿಸಲು ಒಂದು ಕಾರಣ ಎನ್ನಲಾಗಿದೆ.

ಪರಿಹಾರವಾಗಿ ಕೇಂದ್ರ ಸರ್ಕಾರವು ಸುಮಾರು ೧೨ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿತು. ಆಂಧ್ರಪ್ರದೇಶದ ರಾಜ್ಯಸರ್ಕಾರವು ತೊಂದರೆಗೊಳಗಾದ ರೈತರಿಗೆ ಒಂದು ಹೆಕ್ಟೇರ್ ಹತ್ತಿ ಮತ್ತು ತಂಬಾಕು ಬೆಳೆದವರಿಗೆ ೧೨೫೦ ರೂಪಾಯಿ, ತೊಗರಿ ಬೆಳೆದವರಿಗೆ ೧೦೦೦ ರೂಪಾಯಿ ನೀಡಿದೆ. ಲಕ್ಷಾನು ರೂಪಾಯಿ ಸಾಲ ಮಾಡಿ ನೊಂದು ಬೆಂದವರಿಗೆ ಇದು ಯಾವುದಕ್ಕೂ ಸಾಲದು. ಬ್ಯಾಂಕ್‌ಗಳಿಂದ ಕಡಿಮೆ ಬಡ್ಡಿಯಲ್ಲಿ ಸಾಲ ನೀಡಲು ಸರ್ಕಾರವು ತುರ್ತು ಕ್ರಮಗಳನ್ನು ತೆಗೆದುಕೊಂಡಿದೆ.

ಕಲುಷಿತವಾದ ಕೃಷಿರಂಗ

ಆಂಧ್ರಪ್ರದೇಶದಲ್ಲಿ ಹತ್ತಿ ಬೆಳೆದ ೩೩ ಜನ ರೈತರು ೧೯೮೮ರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಜೀವನದಲ್ಲಿ ಇತರರಂತೆ ನಾವೂ ಉತ್ತಮರಾಗಿರಬೇಕು ಎಂಬ ಕನಸನ್ನು ಹೊತ್ತು ಕಷ್ಟಪಟ್ಟು ಕೊನೆಗೆ ದಿಕ್ಕುಕಾಣದೇ ಕಂಗಾಲಾಗುತ್ತಿರುವ ರೈತರ ಪರಿಸ್ಥಿತಿ ಇದು. 'ಹಸಿರು ಕ್ರಾಂತಿ'ಯಡಿ ಆವಿಷ್ಕರಿಸಿದ ಹೈಬ್ರಿಡ್ ತಳಿಗಳು, ಅವುಗಳಿಗೆ ಬೇಕಾದ ಹೆಚ್ಚು ಖರ್ಚಿನ ತಾಂತ್ರಿಕತೆಗಳು, ಅಪಾಯಕಾರಿ ಪರಿಕರಗಳು ಇಂದು ಕೃಷಿಕರನ್ನು ಕೂಡಿಕೊಂಡು ಇತರರಿಗೂ ಕಂಟಕಪ್ರಾಯವಾಗಿವೆ. ಆಂಧ್ರದಲ್ಲಿ ಕಂಡು ಬಂದಂತೆ ಆತ್ಮಹತ್ಯೆ ಪ್ರಕರಣಗಳು ಈಗೀಗ ನಮ್ಮ ರಾಜ್ಯದ ಗುಲ್ಬರ್ಗಾ, ಬೀದರ್, ಹಾಸನ, ಇತ್ಯಾದಿ ಜಿಲ್ಲೆಗಳಲ್ಲಿ ಕಾಣಿಸುತ್ತಿವೆ. ಈ ನಿಟ್ಟಿನಲ್ಲಿ ಕಲುಷಿತವಾಗುತ್ತಿರುವ ಕೃಷಿರಂಗವನ್ನು ಶುದ್ಧಿ ಮಾಡುವ ತುರ್ತು ಕೆಲಸಗಳು ಆಗಬೇಕಾಗಿದೆ. ಗುಲ್ಬರ್ಗಾ ಜಿಲ್ಲೆಯ ತೊಗರಿ ಬೆಳೆಗಾರರು ವರ್ಷವೂ ೨೫೦-೩೫೦ ಕೋಟಿ ರೂಪಾಯಿ ಮೌಲ್ಯದ ಔಷಧಿಗಳನ್ನು ಕೀಟ ಸಾಯಿಸಲು ಬಳಸುತ್ತಾರೆ. ಈ ವರ್ಷ ಅಲ್ಲಿ ಕೀಟಗಳ ಹಾವಳಿ ಹೆಚ್ಚಾಗಿ ೧೨೫ ಕೋಟಿ ರೂಪಾಯಿ ಮೌಲ್ಯದ ಬೆಳೆ ನಷ್ಟವಾಗಿದೆ. ಕೀಟಗಳು ವರ್ಷ ವರ್ಷವೂ ಔಷಧಿಗಳಿಗೆ ನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳುತ್ತಿರುವುದೇ ಇದಕ್ಕೆ ಕಾರಣ.

ಆಂಧ್ರದಲ್ಲಿ ಈಗ ಹತ್ತಿಯ ಬದಲಿಗೆ ಸುಬಾಬುಲ್ ಮರವನ್ನು ಬೆಳೆಸಲು ಜನ ಮುಂದಾಗುತ್ತಿದ್ದಾರೆ. ಹತ್ತಿಗಿಂತ ಸುಬಾಬುಲ್ ಲಾಭದಾಯಕವಾಗಿ ಕಾಣುತ್ತಿದೆ, ಜೊತೆಗೆ ಔಷಧಿ-ಗೊಬ್ಬರಗಳನ್ನು ಹಾಕಿ ದುಡ್ಡು ಖರ್ಚು ಮಾಡುವ ಪ್ರಸಂಗವೂ ಇಲ್ಲ.

○ ಡಾ. ವಿಜಯ್ ಅಂಗಡಿ



ನಿಗೂಢ ಜಗತ್ತು

ಮೃತ್ಯುವನ್ನು ದಯಪಾಲಿಸುವ ಭಯಾನಕ ತಲೆಬುರುಡೆ!

③

ಈ ಲೇಖನಮಾಲೆಯಲ್ಲಿ ಪ್ರಕೃತಿಯ ಹಲವಾರು ನಿಗೂಢಗಳತ್ತ ಕುತೂಹಲಕಾರಿ ದೃಷ್ಟಿಬೀರಿ, ವೈಜ್ಞಾನಿಕವಾಗಿ ವಿಶ್ಲೇಷಿಸುವ ಪ್ರಯತ್ನ ನಡೆದಿದೆ. ಇದು ಈ ಸರಣಿಯ ಮೂರನೇ ಲೇಖನ.

ತಲೆಬುರುಡೆಗಳು ಅಪಾಯದ ಸಂಕೇತ. ವಿನಾಶದ ಚಿಹ್ನೆ. ಭಯ ಹಾಗು ಕುತೂಹಲಗಳು ತಲೆ ಬುರುಡೆಗಳನ್ನು ಕಂಡಾಗ ಆಗುವುದು ಸರ್ವೇಸಾಮಾನ್ಯ. ಅವುಗಳಿಗೆ ಪೈಶಾಚಿಕ ಗುಣಗಳಿವೆ ಎಂದು ಹಲವಾರು ಕಾಲ್ಪನಿಕ ಕಥೆಗಳಲ್ಲಿ ಅತೀರಂಜಿತವಾಗಿ ವರ್ಣಿಸಲ್ಪಟ್ಟಿರುತ್ತದೆ. ಆದರೆ, ತಲೆಬುರುಡೆಗಳನ್ನು ಪವಿತ್ರ ಪಾತ್ರೆಗಳೆಂದು ತಿಳಿದು ಉಪಯೋಗಿಸುವ ಸನ್ಯಾಸಿಗಳೂ ಇದ್ದಾರೆ.

ಈ ಬಾರಿ ನಿಗೂಢ ಲೋಕದಲ್ಲಿ ವಿಶ್ವದಾದಂತ್ಯ ಕುತೂಹಲ ಕೆರಳಿಸಿರುವ ತಲೆಬುರುಡೆಗಳ ಬಗ್ಗೆ ತಿಳಿಸುತ್ತೇನೆ.

'ಸರ್ವನಾಶ ತರುವ ಭಯಾನಕ ತಲೆ ಬರುಡೆಯ ಶುದ್ಧ ಸ್ಫಟಿಕದಿಂದ ಮಾಡಲ್ಪಟ್ಟಿದೆ. ಇದನ್ನು ತಯಾರು ಮಾಡಲು ಹಲವಾರು ತಲೆಮಾರುಗಳು ಕಷ್ಟಪಟ್ಟಿದ್ದಾರೆ. ಮಾನವನ ತಲೆಬುರುಡೆಯನ್ನು ಹೋಲುವಂತೆ ಅದನ್ನು ಮಾಡಲು ಅವರೆಲ್ಲ ಪಟ್ಟಿರುವ ಶ್ರಮವನ್ನು ಮೆಚ್ಚಬೇಕಾದ್ದೆ.... ಈ ತಲೆಬುರುಡೆಯು ಕನಿಷ್ಠ ೩,೬೦೦ ವರ್ಷಗಳಷ್ಟು ಪುರಾತನವಾಗಿರಬೇಕು... ದಂತಕತೆಯೊಂದರ ಪ್ರಕಾರ 'ಮಾಯಾನ್ ಜನಾಂಗ' ಈ ಬುರುಡೆಯನ್ನು ತುಂಬಾ ಭಯ ಭಕ್ತಿಯಿಂದ ಆರಾಧಿಸುತ್ತಿತ್ತು. ಕೆಲವೊಂದು ಗೋಪ್ಯ ಧಾರ್ಮಿಕ ವಿಧಿಗಳನ್ನು ನೆರವೇರಿಸಲು ಮಾಯಾನ್ ಜನಾಂಗದ ಪುರೋಹಿತರುಗಳು ಇದನ್ನು ಬಳಸುತ್ತಿದ್ದರು.... ಅದರ ಮುಂದೆ ನಿಂತು ಸಾವನ್ನು ಕೋರಿಕೊಂಡಾಗ ಸಾವು ತಪ್ಪದೇ ಬರುತ್ತಿತ್ತು! ವಿಶ್ವದ ಸಕಲ ಪೈಶಾಚಿಕ ಶಕ್ತಿಯನ್ನು ತನ್ನೊಳಗೆ ಅಡಗಿಸಿಕೊಂಡಿದೆ ಈ ತಲೆಬುರುಡೆ!!' ಆದರೆ, ನಾನು ಈ ಬಗ್ಗೆ ಇದಕ್ಕಿಂತ ಇನ್ನು ಹೆಚ್ಚೇನು ಬರೆಯಲಾರೆ. ಅದಕ್ಕೂ ಮಿಗಿಲಾಗಿ ಈ ಭಯಾನಕ ತಲೆಬುರುಡೆ ನನ್ನ ಬಳಿಗೆ ಹೇಗೆ ಬಂತು ಎಂದು ತಿಳಿಸಲಾರೆ. ಇದಕ್ಕೆ ಬಲವಾದ ಕಾರಣಗಳಿವೆ. ಆ ಕಾರಣಗಳನ್ನು ನೀವು ಕೇಳಬೇಡಿ! ನಾನು ಸಮಾಧಾನ ಹೇಳಲಾರೆ!!'.. ಹೀಗೆಂದು ಬರೆದವನು ೧೯ನೇ ಶತಮಾನದ ಬ್ರಿಟೀಷ್ ಅನ್ವೇಷಕ ಮಿಚೆಲ್ ಹೆಡ್‌ಈಸ್. ಈತನ ಗೆಳೆಯರೆಲ್ಲ ಇವನನ್ನು ಪ್ರೀತಿಯಿಂದ 'ಮೈಕ್' ಎಂದು ಕರೆಯುತ್ತಿದ್ದರು. ತನ್ನ ಬಳಿಯಲ್ಲಿ ಇದ್ದ ನಿಗೂಢವಾದ ಸ್ಫಟಿಕದ ತಲೆಬುರುಡೆಯಿಂದಾಗಿ ಇವರ ಹೆಸರು ವಿಶ್ವಖ್ಯಾತಿಯನ್ನು ಪಡೆಯಿತು.

ಈ ನಿಗೂಢ ತಲೆಬುರುಡೆಯ ವೃತ್ತಾಂತ ಇಲ್ಲಿಗೆ ಮುಗಿಯುವುದಿಲ್ಲ. 'ಮೈಕ್' ನಂತರ ಈ ತಲೆಬುರುಡೆಗೆ ಯಜಮಾನತಿಯಾದವಳು ಅವನ ಸಾಕು ಮಗಳಾದ ಅನ್ನಾ.

ಅವಳ ಪ್ರಕಾರ ಈ ತಲೆಬುರುಡೆ ಅವಳಿಗೆ ದೊರತದ್ದು, ತನ್ನ ತಂದೆಯೊಂದಿಗೆ ಪುರಾತನ ಗರ್ಭಗುಡಿಯೊಂದರ ಉತ್ಖಲನದ ಸಮಯದಲ್ಲಿ. (೧೯೨೭)ರಲ್ಲಿ ಅವಳಿಗೆ ೧೭ನೇ ವರ್ಷ ತುಂಬಿದಾಗ ಹುಟ್ಟಿದ ಹಬ್ಬದ ಕಾಣಿಕೆಯಾಗಿ ಈ ಸ್ಫಟಿಕದ ತಲೆಬುರುಡೆ ಲಭ್ಯವಾಯಿತು. ಆದರೆ, ಈ ತಲೆಬುರುಡೆಯಲ್ಲಿ ಕೆಳದವಡೆಯ ಒಂದು ಹಲ್ಲು ಇರಲಿಲ್ಲ. ಮೂರು ತಿಂಗಳ ನಂತರ ಈ ದವಡೆ ಹಲ್ಲು ಪತ್ತೆಯಾಯಿತು.

ಆದರೆ ಅನೇಕ ವಿಶೇಷಜ್ಞರು ಇವಳ ಮಾತುಗಳನ್ನು ನಂಬಲಿಲ್ಲ. ವಿಶ್ವದ ಅತ್ಯಂತ ನಿಗೂಢ ಹಾಗು ಅಮೂಲ್ಯವಾದ ತಲೆಬುರುಡೆಯೊಂದು ಇಷ್ಟು ಸುಲಭವಾಗಿ ಯಾರಿಗಾದರೂ ದೊರೆತಿದೆ ಎಂದರೆ ಅದರ ಮೂಲದ ಬಗ್ಗೆ ಸಂಶಯ ಉಂಟಾಗುವುದು ಸಹಜ. ಅದೂ ಅಲ್ಲದೇ 'ಅನ್ನಾಳಿಗೆ ಅವಳ ಹುಟ್ಟು ಹಬ್ಬದ ದಿನವೇ ಇದು ದೊರೆತಿದೆ ಎನ್ನುವ ಸಂಗತಿ ಅವರಲ್ಲಿ ಅನೇಕ ಅನುಮಾನಗಳಿಗೆ ಎಡೆಮಾಡಿ ಕೊಟ್ಟಿತು. ಅದೇ ತಾನೆ ಮಲೇರಿಯಾ ರೋಗದಿಂದ ನರಳಿ, ಹಾಸಿಗೆಯಿಂದ ಎದ್ದ ತನ್ನ 'ಸಾಕು' ಮಗಳನ್ನು ಸಂತೋಷಪಡಿಸಲು 'ಮೈಕ್'ನೇ ಯಾಕೆ ಇದನ್ನು ಗರ್ಭಗುಡಿಯಲ್ಲಿ ಬೇಕಂತಲೆ ಹುದುಗಿಸಿ ಅದು 'ಅನ್ನಾ'ಳಿಗೆ ದೊರೆಯುವಂತೆ ಮಾಡಿರಬಾರದು? ಎಂದು ಕೆಲವು ಅನ್ವೇಷಕರು

○ ನಾರಾಯಣ ಎಂ. ಭಟ್
ನಂ. ೧೪೪, ೪ನೇ ಮೇನ್, ಆಂಜನೇಯ ನಗರ,
ಬಿ.ಎಸ್.ಕೆ. ೩ನೇ ಸ್ಟೇಜ್, ಬೆಂಗಳೂರು-೮೫

ಸವಾಲೊಡ್ಡಿದರು.

ಆದರೆ 'ಅನ್ನಾ' ಮಾತ್ರ ಈ ವಾದ-ವಿವಾದದ ಸುಳಿಗೆ ಸಿಕ್ಕದೇ ತನ್ನಷ್ಟಕ್ಕೆ ತಾನಿದ್ದಳು. ಹೀಗಾಗಿ ಈ ತಲೆಬುರುಡೆಯ ನಿಗೂಢತೆ ಇನ್ನಷ್ಟು ಹೆಚ್ಚಾಯಿತು.

ಈ ತಲೆಬುರುಡೆಯ ವೈಜ್ಞಾನಿಕ ಪರೀಕ್ಷೆ ನಡೆದದ್ದು, ಅದು ದೊರೆತ ಹಲವಾರು ವರುಷಗಳ ಬಳಿಕವೇ... ಆದರೂ ಅದು ತಲೆಬುರುಡೆಯ ಬಗ್ಗೆ ಸಮರ್ಪಕವಾದ ಉತ್ತರಗಳನ್ನು ನೀಡಲು ಸಮರ್ಥವಾಯಿತು ಎನ್ನುವಂತಿಲ್ಲ. ಈ 'ತಲೆಬುರುಡೆ'ಯು ಎಷ್ಟು ಪುರಾತನವಾದದ್ದು ಎಂದು ನಿಖರವಾಗಿ ಹೇಳುವುದು ಕಷ್ಟ. ಕಾರಣವೇನೆಂದರೆ 'ಸ್ಫಟಿಕದ' ಕಾಲಮಾನವನ್ನು ನಿಖರವಾಗಿ ಅಳೆಯಲು ಯಾವುದೇ ವೈಜ್ಞಾನಿಕ ಪದ್ಧತಿ ಅಥವಾ ವಿಧಾನ ಇಲ್ಲ. ಹೀಗಾಗಿ, ಅದು ೩ ಸಾವಿರ ವರ್ಷದಷ್ಟು ಪುರಾತನವೇ ಅಲ್ಲವೇ ಎನ್ನುವುದು ಎಂದಿಗೂ ನಿಗೂಢವೇ! ಹಾಗೆಯೇ, 'ಅನ್ನಾ'ಳು ಹೇಳಿದ ಕಥೆ ಎಷ್ಟರ ಮಟ್ಟಿಗೆ ನಿಜ ಎನ್ನುವುದು ಯಾರಿಗೂ ಗೊತ್ತಿಲ್ಲ. ಇಷ್ಟೇ ಅಲ್ಲದೇ, ಈ ತಲೆಬುರುಡೆಯ ಬಗ್ಗೆ 'ಮೈಕ್' ಯಾಕೆ ರಹಸ್ಯವನ್ನು ಕಾಪಾಡಿಕೊಂಡ ಎನ್ನುವುದು ಇದುವರೆಗೂ ಸ್ಪಷ್ಟವಾಗಿಲ್ಲ. ಅವನ ಮಗಳಾದ 'ಅನ್ನಾ' ಸಹಿತ ಇಲ್ಲಿಯ ತನಕ ಇದನ್ನು 'ಗೋಪ್ಯವಾಗಿಯೇ ಇಟ್ಟಿದ್ದಾಳೆ.

ಬ್ರಿಟಿಷ್ 'ಮ್ಯೂಸಿಯಂ'ನ ಮಹಡಿಕೋಣೆಯನ್ನು ಪ್ರವೇಶಿಸುವ ಜನರಿಗೆ ಗಟ್ಟಿ ಎದೆ ಇರಬೇಕು. ಏನಿದೆ ಅಲ್ಲಿ ಅಂತದ್ದು? ಅಲ್ಲಿರುವುದು ಒಂದು ನಿಗೂಢ ತಲೆ ಬುರುಡೆ! 'ಮೈಕ್'ನ ತಲೆಬುರುಡೆಗಿಂತಲೂ ತುಸು ಚಿಕ್ಕದಾಗಿರುವ ಈ ತಲೆಬುರುಡೆ ಸಹ ಸ್ಪಟಿಕದಿಂದಲೇ ಮಾಡಲ್ಪಟ್ಟಿದೆ.

ವಸ್ತುಸಂಗ್ರಾಲಯದಲ್ಲಿ ಪಸರಿಸಿರುವ ಮಂದ ಬೆಳಕಿನಲ್ಲಿ ಆ ನಿಗೂಢ ತಲೆಬುರುಡೆ ತುಂಬಾ ಭಯಾನಕವಾಗಿ ತೋರುತ್ತದೆ. ಅದರ ದೃಷ್ಟಿ ನೋಡುಗನ ಮೇಲೆಯೇ ನೆಟ್ಟಿರುವಂತೆ ಭಾಸವಾಗುತ್ತದೆ. ಆ ನೋಟದ ಭೀಕರತೆ, ಕ್ರೂರತೆ ಎಂತಹವರ ಎದೆಯಲ್ಲಿಯೂ ನಡಕ ಹುಟ್ಟಿಸಬಲ್ಲದು. ರಾತ್ರಿ ಪಾಳಿಯಲ್ಲಿರುವ ಮ್ಯೂಸಿಯಂನ ಕೆಲಸಗಾರರು ಆ ತಲೆಬುರುಡೆಯ ಮೇಲೆ ಕಪ್ಪು ಬಟ್ಟೆಯನ್ನು ಮುಚ್ಚಿ ಬಿಡುತ್ತಾರೆ. ಆ ತಲೆಬುರುಡೆಯ ನೋಟವು ಎಲ್ಲಿ ತಮ್ಮ ಹೃದಯಾಘಾತಕ್ಕೆ ಕಾರಣವಾಗುವುದೋ ಎಂಬ ಆಶಂಕೆ ಅವರಿಗೆ!


ಇಂದಿಗೂ ನಿಗೂಢವಾಗಿರುವ ಪ್ರಶ್ನೆಗಳೆಂದರೆ, ಈ ತಲೆಬುರುಡೆ ಯಾರಿಂದ ಅಥವಾ ಎಲ್ಲಿಂದ 'ಮ್ಯೂಸಿಯಂ'ನ್ನು ತಲುಪಿತು ಎನ್ನುವುದು. ಈ ಬಗ್ಗೆ ಮ್ಯೂಸಿಯಂನಲ್ಲಿ ಸಮರ್ಪಕ ದಾಖಲೆಗಳೇ ಇಲ್ಲ! ಇದನ್ನು 'ನ್ಯೂಯಾರ್ಕ್'ನ ಆಭರಣಗಳ ಅಂಗಡಿಯೊಂದರಿಂದ ಕೊಂಡುಕೊಳ್ಳಲಾಯಿತು ಎಂದು ಒಂದು ದಾಖಲೆ ತಿಳಿಸುತ್ತದೆ. ಆದರೆ ಆ 'ಅಂಗಡಿ'ಗೆ ಅದನ್ನು ಸರಬರಾಜು ಮಾಡಿದವನು ಯಾರು ಎನ್ನುವುದು ಯಾರಿಗೂ ಗೊತ್ತಿಲ್ಲ. ಒಂದು ಕತೆಯ ಪ್ರಕಾರ 'ಮೆಕ್ಸಿಕೋ'ವನ್ನು ಲೂಟಿ ಹೊಡೆದ ನಿಗೂಢ ಸೈನಿಕ ಯೋಧನೊಬ್ಬ ಅದನ್ನು ಆಭರಣಗಳ ಅಂಗಡಿಗೆ ಮಾರಿದ ಎಂದು ತಿಳಿಯಲಾಗಿದೆ. ಹಾಗಾದರೆ ಯಾರು ಆ ನಿಗೂಢ ಸೈನಿಕ! ಅವನ ಹೆಸರೇನು? ಉತ್ತರ ಯಾರಿಗೂ ತಿಳಿದಿಲ್ಲ.

ಪ್ರಿಯ ಓದುಗ, 'ನಿಗೂಢ ಜಗತ್ತು' ಲೇಖನ ಸರಣಿಯಲ್ಲಿ ಮೂಡಿಬರುತ್ತಿರುವ ವಿಷಯಗಳನ್ನು ಓದಿದಾಗ, ನಿಮ್ಮ ಊರಿನಲ್ಲಿಯೂ ಇಂತಹದ್ದೇ ಒಂದು 'ನಿಗೂಢ ಸಂಗತಿ' ಇರಬಹುದು ಎಂದು ನಿಮಗೆ ಅನಿಸಿರಬಹುದಲ್ಲವೇ? ಅಥವಾ ನಿಮ್ಮ ಗಮನಕ್ಕೆ ಇಂತಹ 'ನಿಗೂಢ' ವಿಷಯಗಳು ಬಂದಿರಲೇ ಬೇಕಲ್ಲವೇ? ಹಾಗಿದ್ರೆ, ನೀವೂ ಯಾಕೆ ಅದನ್ನು ಇತರರೊಂದಿಗೆ ಹಂಚಿಕೊಳ್ಳಬಾರದು. ಬಹುಶಃ

ನಿಗೂಢ ಜಗತ್ತು

ಇಂತಹ ನಿಗೂಢ ಪ್ರಶ್ನೆಗಳಿಗೆ ಉತ್ತರ ಯಾರ ಬಳಿಯಾದರೂ ಇರಬಹುದೇನೋ? ಆದ್ದರಿಂದ ನಿಮ್ಮ ಗಮನಕ್ಕೆ ಬಂದ ನಿಗೂಢ ವಿಷಯಗಳ ಬಗ್ಗೆ 'ಬಿಸಿಲ ಬದುಕು' ಪತ್ರಿಕೆಗೆ ಬರೆದು ಕಳಿಸಿ. ಚಿತ್ರಗಳಿದ್ದರೆ ಅದನ್ನು ಜೊತೆಗಿರಿಸಿ. ಸಂದರ್ಭಾನುಸಾರ ಅವುಗಳನ್ನು ಬಳಸಿಕೊಂಡು ಲೇಖನ ಸರಣಿಯನ್ನು ಮುಂದುವರಿಸುತ್ತೇನೆ. ಮುಂದಿನ ಸಂಚಿಕೆಗಳಲ್ಲಿ ನಿಗೂಢ ಜಗತ್ತಿನ ರಹಸ್ಯಗಳನ್ನು ಭೇದಿಸಲು ಅವಸ್ಮರಣೀಯ ಸೇವೆ ಸಲ್ಲಿಸಿದವರನ್ನು ಕುರಿತು ಬರೆಯುತ್ತೇನೆ. ಅವರ ಶ್ರಮ, ಶ್ರದ್ಧೆ ಹಾಗು ಸಾಧನೆಗಳು 'ನಿಗೂಢ ಜಗತ್ತಿನ' ಅನ್ವೇಷಕರಿಗೆ ದಾರಿದೀಪಗಳು ಇದ್ದಂತೆ.

ಸಿಝೇರಿಯನ್ ಶಸ್ತ್ರಚಿಕಿತ್ಸೆ ಬೇಕೆ? ಏಕೆ?



○ ಡಾ. ಸುನಂದಾ ಕುಲಕರ್ಣಿ

ಸಿಝೇರಿಯನ್ ಶಸ್ತ್ರಚಿಕಿತ್ಸೆ ಈಗ ಶ್ರೀ ಸಾಮಾನ್ಯನಿಗೂ ಗೊತ್ತು. ಇತ್ತೀಚೆಗೆ ಅನಗತ್ಯವಾಗಿ ಸಿಝೇರಿಯನ್ ಹೆರಿಗೆ ಮಾಡುತ್ತಾರೆಂದು ಕೆಲವರು ಆಪಾದಿಸುತ್ತಿದ್ದಾರೆ. ಹೆರಿಗೆಯ ನೋವಿನಿಂದ ಮುಕ್ತ ಮಾಡಿ ಬೇಗನೆ ಸಿಝೇರಿಯನ್ ಮೂಲಕ ಮಗುವನ್ನು ಹೊರಗೆ ತೆಗೆದು ಪ್ರಾಣ ಉಳಿಸಬೇಕೆನ್ನೂವವರೂ ಇದ್ದಾರೆ. ಇನ್ನೊಂದೆಡೆ. ಹಾಗಾದರೆ ಸತ್ಯಾಂಶವೇನು?

ಈ ಸಿಝೇರಿಯನ್ ಎಂಬ ಶಬ್ದವು ಜ್ಯೂಲಿಯಸ್ ಸೀಝರನ ಕಾಲದಲ್ಲಿ ಪ್ರಚಲಿತವಾಯಿತೆಂದು ತಿಳಿಯಲಾಗಿದೆ. ಆದರೆ ಹಲವರು ಜ್ಯೂಲಿಯಸ್ ಸೀಝರನೇ ಈ ತರಹದ ಹೆರಿಗೆಯಿಂದ ಹುಟ್ಟಿದ ಎಂದು ಹೇಳುತ್ತಾರೆ. ಜ್ಯೂಲಿಯಸ್ ಸೀಝರನ ತಾಯಿಯ ಜ್ಯೂಲಿಯಸ್ ಹುಟ್ಟಿದ ನಂತರ ಹಲವಾರು ವರ್ಷ ಬದುಕಿದ್ದಳೆಂಬುದಕ್ಕೆ ದಾಖಲೆಯಿದೆ. ಇದರಿಂದ ಜ್ಯೂಲಿಯಸ್ ಈ ತರಹದ ಹೆರಿಗೆಯಿಂದ ಹುಟ್ಟಿಲ್ಲ ಎಂಬುದು ವ್ಯಕ್ತವಾಗುತ್ತದೆ. ಜ್ಯೂಲಿಯಸ್ ಸಿಝರ ೧೦೦ ಬಿ.ಸಿ.ಯಲ್ಲಿ ಹುಟ್ಟಿದವನಾಗಿ ಹಲವಾರು ವರ್ಷಗಳಲ್ಲಿ ಪ್ರಖ್ಯಾತನಾದ್ದರಿಂದ ಅವನನ್ನು ಹೀರೋಸ್ಥಾನಕ್ಕೆ ಏರಿಸಲು ಈ ರೀತಿ ವದಂತಿ ಹುಟ್ಟಿಸಿರಬೇಕು. ಇನ್ನೊಂದು ಪ್ರಚಲಿತವಾದ ಸುದ್ದಿಯೆಂದರೆ ಆಗಿನ ಕಾಲದಲ್ಲಿ ಚರ್ಚುಗಳು ರೋಮನ ಆಡಳಿತದಲ್ಲಿ ಒಂದು ಕಾನೂನು ಮಾಡಿಸಿದ್ದವು. ಬಸಿರು ಹೆಂಗಸು ಸತ್ತರೆ, ಅವಳ ಗರ್ಭವನ್ನು ತೆಗೆದು ಮಗುವನ್ನೂ ಹಾಗು ತಾಯಿಯನ್ನು ಬೇರೆ-ಬೇರೆಯಾಗಿ ದಫನ್ ಮಾಡಬೇಕೆಂದು.



ಚಿತ್ರ: ಎಂ. ವಿಶ್ವನಾಥ

ಸಿಝೇರಿಯನ್ ಶಸ್ತ್ರಕ್ರಿಯೆಯನ್ನು ಪಾಶ್ಚಾತ್ಯ ದೇಶಗಳಲ್ಲಿ ಶೇ.೩೦ರಷ್ಟು ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಶೇ. ೧೦ ರಿಂದ ೨೦ರಷ್ಟು ಮಾಡಲಾಗುತ್ತಿದೆ. ದಿನೇ-ದಿನೇ ಈ ಸಿಝೇರಿಯನದ ಸಂಖ್ಯೆ ಹೆಚ್ಚಾಗುತ್ತಿದೆ. ಮೊದಲಿನ ಕಾಲದಲ್ಲಿ ಹೆಂಗಸಿಗೆ ಯೋನಿದ್ವಾರದಿಂದ ಹೆರಿಗೆಯಾಗದಿದ್ದ ಮಾತ್ರದಲ್ಲಿ ಈ ಶಸ್ತ್ರಕ್ರಿಯೆಯನ್ನು ಮಾಡಲಾಗುತ್ತಿತ್ತು. ಆದರೆ ಈಗ ಯೋನಿ ಮೂಲಕ ಸ್ವಾಭಾವಿಕ ಹೆರಿಗೆಯಾಗುವದು ಮುಖ್ಯವಲ್ಲ. ಹಾಗೆ ಹುಟ್ಟಿದ ಮಗುವಿನ ಬುದ್ಧಿಯು ಚುರುಕಾಗಿರಬೇಕು. ಸಮಾಜಕ್ಕೆ ಬುದ್ಧಿವಂತ ಆರೋಗ್ಯವಂತ ಮಗುವನ್ನು ಕೊಡಬೇಕೆಂಬ ಉದ್ದೇಶ ಅದರಲ್ಲಿ ಅಡಗಿದೆ. ಇದರಿಂದ ಕಾಲು ಮುಂದುಮಾಡಿದ ಮಕ್ಕಳಿದ್ದರೆ ಅದಕ್ಕೆ ಈಗ ಹೆಚ್ಚು ಈ ತರಹದ ಹೆರಿಗೆಯಾಗುತ್ತಿದೆ. ಗರ್ಭಸ್ಥ ಶಿಶುವು ಚೆನ್ನಾಗಿದೆಯೋ-ಇಲ್ಲವೋ ಎಂಬುದನ್ನು ಈ ಮೊದಲು ಕೇವಲ ಸ್ಟೆಥೆಸ್ಕೋಪದಿಂದ ನೋಡಲಾಗುತ್ತಿತ್ತು. ಆದರೆ ಈಗ ಗರ್ಭಸ್ಥ

ಶಿಶುವಿನ ಸುಸ್ಥಿತಿಯನ್ನು ಇಲೆಕ್ಟ್ರೊನಿಕ್ಸ್ ಮೊನಿಟರಿಂಗ (Electronic monitoring) ದಿಂದ ನೋಡುವದರಿಂದ ಬೇಗ-ಬೇಗ ಗರ್ಭಸ್ಥ ಮಗುವಿನ ಪರಿಸ್ಥಿತಿ ತಿಳಿಯುವದರಿಂದ, ಅದು ಸರಿಯಾಗಿಲ್ಲವೆಂಬುದು, ಬಹಳ ಬೇಗ ತಿಳಿಯುವದರಿಂದ ಈ ಚಿಕಿತ್ಸೆಯನ್ನು ಮಾಡಲಾಗುತ್ತಿದೆ. ಈಗೀಗ ಹೆಣ್ಣು ಮಕ್ಕಳೂ ಸಹಿತ ಕಲಿತು ಕೆಲಸ ಮಾಡುವದರಿಂದ, ಅವರು ಮದುವೆಯಾಗಿ ನಂತರ ಮಕ್ಕಳು ಆಗಲು ಸ್ವಾಭಾವಿಕವಾಗಿಯೇ ವಯಸ್ಸು ಹೆಚ್ಚಾಗುವದು ವಯಸ್ಸು ಹೆಚ್ಚಾದಂತೆ ಸ್ವಾಭಾವಿಕವಾಗಿ ನೈಸರ್ಗಿಕ ಹೆರಿಗೆಯಾಗುವದು ಕಡಿಮೆಯಾಗುವದಲ್ಲದೆ, ಹೆಂಗಸರ ವಯಸ್ಸು ೩೫ ದಾಟಿದ್ದರೆ, ನಂತರ ಅವರು ಬಸಿರಾಗಿದ್ದರೆ, ಇನ್ನೂ ಕೆಲವೇ ವರ್ಷಗಳಲ್ಲಿ ಮುಟ್ಟು ನಿಲ್ಲುವ ವಯಸ್ಸು ಬರಬಹುದು. ಇದರಿಂದ ಅವರಿಗೆ ಒಂದೇ ಮಗುವೇ ಆಗಬಹುದು. ಇಂತಹ ಸಮಯದಲ್ಲಿ ಹುಟ್ಟುವ ಒಂದೇ ಮಗುವಿಗೆ ನೈಸರ್ಗಿಕ ಹೆರಿಗೆಯನ್ನು ಮಾಡಿಸಲೇಬೇಕೆಂಬ ಹಟಹಿಡಿಯುವದರ ಬದಲು, ಅವರಿಗೆ ಶಸ್ತ್ರ ಚಿಕಿತ್ಸೆಯನ್ನು ಮಾಡಿ, ಆರೋಗ್ಯಯುತ, ಬುದ್ಧಿವಂತ ಮಗು ಹುಟ್ಟಿದರೆ ಒಳ್ಳೆಯದಲ್ಲವೆ? ವಯಸ್ಸು ಹೆಚ್ಚಿದಂತೆ, ಹೆಂಗಸರಿಗೆ, ಹೃದಯದ ಕಾಯಿಲೆ ಹೆಚ್ಚಾಗಬಹುದು, ಮಧುಮೇಹ ಹೆಚ್ಚಾಗಬಹುದು, ದೇಹದಲ್ಲಿಯ ಶಕ್ತಿ ಸಾಲದಿರಬಹುದು. ಇಂಥ ವೇಳೆಯಲ್ಲಿಯೂ ಸಹ ಸಿಝೇರಿಯನ್ ಶಸ್ತ್ರಚಿಕಿತ್ಸೆ ಹೆಚ್ಚಾಗಬಹುದು. ಇದೂ ಅಲ್ಲದೆ, ಈಗೀಗ ಕಷ್ಟಕರವಾದ ಚಿಮ್ಮಟಗಳ ಹೆರಿಗೆಯು ಕಡಿಮೆಯಾಗುವದರಿಂದ ಸಿಝೇರಿಯನ್ ಶಸ್ತ್ರಚಿಕಿತ್ಸೆಯು ಹೆಚ್ಚಾಗುತ್ತದೆ.

ಈ ಶಸ್ತ್ರಚಿಕಿತ್ಸೆಗೆ ಮೇಲೆ ಹೇಳಿದ ಕಾರಣಬಿಟ್ಟು ಇನ್ನೂ ಹಲವಾರು ಕಾರಣಗಳುಂಟು. ಮಾಸು ಮುಂದಾಗಿದ್ದರೆ, ತಾಯಿಗೆ ರಕ್ತ ಸ್ರಾವವಾಗಿ ತಾಯಿ ಹಾಗು ಮಗು ಇಬ್ಬರೂ ಸಾಯಬಹುದು. ಇಂಥವರಿಗೆ ಶಸ್ತ್ರಚಿಕಿತ್ಸೆ ಮಾಡಿದರೆ ತಾಯಿ ಹಾಗು ಮಗು ಉಳಿಯುತ್ತಾರೆ. ತಾಯಿಯ ಕಟಿ ಪ್ರದೇಶ ಸಣ್ಣದಿದ್ದರೆ, ಶಸ್ತ್ರಚಿಕಿತ್ಸೆಯಾಗದಿದ್ದರೆ, ಮಗುವು ಸಾಯುವದಲ್ಲದೇ, ತಾಯಿಯ ಗರ್ಭಚೀಲ ಒಡೆದು ತಾಯಿಯೂ ಸಾಯಬಹುದು. ಮಗುವು ಯಾವುದಕ್ಕೂ ಉಸಿರುಗಟ್ಟುತ್ತಿದ್ದರೆ, ಶಸ್ತ್ರಚಿಕಿತ್ಸೆ ಮಾಡುತ್ತಾರೆ. ಮಗುವು ಅಡ್ಡವಾಗಿದ್ದರೆ, ಮುಖ ಮುಂದೆ ಮಾಡಿದ್ದರೆ, ತಲೆ ಹಿಂದುಗಡೆಯಿದ್ದರೆ, ಕಾಲು ಮುಂದು ಮಾಡಿದ್ದರೆ ಮಗುವನ್ನು ಉಳಿಸಲು ಹಾಗು ತಾಯಿಯನ್ನು ಕಾಪಾಡಲು ಸಿಝೇರಿಯನ್ ಶಸ್ತ್ರಚಿಕಿತ್ಸೆ ಮಾಡಲೇಬೇಕಾಗುತ್ತದೆ. ತಾಯಿಯು ಮಧುಮೇಹದಿಂದ ಬಳಲುತ್ತಿದ್ದರೆ ಅಥವಾ ಅವರಿಗೆ ಬಸಿರಿನ ನಂಜು ಇದ್ದರೆ ಶಸ್ತ್ರಚಿಕಿತ್ಸೆಯನ್ನು ಮಾಡುವ ಸಂಭವ ಹೆಚ್ಚು. ಮಗುವನ್ನು ಸ್ವಾಭಾವಿಕವಾಗಿ ಹೆರಿಗೆ ಮಾಡಿಸಲು, ಅವಳಿಗೆ ಗರ್ಭಾಶಯವನ್ನು ಚೋದಿಸುವ ಚುಚ್ಚುಮದ್ದುಕೊಟ್ಟು ಅಥವಾ ಗರ್ಭದ್ರವವನ್ನು ತೆಗೆದು ಹೆರಿಗೆಯಾಗದಿದ್ದಾಗ ಸಿಝೇರಿಯನ್ ಮಾಡಲಾಗುತ್ತದೆ. ಕೆಲವು ಸಲ ಗರ್ಭದ್ರವ ಸೋರಿ ಹೆರಿಗೆಯಾಗಲು ತಡವಾಗಬಹುದು. ಆಗ ಮಗುವಿಗೆ ನಂಜಾಗುವ ಸಂಭವ ಹೆಚ್ಚಾಗುತ್ತದೆ. ಇಂಥ ವೇಳೆಯಲ್ಲಿಯೂ ನೈಸರ್ಗಿಕ ಹೆರಿಗೆಯಾಗುವ ಸಂಭವವಿದ್ದರೂ ಬೇಗ ಹೆರಿಗೆಯನ್ನು ಮಾಡಲು ಶಸ್ತ್ರಚಿಕಿತ್ಸೆಯನ್ನು ಮಾಡಲಾಗುವದು.

ಸಿಝೇರಿಯನ್ ಶಸ್ತ್ರಚಿಕಿತ್ಸೆಗೆ ಹೊಟ್ಟೆಯಲ್ಲಿ ಅಂದರೆ ಹೊಕ್ಕಳು ಕೆಳಗಡೆ ಉದ್ದವಾಗಿ ಇಲ್ಲದಿದ್ದರೆ ಅಡ್ಡವಾಗಿ ಕೊಯ್ದು ಮಗುವನ್ನು ತೆಗೆಯಲಾಗುವದು. ಈಗೀಗ ಅಡ್ಡವಾಗಿ ಕೊಯ್ದು ತೆಗೆಯುವದೇ ಫ್ಯಾಶನ್ ಆಗಿದೆ. ಈ ತರಹ ಮಾಡಿದರೆ ಮಾಡಿದ ಗಾಯ ಸಹಿತ ಯಾರಿಗೂ ಕಾಣಿಸುವದಿಲ್ಲ. ಉದ್ದವಾಗಿ ಕೊಯ್ದಾಗ ಕೆಲವರಲ್ಲಿ ಹೊಲಿಗೆಗಳು ಬಿಚ್ಚಿಕೊಂಡರೆ ಹರ್ನಿಯಾ ಅಂದರೆ ಚರ್ಮದ ಕೆಳಗಡೆ ತೂತಾಗಿ ಅಲ್ಲಿ ಕರುಳುಗಳು ಬರಬಹುದು. ಇಂಥ ಯಾವ ತೊಂದರೆಗಳೂ ಅಡ್ಡವಾಗಿ ಕೊಯ್ದಾಗ ಆಗುವದಿಲ್ಲ. ಹೊಲಿಗೆಗಳು ಗಟ್ಟಿಯಾಗಿರುತ್ತವೆ. ಒಬ್ಬ ಹೆಂಗಸು ಎಷ್ಟು ಸಲ ಸಿಝೇರಿಯನ್ ಮಾಡಿಸಿಕೊಳ್ಳಬಹುದು ಎಂಬುದು ಇನ್ನೊಂದು ಪ್ರಶ್ನೆ. ಒಬ್ಬರು ೨ಕ್ಕಿಂತ ಹೆಚ್ಚು ಸಿಝೇರಿಯನ್ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವದು ಒಳ್ಳೆಯದಲ್ಲ. ನಂತರ ಗರ್ಭದ ಚೀಲ ಒಡೆಯುವ ಸಂಭವ ಹೆಚ್ಚು. ಇದರಿಂದ ತಾಯಿಯ ಜೀವಕ್ಕೆ ಅಪಾಯವಾಗುವ ಸಂಭವ ಬಹಳ ಇದೆ.

ಒಂದು ಸಲ ಸಿಝೇರಿಯನ್ ಆದರೆ ೨ನೆಯ ಸಲ ನೈಸರ್ಗಿಕವಾಗಿ ಹೆರಿಗೆಯಾಗುವ ಸಂಭವವಿದೆಯೇ ಎಂಬುದು ಇನ್ನೊಂದು ಪ್ರಶ್ನೆ.

ಇದು ಮೊದಲನೆಯ ಸಲ ಯಾವುದಕ್ಕೆ ಸಿಝೇರಿಯನ್ ಮಾಡಿದ್ದಾರೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಮೊದಲನೇ ಸಲ ತಾಯಿಗೆ ಕಟಿ ಪ್ರದೇಶ ಸಣ್ಣದಿದ್ದರೆ, ಹೆರಿಗೆಯಾಗುವ ಸಂಭವವಿಲ್ಲವೆಂದು ಮಾಡಿದ್ದರೆ ತದನಂತರದ ಹೆರಿಗೆಗೆ ಸಿಝೇರಿಯನ್ ಶಸ್ತ್ರಚಿಕಿತ್ಸೆ ಮಾಡಲೇ ಬೇಕಾಗುತ್ತದೆ. ಆದರೆ ಮೊದಲನೆಯ ಸಲ ಮಗುವು ಕಾಲು ಮುಂದು ಮಾಡಿರುವದರಿಂದಲೋ, ಮಾಸು ಮುಂದೆ ಇದೆಯೆಂದೋ, ಗರ್ಭದ್ರವ ಸೋರುತ್ತಿದೆಯೆಂದೊ ಮಾಡಿದ್ದರೆ, ೨ನೆಯ ಸಲ ಬಸಿರಾದಾಗ, ಸಿಝೇರಿಯನ್ ಮಾಡುವ ಅಗತ್ಯವಿಲ್ಲ. ಆದರೆ ಮೊದಲ ಸಲ ಸಿಝೇರಿಯನ್ ಆದವರು ೨ನೆಯ ಸಲ ನೈಸರ್ಗಿಕ ಹೆರಿಗೆಯಾಗುವ ಸಂಭವವಿದ್ದವರು ದೊಡ್ಡ-ದೊಡ್ಡ ಆಸ್ಪತ್ರೆಯಲ್ಲಿಯೇ ಹೆರಿಗೆಯನ್ನು ಮಾಡಿಸಿಕೊಳ್ಳಬೇಕು. ಈ ತರಹದ ಹೆರಿಗೆಗೆ ಸದಾಕಾಲ ಕರ್ತವ್ಯ ನಿರತ ವೈದ್ಯರ ಅಗತ್ಯತೆ, ಯಾವುದೇ ಕ್ಷಣದಲ್ಲಿ ಗರ್ಭಚೀಲ ಒಡೆದುಕೊಂಡರೆ ಅದನ್ನು ಕಂಡುಹಿಡಿಯುವ ಚಾಕಚಕ್ಯತೆ ಹಾಗು ಅದನ್ನು ರಿಪೇರಿ ಮಾಡಲು ನುರಿತ ವೈದ್ಯರ ತಂಡ ಬೇಕಾಗುತ್ತದೆ. ಕೆಲವು ಸಲ ೨ನೆಯ ಮಗುವು ಮೊದಲ ಮಗುವಿಗಿಂತಲೂ ಬಹಳ ದೊಡ್ಡದಾಗಿ ಬೆಳೆದಿದ್ದರೆ, ಆಗ ಮೊದಲನೆಯ ಹೆರಿಗೆಯನ್ನು ಸಿಝೇರಿಯನ್‌ದಿಂದ ಮಾಡಿದ್ದಾಗ, ತಿರುಗಿ ಸಿಝೇರಿಯನ್ ಮಾಡಲೇಬೇಕಾಗುತ್ತದೆ. ಇಲ್ಲಿ ನೈಸರ್ಗಿಕ ಹೆರಿಗೆಯೆಂದು ಬಿಟ್ಟರೆ, ಗರ್ಭಾಶಯ ಒಡೆದುಕೊಂಡು ತಾಯಿಯ ಪ್ರಾಣಕ್ಕೆ ಸಂಚಕಾರ ಬರಬಹುದು.

ಸಿಝೇರಿಯನ್ ಮೇಲೆ ಸಿಝೇರಿಯನ್ ಆದವರಲ್ಲಿ ಈ ಮೊದಲೇ ಹೇಳಿದ ಹರ್ನಿಯಾ ತೊಂದರೆ ಕೆಲವರಲ್ಲಿ ಆದರೆ ಇನ್ನು ತೀರ ಕಡಿಮೆ ಪ್ರಮಾಣದಲ್ಲಿ ಒಂದೊಂದು ಸಲ ಗರ್ಭಾಶಯ ಒಳಪದರು ಗಾಯಕ್ಕೆ ಅಂಟಿಕೊಂಡು ತಿಂಗಳು-ತಿಂಗಳು ಅಲ್ಲಿ ರಕ್ತಸ್ರಾವವಾಗಬಹುದು. ಬಹಳ ದಿನಗಳ ನಂತರ ಕೆಲವು ಸಲ ಕರುಳುಗಳು ಒಂದಕ್ಕೊಂದು ತಾಕಲಾಡಿಕೊಂಡು ಗಂಟಾಗಿ, ಹೊಟ್ಟೆಯುಬ್ಬರ ಬಂದು, ವಾಂತಿಯಾಗುತ್ತಲಿರಬಹುದು. ಇಂಥ ಪ್ರಸಂಗಗಳಲ್ಲಿ ಮತ್ತೆ ಹೊಟ್ಟೆಯನ್ನು ಕೊಯ್ಯಬೇಕಾಗಬಹುದು. ಹರ್ನಿಯಾಕ್ಕೂ ಸಹ ಹೊಟ್ಟೆಯನ್ನು ಕೊಯ್ದು ಮತ್ತೆ ಶಸ್ತ್ರ ಚಿಕಿತ್ಸೆಯನ್ನು ಮಾಡಬೇಕಾಗುತ್ತದೆ.



ಭಾರತೀಯರು ತಿನ್ನುವುದರಲ್ಲಿ ಬಹಳ ಮುಂದೆ... ಅನ್ನೋದು ಈಗ ವಿದೇಶಿಯರಿಗೂ ತಿಳಿದೋಯ್ತೆ !?

ಪ್ರತಿಯೊಂದು ನೈಸರ್ಗಿಕ ಹೆರಿಗೆಯಲ್ಲಿಯೂ ಸಹ ಸ್ವಲ್ಪವಾದರೂ ತಾಯಿಗಾಗಲೀ, ಮಗುವಿಗಾಗಲೀ ತೊಂದರೆಯಿದ್ದೇ ಇರುತ್ತದೆ. ಪ್ರತಿಯೊಂದು ಹೆರಿಗೆ ಹೊಸದೆಂದೇ ತಿಳಿಯಬೇಕು. ಪ್ರತಿ ಸಲವೂ ಸುಲಭವಾಗಿ ಹೆರಿಗೆಯಾಗುತ್ತದೆಯೆಂದು ಹೇಳಲುಬಾರದು. ಪ್ರತಿ ಸಲವು ಮಗುವಿನ ತೂಕ ಅಷ್ಟೇ ಇರುತ್ತದೆ. ತಲೆಯೇ ಮುಂದು ಮಾಡಿರುತ್ತದೆಂದು ಹೇಳಲುಬಾರದು. ಹಾಗೆಯೇ ಪ್ರತಿಸಲವೂ ಹೆರಿಗೆಯ ನೋವು ಸಹ ಸರಿಯಾಗಿ ಬರುತ್ತದೆಂದೂ ಹೇಳಲುಬಾರದು. ಇದೂ ಅಲ್ಲದೆ ಹೆರಿಗೆಯ ಸಂಖ್ಯೆ ಹೆಚ್ಚಿದಂತೆ ತಾಯಿಯಲ್ಲಿ ದೈಹಿಕ ಬದಲಾವಣೆಯಾಗಿ, ನೈಸರ್ಗಿಕ ಹೆರಿಗೆಯಾಗುತ್ತದೆಂಬುದು ಹೇಳಲು ಅಸಾಧ್ಯ. ಕಾರಣ ಮೊದಲು ಹೆರಿಗೆ ಸುಲಭವಾಗಿ ಆದರೂ ನಂತರದ ಹೆರಿಗೆಗೆ ಶಸ್ತ್ರಕ್ರಿಯೆ ಬೇಕಾಗಬಹುದು. ಈಗೀಗ ಶಸ್ತ್ರಕ್ರಿಯೆ ಸಂಖ್ಯೆ (ಸಿಝೇರಿಯನ್) ಹೆಚ್ಚಾಗಲು ಒಂದು ಕಾರಣವಿದೆ. ಕೆಲವು ಸಲ ಮಗುವಿನ ತಲೆ ಹೇಗೆ ಸಣ್ಣಗಾಗಿ, ಮುಂದೆ ಸರಿಯುತ್ತದೆ, ತಾಯಿಯ ಕಟಿ ಪ್ರದೇಶ ಅದೆಷ್ಟು ಸಲೀಸಾಗಿ ಅಗಲವಾಗಿ, ಮಗುವು ಹೊರಬರುವ ಅನುಕೂಲ ಮಾಡಿಕೊಡುತ್ತದೆಂಬುದರ ಮೇಲೆ ಅವಲಂಬಿಸಿರುತ್ತದೆ ಇದನ್ನು ಹೇಳಲು ಯಾರಿಗೂ ಸಾಧ್ಯವಿಲ್ಲ. ಇದರಿಂದ ಕೆಲವು ಸಲ ನೈಸರ್ಗಿಕ ಹೆರಿಗೆಯಾಗುತ್ತದೆಯೋ ಇಲ್ಲವೊ, ಆದರೂ ಮಗುವು ಸುರಕ್ಷಿತವಾಗಿರುತ್ತದೆಯೋ ಇಲ್ಲವೋ ತಿಳಿಯದಿದ್ದಾಗ, ಸಿಝೇರಿಯನ್ ಶಸ್ತ್ರಕ್ರಿಯೆಯನ್ನು ಮಾಡುತ್ತಾರೆ. ಇದರಿಂದ ಶ್ರೀ ಸಾಮಾನ್ಯರಿಗೆ ಸಿಝೇರಿಯನ್ ಹೆರಿಗೆಯನ್ನು ನೈಸರ್ಗಿಕವಾಗಿ ಆಗುತ್ತಿದ್ದರೂ ಮಾಡುತ್ತಾರೆಂಬ ಭಾವನೆ ಬರಬಹುದು. ಸಾಮಾನ್ಯ ಹೆರಿಗೆಯನ್ನು ಮಾಡಿಸುವಾಗ ಅಪಘಾತವಾಗುವ ಸಂಭವವಿದೆಯೆಂಬುದು ಎಲ್ಲರೂ ತಿಳಿದುಕೊಂಡರೆ ಈ ಪ್ರಶ್ನೆ ಬರುವದಿಲ್ಲ. ಆಕಸ್ಮಾತ್ ಮಗುವಿಗೆ ಆಗಲೀ ಇಲ್ಲವೆ ತಾಯಿಗೆ ಆಗಲೀ ಏನಾದರೂ ಹೆಚ್ಚು ಕಡಿಮೆಯಾದಾಗ ವೈದ್ಯರಿಗೆ "ನೀವು ಸಿಝೇರಿಯನ್ನೇ ಮಾಡಬೇಕಿತ್ತು" ಎಂದು ಶ್ರೀಸಾಮಾನ್ಯನೇ ಕೇಳಬಹುದು. ಈ ಕಾರಣದಿಂದಲೂ ಈಗೀಗ ಸಿಝೇರಿಯನ್ ಸ್ವಲ್ಪ ಹೆಚ್ಚಾಗಿರಬಹುದು.


ನೈಸರ್ಗಿಕ ಹೆರಿಗೆಗೆ ಸ್ತ್ರೀಯ ಮಾನಸಿಕ ದಾರ್ಢ್ಯ ಅಗತ್ಯವಿದೆ. ಅದರಲ್ಲಿಯೂ ಮೊದಲ ಸಲ ಸಿಝೇರಿಯನ ಆಗಿ ೨ನೆಯ ಸಲ ಸಾಮಾನ್ಯ ಹೆರಿಗೆ ಮಾಡಿಸಬೇಕೆಂದಾಗಂತಲೂ ಇನ್ನೂ ಹೆಚ್ಚು ಮಾನಸಿಕ ದಾರ್ಢ್ಯ ಅತ್ಯಗತ್ಯ. ನೋವು ತಡೆಯಲಾರದೇ ಸಿಝೇರಿಯನ್ ಮಾಡಬೇಕೆನ್ನುವವರೇ ಹೆಚ್ಚು. ಮೊದಲಸಲ ಹೆರಿಗೆ ಶಸ್ತ್ರಕ್ರಿಯೆಯಿಂದ ಆದಾಗ, ೨ನೆಯ ಸಲ ನೈಸರ್ಗಿಕ ಹೆರಿಗೆ ಮಾಡಬೇಕಾದರೆ ಮಗುವು ಒಂದೇ ಇದ್ದು, ಸಾಧಾರಣ ಗಾತ್ರದಿದ್ದು, ತಲೆ ಮುಂದು ಮಾಡಿದ್ದರೆ ಮಾತ್ರ ಶಕ್ಯ. ಇಲ್ಲವಾದರೆ ಆಗಲೂ ಶಸ್ತ್ರಕ್ರಿಯೆಯಾಗುವ ಸಂಭವವಿದೆ. ಆದರೆ ಒಂದು ಸಲ ಶಸ್ತ್ರಕ್ರಿಯೆಯಾಗಿ ಹುಟ್ಟಿದರೆ, ೨ನೇಯ ಸಲ ನೈಸರ್ಗಿಕ ಹೆರಿಗೆ ಶೇ. ೬೦ರಿಂದ ೮೦ರಷ್ಟು ಜನರಲ್ಲಿ ಆಗಬಹುದು.

ಸಿಝೇರಿಯನ ಹೆರಿಗೆ ಈಗ ಹೆಂಗಸರಿಗೆ ವರದಾನವೆನ್ನಬಹುದು. ಮೊದಲಿನ ಕಾಲದಲ್ಲಿ ಹೆಂಗಸು ಹೆರಿಗೆಯಲ್ಲಿ ತೀರಿಕೊಂಡದ್ದಕ್ಕೆ ೨ನೆಯ, ೩ನೆಯ ಮದುವೆಯಾದ ಎಷ್ಟೋ ಉದಾಹರಣೆಗಳಿವೆ. ಈಗ ಅವು ತೀರ ವಿರಳ. ತೀರ ಸಣ್ಣ ವಯಸ್ಸಿನಲ್ಲಿ ಅಂದರೆ ೧೨-೧೬, ೧೭ರವರೆಗೆ ತಾಯಿಯಾಗಿ ಸಾಯುತ್ತಿದ್ದ ಸಣ್ಣ ಹೆಣ್ಣು ಮಕ್ಕಳು, ಈಗ ಕಾಣಿಸುವದೂ ಕಡಿಮೆ. ಸರ್ಕಾರದಿಂದ ೧೮ರ ನಂತರವೇ ಹೆಂಗಸರಿಗೆ ಮದುವೆ ನಂತರ ಒಂದೋ-ಎರಡೋ ಮಕ್ಕಳು ಎಂದು ಘೋಷಿಸುತ್ತಿರುವದನ್ನು ಕಲಿತುಕೊಂಡರೆ, ಹೆಂಗಸರು ಪ್ರತಿ ಹೆರಿಗೆಯಲ್ಲಿ ತಮ್ಮನ್ನು ಅಗ್ನಿ ಪರೀಕ್ಷೆಗೆ ಒಡ್ಡಿಕೊಳ್ಳುವದು ತಪ್ಪಿ, ಚಿಕ್ಕ-ಚೊಕ್ಕ-ಸಂಸಾರದಲ್ಲಿ ಆನಂದಮಯವಾಗಿ ಕಾಲ ಕಳೆಯುತ್ತ ತಮ್ಮ ಮಕ್ಕಳಿಗೆ ಮಲತಾಯಿ ಬರುವದನ್ನು ತಪ್ಪಿಸಬಹುದು. ●

ಚಿಮ್ಮಟಗಳ ಹೆರಿಗೆ : ವೈದ್ಯರ ನಿಪುಣತೆಯೇ ಮುಖ್ಯ

ಚಿಮ್ಮಟಗಳ ಹೆರಿಗೆ ೧೭ನೇ ಶತಮಾನದಿಂದ ಬಂದಿದೆ. ಈ ಚಿಮ್ಮಟಗಳನ್ನು ಮೊದಲು ಚೆಂಬರಲೀನ ಮನೆತನದವರು ಬಳಸಿದರು. ಇದನ್ನು ಮೊದಲು ಅವರು ಸಾರ್ವಜನಿಕರಲ್ಲಿ ತೋರಿಸಲಿಲ್ಲ. ೧೮ನೇಯ ಶತಮಾನದಲ್ಲಿ ಸಾರ್ವಜನಿಕರಿಗೆ ಈ ವಿಷಯದ ಬಗ್ಗೆ ತಿಳಿಯಿತು.

ವಿಲಿಯಂ ಚೆಂಬರಲೀನ ಎಂಬ ಫ್ರೆಂಚ್ ವೈದ್ಯನು ೧೫೬೯ರಲ್ಲಿ ಸೌಥಾಪ್ಟನ್ ಎಂಬಲ್ಲಿ ಫ್ರಾನ್ಸಿನಿಂದ ನಿರ್ಗತಿಕನಾಗಿ ಬಂದಿಳಿದನು. ಅವನು ೧೫೯೬ರಲ್ಲಿ ಸಾವನ್ನಪ್ಪಿದನು. ಅವನಿಗೆ ಇಬ್ಬರು ಗಂಡು ಮಕ್ಕಳಿದ್ದರು. ದೊಡ್ಡವನಿಗೆ ಪೀಟರ ಎಂತಲೂ ಸಣ್ಣವನಿಗೆ ಸಹ ಪೀಟರ ಎಂತಲೂ ಹೆಸರಿಟ್ಟರು. ಹಿರಿಯವನು ಲಂಡನದಲ್ಲಿ ಕಲಿತು ವೈದ್ಯನಾದನು. ಸಣ್ಣವನ ಮಕ್ಕಳಲ್ಲಿ ಒಬ್ಬನು ವೈದ್ಯನಾಗಿ ತುಂಬ ಪ್ರಸಿದ್ಧನಾದನು. ಇವನೇ ಚಿಮ್ಮಟಗಳ ಜನಕ ಎಂದು ತಿಳಿಯಲಾಗಿತ್ತು. ಇವನು ಡಾ. ಪೀಟರ ಚೆಂಬರಲೀನ ಅಂತ ಇವನ ಮೂರು ಮಕ್ಕಳು ತಿರುಗಿ ವೈದ್ಯರಾದರು. ನಂತರ ಇವರ ಮನೆತನದಲ್ಲಿ ಈ ಕಲೆಯು ಗುಪ್ತವಾಗಿ ಉಳಿಯಿತು. ೧೭೨೩ರಷ್ಟರಲ್ಲಿ ಈ ಚಿಮ್ಮಟಗಳನ್ನು ಸಾರ್ವಜನಿಕರಲ್ಲಿ ತೋರಿಸಲಾಯಿತು. ಅವರ ಮನೆತನದಲ್ಲಿ ಸಿಕ್ಕ ಚಿಮ್ಮಟಗಳನ್ನು ನೋಡಲಾಗಿ ಹಿರಿಯ ಪೀಟರ ಉಪಯೋಗಿಸಿದ ಚಿಮ್ಮಟ ಸಿಕ್ಕಿತು. ಈ ಚಿಮ್ಮಟಗಳ ತಳಕ್ಕೆ ಹಗ್ಗಕಟ್ಟಿ ಎಳೆಯುತ್ತಿದ್ದರು. ನಂತರ ಚಿಮ್ಮಟಗಳ ಕೆಳಗೆ ಹಿಡಿಕೆಗಳನ್ನು ಮಾಡಿದರು. ಹೀಗೆ ದೊಡ್ಡ ಪೀಟರನಿಂದ ೧೭ನೇಯ ಶತಮಾನದವರೆಗೂ ಅವನ್ನು ಗುಪ್ತವಾಗಿಡಲಾಗಿತ್ತು.



ಚಿಮ್ಮಟಗಳನ್ನು ಮಗುವು ತಲೆ ಮುಂದು ಮಾಡಿದಾಗ ಹಿಡಿದು ಎಳೆಯಲು ಉಪಯೋಗಿಸಲಾಗುತ್ತದೆ. ಈ ಚಿಮ್ಮಟಗಳನ್ನು ಮೇಲಿನ, ಮಧ್ಯದ ಹಾಗು ಕೆಳಗಡೆಯ ಹೀಗೆ ಮೂರು ವಿಧವಾಗಿ ವಿಭಾಗಿಸಲಾಗುತ್ತದೆ. ಮೇಲಿನ ಚಿಮ್ಮಟಗಳ ಹೆರಿಗೆಯನ್ನು ಈಗ ಯಾರೂ ಮಾಡುವದಿಲ್ಲ. ಅದರ ಬದಲು ಸಿಝೇರಿಯನ್ ಮಾಡುತ್ತಾರೆ. ಮಧ್ಯದ ಹಾಗು ಕೆಳಗಡೆಯ

ಚಿಮ್ಮಟಗಳನ್ನು ಈ ಕೆಳಗಿನ ಪರಿಸ್ಥಿತಿಗಳಲ್ಲಿ ಉಪಯೋಗಿಸಲಾಗುತ್ತದೆ

೧. ಮಗುವಿಗೆ ತೊಂದರೆಯಾದಾಗ - ಅದರ ಹೃದಯ ಹೆಚ್ಚು-ಕಡಿಮೆಯಾದಾಗ, ಕರುಳುಬಳ್ಳಿ ಹೊರಬಂದಾಗ, ಮಗುವು ಉಸಿರುಗಟ್ಟುತ್ತಿರುವಾಗ ಚಿಮ್ಮಟದಿಂದ ಎಳೆದು ಮಗುವನ್ನು ರಕ್ಷಿಸಲಾಗುತ್ತದೆ. ಕೆಲವು ಸಲ ಮಗು ಬೇಗ ಹುಟ್ಟಿದರೆ ಅಂದರೆ ೭-೮ರಲ್ಲಿ ಹುಟ್ಟಿದಾಗ ಮಗುವಿನ ತಲೆಯನ್ನು ರಕ್ಷಿಸಲು ಇದನ್ನು ಉಪಯೋಗಿಸಲಾಗುತ್ತದೆ. ದಿನತುಂಬಿ ಹೆಚ್ಚಿನ ದಿವಸವಾದ ಮಗುವಿಗೂ ಇದನ್ನು ಬಳಸಲಾಗುತ್ತದೆ.

೨. ತಾಯಿಗೆ ತೊಂದರೆಯಾಗುವ ಸಮಯದಲ್ಲಿ ಸಹ ಇದನ್ನು ಬಳಸಲಾಗುತ್ತದೆ. ತಾಯಿಗೆ ಬಸಿರುನಂಜು (ಪ್ರಿ ಎಕ್ಲಾಂಟಿಕ ಟಾಕ್ಸೀಮೀಯಾ ಪಿ.ಇ.ಟಿ.) ಇರುವಾಗ ಇಲ್ಲವೆ ತಾಯಿಯು ರಕ್ತಹೀನತೆಯಿಂದ ಬಳಲುತ್ತಿದ್ದಾಗ, ಇಲ್ಲವೆ ಮೊದಲಿನ ಹೆರಿಗೆ ಸಿಝೇರಿಯನ್ ಆಗಿ ಈಗ ಸಾಮಾನ್ಯ ಹೆರಿಗೆಯಾಗುತ್ತಿರುವಾಗ ಚಿಮ್ಮಟ ಹಚ್ಚಿ ಎಳೆದು ತಾಯಿಗೆ ಸಹಾಯ ಮಾಡಲಾಗುತ್ತದೆ.

೩. ಇನ್ನು ಕೆಲವು ಸಲ ಮಗುವು ಕೆಳಗಡೆ ಬಂದು ಅದನ್ನು ಹೊರಚೆಲ್ಲಲು ತಾಯಿಗೆ ಆಗದೆ ನೋವು ಬರದಿರುವಾಗ ಸಹ ಚಿಮ್ಮಟವನ್ನು ಬಳಸಿ ಹೆರಿಗೆಯನ್ನು ಮಾಡಿಸಲಾಗುತ್ತದೆ. ಸಾಮಾನ್ಯವಾಗಿ ಮೊದಲ ಬಾಣಂತನದಲ್ಲಿ ಮಗುವಿನ ತಲೆ ೨ ತಾಸುಗಳೊಳಗೆ, ಅಂದರೆ ಗರ್ಭಾಶಯದ ಬಾಯಿ ಗರ್ಭಕಂಠ ಪೂರ್ತಿ ತೆರೆದುಕೊಂಡು ೨ ತಾಸುಗಳೊಳಗೆ ಹೆರಿಗೆಯಾಗದಿದ್ದರೆ ಇಲ್ಲವೆ ನಂತರ ೨ನೇಯ ಹೆರಿಗೆಯಾದವರಲ್ಲಿ ಮಗುವು ಅರ್ಧ ಗಂಟೆಯೊಳಗೆ ಹೊರಬರದಿದ್ದರೆ ಚಿಮ್ಮಟ ಬಳಸಿ ಎಳೆಯಲಾಗುತ್ತದೆ. ಯಾವಾಗಲೂ ಮೊದಲ ಹೆರಿಗೆಗೆ ಜಾಸ್ತಿ ವೇಳೆ ಬೇಕಾಗುತ್ತದೆ. ತದನಂತರದ ಹೆರಿಗೆಗೆ ವೇಳೆ ಕಡಿಮೆ ಬೇಕಾಗುತ್ತದೆ.

ಈ ಚಿಮ್ಮಟವನ್ನು ಬೇಕೆಂದಾಗ ಬಳಸಲು ಬರುವದಿಲ್ಲ ಅದಕ್ಕೆ ಕೆಲವು ಕರಾರುಗಳಿವೆ. ಅವು ಯಾವುವೆಂದರೆ.

೧. ಗರ್ಭಾಶಯದ ಬಾಯಿ ಪೂರ್ತಿ ತೆರೆದುಕೊಂಡಿರಬೇಕು.
೨. ಗರ್ಭದ ಪೊದರು ಹರಿದಿರಬೇಕು. (membrane)
೩. ಮಗುವು ತಲೆ ಮುಂದು ಮಾಡಿರಬೇಕು.
೪. ಮಗುವಿನ ತಲೆ ಪೂರ್ತಿ ತಾಯಿಯ ಕಟಿ ಮೂಳೆಗಳಲ್ಲಿ ಮುಳುಗಿರಬೇಕು.
೫. ಅದು ಹೊರಬರಲು ತಾಯಿಯ ಮೂಳೆಗಳಾಗಲಿ ಇಲ್ಲವೆ ಸ್ನಾಯುವಂಥ ಮೆತ್ತನೆಯ ಟಿಶ್ಯೂ (Tissue) ಸಹ ಅಡ್ಡಿ ಬರಬಾರದು ಕೊನೆಯದಾಗಿ ತಾಯಿಯ ಮೂತ್ರಾಶಯ ಹಾಗು ನೆಟ್ಟಗರುಳು ಖಾಲಿ ಇರಬೇಕು.

ಇದಕ್ಕಾಗಿ ತಾಯಿಗೆ ಕಕ್ಕಸು ಮಾಡಿಸಿ, ನಳಿ ಹಾಕಿ ಮೂತ್ರವನ್ನು ಹೊರಗೆ ತರುತ್ತಾರೆ. ಇದರಿಂದ ಮಗುವಿನ ತಲೆಗೆ ಪೂರ್ತಿ ಜಾಗ ಸಿಗುತ್ತದೆ.

ಈ ಚಿಮ್ಮಟಗಳ ಹೆರಿಗೆಯನ್ನು ಅಲ್ಲಿಯೇ ಚುಚ್ಚುಮದ್ದನ್ನು ಕೊಟ್ಟು ಮಾಡಬಹುದು. ಕೆಲವು ಸಲ ಮಾತ್ರ ಪೂರ್ತಿ ಎಚ್ಚರ ತಪ್ಪಿಸಿ ಮಾಡಲಾಗುತ್ತದೆ. ಗುದದ್ವಾರದ ಹತ್ತಿರ ಸ್ವಲ್ಪ ಚುಚ್ಚುಮದ್ದನ್ನು ಕೊಟ್ಟು ಆ ಜಾಗವನ್ನು ಸ್ವಲ್ಪ ಕತ್ತರಿಸುತ್ತಾರೆ. ಇದರಿಂದ ಚಿಮ್ಮಟಗಳ ಹೆರಿಗೆಗೆ ಸಹಾಯವಾಗುತ್ತದೆ.

ಈ ಚಿಮ್ಮಟಗಳ ಹೆರಿಗೆಯಿಂದ ಕ್ಷಣ ಮಾತ್ರದಲ್ಲಿ ಮಗುವು ಹೊರಗೆ ಬರುವದು. ಇದರಿಂದ ತಾಯಿಗೆ ಸಿಝೇರಿಯನ್ ಮಾಡುವದೂ ಸಹ ಉಳಿಯುವದು. ಈ ಚಿಮ್ಮಟವನ್ನು ಮಗುವಿನ ಮುಖ ಮುಂದೆ ಮಾಡಿದ್ದಾಗ, ಇಲ್ಲವೆ ಕಾಲುಗಳನ್ನು ಮುಂದೆ ಮಾಡಿಕೊಂಡು ಹುಟ್ಟಿ ತಲೆಯು ಸಿಗಬಿದ್ದಾಗ ಕೂಡ ಹಚ್ಚಬಹುದು.

ಈ ಚಿಮ್ಮಟಗಳ ಹೆರಿಗೆಯಿಂದ ಸಹ ಹಲವಾರು ತೊಂದರೆಗಳಿವೆ. ಅವು ಯಾವುವೆಂದರೆ ತಾಯಿಯ ಗುದದ್ವಾರ ಹರಿಯಬಹುದು. ಗರ್ಭಕಂಠ ಹರಿಯಬಹುದು. ಗರ್ಭಾಶಯ ಕೆಲವು ಸಲ ಹರಿಯಬಹುದು. ವಿಪರೀತ ರಕ್ತಸ್ರಾವವಾಗಬಹುದು. ಮಗುವಿಗೂ ಸಹ ತಲೆಗೆ, ಕಣ್ಣಿಗೆ, ಕಿವಿಗೆ, ಕೈಗೆ ಗಾಯವಾಗಬಹುದು.

ಈಗ ನಿರ್ವಾತದಿಂದ ಹೊರದೂಡುವ ಮತ್ತೊಂದು ಯಂತ್ರ ಬಂದಿದೆ. ಇದನ್ನು ೧೮೪೦ರಲ್ಲಿ ಸಿಮ್ಸನ್ನವೆಂಬವನು ಮಾಡಿದನು. ಇದನ್ನು ಮಗುವಿನ ತಲೆಯ ಮೇಲಿಟ್ಟು ನಿರ್ವಾತ ಮಾಡಿದಾಗ ಅದರಲ್ಲಿ ಮಗುವಿನ ತಲೆಯು ತೂರಿಕೊಂಡು ಗಟ್ಟಿಯಾಗಿ ಹಿಡಿದುಕೊಳ್ಳುವದರಿಂದ ಮಗುವು ಹೊರಗೆ ಬರುವದು. ಈ ಉಪಕರಣದಿಂದ ಮಗುವಿನ ಕಣ್ಣು, ಕೈ, ಮೂಗು ಇದ್ಯಾವ ಭಾಗಕ್ಕೂ ಗಾಯವಾಗುವದಿಲ್ಲ. ಮಗುವನ್ನು ಹೊರಗೆ ತರಲು ೧೦ ಕೆ.ಜಿ.ಯಷ್ಟು ಶಕ್ತಿಬೇಕಾಗುತ್ತದೆ. ಗರ್ಭಕಂಠದ ಬಾಯಿ ಪೂರ್ತಿ ಬಿಚ್ಚಿಕೊಳ್ಳದಿದ್ದರೂ, ಮಗುವಿನ ತಲೆ ಸ್ವಲ್ಪ ಮೇಲೆಯಿದ್ದರೂ ಈ ಉಪಕರಣದ ಸಹಾಯದಿಂದ ತೆಗೆಯಬಹುದು. ಮಗುವು ನೈಸರ್ಗಿಕವಾಗಿ ತಲೆ ತಿರುಗಿಸಿಕೊಂಡು ತಾನೇ ಹೊರಬರುವದು. ಇದಕ್ಕೆ ಚಿಮ್ಮಟವನ್ನು ಬಳಸುವ ಚಾಕಚಕ್ಯತೆ ಸಹ ಬೇಡ.

ಈ ವಿಧಾನದ ಹೆರಿಗೆಯು ವೈದ್ಯರ ನೈಪುಣ್ಯ, ಅನುಭವ, ಚಾಕಚಕ್ಯತೆಗಳ ಮೇಲೆ ಅವಲಂಬಿಸಿದೆ.

ಚಿಮ್ಮಟಗಳ ಹೆರಿಗೆ ಮಾತ್ರ ಈಗ ಪ್ರಚಲಿತವಿದೆ. ಈಗೀಗ ಮಧ್ಯದ ಚಿಮ್ಮಟಗಳ ಹೆರಿಗೆಯನ್ನು ಸಹ ಬಿಟ್ಟು ಸಿಝೇರಿಯನ್ ಮಾಡಲಾಗುತ್ತಿದೆ. ಈ ಚಿಮ್ಮಟಗಳಲ್ಲಿ ಹಲವಾರು ವಿಧಗಳಿವೆ. ಹಲವಾರು ಹೆಸರುಗಳಿವೆ. ಅವು ಯಾವುವೆಂದರೆ ಕೀಲ್ಯಾಂಡ್ಸ ಚಿಮ್ಮಟ, ರಿಗ್ಲೀಸ ಚಿಮ್ಮಟ, ಡಿಲೀಯ ಚಿಮ್ಮಟ, ನೆವ್ವಲೀ ಚಿಮ್ಮಟ, ಟಾರ್ನಿಯರ ಚಿಮ್ಮಟ ಮುಂತಾದವುಗಳು. ಭಾರತೀಯರಿಂದಲೇ ಮಾಡಲ್ಪಟ್ಟ ಚಿಮ್ಮಟಗಳಿವೆ. ಅವು ಯಾವುವೆಂದರೆ ಸರ್ ಕೇದಾರನಾಥ ಚಿಮ್ಮಟ, ಮುಳಗಾವಕರ ಚಿಮ್ಮಟ. ಪಾಶ್ಚಾತ್ಯ ದೇಶಗಳಲ್ಲಿ ಮಾಡಲ್ಪಟ್ಟ ಚಿಮ್ಮಟಗಳಿಗಿಂತ ನಮ್ಮಲ್ಲಿ ಮಾಡಿದ ಚಿಮ್ಮಟಗಳು ಸ್ವಲ್ಪಕಡಿಮೆ ಅಳತೆಯವು ಇರುತ್ತವೆ. ಏಕೆಂದರೆ ಪಾಶ್ಚಾತ್ಯ ಮಕ್ಕಳಿಗಿಂತ ನಮ್ಮ ಮಕ್ಕಳು ಸಣ್ಣವು ಇರುತ್ತವೆ.

ಚಿಮ್ಮಟಗಳಲ್ಲಿ ನಾಲ್ಕು ಭಾಗಗಳು ಅರ್ಧಚಂದ್ರಾಕೃತಿಯ ಭಾಗಕ್ಕೆ ಬ್ಲೇಡಯೆಂತಲೂ ನಂತರ ಬರುವ ಭಾಗಕ್ಕೆ ಶಾಂಕೆಂತಲೂ ನಂತರದ ಭಾಗಕ್ಕೆ ಕೀಲಿ ಹಾಗು ಕೊನೆಯ ಭಾಗಕ್ಕೆ ಹಿಡಿತೆಯೆಂತಲೆನ್ನುತ್ತಾರೆ. ಈ ಬ್ಲೇಡುಗಳಲ್ಲಿ ಎಡದ ಬ್ಲೇಡು ಹಾಗು ಬಲದ ಬ್ಲೇಡು ಎಂದಿವೆ. ಇನ್ನು ಕೆಲವು ಬ್ಲೇಡುಗಳಲ್ಲಿ ಮುಂದಿನ ಹಾಗು ಹಿಂದಿನ ಬ್ಲೇಡುಗಳೆಂದಿವೆ. ಈ ಅರ್ಧಚಂದ್ರಾಕೃತಿಯಲ್ಲಿ ಮಗುವಿನ ತಲೆಯು ಸರಿಯಾಗಿ ಕೂಡುತ್ತದೆ.

ಈ ಚಿಮ್ಮಟಗಳಿಂದ ಹಲವಾರು ಲಾಭಗಳಿವೆ. ಮಗುವಿನ ತಲೆ ಸರಿಯಾಗಿ ಹೊರಳದಿದ್ದರೆ ಅದನ್ನು ಹೊರಳಿಸಬಹುದು. ಮಗುವಿನ ತಲೆಯನ್ನು ಅದು ಸುರಕ್ಷಿತವಾಗಿ ಹಿಡಿದುಕೊಳ್ಳುತ್ತದೆ. ತಲೆಗೆ ಸುರಕ್ಷಿತತೆಯನ್ನು ಒದಗಿಸುತ್ತದೆ. ಒಂದೇ ಬ್ಲೇಡನ್ನು ಲೀವ್ಹರಿನಂತೆ ತಲೆಯಲ್ಲಿ ಗರ್ಭಾಶಯದಿಂದ ಎಬ್ಬಿಸಲು ಸಿಝೇರಿಯನ್ ಕಾಲಕ್ಕೆ ಉಪಯೋಗಿಸಲು ಬರುತ್ತದೆ. ಮೊದಲ ಹೆರಿಗೆಗೆ ೧೮ಕೆ.ಜಿ.ಯಷ್ಟು ಶಕ್ತಿ ಬೇಕಾದರೆ ನಂತರ ಹೆರಿಗೆಗೆ ೧೩ ಕೆ.ಜಿ.ಯಷ್ಟು ಬೇಕು.

ಸತ್ತ ಡಿ.ಸಿ. ಮತ್ತೆ ಹುಟ್ಟಿಬಂದ ಕಥೆ!

○ ಹೇಮಲತಾ ದೇಸಾಯಿ



ಚಿತ್ರ : ಕರ್ನಾಟಕ ಫೋಟೋ ಸ್ಟುಡಿಯೋ

ಇಂದು ವಿಶ್ವದಲ್ಲಿ ವಿಜ್ಞಾನಿಗಳನ್ನೂ, ವೈದ್ಯರನ್ನೂ, ಅಷ್ಟೇ ಏಕೆ ಜನಸಾಮಾನ್ಯರನ್ನೂ ಸಹ ದಿನ ನಿತ್ಯ ಕಾಡುವ ಅಷ್ಟೇ ನಿಗೂಢವಾಗಿರುವ ವಿಷಯ ಸಾವಿನ ನಂತರ ಏನು? ಎಂಬುದೆ ಆಗಿದೆ.

ವಿಜ್ಞಾನ ಎಷ್ಟೇ ಮುಂದುವರೆದಿದ್ದರೂ ಮಾನವ ಮಂಗಳ ಗ್ರಹಕ್ಕೆ ಹೋಗಿಬಂದಿದ್ದರೂ ಸಹ, ಸಾವಿನ ನಂತರ ಏನಾಗಬಹುದು ಎಂಬುದು ಇನ್ನೂ ರಹಸ್ಯವಾಗಿಯೇ ಉಳಿದಿದೆ.

ಪುನರ್‌ಜನ್ಮ ಎಂಬುದು ಇದೆಯೇ? ಇದ್ದರೆ ಅದು ಎಷ್ಟು ವರ್ಷಗಳ ಅಂತರದಲ್ಲಿ ಮರು ಹುಟ್ಟು ಪಡೆಯುತ್ತದೆ ಎಂಬುದರ ಕುರಿತು ಜಗತ್ತಿನಾದ್ಯಂತ ಸಂಶೋಧನೆಗಳು, ಪ್ರಯೋಗಗಳು ನಡೆಯುತ್ತಿವೆ. ನಮ್ಮ ಕರ್ನಾಟಕದಲ್ಲಿಯೂ ಸಹ ಎಷ್ಟೋ ಮನೋವೈದ್ಯರು ಈ ಕುರಿತು ಸಂಶೋಧನೆಗಳನ್ನು ನಡೆಸಿ ಪುನರ್‌ಜನ್ಮಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ.

ಈ ದಿಸೆಯಲ್ಲಿ ತನ್ನ ಪೂರ್ವ ಜನ್ಮದ ಕುರಿತು ೩ ವರ್ಷದ ಪುಟ್ಟ ಮಗು ವಿಶ್ವನಾಥ ತಿಗಡಿ ಅನೇಕ ವಿವರಗಳನ್ನು ನೀಡಿ ಸಂಶೋಧಕರಿಗೆ ಸವಾಲು ಎಸೆದಿದ್ದಾನೆ. ಅಷ್ಟೇ ಕುತೂಹಲಕ್ಕೆ ಕಾರಣನಾಗಿದ್ದಾನೆ.

ಎಲ್ಲರ ಮುದ್ದು ಕೂಸು, ಕೇಂದ್ರ ಬಿಂದುವಾಗಿರುವ ವಿಶ್ವನಾಥ ತಿಗಡಿ ಸದ್ಯಕ್ಕೆ ಗದಗ ಜಿಲ್ಲೆಯ ನರೆಗಲ್ ಗ್ರಾಮದಲ್ಲಿ ವಾಸಿಸುತ್ತಿದ್ದಾನೆ. ತಂದೆ-ತಾಯಿಗಳಿಗೆ ಒಬ್ಬನೆ ಮಗನಾಗಿರುವ ಈತ ಒಂದು ರೀತಿಯಲ್ಲಿ ವಿಚಿತ್ರ ಮೂಡಿ, ಮನಸ್ಸಿಗೆ ಬಂದರೆ ಹೊಸಬರಿರಲಿ, ಪರಿಚಯದವರಿರಲಿ ಪಟಪಟನೆ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾನೆ. ಮೂಡು ಇರದಿದ್ದರೆ ಜಪ್ಪೆಂದರೂ ಉತ್ತರಿಸುವುದಿಲ್ಲ.

ವಿಷಯ ತಿಳಿದ ಕೂಡಲೇ ವಿಶೂನನ್ನ ಕಾಣುವ ಕುತೂಹಲದಿಂದ, ತವಕದಿಂದ ಅವನ ಊರಿಗೆ ಹೋದಾಗ ಮಧ್ಯಾಹ್ನ ಒಂದು ಗಂಟೆ. ಅಂದು ಅವನ ತಂದೆ, ಬ್ಯಾಂಕು ಕೆಲಸದ ದಿನವಾಗಿದ್ದರಿಂದ ಭಾನುವಾರವಾಗಿದ್ದರೂ ಕೆಲಸಕ್ಕೆ ತೆರಳಿದ್ದರು. (೧೨.೪.೯೮) ಅವನ ತಾಯಿ ಶ್ರೀಮತಿ ಪ್ರೇಮಾ ತಿಗಡಿ ನಮ್ಮನ್ನು ನೋಡಿ ನಗುನಗುತ್ತಲೇ ಸ್ವಾಗತಿಸಿ, ವಿಶೂನನ್ನು ತೋರಿಸಿದರು. ಹೊಸಬರನ್ನು ನೋಡುತ್ತಲೇ ವಿಶು ತಾಯಿಯ ಸೆರಗಿನಲ್ಲಿ ಅಡಗಿಕೊಂಡು ಎಷ್ಟು ಕರೆದರೂ ಬರಲಿಲ್ಲ. ನಾನು ಪಂಜಾಬಿನಿಂದ ಬಂದಿರುವೆನೆಂದು, ಆತನ ಹೆಂಡತಿ ಪ್ರಯತ್ನ ನನ್ನನ್ನು ಕಳಿಸಿರುವುದಾಗಿ ಹೇಳಿದಾಗ ಮೆಲ್ಲಗೆ ನನ್ನ ಬಳಿ ಬಂದ. ತಂದಿದ್ದ ಬಿಸ್ಕೇಟ್ ಪೊಟ್ಟಣವನ್ನು ತೋರಿಸಿ, 'ಬಾ ವಿಶು' ಎಂದೆ. 'ಊಹೂಂ' ನೀವು ಪಂಜಾಬಿನವರಲ್ಲ ಎಂದವನೆ ಒಳಗೆ ಓಡಿಹೋದ.

ಕಳೆದೆರಡು ದಿನಗಳಿಂದ ವಿಶ್ವನ ವಿಷಯವೆಲ್ಲ ಜನಗಳಿಗೆ ತಿಳಿದು, ಆತನನ್ನು ನೋಡಲು ಹಿಂಡು ಹಿಂಡಾಗಿ ಬರುತ್ತಿರುವ ಜನಗಳನ್ನು ನಿಭಾಯಿಸುವುದರಲ್ಲಿಯೇ ವಿಶ್ವನ ತಾಯಿ ಸುಸ್ತು ಹೊಡೆದಿದ್ದರು. ಯಾರೇ ಬರಲಿ ಆ ಮಗುವಿನ ಬಳಿ ಒಂದೇ ಸಮನೆ ಪಂಜಾಬಿನ ಕುರಿತು ಪ್ರಶ್ನಿಸಿದ್ದರಿಂದ ಮಗು ಬಹಳ ಬೇಸರಗೊಂಡಿತ್ತು. ಅಲ್ಲದೇ ಕಳೆದೆರಡು ದಿನಗಳಿಂದ ಬರುತ್ತಿದ್ದ ಜ್ವರದಿಂದ ನಿಶ್ಯಕ್ತಿಯೂ ಆಗಿತ್ತು. ಅದಕ್ಕೆ ನಾನು ಬಹಳವಾಗಿ ಆತನನ್ನು ಏನೂ ಪ್ರಶ್ನಿಸದೆ ಸಂದರ್ಭಕ್ಕಾಗಿ ಕಾಯ ತೊಡಗಿದೆ.

ವಿಶ್ವನಾಥನ ಕುರಿತು ಆತನ ತಾಯಿ ಈ ರೀತಿ ವಿವರಿಸಿದರು. ನಮಗೆ ವಿಶ್ವನಾಥ ಒಬ್ಬನೆ ಮಗ. ಅವನು ೯ ತಿಂಗಳ ಮಗುವಿದ್ದಾಗಿನಿಂದಲೂ ಪಂಜಾಬ ಕುರಿತು ಏನೇನೋ ಮಾತನಾಡುತ್ತಿದ್ದ ಪದೇ ಪದೇ ಸೂರಜ, ಸೂರಜ ಎನ್ನುತ್ತಿದ್ದ. ನಮಗೆಲ್ಲ ಅಚ್ಚರಿ, ಒಬ್ಬನೇ ಇದ್ದಾಗ ಹಿಂದಿ ಬೆರೆತ ಭಾಷೆಯಲ್ಲಿ ವಿಚಿತ್ರವೆನಿಸುವ ವಿಷಯಗಳನ್ನು ಹೇಳುತ್ತಿದ್ದ. ನಾವು ಮಗು ಸುಮ್ಮನೇ ಹೇಳುತ್ತಿದೆ ಎಂದು ಸುಮ್ಮನಿದ್ದೆವು. ಒಂದು ವರ್ಷದ ಮಗುವಾಗಿದ್ದಾಗ ವಿಶ್ವ ನಮ್ಮ ದೇಶದ ಎಲ್ಲ ಪ್ರಧಾನಿಗಳ, ಮುಖ್ಯಮಂತ್ರಿಗಳ ಹಾಗೂ ಅವರ ಪತ್ನಿಯರ ಹೆಸರು ಹೇಳುತ್ತಿದ್ದ, ಇಂಗ್ಲಿಷ್ ಶಬ್ದಗಳ ಅರ್ಥ ಕೇಳಿದರೆ ಹೇಳುತ್ತಿದ್ದ, ಹಿಂದಿಯಲ್ಲಿ ಪಂಜಾಬಿಯಲ್ಲಿ ಕೆಲವು ವಾಕ್ಯಗಳನ್ನು ಮಾತನಾಡುತ್ತಿದ್ದ. ನಮಗೆ ಹಿಂದಿ ಪಂಜಾಬಿ ಭಾಷೆ ಬರುವುದಿಲ್ಲ. ಅಂತಹದರಲ್ಲಿ ವಿಶ್ವ ಹಿಂದಿ ಪಂಜಾಬಿ ಮಾತನಾಡಿದಾಗ ನಮಗೆಲ್ಲ ಧಿಗ್ಭ್ರಮೆ ಎಂದರು ಆತನ ತಾಯಿ. ೧ ವರ್ಷ ೪ ತಿಂಗಳು ಕಳೆಯುವಷ್ಟರಲ್ಲಿ ತಾನೊಬ್ಬ ಡಿ.ಸಿ. ಎಂದು ಪಂಜಾಬಿನವನೆಂದು ವಿಶ್ವ ಹೇಳತೊಡಗಿದ. ತನ್ನ ಊರು ಕಲ್ಯಾಣಪುರವೆಂದು, ಎರಡು ಗುಡ್ಡಗಳನ್ನು ದಾಟಿ ಹೋದರೆ ಅಲ್ಲೊಂದು ರಸ್ತೆ ಬರುತ್ತದೆ, ಅಲ್ಲಿ ಬಸ್ ಹಿಡಿದರೆ ಸೀದಾ ತಮ್ಮ ಬಂಗಲೆಗೆ ಹೋಗಬಹುದೆಂದು ತಿಳಿಸತೊಡಗಿದ.

(೨೦ನೇ ಪುಟಕ್ಕೆ)

ಸಾವಿನಾಚೆಗೆ ಬದುಕು?

ನರೇಗಲ್‌ನ ಬಾಲಕನಿಗೆ ಹಿಂದಿನ ಜನ್ಮದ ನೆನಪು ಮರುಕಳಿಸುತ್ತಿದೆಯೆಂಬ ಸುದ್ದಿ ರೆಕ್ಕೆ ಪುಕ್ಕ ಕಟ್ಟಿಕೊಂಡು ಮಾಧ್ಯಮಗಳಲ್ಲಿ ರಾರಾಜಿಸುತ್ತಿರುವ ಈ ಸಂದರ್ಭದಲ್ಲಿ ಖ್ಯಾತ ವಿಚಾರವಾದಿ ಡಾ. ಅಬ್ರಹಾಂ ಕೋವೂರ್ ಅವರ ಈ ಲೇಖನ ಹೆಚ್ಚು ಪ್ರಸ್ತುತವೆನ್ನಿಸುತ್ತದೆ.

○ ಡಾ. ಅಬ್ರಹಾಂ ಕೋವೂರ್

ಕನ್ನಡಕ್ಕೆ: ಮಹಾಬಲೇಶ್ವರ ರಾವ್

ನನ್ನ ಜೀವ ದೇಹದ ಯಾವುದೋ ಒಂದು ನಿರ್ದಿಷ್ಟ ಭಾಗದಲ್ಲಿದೆ ಎಂಬ ದೃಷ್ಟಿಕೋನ ನನಗೆ ಒಪ್ಪಿತವಲ್ಲ. ನನ್ನ ದೇಹದ ಎಲ್ಲ ಜೀವಕಣಗಳಲ್ಲಿ ಜೀವವಿದೆ. ಈ ಜೀವಕಣಗಳಲ್ಲಿ ನಿರಂತರ ನಡೆಯುವ ರಾಸಾಯನಿಕ ಕ್ರಿಯೆಯಿಂದ ಅದು ಉಳಿದುಕೊಂಡು ಬರುತ್ತದೆ. ನನ್ನ ದೇಹದಲ್ಲಿ ನಡೆಯುವ ಉಸಿರಾಟ ಮತ್ತು ರಕ್ತ ಪರಿಚಲನೆ ಈ ವಿಶಿಷ್ಟ ರಾಸಾಯನಿಕ ಕ್ರಿಯೆಯ ಸಾತತ್ಯಕ್ಕೆ ಕಾರಣವಾಗಿದೆ. ಇದು ಮೋಂಬತ್ತಿ ಉರಿಯುವಾಗ ಹೈಡ್ರೋ ಕಾರ್ಬನ್ ದಹಿಸುವುದರಿಂದ ಶಾಖದ ಮತ್ತು ಬೆಳಕಿನ ಶಕ್ತಿಗಳು ಉತ್ಪತ್ತಿ ಆಗುವ ಕ್ರಿಯೆಯಿಂದ ಭಿನ್ನವೇನಲ್ಲ. ಮೋಂಬತ್ತಿಯನ್ನಾರಿಸಿದಾಗ ಉತ್ಪತ್ತಿಯಾಗದೆ ಹೋಗುವ ಶಾಖ ಹಾಗೂ ಬೆಳಕು, ಮೋಂಬತ್ತಿಯನ್ನು ಪುನಃ ಹೊತ್ತಿಸಿದಾಗ ತಿರುಗಿ ಪ್ರತ್ಯಕ್ಷವಾಗುತ್ತದೆ.

ಇದು ಕೇವಲ ರಾಸಾಯನಿಕ ಚಟುವಟಿಕೆ ಸ್ಥಗಿತವಾದಾಗ ಶಕ್ತಿಯ ಉತ್ಪತ್ತಿ ನಿಂತು ಹೋಗುವ ಒಂದು ವಿದ್ಯಮಾನವಾಗಿದೆ. ಹಾಗೆಯೇ ಉಸಿರಾಟ ಮತ್ತು ರಕ್ತ ಚಲನೆ ನಿಲ್ಲುವುದರ ಪರಿಣಾಮವಾಗಿ ದೇಹ ಸತ್ತಾಗ ಅದರಿಂದ ಹೊರಗೆ ಹೋಗುವುದೇನೂ ಇರುವುದಿಲ್ಲ. ಒಂದು ವೇಳೆ ಯಾವುದೋ ಆಧುನಿಕ ತಂತ್ರಗಳಿಂದ ಈ ದೇಹವನ್ನು ಪುನರುಜ್ಜೀವನಗೊಳಿಸಿದರೂ ಸಹ, 'ಹೊರಟು ಹೋಗಿದ್ದ ಜೀವ ಅಥವಾ ಆತ್ಮ ' ದೇಹವನ್ನು ಮರಳಿ ಪ್ರವೇಶಿಸಿತು ಎಂದು ತಿಳಿಯುವುದು ತಪ್ಪು.

ಕಾಲದ ಯಾವುದೋ ನಿರ್ದಿಷ್ಟ ಘಟ್ಟದಲ್ಲಿ ವ್ಯಕ್ತಿಯ ಮರಣ ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಹುಟ್ಟಿನಿಂದಲೇ ವ್ಯಕ್ತಿ ಸಾಯಲಾರಂಭಿಸುತ್ತಾನೆ. ತನ್ನ ತಾಯಿಯನ್ನವಲಂಬಿಸಿ ವ್ಯಕ್ತಿ ಜೀವನ ಆರಂಭಿಸುತ್ತಾನೆ. ದೇಹದ ಎಂಟನೇ ಒಂದು ಭಾಗದಷ್ಟಿರುವ ಹೊಕ್ಕುಳ ಬಳ್ಳಿ ತನ್ನ ಪರಾವಲಂಬಿ ಜೀವನದಿಂದ ಬೇರ್ಪಟ್ಟಾಗಲೇ ವ್ಯಕ್ತಿ ಸಾಯತೊಡಗುತ್ತಾನೆ. ಆ ದಿನದಿಂದಲೇ ವ್ಯಕ್ತಿ ಸಾಯುತ್ತಲೂ, ಬೆಳೆಯುತ್ತಲೂ ಇದ್ದಾನೆ. ಪ್ರತಿ ದಿನವೂ ದೇಹದಲ್ಲಿನ ಹಲವಾರು ಜೀವಕೋಶಗಳೂ ಸಾಯುತ್ತಿರುತ್ತವೆ. ಹೊಸ ಜೀವಕೋಶಗಳು ಹುಟ್ಟುತ್ತಿರುತ್ತವೆ. ತಲೆ ಕೂದಲು, ಗಡ್ಡದ ಕೂದಲು, ಚರ್ಮ, ಉಗುರುಗಳು ಮತ್ತು ಹಲ್ಲುಗಳ ರೂಪದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮೃತ ಅಂಗಾಂಶಗಳು ದೇಹದಿಂದ ಹೊರಬೀಳುತ್ತವೆ. ಇಷ್ಟಲ್ಲದೆ ಬೆವರು ಹಾಗೂ ಮೂತ್ರದ ರೂಪದಲ್ಲಿ ಮಿಲಿಯಾಂತರ ಆಂತರಿಕ ಕಣಗಳು ಹೊರಹಾಕಲ್ಪಡುತ್ತವೆ. ನಮ್ಮ ಶರೀರದ ಹಲವು ಭಾಗಗಳ ಸಾವಿಗೆ ಆಕಸ್ಮಿಕ ಗಾಯಗಳು, ವೈರಸ್ ಹಾಗೂ ಬ್ಯಾಕ್ಟೀರಿಯಾ ಸೋಂಕು, ದೈಹಿಕ/ಮಾನಸಿಕ ಶ್ರಮ, ಪಾಟಲ/ಪಾಟಲಾತೀತ ಕಿರಣಗಳು ಮತ್ತು ಕೊರೆಯುವ ರಾಸಾಯನಿಕಗಳು ಕಾರಣ.

ಯೌವ್ವನದಲ್ಲಿ ದೇಹದಲ್ಲಿನ ಜೀವಕಣಗಳ ಉತ್ಪತ್ತಿ ಕಣಗಳ ಸಾವಿನ ನಿಷ್ಪತ್ತಿಗಿಂತಲೂ ಹೆಚ್ಚು. ಆದ್ದರಿಂದಲೇ ವ್ಯಕ್ತಿ ಬೆಳೆಯುತ್ತಾನೆ. ದೇಹದ ತೂಕ ಹೆಚ್ಚಿಸಿಕೊಳ್ಳುತ್ತಾನೆ. ಕಾಲ ಕಳೆದಂತೆ ಜೀವಕಣಗಳ ಹೆಚ್ಚಿಗಿಂತ ಸಾವಿನ ನಿಷ್ಪತ್ತಿ ಹೆಚ್ಚುತ್ತದೆ. ಹೀಗಾಗಿ ದೇಹದ ತೂಕ ಕುಸಿಯುತ್ತದೆ. ಈ ರೀತಿಯ ಜೀವಕಣಗಳ ನಿರಂತರ ಸಾವು ವ್ಯಕ್ತಿಯ ಕೊನೆಯ ಉಸಿರಿನ ತನಕ ಸಂಭವಿಸುತ್ತಲೇ ಇರುತ್ತದೆ.

ಈ ಎಲ್ಲ ವಾದಗಳು ಒಂದ ವಿಶಿಷ್ಟ ನೆಲೆಗಟ್ಟಿನ ಮೇಲಿದ್ದು ತಾರ್ಕಿಕವಾದರೂ ಕೂಡ ಇವನ್ನು ಆತ್ಮ, ಪುನರ್ಜನ್ಮ ಮುಂತಾದ ವಿಚಾರಗಳ ಬಗ್ಗೆ ತಲೆಕೆಡಿಸಿಕೊಂಡಿರುವ ಜನ ಒಪ್ಪುವುದಿಲ್ಲ. ಏಕೆಂದರೆ ಅವರು ನಂಬಿರುವ ಧರ್ಮದ ಬೋಧನೆಗೆ ಈ ವಿಚಾರಗಳು ಅನುಗುಣವಾಗಿಲ್ಲ.

ಒಂದೇ ಜೀವಕೋಶದಲ್ಲಿ ಅಥವಾ ಬಹುಕೋಶ ಜೀವಿಯ ಹಲವಾರು ಜೀವಕೋಶಗಳಲ್ಲಿ ಉತ್ಪತ್ತಿಯಾಗುವ ಜೀವ ಒಂದೇ. ಸಸ್ಯ, ಹುಳ ಅಥವಾ ಮನುಷ್ಯನ ಜೀವದ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಅಂತರವಿರುವುದು ಜೀವದಲ್ಲಲ್ಲ; ಮಾನಸಿಕ ಬೆಳವಣಿಗೆಯ ಮಟ್ಟದಲ್ಲಿ ನರವ್ಯೂಹದ ವಿಕಾಸದಿಂದಾಗಿ ಮೆದುಳಿನ ಗುಣ ವ್ಯತ್ಯಾಸವಾಗುತ್ತದೆ. ಜೀವಂತ ಬಟಾಟೆಯಲ್ಲಿ ಯಾವುದೇ ಮೆದುಳಿಲ್ಲ, ಆದರೆ ಸಣ್ಣ ಹುಳದಲ್ಲಿ ತೀರ ಪ್ರಾಥಮಿಕ ಹಂತದ ಮೆದುಳಿದೆ. ಮನುಷ್ಯನು ಹೊಂದಿರುವ ಮೆದುಳು ಅತ್ಯಂತ ಮೇಲ್ಮಟ್ಟದ್ದು; ಹಾಗೆಂದು ಈ ವಿಶ್ವದಲ್ಲಿ ಮಾನವನೇ ಅತ್ಯಂತ ಬುದ್ಧಿವಂತ ಪ್ರಾಣಿ ಎಂದು ನಂಬುವುದಕ್ಕೆ ಕಾರಣಗಳಿಲ್ಲ.

ಸಾವಿನ ಅಂಚಿನಲ್ಲಿರುವ ಮನುಷ್ಯನ ಕೊನೆಯ ಗಳಿಗೆಯ ಯೋಚನೆಗಳಿಗೂ ಅವನ ಮುಂದಿನ ಬದುಕಿಗೂ ಕೊಂಡಿಗಳಿವೆ ಎಂದು ಪುನರ್ಜನ್ಮದಲ್ಲಿ ನಂಬಿಕೆಯುಳ್ಳ ಜನ ಸಂಭ್ರಾಂತರಾಗಿ ವಾದಿಸುತ್ತಾರೆ. ಈ ವಾದದ ಪುಷ್ಟೀಕರಣಕ್ಕೆ ಇವರು ದ್ರವ್ಯ ಹಾಗೂ ಶಕ್ತಿ ಸಂರಕ್ಷಣೆಯ ನೈಸರ್ಗಿಕ ನಿಯಮಗಳನ್ನು ಉದ್ಧರಿಸುತ್ತಾರೆ. ಚಿಂತಕನೊಬ್ಬನ ಸಾವಿನ ನಂತರವೂ ಆತನ ಆಲೋಚನೆಗಳು ಪರಿಸರದಲ್ಲಿ ಉಳಿಯುತ್ತವೆ ಎಂದು ವಾದಿಸುವುದು ಮೂರ್ಖತನ. ಮನಸ್ಸುಗಳಿಗೆ ಮೆದುಳಿನಾಚೆನ ಅಸ್ತಿತ್ವವಿದ್ದು ಮತ್ತೆ ಮತ್ತೆ ಜನ್ಮ ಎತ್ತುವ ಸಾಮರ್ಥ್ಯವಿದ್ದರೆ ನಮ್ಮ ಈ ಭೂಮಂಡಲದಲ್ಲಿ ಜೀವೋತ್ಪತ್ತಿಗೆ ಮುಂಚೆ ಈ ಮನಸ್ಸುಗಳು ಎಲ್ಲಿದ್ದವು? ಚಿಂತಕನನ್ನು ಬಿಟ್ಟು ಚಿಂತನೆ, ಸ್ಮರಿಸುವವನನ್ನು ಹೊರತು ಪಡಿಸಿದ ಸ್ಮರಣೆ, ಪ್ರಜ್ಞಾವಂತನನ್ನು ಬಿಟ್ಟು ಪ್ರಜ್ಞೆ ಸ್ವತಂತ್ರವಾಗಿ ಇರಲು ಸಾಧ್ಯವೆ?

ಇಂಧನವಿಲ್ಲದೆ ಬೆಂಕಿ ಹೇಗೆ ಅಸಾಧ್ಯವೋ ಹಾಗೆಯೇ ಶರೀರ ಮತ್ತು ನರ ಅಂಗಾಂಶಗಳಿಲ್ಲದೆ ಜೀವ ಹಾಗೂ ಮನಸ್ಸು ಇರಲು ಸಾಧ್ಯವಿಲ್ಲ. ಏಕೆಂದರೆ ಜೀವ ಹಾಗೂ ಮನಸ್ಸನ್ನು ಉತ್ಪಾದಿಸುವ ಶಕ್ತಿ ಇರುವುದು ಇವಕ್ಕೆ ಮಾತ್ರ. ಜೀವದ ಅವಸಾನವೇ ಸಾವು. ತಥಾಕಥಿತ ಆತ್ಮವೆನ್ನುವುದು ಜೀವ ಹಾಗೂ ಮನಸ್ಸಿನ ಸಂಯೋಗ. ದೇಹವನ್ನುಳಿದು ಜೀವ ಹಾಗೂ ಮನಸ್ಸಿಗೆ ಸ್ವತಂತ್ರ ಅಸ್ತಿತ್ವವಿಲ್ಲ. ಹಾಗಿರುವಾಗ 'ಚಿರಂತನ ಜೀವ'ದ ಬಗ್ಗೆ ಅಥವಾ ಅವಿನಾಶಿ ಆತ್ಮದ ಬಗ್ಗೆ ಮಾತಾಡುವುದರಲ್ಲಿ ಅರ್ಥವಿಲ್ಲ. ಗೌತಮ ಬುದ್ಧ ಈ ಸತ್ಯವನ್ನು ತಿಳಿದಿದ್ದ; ಎಂತಲೇ ಆತ ೨,೫೦೦ ವರ್ಷಗಳ ಹಿಂದೆಯೇ 'ಅನಾತ್ಮ' ದ ಸಂದೇಶವನ್ನು ಸಾರಿದ. ಅನಾತ್ಮವಾದದ ವಿರುದ್ಧ ಬ್ರಾಹ್ಮಣವಾದಿ ಪುನರ್ಜನ್ಮದ ಕಲ್ಪನೆ ಬುದ್ಧನ ಮರಣಾನಂತರ ಬೌದ್ಧ ದಾಖಲೆಗಳಲ್ಲಿ ನುಸುಳಿಕೊಂಡಿರುವುದು ದುರದೃಷ್ಟದ ಸಂಗತಿ.

ಕೃಪೆ : ನವಕರ್ನಾಟಕ ಪ್ರಕಾಶನದ
'ದೇವರು ದೆವ್ವ ವಿಜ್ಞಾನ' ಪುಸ್ತಕದಿಂದ

ಆ ದಿನ ನಾವೆಲ್ಲ ಸಂಜೆ ೪ ಗಂಟೆಗೆ ವಿಜಯನಗರದ ವೀರಪುತ್ರ ಚಿತ್ರವನ್ನು ನೋಡುತ್ತಿದ್ದಾಗ ಅದರಲ್ಲಿ ಚಿತ್ರದ ನಾಯಕ 'ಅಪಾರ ಕೀರ್ತಿ ಗಳಿಸಿ'... ಎಂದು ಹಾಡುತ್ತ ಕುದುರೆಯ ಮೇಲೆ ಹೋಗುವ ದೃಶ್ಯ ಬರುತ್ತದೆ. ಕುದುರೆಯನ್ನೇ ಗಮನಿಸುತ್ತಿದ್ದ ವಿಶ್ವ 'ಕರ್ನಾಟಕದ ಕುದುರೆಗಳಿಗೆ ದಮ್ಮೇ ಇಲ್ಲ. ಅವು ಎಷ್ಟು ನಿಧಾನವಾಗಿ ಹೋಗುತ್ತವೆ. ನಮ್ಮ ಪಂಜಾಬಿನ ಕುದುರೆಗಳೆ ವಾಸಿ. ಜೋರಾಗಿ ಓಡುವುದಷ್ಟೇ ಅಲ್ಲದೆ ಚೆನ್ನಾಗಿ ನೆಗೆಯುತ್ತವೆ ಎಂದ. ನಾನು ಇದೆ ಅವಕಾಶವೆಂದುಕೊಂಡು 'ನೋಡು ಅಲ್ಲಿ ಚಿತ್ರದಲ್ಲಿ ಕಾಣುವ ಗುಡ್ಡಗಳನ್ನು ದಾಟಿದರೆ ನಿಮ್ಮ ಮನೆ ಬರುತ್ತದೆಯೋ ಎಂದು ಕೇಳಿದೆ ಹೂಂ. ಗುಡ್ಡ ದಾಟಿದರೆ ರಸ್ತೆ ಬರುತ್ತದೆ ಅಲ್ಲಿಂದ ಹೋದರೆ ನಮ್ಮ ಬಂಗಲೆ ಬರುತ್ತದೆ ಎಂದ. ತನಗೆ ಇಬ್ಬರು ಹೆಂಡತಿಯರೆಂದು ಒಬ್ಬರು ಪ್ರಯತ್ನ. ಮತ್ತೊರ್ವಳು ಸುಫಲಾ. ತನಗೆ ಪ್ರಯತ್ನಳ ಮೇಲೆ ಬಹಳ ಪ್ರೀತಿ ಎಂದು ತಿಳಿಸಿದ್ದ. ತನಗೆ ಮೊದಲ ಪತ್ನಿಯಲ್ಲಿ ಸೂರಜ, ವಿಶ್ವಾಸ ಹಾಗೂ ಭಾರದ್ವಾಜ ಎಂಬ ೩ ಮಕ್ಕಳೆಂದು ದ್ವಿತೀಯ ಪತ್ನಿಯಲ್ಲಿ ಒಬ್ಬನೇ ಮಗ ಎಂದು ಹೇಳಿದ. ಸೆಂಟ್ರಲ್ ಬ್ಯಾಂಕಿನ ನರೆಗಲ್ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಆತನ ತಂದೆ ಬ್ಯಾಂಕಿನಿಂದ ಮರಳಿಬಂದ ಮೇಲೆ ವಿಶ್ವನನ್ನು ಎತ್ತಿಕೊಂಡು ತಮ್ಮದೇ ಧಾಟಿಯಲ್ಲಿ ಆತನನ್ನು ಪ್ರಶ್ನಿಸತೊಡಗಿದಾಗ, ವಿಶ್ವ ಎಲ್ಲ ಹೇಳತೊಡಗಿದ. ತಾನು ಪಂಜಾಬ ರಾಜ್ಯದವನೆಂದು ಅಲ್ಲಿ ಜಿಲ್ಲಾಧಿಕಾರಿಯಾಗಿದ್ದೆನೆಂದು ಹಾಗೂ ಮೈಸೂರಿನಲ್ಲೂ ಕೆಲಕಾಲ ಜಿಲ್ಲಾಧಿಕಾರಿಯಾಗಿ ಕೆಲಸ ಮಾಡಿದ್ದಾಗಿ ತಿಳಿಸಿದ. ಯಾವುದೋ ಕೆಲಸದ ನಿಮಿತ್ತ ಮೈಸೂರಿಗೆ ಬಂದಿದ್ದಷ್ಟೇ ನೆನಪಿದೆ. ಆ ಮೇಲೆ ನಾನು ಇಲ್ಲಿಗೆ ಹೇಗೆ ಬಂದೆ ಎಂಬುದು ಗೊತ್ತಿಲ್ಲ ಎಂದು ಹೇಳಿದ.

ಪಂಜಾಬಿನಲ್ಲಿರುವ ಕಲ್ಯಾಣಪುರ ಎಂಬಲ್ಲಿ ಎರಡು ಗುಡ್ಡಗಳಿವೆ. ಆ ಗುಡ್ಡಗಳನ್ನು ದಾಟಿದರೆ ನಮ್ಮ ಊರು ಬರುತ್ತದೆ ಎಂದು ಹೇಳುವ ವಿಶ್ವನಾಥ, ತನ್ನ ಪೂರ್ವಜನ್ಮದ ಹೆಸರನ್ನಾಗಲಿ ಅಥವಾ ಮನೆಯ ವಿಳಾಸವನ್ನಾಗಲಿ ಹೇಳಲಿಲ್ಲ. ಕೇಳಿದಾಗ ನೆನಪಿಲ್ಲ ಎಂದ.

ತನಗೆ ಪಂಜಾಬಿನಲ್ಲಿ ತನ್ನದೆ ಆದ ಒಂದು ಜೀಪು ಇತ್ತೆಂದು, ಆದರಲ್ಲಿ ತನ್ನ ಮಗ ಸೂರಜನೊಂದಿಗೆ ಬೇಟೆಯಾಡಲು ಹೋಗುತ್ತಿದ್ದೆನೆಂದೂ ಹಾಗೂ ತನಗೆ ತಿರುಗಾಡಲು ಬಿಳಿಯ ಕಾರು ಸಹ ಇತ್ತೆಂದು ಹೇಳುವ ವಿಶ್ವನಾಥ ತನ್ನ ತಂದೆ-ತಾಯಿ ತೀರಾ ಮುಪ್ಪಿನಲ್ಲಿದ್ದು ಇನ್ನೂ ಬದುಕಿದ್ದಾರೆ. ಆದರೆ ಅವರ ಹೆಸರು ನೆನಪಿಲ್ಲ ಎಂದ. ತನ್ನ ಮಗ ಸೂರಜ ಸಹ ಡಿ.ಸಿ.ಯಾಗಿ ಕಾರ್ಯ ನಿರ್ವಹಿಸುತ್ತಿದ್ದಾನೆ, ಅವರಿಗಾಗಿ ನಾನು ಮನೆಯಲ್ಲೇ ಲಕ್ಷಾಂತರ ರೂ. ಇಟ್ಟಿದ್ದೇನೆ. ವಿಮಾನದ ಮೂಲಕ ಮೈಸೂರಿಗೆ ಬಂದ ನಾನು ತಿರುಗಿ ನನ್ನೂರಿಗೆ ಹೋಗದಿರುವುದಕ್ಕೆ ಅಲ್ಲಿ ನನ್ನ ಪತ್ನಿಯರಿಗೆ, ಮಕ್ಕಳಿಗೆ, ನನ್ನ ತಂದೆ ತಾಯಿಗಳಿಗೆ ಚಿಂತೆಯಾಗಿದೆ ಎಂದ.

ರಜೆಯ ದಿನಗಳಲ್ಲಿ ತನ್ನ ಹೆಂಡತಿ ಮಕ್ಕಳೊಂದಿಗೆ ಕಲ್ಯಾಣಪುರದ ಸಮೀಪದಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಪಿಕ್ನಿಕ್ ಹೋಗುತ್ತಿದ್ದುದಾಗಿಯೂ, ಮಗ ಸೂರಜನೊಂದಿಗೆ ಹೆಚ್ಚಾಗಿ ಬೇಟೆಯಾಡಲು ಹೋಗುತ್ತಿದ್ದುದಾಗಿ ತಿಳಿಸಿದ. ತನಗೆ ಜಿಂಕೆ ಹಾಗೂ ಕೋಳಿಯ ಮಾಂಸ ಎಂದರೆ ಬಹಳ ಇಷ್ಟವೆಂದು ಇಲ್ಲಿ ತನಗೆ ಅಂತಹ ಊಟ ಸಿಗುವುದಿಲ್ಲವೆಂದು ದೂರಿದ ವಿಶ್ವನಾಥ ಕರ್ನಾಟಕ ಜನರು ಶಕ್ತಿ ಇಲ್ಲದವರು. ಪಂಜಾಬಿನಲ್ಲಿ ಮಾಂಸದ ಊಟ ಮಾಡುವುದರಿಂದ ಅಲ್ಲಿಯ ಜನ ಶಕ್ತಿವಂತರು ಬುದ್ಧಿವಂತರು ಎನ್ನುತ್ತಾನೆ.

ತನಗೆ ಪಂಜಾಬಿನಲ್ಲಿ ಎರಡು ಬಂಗಲೆಗಳು ಮೈಸೂರಿನಲ್ಲಿ ಒಂದು ಬಂಗಲೆ ಇದೆ. ತಮ್ಮ ಹೊಲಗಳಿಗೆ ಗೋಧಿ, ಶೇಂಗಾ, ಕಬ್ಬು ಹಾಗೂ ಹತ್ತಿ ಬೆಳೆಯುತ್ತಿತ್ತು ಎಂದು ಹೇಳುತ್ತಾನೆ. ತಮ್ಮ ಮನೆಯಲ್ಲಿ ಬಹಳಷ್ಟು ಎತ್ತುಗಳಿದ್ದವು. ಅವುಗಳ ಕೋಡುಗಳಿಗೆ ಬಣ್ಣ ಹಚ್ಚಿತ್ತು. ಮನೆ ತುಂಬಾ ಆಳು-ಕಾಳುಗಳಿದ್ದರು. ಊಟ ಮಾಡಲು ಸುಂದರವಾದ ಡೈನಿಂಗ್ ಟೇಬಲ್ ಮಲಗಲು ಬಹಳ ಬೆಲೆಬಾಳುವ ಮಂಚ ಇತ್ತು. ಆದರೆ ಇಲ್ಲಿ ಅವು ಯಾವುದೂ ಇಲ್ಲ. ನಾನು ಪಂಜಾಬಿಗೆ ಮರಳಿ ಹೋಗುತ್ತೇನೆ ಎಂದು ಒಮ್ಮೊಮ್ಮೆ ವಿಶ್ವನಾಥ ಹಠ ತೆಗೆಯುತ್ತಾನಂತೆ.

ಪಂಜಾಬಿನ ತಮ್ಮ ಮನೆಯಲ್ಲಿ ನಾಯಿಮರಿ, ಆಡುಗಳು, ಜಿಂಕೆಗಳು ಮುಂತಾದ ಪ್ರಾಣಿ ಪಕ್ಷಿಗಳು ಇದ್ದವು. ಅವನೆಲ್ಲ ನಾನು ಬಹಳ ಪ್ರೀತಿಸುತ್ತಿದ್ದೆ ಎಂದು ಹೇಳುತ್ತಾನೆ. ದಿ. ೬-೪-೯೮ರಂದು ಟಿ.ವಿ.ಯಲ್ಲಿ ಪ್ರಸಾರವಾದ ಓಂ ನಮಃ ಶಿವಾಯ ಧಾರಾವಾಹಿ ನೋಡುತ್ತಿದ್ದ ವಿಶ್ವನಾಥ ಇದ್ದಕ್ಕಿದ್ದಂತೆ ದೇವಸ್ಥಾನವೊಂದನ್ನು ತೋರಿಸಿ ಅದು ಶ್ರೀಶೈಲ ಅಲ್ಲಿ ನಾನು, ನನ್ನ ಹೆಂಡತಿ ಹಾಗೂ ಮಗ ಸೂರಜನೊಂದಿಗೆ ೧೧ ವರ್ಷಗಳ ಹಿಂದೆ ಹೋಗಿದ್ದಾಗಿಯೂ ಬೇಟೆಯಾಡಲು ಹೋಗಿದ್ದಾಗ ಸಿಕ್ಕಿದ ನವಿಲನ್ನು ಈ ದೇವಸ್ಥಾನದಲ್ಲೇ ಬಿಟ್ಟು ಬಂದಿದ್ದಾಗಿ ತಿಳಿಸಿದನಂತೆ. ಈ ಮಾತು ಕೇಳಿ ವಿಶ್ವನಾಥನ ತಂದೆ-ತಾಯಿಗಳು ದಿಗ್ಭ್ರಾಂತರಾಗಿ ಏನು ಹೇಳಬೇಕೋ ತಿಳಿಯದೆ ತಬ್ಬಿಬ್ಬಾದರಂತೆ.

ಒಮ್ಮೆ ವಿಶ್ವನಾಥ ಆಟವಾಡುತ್ತಿದ್ದಾಗ ಆತನ ತಾಯಿ ಬೇಕೆಂದೇ ವಿಶು ನೋಡು ನಿನ್ನ ಹೆಂಡತಿ ಪ್ರಯತ್ನ ಬಂದಿದ್ದಾಳೆ ಎಂದದ್ದೆ ತಡ, ವಿಶ್ವ ಆಟ ಬಿಟ್ಟು ಮನೆಯ ಒಳಗೆ, ಹೊರಗೆ ಹುಡುಕಿ, ಪ್ರಯತ್ನ... ಪ್ರಯತ್ನ ಎಂದು ಕರೆದನಂತೆ. ಆಗ ಉತ್ತರ ಬರದಿದ್ದಾಗ ಏ ಪ್ರಯತ್ನ ಬೇಗ ಬಾ ಎಂದು ಸಿಟ್ಟಿನಿಂದ ಕರೆದನೆಂದು ಆತನ ತಾಯಿ ಹೇಳಿದರು.

ಮಾಂಸದ ಊಟವನ್ನು ಇಷ್ಟಪಡುವ ಈ ಬಾಲಕ, ಒಮ್ಮೊಮ್ಮೆ ತಂದೆಯೊಂದಿಗೆ ಇಂದು ನನಗೆ ಬಹಳ ಬೇಸರವಾಗಿದೆ. ಕೋಳಿ ಊಟ ಮಾಡಲು ಹೊರಗೆ ಹೋಗೋಣ ಬಾರೋ' ಎಂದು ತೀರಾ ಸಲಿಗೆಯಿಂದ ಹಿರಿಯರಂತೆ ಕರೆಯುತ್ತಾನಂತೆ.

೧೯೯೪ರ ಅಕ್ಟೋಬರ ೨ರಂದು ಹುಬ್ಬಳ್ಳಿಯ ಸುಳ್ಳಗ್ರಾಮದಲ್ಲಿ ಜನಿಸಿದ ವಿಶ್ವನಾಥ ೯ ತಿಂಗಳ ನಂತರ ಹಿರಿಯರಂತೆ ಮಾತನಾಡಿ ತನ್ನ ಪೂರ್ವಜನ್ಮದ ಹೆಂಡತಿ ಮಕ್ಕಳ ವಿಷಯ ಮಾತನಾಡಲು ಪ್ರಾರಂಭಿಸಿದ್ದಾಗಿ ಆತನ ತಂದೆ ದೊಡ್ಡಮಲ್ಲಪ್ಪ ತಿಳಿಸಿದರು. ಆತನಿಗೆ ಬೈದರೆ, ಹೊಡೆದರೆ ಬಹಳ ಸಿಟ್ಟು ಬರುವುದೆಂದು, ಒಮ್ಮೆ ಆತನ ತಾಯಿ ಯಾವುದೋ ಕಾರಣಕ್ಕೆ ಹೊಡೆದಾಗ, ''ನಾನು ಪಂಜಾಬಿನಲ್ಲೇ ಚೆನ್ನಾಗಿದ್ದೆ. ಅಲ್ಲಿ ನನ್ನನ್ನು ನೋಡಿಕೊಳ್ಳಲು ಆಳು-ಕಾಳುಗಳಿದ್ದರು. ಇಲ್ಲಿ ನಾನು ಏಕೆ ಬಂದೆನೋ'' ಎಂದು ಗಟ್ಟಿಯಾಗಿ ಹೇಳಿದಾಗ ಆತನ ತಾಯಿ ಆಶ್ಚರ್ಯದಿಂದ ನೋಡಿದಾಗ, ''ಇನ್ನೊಮ್ಮೆ ನನ್ನನ್ನು ಹೊಡೆದರೆ, ನಾನು ಪಂಜಾಬಿಗೆ ಹೋಗಿ ಬಿಡುತ್ತೇನೆ'' ಎಂದು ಗದರಿಸಿದನಂತೆ.

ತಾನು ಮೈಸೂರಿನಲ್ಲಿದ್ದಾಗ ಅಮೆರಿಕಾದ ಅಧ್ಯಕ್ಷ ಬಿಲ್‌ಕ್ಲಿಂಟನ್ ಅವರಿಗೆ ಪತ್ರವನ್ನು ಬರೆದು ಇಟ್ಟಿದ್ದಾಗಿಯೂ ಅದನ್ನು ತಾನೇ ಇಷ್ಟರಲ್ಲೇ ಹೋಗಿ ಕೊಟ್ಟು ಬರುವುದಾಗಿ ತಿಳಿಸಿದಾಗ ನಾನು ಅಚ್ಚರಿಯಿಂದ ಮೂಕಳಾದೆ. ಈ ಪುಟ್ಟ ಬಾಲಕ ಇವನ್ನೆಲ್ಲ ಹೇಳುತ್ತಾನೆಂದ ಮೇಲೆ ಇದು ಪುನರ್‌ಜನ್ಮವೇ ಹೌದು! ಎಂಬ ನಂಬುಗೆ ಬರತೊಡಗಿತು. ವಯಸ್ಸಿಗೆ ಮೀರಿದ ಮಾತು, ಬುದ್ಧಿವಂತಿಕೆ, ಮುಖದಲ್ಲಿನ ವಿಚಿತ್ರ ಕಳೆ ನೋಡಿದವರಿಗೆ ಆಶ್ಚರ್ಯ ಉಂಟು ಮಾಡದಿರದು.

ಮೂಡ್ ಬಂದಾಗ ಮಾತ್ರ ವಿಶ್ವ ಪಂಜಾಬಿನ ಕುರಿತು ಹೇಳುತ್ತಾನೆಯೇ ಹೊರತು, ಉಳಿದ ಸಮಯದಲ್ಲಿ ಆ ಬಗ್ಗೆ ಚಕಾರವೆತ್ತುವುದಿಲ್ಲ.

ವಿಶ್ವನ ಮಾತು, ವಯಸ್ಸಿಗೆ ಮೀರಿದ ಬುದ್ಧಿವಂತಿಗೆ, ಆತನಲ್ಲಿರುವ ವಿಶೇಷ ಗುಣವನ್ನು ನೋಡಿ ಆತನು ವಾಸವಾಗಿರುವ ಮನೆಯ ಮಾಲಕಿ ಶ್ರೀಮತಿ ಡಾ.ಕೋರಧ್ಯಾನಮಠ ಅಚ್ಚರಿ ವ್ಯಕ್ತಪಡಿಸುತ್ತಾರೆ. 'ಇದೂವರೆಗೂ ಇಂತಹ ಮಗುವನ್ನು ಎಲ್ಲಿಯೂ ನೋಡಿಲ್ಲ' ಎಂದು ತಿಳಿಸಿದರು.

ವಿಶ್ವನಾಥ ವಿಜ್ಞಾನಕ್ಕೊಂದು ಸವಾಲು. ಆತನು ಹೇಳುತ್ತಿರುವ ವಿಷಯ ಎಷ್ಟು ನಿಜ ಎಷ್ಟು ಸುಳ್ಳು ಎಂಬುದನ್ನು ತನಿಖೆ ಮಾಡಬೇಕಿದೆ. ಅದಕ್ಕಾಗಿ ಆಸಕ್ತರು ಮುಂದೆ ಬರಬೇಕಿದೆ.

ಪಾಕಿಸ್ತಾನದ ಹೊಸ ಕ್ಷಿಪಣಿ : ಘೋರಿ ಭಾರತದ ಬಹುಪಾಲು ನಗರಗಳು ಇದರ ಗುರಿ?

ಭಾರತ-ಪಾಕಿಸ್ತಾನ ಒಂದೇ ರಾಷ್ಟ್ರದ ಎರಡು ಭಾಗಗಳಾಗಿದ್ದರೂ ಪರಮ ವೈರಿಗಳು. ಈ ವೈರತ್ವ ಉಭಯರಾಷ್ಟ್ರಗಳ ರಕ್ಷಣಾ ವೆಚ್ಚವನ್ನು ವರ್ಷದಿಂದ ವರ್ಷಕ್ಕೆ ಹೆಚ್ಚಿಸುತ್ತಲಿದೆ. ಅತ್ಯಾಧುನಿಕ ಸಮರ ತಂತ್ರಗಳನ್ನು ತಮ್ಮದಾಗಿಸಿಕೊಳ್ಳಲು ಭಾರತ-ಪಾಕಿಸ್ತಾನ ಸರ್ವ ಪ್ರಯತ್ನ ನಡೆಸಿವೆ. ಇದರ ಪ್ರತಿಫಲವೇ ಪಾಕಿಸ್ತಾನದ ಬಲಾಢ್ಯ ಕ್ಷಿಪಣಿ ಘೋರಿ.

○ ಎನ್.ಆರ್.ಪಾಟೀಲ

"ಕ್ಷಿಪಣಿ ಸಾಮರ್ಥ್ಯ"ಕ್ಕೆ ಒಂದು ರಾಷ್ಟ್ರದ ಮಿಲಿಟರಿ ಶಕ್ತಿಯ ಮಾಪನದಲ್ಲಿ ಇತ್ತೀಚೆಗೆ ಹೆಚ್ಚು ಮಹತ್ವ ಕೊಡಲಾಗುತ್ತಿದೆ. ಯುದ್ಧ ಭಯದ ಭೀತಿಯಲ್ಲಿಂದು ಇಡೀ ವಿಶ್ವ ದಿನಗಳನ್ನು ನೂಕುತ್ತಲಿದೆ ಎಂಬುದಕ್ಕೆ ಎರಡು ಮಾತಿಲ್ಲ. ಅದಕ್ಕಾಗಿಯೇ ಜಗತ್ತಿನ ರಾಷ್ಟ್ರಗಳು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಲು ಸರ್ವಪ್ರಯತ್ನ ನಡೆಸಿವೆ. 'ಒಂದು ರಾಷ್ಟ್ರದ ಗೆಲುವು ಅದರ ವಾಯುಬಲವನ್ನೇ ಅವಲಂಬಿಸಿರುತ್ತದೆ' ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಕ್ಷಿಪಣಿಗಳು ಹೆಚ್ಚು ಮಹತ್ವ ಪಡೆದುಕೊಂಡಿವೆ. ತಂತಮ್ಮ ದೇಶದ ಭದ್ರಕೋಟೆಯೊಳಗೆ ಕುಳಿತು ಶತ್ರುವಿನ ಮೇಲೆ ಆಕ್ರಮಣ ನಡೆಸುವಂಥ ಕ್ಷಿಪಣಿಗಳಿಗೆ ಇಂದು ತುಂಬ ಬೇಡಿಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಈಗ ಪಾಕಿಸ್ತಾನ "ಘೋರಿ" ಎಂಬ ಕ್ಷಿಪಣಿಯನ್ನು ಅಭಿವೃದ್ಧಿಪಡಿಸಿದೆ.

'ಘೋರಿ' ಪಾಕಿಸ್ತಾನದ ಹೊಸ ಬಲಾಢ್ಯ ಕ್ಷಿಪಣಿ. ಇದರ ವ್ಯಾಪ್ತಿ ೧೫೦೦ ರಿಂದ ೨೦೦೦ ಕಿ.ಮೀ. ಜಗತ್ತಿನಾದ್ಯಂತ "ಕ್ಷಿಪಣಿ ರಹಿತ ಜಗತ್ತಿ"ಗಾಗಿ ಹೋರಾಟ ನಡೆದಿದ್ದರೂ ಪಾಕಿಸ್ತಾನ ಶಕ್ತಿಯುತ ಕ್ಷಿಪಣಿಯೊಂದನ್ನು ಅಭಿವೃದ್ಧಿಪಡಿಸಿದ್ದು ಜಗತ್ತಿಗೇ ದಿಗ್ಭ್ರಮೆಯುಂಟು ಮಾಡಿದೆ. ಭಾರತದ ಎಲ್ಲ ಪ್ರಮುಖ ನಗರಗಳು ಇದರ ವ್ಯಾಪ್ತಿಗೆ ಬರಲಿವೆ ಎಂಬುದು ಭಾರತದ ಪಾಲಿಗೆ ತುಂಬ ಕಳವಳಕಾರಿ ಸಂಗತಿ. ಈ ಹಿನ್ನೆಲೆಯಲ್ಲಿ ಭಾರತ ಪುನಃ ತನ್ನ ಕ್ಷಿಪಣಿ ಸಾಮರ್ಥ್ಯದತ್ತ ದೃಷ್ಟಿ ಹರಿಸಬೇಕಾಗಿದೆ. ಭಾರತ ಉಪಖಂಡದಲ್ಲಿ ಕ್ಷಿಪಣಿ ಪೈಪೋಟಿಗೆ ಚಾಲನೆ ದೊರಕಿದೆ.

ಎರಡನೇ ಮಹಾಯುದ್ಧದ ನಂತರ ಜಗತ್ತಿನ ಅನೇಕ ರಾಷ್ಟ್ರಗಳು ಯುದ್ಧ ಭಯದಿಂದ ನಲುಗಿ ಹೋಗಿದ್ದವು. ಆದರೆ ಈ ಯುದ್ಧದ ನಂತರ ಜಗತ್ತಿನ ಶ್ರೀಮಂತ ದೇಶಗಳು ಕ್ಷಿಪಣಿಗಳ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ಖಂಡಾಂತರಗಳಲ್ಲಿ ದುಗುಡದ ವಾತಾವರಣವನ್ನುಂಟು ಮಾಡಿದವು. ಕಾಲದ ಗತಿಯಲ್ಲಿ ಕ್ಷಿಪಣಿ ತಂತ್ರಜ್ಞಾನ ಜಗತ್ತಿನ ಇತರ ದೇಶಗಳಿಗೂ ತಲುಪಿತು. ಜಗತ್ತಿನ ಅನೇಕ ದೇಶಗಳು ತಮ್ಮ ಆರ್ಥಿಕ ಹಿನ್ನಡೆಯಲ್ಲಿ ಕ್ಷಿಪಣಿ ನಿರ್ಮಾಣಕ್ಕೆ ಮುಂದಾದವು. ಮಿಲಿಟರಿ ವೆಚ್ಚಕ್ಕೆ ಹೆಚ್ಚು ಹಣ ನೀಡಿದವು. ಅಂಥ ದೇಶಗಳಲ್ಲಿ ಭಾರತ-ಪಾಕಿಸ್ತಾನ ಪ್ರಮುಖವಾದವುಗಳು.

ಭಾರತ-ಪಾಕಿಸ್ತಾನ ಒಂದೇ ರಾಷ್ಟ್ರದ ಎರಡು ಭಾಗಗಳಾಗಿದ್ದರೂ ಪರಮ ವೈರಿಗಳು. ಈ ವೈರತ್ವ ಉಭಯ ರಾಷ್ಟ್ರಗಳ ರಕ್ಷಣಾ ವೆಚ್ಚವನ್ನು ವರ್ಷದಿಂದ ವರ್ಷಕ್ಕೆ ಹೆಚ್ಚಿಸುತ್ತಲಿದೆ. ಅತ್ಯಾಧುನಿಕ ಸಮರ ತಂತ್ರಗಳನ್ನು ತಮ್ಮದಾಗಿಸಿಕೊಳ್ಳಲು ಭಾರತ-ಪಾಕಿಸ್ತಾನ ಸರ್ವ ಪ್ರಯತ್ನ ನಡೆಸಿವೆ. ಇದರ ಪ್ರತಿಫಲವೇ ಪಾಕಿಸ್ತಾನದ ಬಲಾಢ್ಯ ಕ್ಷಿಪಣಿ ಘೋರಿ.

ಪಾಕಿಸ್ತಾನದ ಕ್ಷಿಪಣಿ ಸಾಮರ್ಥ್ಯ

ಪಾಕಿಸ್ತಾನದ ಘೋರಿ ಅತ್ಯಾಧುನಿಕ ತಂತ್ರಜ್ಞಾನದ ಕ್ಷಿಪಣಿ ತಜ್ಞರ ಪ್ರಕಾರ ಅಣು ಹಾಗೂ ರಾಸಾಯನಿಕ ಸಿಡಿ ತಲೆಗಳನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿದೆ. ಜೊತೆಗೆ ಟ್ಯಾಂಕ್ ವಿರೋಧಿ ಸಿಡಿ ತಲೆಗಳನ್ನು ಹೊತ್ತು ಒಯ್ಯುವ ಶಕ್ತಿ ಹೊಂದಿದೆ. ಪಾಕಿಸ್ತಾನದ ಖ್ಯಾತ ಅಣುವಿಜ್ಞಾನಿ ಅಬ್ದುಲ್ ಖ್ವಾದಿರ್‌ಖಾನ್‌ರ ನೇತೃತ್ವದಲ್ಲಿ 'ಘೋರಿ' ಸಿದ್ಧಗೊಂಡಿದೆ. ಇದಕ್ಕೆ ಚೀನಾದ ಸಹಾಯ ದೊರಕಿದೆ. ಅನೇಕ ತಜ್ಞರ ಪ್ರಕಾರ ಪಾಕಿಸ್ತಾನ 'ಘೋರಿ'ಯನ್ನು ಭಾರತದ ಪೃಥ್ವಿ ಕ್ಷಿಪಣಿಗೆ ಬದಲಾಗಿ ಸಿದ್ಧಪಡಿಸಿದೆ. ಪಾಕಿಸ್ತಾನದ ವಾಯುಪಡೆಯ ಯುದ್ಧ ವಿಮಾನ 'ಎಫ್' ಶ್ರೇಣಿಗಳ ತಂತ್ರಜ್ಞಾನವನ್ನೇ ಇದು ಅಳವಡಿಸಿಕೊಂಡಿದೆ. ಭೂಮಿಯಿಂದ ಭೂಮಿಗೆ, ಆಕಾಶದಿಂದ ಭೂಮಿಗೆ ಘೋರಿಯನ್ನು ಉಡಾಯಿಸಬಹುದಾಗಿದೆ. ಪಾಕಿಸ್ತಾನದ ಕ್ಷಿಪಣಿ ಶಕ್ತಿ ಇಂತಿದೆ.

ಕ್ಷಿಪಣಿ	ವ್ಯಾಪ್ತಿ
ಹಫ್ತ್-೧	೮೦ ಕಿ.ಮೀ
ಎಂ.-೧೧	೨೯೦ ಕಿ.ಮೀ.
ಹಫ್ತ್-೨	೩೦೦ ಕಿ.ಮೀ.
ಹಫ್ತ್-೩	೬೦೦ ಕಿ.ಮೀ.
ಶಾಪರ್	೧೨೦ ಕಿ.ಮೀ.
ಸೂಪರ್ ಕೋ	೨೮೦ ಕಿ.ಮೀ.
ಘೋರಿ	೧೫೦೦-೨೦೦೦ ಕಿ.ಮೀ.
ಹಫ್ತ್-೧ಎ	೧೦೦ ಕಿ.ಮೀ.

'ಹಫ್ತ್' ಎಂದರೆ ಮರಣಾಂತಿಕ ಎಂದರ್ಥ. ಹಫ್ತ್-೧ಎ ೫೦೦ ಕೆ.ಜಿ. ಭಾರ ಹೊತ್ತೊಯ್ಯುವ ಸಾಮರ್ಥ್ಯ ಹೊಂದಿವೆ. ಎ.ಕ್ಯೂ.ಖಾನ ಪಾಕಿಸ್ತಾನದ ಕ್ಷಿಪಣಿ ಅಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕರು. ೧೯೮೮ರಲ್ಲಿ ಇವರು ಹೆಗಲ ಮೇಲಿರಿಸಿಕೊಂಡು ಆಗಸಕ್ಕೆ ಚಿಮ್ಮಿಸಬಲ್ಲ 'ಅಂಝೂ' ಕ್ಷಿಪಣಿಗಳ ಮೊದಲ ಕಂತನ್ನು ಸೈನ್ಯ ಪಡೆಗೆ ಹಸ್ತಾಂತರಿಸಿದ್ದರು. ಇವರ ಪ್ರಕಾರ ಪಾಕಿಸ್ತಾನದ ಕ್ಷಿಪಣಿ ಕಾರ್ಯಕ್ರಮಗಳಿಗೆ ಚೀನಾ ಸಹಾಯ ಹಸ್ತ ನೀಡಿದೆ.

ಪಾಕಿಸ್ತಾನದ ಇತ್ತೀಚಿನ ಘೋರಿ ಕ್ಷಿಪಣಿ ಭಾರತದ ನೆಮ್ಮದಿಗೆ ಭಂಗ ತಂದಿರುವುದರಲ್ಲಿ ಸಂದೇಹವಿಲ್ಲ. ಪಾಶ್ಚಾತ್ಯ ರಾಷ್ಟ್ರಗಳ ತಜ್ಞರು ಹೇಳುತ್ತಾರೆ "ಪಾಕಿಸ್ತಾನದ ಘೋರಿ ಭಾರತಕ್ಕೆ ಬಹುದೊಡ್ಡ ಬೆದರಿಕೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಪಾಕಿಸ್ತಾನ ಕ್ಷಿಪಣಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಇನ್ನೂ ಬಹಳಷ್ಟು ಸಾಧಿಸಬೇಕಾಗಿದೆ". ಆದರೂ ಪಾಕಿಸ್ತಾನ ನಿರ್ಮಿಸುತ್ತಿರುವ ಕ್ಷಿಪಣಿಗಳು ಭಾರತದ ಕ್ಷಿಪಣಿ

ಕಾರ್ಯಕ್ರಮಕ್ಕೆ ಪ್ರತಿಕ್ರಿಯೆಯಾಗಿವೆ ಎಂಬುದು ಮಾತ್ರ ಸತ್ಯ.

ಭಾರತದ ಕ್ಷಿಪಣಿ ಸಾಮರ್ಥ್ಯ

ಭಾರತ ಕ್ಷಿಪಣಿ ಕಾರ್ಯಕ್ರಮಕ್ಕೆ ೧೯೩೦ರಲ್ಲಿ ಚಾಲನೆ ನೀಡಿತು. ಸ್ವದೇಶೀಯವಾಗಿ ಕ್ಷಿಪಣಿ ಅಭಿವೃದ್ಧಿಪಡಿಸುವುದಕ್ಕಾಗಿ ಭಾರತ ಸರಕಾರ ಸಾಕಷ್ಟು ಒತ್ತಡಗಳ ನಡುವೆಯೂ ೩೮೦ ಕೋಟಿ ರೂಪಾಯಿ ನೀಡಿತು. ಮುಂದಿನ ವರ್ಷಗಳಲ್ಲಿ ನೆರವು ಮುಂದುವರೆಯಿತು. ಭಾರತೀಯ ವಿಜ್ಞಾನಿಗಳಿಂದ ಕಡಿಮೆ ದೂರದ ಹಾಗೂ ಮಧ್ಯಮ ವ್ಯಾಪ್ತಿಯ ತ್ರಿಶೂಲ್, ಆಕಾಶ..... ಹೀಗೆ ಒಂದೊಂದೇ ಕ್ಷಿಪಣಿಗಳು ನಿರ್ಮಿಸಲ್ಪಟ್ಟವು.

ಭಾರತದ ಕ್ಷಿಪಣಿ ನಿರ್ಮಾಣ ಕಾರ್ಯ ನಿಜಕ್ಕೂ ಒಂದು ಸಾಹಸಗಾಥೆ. ಭಾರತದ ಕ್ಷಿಪಣಿಯ ಕನಸು ನನಸಾಗುವ ಆರಂಭದಲ್ಲೇ ಮೋಸಗಾರರ ಕುತಂತ್ರ, ನಿರಾಶೆ, ಅಮೆರಿಕೆಯ ಅರಚಾಟ, ಪಾಕಿಸ್ತಾನದ ಪ್ರತಿಭಟನೆ, ಜೊತೆಗೆ ಏರುತ್ತಿರುವ ಬೆಲೆಗಳು, ಸಕಾಲದಲ್ಲಿ ಸಿಗದ ಕ್ಷಿಪಣಿಗಳ ಬಿಡಿ ಭಾಗಗಳು, ಹಣಕಾಸಿನ ಮುಗ್ಗಟ್ಟು.... ಎದುರಾದ ತೊಂದರೆಗಳು ಒಂದೇ ಎರಡೇ. ಆದರೂ ಸಹಸ್ರಾರು ವಿಜ್ಞಾನಿಗಳು ರಾಷ್ಟ್ರ ಪ್ರೇಮದಿಂದ ವರ್ಷಗಳುದ್ದಕ್ಕೂ ನಿರಂತರ ಶ್ರಮಿಸಿದ್ದುದರ ಫಲವಾಗಿ ಭಾರತ-ಕ್ಷಿಪಣಿ ಯುಗವನ್ನು ಪ್ರವೇಶಿಸಿತು. ಭಾರತದ ಕ್ಷಿಪಣಿಗಳ ಜನಕ ಅಬ್ದುಲ್ ಕಲಾಂ ಹೇಳುತ್ತಾರೆ "ಭಾರತವಿಂದು ಕ್ಷಿಪಣಿ ರಂಗದಲ್ಲಿ ಅತ್ಯುತ್ತಮ ಸಾಧನೆಗೈದಿದೆ. ಇತರ ಸೂಪರ್ ಶಕ್ತಿ ರಾಷ್ಟ್ರಗಳ ಸಾಧನೆಯನ್ನು ಸರಿಗಟ್ಟಿದೆ".



ಭಾರತದ ಕ್ಷಿಪಣಿ ಸಾಮರ್ಥ್ಯ ಹೀಗಿದೆ:

ಕ್ಷಿಪಣಿ	ವ್ಯಾಪ್ತಿ
ತ್ರಿಶೂಲ್	೯ ಕಿ.ಮೀ.
ಆಕಾಶ	೨೫ ಕಿ.ಮೀ.
ನಾಗ್	೪ ಕಿ.ಮೀ
ಅಗ್ನಿ	೨೫೦೦ ಕಿ.ಮೀ
ಪೃಥ್ವಿ	೨೫೦ ಕಿ.ಮೀ.
ಸಾಗರಿಕಾ	೩೦೦ ಕಿ.ಮೀ.
ಸೂರ್ಯ	೧೨,೦೦೦-೨೦,೦೦೦ ಕಿ.ಮೀ.

(ಸೂರ್ಯ-ನಿರ್ಮಾಣದ ಹಂತದಲ್ಲಿ)

"ಪೃಥ್ವಿ" ದೇಶದ ನೆರೆ-ಹೊರೆಯ ರಾಷ್ಟ್ರಗಳಲ್ಲಿ ನಡುಕ ಹುಟ್ಟಿಸಿರುವ ಭಾರತದ ಅಪೂರ್ವ ಕ್ಷಿಪಣಿ. ಸಂಪೂರ್ಣವಾಗಿ ಸ್ವದೇಶೀ ತಂತ್ರಜ್ಞಾನದಲ್ಲಿ ನಿರ್ಮಿತಗೊಂಡಿರುವ ಪೃಥ್ವಿ ಎರಡು ಬಗೆಯ ವಿನ್ಯಾಸ ಹೊಂದಿದೆ. ೧೦೦೦ ಕೆ.ಜಿ. ಸಿಡಿ ತಲೆಯನ್ನು ಹೊತ್ತು ೧೫೦ ಕಿ.ಮೀ. ದೂರಸಾಗಿ ಸಿಡಸಬಲ್ಲ ಸಾಮರ್ಥ್ಯ ಒಂದು ಬಗೆಯ ವಿನ್ಯಾಸಕ್ಕಿದ್ದರೆ, ೫೦೦ ಕೆ.ಜಿ. ಭಾರ ಹೊತ್ತು ೨೫೦ ಕಿ.ಮೀ. ದೂರಸಾಗಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಪೃಥ್ವಿಯ ಇನ್ನೊಂದು ಬಗೆಯ ವಿನ್ಯಾಸಕ್ಕಿದೆ. ಜೋಡಿಸಿ ಹಾರಿಸಲು ಕೇವಲ ಆರು ಘಂಟೆಗಳ ಕಾಲಾವಧಿ ತೆಗೆದುಕೊಳ್ಳುವ ಪೃಥ್ವಿ ೧೯೮೮ರಲ್ಲಿ ಪರೀಕ್ಷಿಸಲ್ಪಟ್ಟಿತು. ಇದು ಅಮೆರಿಕೆಯ 'ATMS' ಅಥವಾ ಚೀನಾದ 'M-11'ರ ಕ್ಷಿಪಣಿಗಳಿಗಿಂತ ಹೆಚ್ಚು ಕರಾರುವಕ್ಕಾಗಿದೆ ಎನ್ನಲಾಗಿದೆ. ಭೂಸೇನೆ ಹಾಗೂ ವಾಯು ಸೇನೆಗಳಿಗೆ ಪೃಥ್ವಿಯನ್ನು ಪ್ರತ್ಯೇಕವಾಗಿ ವಿನ್ಯಾಸಿಸಲಾಗಿದೆ. ಭೂ ಸೇನಾ ಪೃಥ್ವಿಯು ೧೫೦ ಕಿ.ಮೀ. ವ್ಯಾಪ್ತಿ ಹೊಂದಿದ್ದರೆ, ವಾಯು ಸೇನಾ ಪೃಥ್ವಿಯು ೨೫೦ ಕಿ.ಮೀ. ವ್ಯಾಪ್ತಿ ಹೊಂದಿದೆ.

ಪೃಥ್ವಿಯ ನಂತರ "ಅಗ್ನಿ"ಯ ಆವಿಷ್ಕಾರ ಅತ್ಯಂತ ಕರಾರುವಕ್ಕಾದ ಈ ಕ್ಷಿಪಣಿ ಶತ್ರುಗಳ ನಿದ್ದೆ ಕೆಡಿಸಿದ್ದು ಸತ್ಯ. ಅತ್ಯಾಧುನಿಕ ತಂತ್ರಜ್ಞಾನದ ಪೃಥ್ವಿ ಹಾರಾಟದ ಸಮಯದಲ್ಲಾಗುವ ಗುರುತ್ವಾಕರ್ಷಣೆಯ ಏರು-ಪೇರನ್ನೂ, ಎತ್ತರದ ಏರಿಳಿತಗಳನ್ನೂ ಸಹಿಸಿಕೊಳ್ಳುವ ಶಕ್ತಿ ಹೊಂದಿದೆ. ಇದರ ಭಾರ ಹೊರುವ ಸಾಮರ್ಥ್ಯ ೧೦೦೦ ಕೆ.ಜಿ.

ಅಗ್ನಿಯ ಆವಿಷ್ಕಾರ ಖಂಡಾಂತರ ಕ್ಷಿಪಣಿ "ಸೂರ್ಯ"ನ ಅಭಿವೃದ್ಧಿಗೆ ನಾಂದಿಯಾಯಿತು. ೧೨,೦೦೦ ದಿಂದ ೨೦,೦೦೦ ಕಿ.ಮೀ. ವ್ಯಾಪ್ತಿಯ ಸೂರ್ಯ ಯುರೋಪಿಯನ್ ರಾಷ್ಟ್ರಗಳು ಹಾಗೂ ಅಮೆರಿಕೆಯನ್ನು ಗುರಿಯಾಗಿಸಬಲ್ಲ ಸಾಮರ್ಥ್ಯ ಹೊಂದಿದೆ. ಸೂರ್ಯನ ನಿರ್ಮಾಣವಿನ್ನೂ ಪ್ರಗತಿಯ ಹಂತದಲ್ಲಿದೆ.

ನಾಗ್, ತ್ರಿಶೂಲ್, ಆಕಾಶ ಬಹುವಿಧದಲ್ಲಿ ಉಪಯುಕ್ತವಾಗಿವೆ. ನಾಗ್ ಎಲ್ಲಾ ಬಗೆಯ ಹವಾಮಾನ ಹಾಗೂ ಹಗಲೂ-ರಾತ್ರಿಯೂ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ನಾಗ್‌ನಲ್ಲಿ ಭೂಸೇನೆ ಹಾಗೂ ವಾಯುಸೇನೆಗಳಿಗೆ ಪ್ರತ್ಯೇಕ-ವಿನ್ಯಾಸಗಳಿವೆ. ತ್ರಿಶೂಲ್ ಭೂಮಿಯಿಂದ ಆಕಾಶಕ್ಕೆ ಚಿಮ್ಮಿಸಬಲ್ಲ ಸಶಕ್ತ ಕ್ಷಿಪಣಿ, ಇದನ್ನು 'ಪ್ರತಿ ಕ್ಷಿಪಣಿ'ಯ ಮಾದರಿಯಲ್ಲಿ ನಿರ್ಮಿಸಲಾಗಿದೆ. ಇದರಲ್ಲಿಯ ರಾಡಾರ್ ವ್ಯವಸ್ಥೆ ಅತ್ಯಾಧುನಿಕ ತಾಂತ್ರಿಕತೆ ಹೊಂದಿದೆ.

ತಮ್ಮ ಕ್ಷಿಪಣಿ ಕಾರ್ಯಕ್ರಮಗಳ ಯಶಸ್ಸಿನಿಂದ ಉತ್ತೇಜಿತರಾಗಿರುವ ಭಾರತೀಯ ವಿಜ್ಞಾನಿಗಳು ಅಗ್ನಿಗಿಂತ ಹೆಚ್ಚು ಪರಿಣಾಮಕಾರಿಯಾದ ಒಂದು ಹಂತದ ಜೆಟ್ ಎಂಜಿನ್ ಚಾಲಿತ ಕ್ಷಿಪಣಿ ತಯಾರಿಸಲು ಪ್ರಯತ್ನ ನಡೆಸಿದ್ದಾರೆ. ಈ ಕ್ಷಿಪಣಿಗಳು ೨೫೦೦ ಕಿ.ಮೀ. ವ್ಯಾಪ್ತಿ ಹೊಂದಿದ್ದು ೧೨೦೦ ದಿಂದ ೧೮೦೦ ಕೆ.ಜಿ. ಸಿಡಿ ತಲೆ ಹೊತ್ತು ಪ್ರತಿ ಘಂಟೆಗೆ ೮೦೦ ದಿಂದ ೯೦೦ ಕಿ.ಮೀ. ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿರುತ್ತವೆ ಎನ್ನಲಾಗಿದೆ.

ಅಮೆರಿಕೆಯ ಸಮಯ ಸಾಧಕತನ

ಇತ್ತೀಚೆಗೆ ಜಗತ್ತಿನಲ್ಲಿ ವಿಶ್ವಶಾಂತಿಯ ಚರ್ಚೆಗಳು ಬಹಳಷ್ಟು ಪ್ರಚಾರ ಪಡೆಯುತ್ತಲಿವೆ. ಈ ಚರ್ಚೆಯ ಮುಂಚೂಣಿಯಲ್ಲಿ ಸ್ವಯಂ ಘೋಷಿತ ವಿಶ್ವಶಾಂತಿಯ ನೇತಾರ ಅಮೆರಿಕಾ ಇರುವುದು ಉಲ್ಲೇಖನಾರ್ಹ.

ಅಮೆರಿಕೆಗೆ ಭಾರತವೆಂದರೆ ಮೊದಲಿನಿಂದಲೂ ಒಂದು ರೀತಿಯ ಅವ್ಯಕ್ತ ಭಯ. ಭಾರತದ ಅಭಿವೃದ್ಧಿಯ ಮೇಲೆ ಅದು ಸದಾ ಕಣ್ಣಿಟ್ಟಿರುತ್ತದೆ. ಭಾರತ ಹೊಂದಲಿರುವ ಯುದ್ಧಾಸ್ತ್ರಗಳ ಬಗೆಗೆ ಅಮೆರಿಕಾಕ್ಕೆ ತುಂಬ ಆತಂಕ. ಭಾರತದ ಪೃಥ್ವಿ ಮತ್ತು ಅಗ್ನಿ ಕ್ಷಿಪಣಿಗಳನ್ನು ಅಭಿವೃದ್ಧಿ ಪಡಿಸಿದಾಗ ಅಮೆರಿಕಾ ತುಂಬ ಅರಚಾಡಿತ್ತು. ಪಾಕಿಸ್ತಾನ, ಚೀನಾ ಇದಕ್ಕೆ ಧ್ವನಿಗೂಡಿಸಿದ್ದವು. ಇವನ್ನು ಅಣ್ವಸ್ತ್ರ ಪ್ರಯೋಗಿಸಲು ಬಳಸಬಹುದೆಂದು ಪಾಶ್ಚಿಮಾತ್ಯರು ಹಾಗೂ ನೆರೆಯ ರಾಷ್ಟ್ರಗಳು ಭಯಗೊಂಡಿದ್ದವು. ಆದರೆ ಆಗಿನ ಪ್ರಧಾನಿ ರಾಜೀವಗಾಂಧಿ ಇದನ್ನು ಅಲ್ಲಗಳೆದಿದ್ದರು. ಇವೆರಡೂ ಕ್ಷಿಪಣಿಗಳ ತಯಾರಿಕೆಯ ಹಿನ್ನೆಲೆಯಲ್ಲೇ ಪಾಕ್ ಘೋರಿ

ಕ್ಷಿಪಣಿಯನ್ನು ಅಭಿವೃದ್ಧಿಪಡಿಸಿದೆ. ಚೀನಾ ಇದಕ್ಕೆ ಸಹಾಯ ಮಾಡಿದೆ ಆದರೂ ಅಮೆರಿಕಾ ಬಾಯಿ ಮುಚ್ಚಿಕೊಂಡೇ ಕುಳಿತಿದೆ.

ಚೀನಾ ಪಾಕಿಸ್ತಾನಕ್ಕೆ ಎಂ.೧೧ ಕ್ಷಿಪಣಿಗಳನ್ನು ಮಾರುತ್ತಿರುವುದು ಗೊತ್ತಿದ್ದರೂ ಅಮೆರಿಕಾ ಗೊತ್ತಿಲ್ಲದಂತೆ ವರ್ತಿಸಿತು. ಅಂತರಾಷ್ಟ್ರೀಯ ರಕ್ಷಣಾ ವಿದ್ಯಮಾನಗಳ ಬಗೆಗೆ ಅತ್ಯಂತ ಕನಿಷ್ಠ ಆಸಕ್ತಿ ಇರುವ ಎಲ್ಲರಿಗೂ ಇದು ತಿಳಿದ ಸಂಗತಿಯಾಗಿದ್ದರೂ ಅಮೆರಿಕಾಕ್ಕೆ ಗೊತ್ತಾಗಲಿಲ್ಲವೇ? ಕ್ಷಿಪಣಿ ನಿಯಂತ್ರಣಕ್ಕಾಗಿ, ಅಣ್ವಸ್ತ್ರ ನಿಷೇಧಕ್ಕಾಗಿ ಇತ್ತೀಚಿಗೆ ಸದಾ ವಟಗುಟ್ಟುವ ವಿಶ್ವಶಾಂತಿಯ ಈ ಹಿರಿಯಣ್ಣ ಪಾಕಿಸ್ತಾನ ಘೋರಿಯನ್ನು ಹೊಂದಿದುದರ ಬಗೆಗೆ ಬಾಯಿ ಮುಚ್ಚಿಕೊಂಡೇ ಇದೆ. ಯಾಕೆಂದರೆ ಚೀನಾದೊಂದಿಗಿನ ತನ್ನ ಸಂಬಂಧಕ್ಕೆ ದಕ್ಕೆ ಬಂದೀತು ಎಂಬ ಭಯ ಅಮೆರಿಕಾಕ್ಕಿದೆ. ಇದು ಸಮಯ ಸಾಧಕತನವಲ್ಲದೇ ಇನ್ನೇನು.

ಅಮೆರಿಕೆಯ ದೃಷ್ಟಿಯಲ್ಲಿ ಭಾರತ ಅತ್ಯಾಧುನಿಕ ಅಸ್ತ್ರಗಳನ್ನು ಹೊಂದಿದರೆ ವಿಶ್ವದ ರಾಜಕೀಯ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಆದರೆ ಅದೇ ತಾನು ಇಂಥ ಅಸ್ತ್ರಗಳನ್ನು ಹೊಂದುವುದರಿಂದ ಜಗತ್ತು ಶಾಂತಿಯಿಂದ ಇರುತ್ತದೆ ಎಂದು ಅಮೆರಿಕಾ ತಿಳಿದುಕೊಂಡಿದೆ ಅದಕ್ಕಾಗಿಯೇ ಭಾರತದ ಕ್ಷಿಪಣಿ ಕಾರ್ಯಕ್ರಮಕ್ಕೆ ಅಮೆರಿಕಾ ಅಡೆತಡೆಯುಂಟು ಮಾಡಿದ ಪ್ರಯತ್ನಗಳು ಇಂದು ರಹಸ್ಯವಾಗೇನೂ ಉಳಿದಿಲ್ಲ.

ಉಪಸಂಹಾರ

ಶಸ್ತ್ರದಿಂದ ಶಾಂತಿ ಸಾಧ್ಯವಿಲ್ಲ ಎಂಬುದು ಸಾರ್ವಕಾಲಿಕ ಸತ್ಯ ಘೋರಿಯ ಪರೀಕ್ಷೆಯಿಂದಾಗಿ ಭಾರತ ಉಪಖಂಡದಲ್ಲಿ ಪುನಃ ಅಶಾಂತಿ ಕಾಣಿಸಿಕೊಂಡಿದ್ದು ಸತ್ಯ. ಆದರೆ ಇದರಿಂದ ಭಾರತ-ಪಾಕಿಸ್ತಾನಗಳೆರಡಕ್ಕೂ ಏನೇನೂ ಸುಖವಿಲ್ಲ. ಇವೆರಡೂ ಅಭಿವೃದ್ಧಿಶೀಲ ದೇಶಗಳು. ಇವು ಮಾಡುತ್ತಿರುವ ಮಿಲಿಟರಿ ವೆಚ್ಚ ನಿಜಕ್ಕೂ ಅರ್ಥಹೀನ. ಪರಸ್ಪರರು ಕತ್ತಿ ಮಸೆಯುತ್ತ ಕುಳಿತರೆ ಒಂದಿಲ್ಲೊಂದು ದಿನ ಇಬ್ಬರ ವಿನಾಶ ಖಂಡಿತ. ದ್ವೇಷದಿಂದ ದ್ವೇಷವನ್ನು ಅಳಿಸಲಾಗದು. ಕಾರಣ ಭಾರತ-ಪಾಕಿಸ್ತಾನಗಳೆರಡೂ ತಮ್ಮ ಅರ್ಥಹೀನ ವೈರತ್ವವನ್ನು ಮರೆಯಬೇಕು. ಒಂದೇ ಮರದ ಎರಡು ಕವಲುಗಳಾದ ಇವು ಮೈತ್ರಿಯಿಂದಿರುವುದರಲ್ಲೇ ಹೆಚ್ಚು ಸುಖವಿದೆ. ಕಾರಣ ಇವೆರಡೂ ಒಂದು ಒಪ್ಪಂದಕ್ಕೆ ಬಂದು ವೈರತ್ವವನ್ನು ಅಂತ್ಯಗೊಳಿಸುವುದರಲ್ಲೇ ಭಾರತ ಉಪಖಂಡಕ್ಕೆ ಶಾಂತಿಯಿದೆ. ●

ಮುಧೋಳದ ಗದಿಗೆಪ್ಪ



ಚಿಂಚಖಂಡಿ ಮುಧೋಳ ತಾಲೂಕಿಗೆ ಸೇರಿದ ಗ್ರಾಮ. ಇಲ್ಲಿ ಕಿಳ್ಳಿಕೇತ (ಕಟಬ) ಜನಾಂಗದವರೇ ಹೆಚ್ಚು ವಾಸವಾಗಿರುವರು. ಹಿಂದೊಮ್ಮೆ ಇಲ್ಲಿಯ ಯುವಕರು ಅಪರಾಧ ವೃತ್ತಿ ತ್ಯಜಿಸಿ ಸನ್ಮಾರ್ಗಕ್ಕಿಳಿದು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿದ್ದರು. ಈಗ ಅದೇ ಗ್ರಾಮದ ನಾಲ್ವರು ತರುಣರು ತಮ್ಮ ಅಪರಾಧವನ್ನು ಒಪ್ಪಿಕೊಂಡು ಪೊಲೀಸರಿಗೆ ಶರಣಾಗಿದ್ದಾರೆ.

ಈ ತರುಣರ ಮನಃಪರಿವರ್ತನೆಗೆ ಕಾರಣರಾದ ಆ ಗ್ರಾಮದ ಆದರ್ಶ ಶಿಕ್ಷಕ ಜಿ.ಎಂ. ಬಳವಲಮಟ್ಟಿ (ಗದಿಗೆಪ್ಪ ಮಾಸ್ತರ) ಅವರು ಅತ್ಯುತ್ತಮ ಶಿಕ್ಷಕ ಎಂದು ರಾಜ್ಯ ಪ್ರಶಸ್ತಿ ಪಡೆದು ನಿವೃತ್ತಿ ಹೊಂದಿರುವರು.

ಬಹಳ ಹಿಂದಿನ ಮಾತು

ಈ ಗ್ರಾಮದ ಕಿಳ್ಳಿಕೇತರ ಜನಾಂಗದವರು ಕಳ್ಳತನ, ದರೋಡೆ ಮುಂತಾದ ಅಪರಾಧ ವೃತ್ತಿಗೆ ಹೆಸರಾಗಿದ್ದರು. ಇದರಿಂದ ಗ್ರಾಮಕ್ಕೆ ಕೆಟ್ಟ ಹೆಸರು ಶಾಶ್ವತವಾಗಿ ಅಂಟಿಕೊಂಡಿತ್ತು. ಆಗ ಗದಿಗೆಪ್ಪ ಮಾಸ್ತರರು ಯುವಕರನ್ನು ಸೇರಿಸಿ ಸಾಧು ಸತ್ಪುರುಷರ ಚರಿತ್ರೆ ಗಳನ್ನು ಬೋಧಿಸತೊಡಗಿದರು. ಅಪರಾಧ ಪ್ರವೃತ್ತಿ ತೊಡೆದು ಹಾಕುವಲ್ಲಿ ಸಫಲರಾದರು. ಮಹಾತ್ಮ ಗಾಂಧೀಜಿಯ ಹೆಸರಿನಲ್ಲಿ ಯುವಕ ಮಂಡಳವೊಂದನ್ನು ಸ್ಥಾಪಿಸಿದರು. ಯುವಕರು ಸಂಪೂರ್ಣವಾಗಿ ಅಪರಾಧ ವೃತ್ತಿಯನ್ನು ತೊಡೆದರಷ್ಟೇ ಅಲ್ಲ, ಇತರೆ ಅಪರಾಧಗಳನ್ನು ಪೊಲೀಸರಿಗೆ ಹಿಡಿದುಕೊಡುವ ಕಾರ್ಯದಲ್ಲಿ ತೊಡಗಿದರು. ಇನ್ನೂ ಕೆಲ ಯುವಕರು ಒಕ್ಕಲುತನ, ಹೈನುಗಾರಿಕೆ, ಮೀನುಗಾರಿಕೆ, ಗೌಂಡಿ ಕೆಲಸ ಮುಂತಾದ ವೃತ್ತಿಯನ್ನು ಕೈಗೊಂಡರು. ಈ ಯುವಕರು ಕಳ್ಳಭಟ್ಟಿ ತಯಾರಕ ಪ್ರದೇಶಗಳನ್ನು ಅಬಕಾರಿಯವರಿಗೆ ತೋರಿಸಿ ರಾಸಾಯನಿಕ ನಾಶ ಮಾಡುವ ಸುತ್ತು ಕೆಲಸವನ್ನು ಮಾಡಿದರು.

ಆದರೆ ಕಾಲಕ್ರಮೇಣ ಅಬಕಾರಿಯವರಿಗೂ ಕಿಳ್ಳಿಕೇತರ ಯುವಕರಿಗೂ ಮನಸ್ತಾಪ ಹೆಚ್ಚಿತು. ಗುತ್ತಿಗೆದಾರರು ನ್ಯಾಯಯುತವಾಗಿ ಕೊಡಬೇಕಾದ ಸಂಬಳ, ಭತ್ಯ ನೀಡಲಿಲ್ಲ ಎಂದು ಜಗಳ ಹುಟ್ಟಿಕೊಂಡಿತು. ಗ್ರಾಮದ ಆರು ಜನ ಯುವಕರು ಸೇರಿ ಅಬಕಾರಿಯವರಿಗೆ ಕಿರುಕುಳ ಕೊಡಲಾರಂಭಿಸಿದರು. ಪ್ರತಿದಿನ ಸಾರಾಯಿ ಅಂಗಡಿಗಳಿಂದ ಹಣ ದೋಚುವುದು ಸಾಮಾನ್ಯವಾಯಿತು. ಇತ್ತೀಚೆಗೆ ಅಬಕಾರಿಯವರು, ಗುಡೂರು ಮತ್ತು ಅಮೀನಗಡಗಳ ಸಾರಾಯಿ ಅಂಗಡಿಗಳಿಂದ ಹಣ ಸಂಗ್ರಹಿಸಿ ಜೀಪಿನಲ್ಲಿ ಇಟ್ಟಿದ್ದ ಹಣದ ಚೀಲವನ್ನು ಆರು ಜನ ಯುವಕರು ಅಪಹರಿಸಿದರು. ಇಬ್ಬರು ಸಿಕ್ಕಿಬಿದ್ದರು. ನಾಲ್ವರು ಹಣದೊಂದಿಗೆ ಪರಾರಿಯಾದರು. ಈ ಹಣ ಅಪಹರಣದ ದೂರು ಪೊಲೀಸರಿಗೆ ಹೋಯಿತು. ಬಿಜಾಪುರ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ವಿಶೇಷ ಪೊಲೀಸ್ ಪಡೆ ರಚಿಸಲಾಯಿತು. ಈ ಪಡೆ ನೇರವಾಗಿ ಚಿಂಚಖಂಡಿಗೆ ಧಾವಿಸಿತು. ಒಂದೊಮ್ಮೆ ಅಪರಾಧಿಗಳ ಮನಃಪರಿವರ್ತಿಸಿದ ಗದಿಗೆಪ್ಪ ಬಳವಲಮಟ್ಟಿಯವರನ್ನು ಕಂಡು, ಈಗ ಹಣ ಅಪಹರಣ ಪ್ರಕರಣದಲ್ಲಿ ಭಾಗಿಯಾಗಿರುವವರೆನ್ನಲಾದ ಗ್ರಾಮದ ಇನ್ನೂ ನಾಲ್ವರು ಯುವಕರನ್ನು ತಮ್ಮ ವಶಕ್ಕೆ ಒಪ್ಪಿಸಬೇಕೆಂದು ವಿನಂತಿಸಿಕೊಂಡರು.


ಇದಾದ ನಾಲ್ಕು ದಿನಗಳ ಬಳಿಕ ನಾಲ್ವರ ಪೈಕಿ ಮೂವರು ಆರೋಪಿಗಳು ಸಮಾಜದ ಪ್ರಮುಖರಿಗೆ ಶರಣಾದರು. ಎರಡು ದಿನಗಳ ನಂತರ ನಾಲ್ಕನೇ ಆರೋಪಿ ಕೂಡ ಪೊಲೀಸರಿಗೆ ಶರಣಾದನು. ಇಂಥ ಆದರ್ಶ ಗುರುಗಳು ಪ್ರತಿಯೊಂದು ಹಳ್ಳಿಯಲ್ಲಿದ್ದಿದ್ದರೆ....?

○ ಹಂಸಗೀತೆ ಮುಧೋಳ

ಶತಮಾನದ ಕನ್ನಡ ಕಥೆಗಳು

ಯಾವುದೆ ಒಂದು ಸಾಹಿತ್ಯ ಪ್ರಕಾರ ಒಂದು ಶತಮಾನದ ಕಾಲವನ್ನು ದಾಟಿ ಬರುವಾಗ ಸಂಸ್ಕೃತಿಯು ರೂಪಿಸುವ ಸೂಕ್ಷ್ಮ ಸಂವೇದನೆಯ ವಿಕಾಸವನ್ನೂ ಅನುಭವದ ಅರಿವನ್ನೂ ಮಾನವನ ಪಾಡನ್ನೂ ಭಾಷೆಯ ಸಾವಿರ ನಾದ ಬಿಂದು ಪ್ರತಿಮೆ ಸಂಕೇತ ಧ್ವನಿಗಳಲ್ಲಿ ದಾಖಲಿಸುತ್ತಾ ಚಲಿಸುತ್ತದೆ. ಆ ಒಂದು ಶತಮಾನದ ಸ್ಮೃತಿಲೋಕ ಭಾಷೆಯ ಪ್ರತಿಮಾ ಜಗತ್ತಿನಲ್ಲಿ ಧ್ವನಿತವಾಗುತ್ತಿರುತ್ತದೆ. ಆದ್ದರಿಂದ ಯಾರೇ ಆದರೂ ಒಂದು ಶತಮಾನದ ಒಂದು ಸಾಹಿತ್ಯ ಪ್ರಕಾರದ ಅತ್ಯುತ್ತಮ ಎನ್ನಬಹುದಾದ ಬರಹಗಳನ್ನು ಆಯ್ಕೆ ಮಾಡುವಾಗ ಬಹಳ ಗಂಭೀರವಾಗಿರಬೇಕಾಗುತ್ತದೆ. ಶತಮಾನದ ಪ್ರತಿಬಿಂಬವನ್ನು ಕಾಣಲು ಯೋಗ್ಯವಾದ ಒಳಗಣ್ಣನ್ನು ತೆರೆಯಬೇಕಾಗಿರುತ್ತದೆ. ಅತ್ಯಂತ ನಿಷ್ಠೂರವಾಗಿ ಅರ್ಥಪೂರ್ಣವಾಗಿ ಪ್ರಾಮಾಣಿಕವಾಗಿ ಬಹುಮುಖೀ ಸಂವೇದನೆಯ ಲಯಗಳಲ್ಲಿ ಮಹತ್ವದ್ದನ್ನು ಗುರುತಿಸಬೇಕಾಗುತ್ತದೆ. ಕನ್ನಡದ ಸಣ್ಣ ಕತೆಗಳ ಪ್ರಕಾರಕ್ಕೆ ಈಗ ನೂರು ವರ್ಷ ತುಂಬಿದೆ. ಒಂದು ಶತಮಾನದ ಒಡಲಲ್ಲಿ ಹುಟ್ಟಿದ ಕತೆಗಳು ಸಹಜವಾಗಿಯೆ ಅನೇಕ ಆಕಾರಗಳಿಗೆ ಅರ್ಥಗಳಿಗೆ ಹುಡುಕಾಟಗಳಿಗೆ ಕಾರಣವಾಗುತ್ತ ಸೃಜನಶೀಲ ಯಾನದ ಹಸಿವು ದಣಿವು ಆಶಯಗಳನ್ನೆಲ್ಲ ಹೇಳುತ್ತಿರುತ್ತವೆ. ಇಲ್ಲಿ ಕನ್ನಡದ ಸಂದರ್ಭದಲ್ಲಿ ಕತೆಗಳ ವೇಳೆಯಲ್ಲಿ ಬಹುಮುಖೀ ಅನುಭವಗಳು ಬಹುಮುಖೀ ಸಮುದಾಯಗಳು ಬಹುಮುಖೀ ಸೃಜನಶೀಲ ಕಾಯಕದಲ್ಲಿ ತೊಡಗಿರುವಾಗ ಅತ್ಯುತ್ತಮವಾದದ್ದನ್ನು ಆಯ್ಕೆ ಮಾಡುವುದು ಬಹಳ ತೊಡಕಿನ ಸಾಹಸವಾಗುತ್ತದೆ. ಪರೋಕ್ಷವಾಗಿ ಸಾಂಸ್ಕೃತಿಕ ಚರಿತ್ರೆಯ ಆಕರವೂ ಆಗುವ ಈ ಕತೆಗಳನ್ನು ಆಯುವಲ್ಲಿ ನಮಗೆ ಕೇವಲ ಸಾಹಿತ್ಯದ ವಿಮರ್ಶಾಮಾನ ದಂಡಗಳಷ್ಟೇ ಈಗ ಸಾಕಾಗಲಾರವು. ಈ ಶತಮಾನದ ಕೊನೆಯ ದಿನಗಳಲ್ಲಿ ನಿಂತು ಆಲೋಚಿಸುವಾಗ ನಮ್ಮ ಮಾನದಂಡಗಳು ಸೀಮಿತವಾಗಿರಬಾರದು.

ಈ ಹಿನ್ನೆಲೆಯಲ್ಲಿ ದಿವಾಕರ್ ಅವರು ಸಂಪಾದಿಸಿ ಹೊರತಂದಿರುವ 'ಶತಮಾನದ ಕನ್ನಡ ಕಥೆಗಳು' ಸಂಕಲನದ ಬಗ್ಗೆ ನನ್ನ ಅಭಿಪ್ರಾಯಗಳನ್ನು ಚರ್ಚಿಸಲು ಬಯಸುವೆನು. ದಿವಾಕರ್ ಇಂತಹ ಒಂದು ಸಂಕಲನವನ್ನು ರೂಪಿಸಲು ಆಯ್ಕೆ ಮಾಡಿಕೊಂಡ ಮಾನದಂಡಗಳೇ ಬಹಳ



○ ಮೊಗಳ್ಳಿ ಗಣೇಶ್

ಜಾತಿಯ ಹಿನ್ನೆಲೆಯಿಂದ ಈ ಬೃಹತ್ ಸಂಕಲನವನ್ನು ನಾನು ನೋಡಲು ಇಚ್ಚಿಸದಿದ್ದರೂ; ಒಂದು ವಿಚಿತ್ರ ಮಾತ್ರ ಕೆಟ್ಟದಾಗಿ ರಾಚುತ್ತದೆ. ಇಲ್ಲಿರುವ ಎಂಬತ್ತೆರಡು ಕತೆಗಳ ಪೈಕಿ ವೈದಿಕ ಸಮುದಾಯದಿಂದ ಬಂದ ಲೇಖಕರ ಒಟ್ಟು ಕತೆಗಳ ಸಂಖ್ಯೆ ಐವತ್ತಕ್ಕೂ ಮೀರಿ ಹೋಗುತ್ತದೆ. ದಲಿತರೂ ಅಲ್ಪಸಂಖ್ಯಾತರೂ ಶೂದ್ರರೂ ಇದುವರೆಗೆ ಬರೆದ ಕತೆಗಳಲ್ಲಿ ಕೇವಲ ಮುವತ್ತಕ್ಕೂ ಕಡಿಮೆ ಇವೆ.

ಅಸ್ಪಷ್ಟವೂ ಅಸಮರ್ಥವೂ ಹಾಗೂ ಏಕಮುಖ ನವ್ಯ ಧೋರಣೆಯ ಅಂಚಿನಲ್ಲಿ ಅಲೆಯುವಂತಾಗಿವೆ. ಒಂದು ಶತಮಾನದ ಸಂವೇದನೆಯನ್ನು ದಿವಾಕರ್ ಅವರು ನವ್ಯ ಸಾಹಿತ್ಯದ ತಾತ್ವಿಕ ಸಂಬಂಧಗಳ ಮೈತ್ರಿಯಿಂದಲೆ ಲೆಕ್ಕ ಹಾಕಿದ್ದಾರೆ. ದಿವಾಕರ್ ಒಳ್ಳೆಯ ಕತೆಗಾರರಾಗಿದ್ದಾರೆಯೆ ಹೊರತು ಒಳ್ಳೆಯ ಸಾಹಿತ್ಯವನ್ನು ಗುರುತಿಸುವವರಾಗಿಲ್ಲ ಎಂಬ ಅನುಮಾನ ಈ ಸಂಕಲನದಿಂದ ಬರುತ್ತದೆ. ಮುಖ್ಯವಾಗಿ ದಿವಾಕರ್ ಈ ಸಂಕಲನದ ವೇಳೆಯಲ್ಲಿ ಹಾಕಿಕೊಂಡ ಒಟ್ಟು ಪ್ರಶ್ನೆಗಳ ಅಂಶಗಳು ಇಂತಿವೆ. ಒಂದು : ಕತೆಗಳ ಸೂತ್ರ, ಎರಡು ಕಥಾನಕದ ನಿರ್ವಹಣೆ, ಮೂರು ಪಾತ್ರ ಹಾಗು ವಿವರಗಳ ಸಹಜತೆ ಮತ್ತು ಕತೆಗಾರನ ಸೂಕ್ಷ್ಮ ಒಳನೋಟ, ನಾಲ್ಕನೆಯದಾಗಿ ಕತೆಗಳ ಧ್ವನಿಶಕ್ತಿ ಮತ್ತು ಹಿಡಿದಿಡುವ ಶಕ್ತಿ. ಇವಿಷ್ಟು ಮುಖ್ಯವಾಗಿ ಆಯ್ಕೆಯ ಅರ್ಹತೆ ಎಂಬಂತೆ ಪ್ರಸ್ತಾವನೆಯಲ್ಲಿ ಬರೆದುಕೊಂಡಿದ್ದಾರೆ.

ಒಂದು ಶತಮಾನದ ಕಥಾ ಲೋಕದ ವಿಶಿಷ್ಟ ಧ್ವನಿಗಳನ್ನು ಗುರುತಿಸಲು ಇವಿಷ್ಟೆ ಮುಖ್ಯ ಎಂದು ವಾದಿಸಿದರೆ ಎಂತಹ ಅಪಹಾಸ್ಯವಾಗುತ್ತದೆಂದು ವಿವರಿಸಬೇಕಾದ್ದಿಲ್ಲವೇನೊ. ''ಉನ್ನತ ಸಾಹಿತ್ಯ ಮೌಲ್ಯ''ವನ್ನು ತೋರುವ ಕತೆಗಳಿಗೆ ಇಲ್ಲಿ ಸ್ಥಾನ ಕೊಡಲಾಗಿದೆ ಎನ್ನುವ ದಿವಾಕರ್ ಅವರ ಮಾತು ಕೂಡ ಅತ್ಯಂತ ಅಸಂಬದ್ಧವಾದದ್ದಾಗಿದೆ. ಕತೆಗಳ ಪ್ರಾಣವನ್ನೇ ಅರಿಯದಂತೆ ಇಲ್ಲಿ ಸಂಕಲಿಸಿದ ಕತೆಗಳೆಲ್ಲಕ್ಕೂ ಒಂದೊಂದು ವಾಕ್ಯದ ವಿಮರ್ಶೆ ಬರೆಯುತ್ತಾ ಹೋಗಿರುವುದು ಭಯಹುಟ್ಟಿಸುವಂತಿದೆ. ಇಲ್ಲಿರುವ ಕತೆಗಳಿಗೆ ಅವರೇ ಕೊಟ್ಟಿರುವ ಏಕವಾಕ್ಯ ನಿರ್ಣಯಗಳನ್ನೆ ಪಟ್ಟಿ ಮಾಡಿ ನೋಡಿದರೆ ದಿವಾಕರ್ ಎಷ್ಟೊಂದು ಸಂಕುಚಿತ ಅಭಿರುಚಿಯಿಂದ ಕನ್ನಡದ ಕಥಾ ಲೋಕದಲ್ಲಿ ಅಲೆದಿದ್ದಾರೆ ಎಂಬುದು ಗೊತ್ತಾಗುತ್ತದೆ. ಜಾತಿಯ ಹಿನ್ನೆಲೆಯಿಂದ ಈ ಬೃಹತ್ ಸಂಕಲನವನ್ನು ನಾನು ನೋಡಲು ಇಚ್ಚಿಸದಿದ್ದರೂ; ಒಂದು ವಿಚಿತ್ರ ಮಾತ್ರ ಕೆಟ್ಟದಾಗಿ ರಾಚುತ್ತದೆ. ಇಲ್ಲಿರುವ ಎಂಬತ್ತೆರಡು ಕತೆಗಳ ಪೈಕಿ ವೈದಿಕ ಸಮುದಾಯದಿಂದ ಬಂದ ಲೇಖಕರ ಒಟ್ಟು ಕತೆಗಳ ಸಂಖ್ಯೆ ಐವತ್ತಕ್ಕೂ ಮೀರಿ ಹೋಗುತ್ತದೆ ದಲಿತರೂ ಅಲ್ಪಸಂಖ್ಯಾತರೂ ಶೂದ್ರರೂ ಇದುವರೆಗೆ ಬರೆದ ಕತೆಗಳಲ್ಲಿ ಕೇವಲ ಮುವತ್ತಕ್ಕೂ ಕಡಿಮೆ ಇವೆ. ಅಂದರೆ ವೈದಿಕ ಸಮುದಾಯದಿಂದ ಬಂದವರ

ಶತಮಾನದ ಸಣ್ಣ ಕತೆಗಳು

ಸಂ. : **ಎಸ್. ದಿವಾಕರ್**
ಪ್ರ : ಪ್ರಿಸಂ ಬುಕ್ಸ್ ಪ್ರೈ ಲಿ., ೫೩/೨, ಬುಲ್‌ಟೆಂಪಲ್ ರಸ್ತೆ, ಬಸವನಗುಡಿ, ಬೆಂಗಳೂರು - ೫೬೦ ೦೧೯. ಮುದ್ರಣ: ೧೯೯೭, ಬೆಲೆ: ರೂ. ೪೦೦/-



ಅನುಭವ ಜಗತ್ತಿನ ಅಭಿವ್ಯಕ್ತಿಯ ಅತ್ಯುತ್ತಮ ಮಾದರಿಗಳನ್ನು ಕೊಡುವಾಗ ಎಷ್ಟು ಕತೆಗಳನ್ನು ಮಾದರಿಯಾಗಿ ಕೊಡಬಹುದಿತ್ತು ಎಂಬುದು ನನ್ನ ಪ್ರಶ್ನೆ. ಹಾಗೆಯೇ ಅಂಥವರ ಕತೆಗಳ ಒಳಜಗತ್ತಿನ ಆಳದ ಒಳನೋಟ ಆಶಯ ಹಾಗೂ ಹುಡುಕಾಟ ಮತ್ತು ಮಾನವೀಯ ದೃಷ್ಟಿಯ ಹಂದರ ಎಂತಹದಿತ್ತು ಎಂಬುದನ್ನು ದಿವಾಕರ್ ಪರಿಶೀಲಿಸ ಬೇಕಾಗಿತ್ತು. ವೈದಿಕ ಮೂಲದ ಲೇಖಕರು ರೂಪಿಸಿರುವ ಗದ್ಯದ ಒಟ್ಟು ಅಭಿವ್ಯಕ್ತಿಯ ಶಕ್ತಿಯನ್ನೇ ಅನುಮಾನಿಸಬೇಕಾಗಿರುವ ಅಥವಾ ಮರುಪರಿಶೀಲಿಸಬೇಕಾದ ಹೊತ್ತಿನಲ್ಲಿ ದಿವಾಕರ್ ಈ ಬಗ್ಗೆ ಮೌನ ತಾಳಿದ್ದಾರೊ ಅಥವಾ ಇನ್ನೂ ಈ ಬಗ್ಗೆ ಅವರಿಗೆ ಏನೂ ಅನಿಸಿಯೇ ಇಲ್ಲವೋ ಏನೋ. ಅಂದರೆ ಅಂತಹ ಲೇಖಕರ ಗದ್ಯದ ತಂತ್ರ

> ಲಂಕೇಶರ 'ಸಹಪಾಠಿ' ಯಂತಹ ಕತೆಯ ಮುಂದೆ ದಿವಾಕರ್ ಅನೇಕ ಅಪ್ರಬುದ್ಧರ ಅಪದ್ಧ ಕತೆಗಳನ್ನೆಲ್ಲ ಹೊಂದಿಸುವುದೆಂದರೆ ನಿಜವಾಗಿಯೂ ಶ್ರೇಷ್ಠ ಕಥಾ ಮಾದರಿಗಳಿಗೆ ಅವಮಾನ ಮಾಡಿದಂತಾಗುತ್ತದೆ.

ನಿರೂಪಣೆ ಶೈಲಿ ರೂಪ ರಚನೆ ಆಕೃತಿ ಧ್ವನಿ ಹಾಗೂ ಆಶಯಗಳನ್ನೂ ಮುಖ್ಯವಾಗಿ ಅನುಭವದ ವಿವರಗಳನ್ನೂ ಅವರೇ ರೂಪಿಸಿರುವ ಗದ್ಯದಲ್ಲಿ ಓದುವಾಗ ಅಥವಾ ಅಂಥವನ್ನು ಶತಮಾನದ ಅಂಚಿನಲ್ಲಿ ಸಂಕಲಿಸುವಾಗ ಪ್ರಾಮಾಣಿಕವಾಗಿರ ಬೇಕಾಗುತ್ತದೆ. ಕನ್ನಡದಲ್ಲಿ ಅಂಥವರೇ ಮೊದಲು ಹಾಗು ಹೆಚ್ಚು ಸಂಖ್ಯೆಯಲ್ಲಿ ಕತೆ ಬರೆದರೆಂದು ಹಾಗೆಯೆ ಅವರೇ ಹೆಚ್ಚು ಅರ್ಥಪೂರ್ಣವಾದ ಕತೆಗಳನ್ನು ರೂಪಿಸಿದ್ದಾರೆ ಎಂದೇನಾದರೂ ದಿವಾಕರ್ ನಂಬಿದ್ದರೆ ಅದು ಅಪರಾಧವೇ ಸರಿ. ಇಂತಹ ಒಂದು ಸಣ್ಣ ಸೂಚನೆ ಅವರ ಆಯ್ಕೆಯಲ್ಲೆ ಅಭಿವ್ಯಕ್ತವಾದಂತಿದೆ. ಮೂಲತಃ ಒಂದು ಶತಮಾನದ ಕತೆಗಳನ್ನು ದಾಖಲಿಸುತ್ತಿರುವಾಗ ಅಲ್ಲಿ ಕೇವಲ ಕಥನ ಕಲೆ ಮಾತ್ರ ಇದ್ದರೆ ಅದು ಸಾಹಿತ್ಯ ಚರಿತ್ರೆಯನ್ನು ವಿರೂಪದಿಂದ ರೂಪಿಸುವ ಅಥವಾ ಸುಂದರವಾದದ್ದೆಂದು ಸುಳ್ಳು ದಾಖಲಾತಿ ಮಾಡುವ ಕಾಯಕವಾಗುತ್ತದೆ. ಕೃತಿಯ ಸಂಸ್ಕೃತಿಯನ್ನೇ ದಿವಾಕರ್ ಸ್ಪಷ್ಟಪಡಿಸಿಕೊಂಡಂತಿಲ್ಲ. ಅವರಿಗೆ ಪಶ್ಚಿಮದ ಓದಿನ ಅನುಭವ ಗಾಢವಾಗಿದೆಯಾದರೂ ತನ್ನ ನೆಲದ ಸಂವೇದನೆಯ ಅತ್ಯುತ್ತಮ ಧ್ವನಿಗಳನ್ನು ರಚನೆಗಳನ್ನು ಗುರುತಿಸಿಕೊಳ್ಳಲು ನಿಸ್ಸಂದೇಹವಾಗಿ ಅನೇಕ ತೊಡಕುಗಳಿದ್ದಂತಿವೆ. ನವ್ಯ ಕತೆಗಾರರ ಗರಡಿಯ ಕೊನೆಯ ಮೆಟ್ಟಲಲ್ಲಿದ್ದು ಬಂದ ಕತೆಗಾರ ದಿವಾಕರ್ ಅವರು ಸ್ವತಃ ನವ್ಯ ಕತೆಗಾರರ ಶ್ರೇಷ್ಠ ಕತೆಗಳನ್ನು ಆಯ್ಕೆ ಮಾಡುವುದಕ್ಕೂ ಸಾಧ್ಯವಾಗಿಲ್ಲ. ಅನಂತಮೂರ್ತಿಯವರ 'ಎಂದೆಂದೂ ಮುಗಿಯದ ಕತೆ', 'ನವಿಲುಗಳು' ಅಥವಾ 'ಮೌನಿ' ಇವುಗಳಲ್ಲಿ ಯಾವುದಾದರೂ ಒಂದನ್ನು ಕೊಟ್ಟಿದ್ದರೂ ಅನಂತಮೂರ್ತಿಯವರ ಒಟ್ಟು ಕಥನ ಶಕ್ತಿಗೆ ಗೌರವ ತಂದು ಕೊಡಬಹುದಿತ್ತು. ಹಾಗೆಯೆ ಚಿತ್ತಾಲರ 'ಕತೆಯಾದಳು ಹುಡುಗಿ' ಅಥವಾ 'ಬೇನ್ಯಾ'ಗಳಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳಬಹುದಿತ್ತು. ನಮ್ಮ ಕನ್ನಡದ ಪ್ರಮುಖ ಕತೆಗಾರರೆಲ್ಲರ ಒಂದೊಂದು ಸಾಧಾರಣ ಕತೆಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಒಟ್ಟು ನಮ್ಮ ಮಹತ್ವದ ಲೇಖಕರನ್ನು ಪ್ರತಿನಿಧಿಸುವ ಕತೆಗಳೇ ಇಲ್ಲಿ ಮರೆಯಾಗಿ ಹೋಗಿವೆ. ದಿವಾಕರ್ ಅವರಿಗೆ ಯಾವುದು ಅತ್ಯುತ್ತಮ ಕತೆ ಎಂಬುದರ ಬಗ್ಗೆಯೇ ಸ್ಪಷ್ಟವಿದ್ದಂತಿಲ್ಲ. ಲಂಕೇಶರ 'ಸಹಪಾಠಿ' ಯಂತಹ ಕತೆಯ ಮುಂದೆ ದಿವಾಕರ್ ಅನೇಕ ಅಪ್ರಬುದ್ಧರ ಅಪದ್ಧ ಕತೆಗಳನ್ನೆಲ್ಲ ಹೊಂದಿಸುವುದೆಂದರೆ ನಿಜವಾಗಿಯೂ ಶ್ರೇಷ್ಠ ಕಥಾ ಮಾದರಿಗಳಿಗೆ ಅವಮಾನ ಮಾಡಿದಂತಾಗುತ್ತದೆ. ಈ ಸಂಕಲನದಲ್ಲಿನ ಅನೇಕರ ಕತೆಗಳು ಯಾವ ರೀತಿಯಲ್ಲಿ ಶತಮಾನದ ಸಂವೇದನೆಯನ್ನು ಪ್ರತಿನಿಧಿಸುತ್ತವೆ ಎಂಬುದು ನನಗಂತು ಸ್ಪಷ್ಟವಾಗಿಲ್ಲ. ಕನ್ನಡ ಕಥಾಲೋಕದಲ್ಲಿ ಚಾಲ್ತಿಯಲ್ಲಿರುವವರೆಲ್ಲರ ಒಂದೊಂದು ಕತೆಯನ್ನು ಜೋಡಿಸಿ ಕೊಟ್ಟಂತಿರುವ ಈ ಸಂಕಲನ ನಿಜವಾಗಿಯೂ ಒಂದು ನಷ್ಟದ ಬಾಬತ್ತಾಗಿದೆ ಎನ್ನದೆ ವಿಧಿ ಇಲ್ಲ. ಸೂಕ್ಷ್ಮತೆ ಇದ್ದ ಯಾರೇ ಆದರೂ ಇಂತಹ ತಪ್ಪನ್ನು ಆಯ್ಕೆಯಲ್ಲಿ ಮಾಡುತ್ತಿರಲಿಲ್ಲ.

ದಿವಾಕರ್‌ಗೆ ಒಂದು ಶತಮಾನದ ಒಟ್ಟು ಕತೆಗಳನ್ನು ಅಳೆಯುವಾಗ ಪುಟ ಮಿತಿಗಳಿಂದಾಗಿ ಕೆಲವರ ಕತೆಗಳನ್ನು ಕೈಬಿಡಲಾಗಿದೆ ಎಂದು ಸಬೂಬು ಹೇಳಿರುವುದು ಅತ್ಯಂತ ಹಾಸ್ಯಾಸ್ಪದ ಸಂಗತಿಯಾಗಿರುವುದಷ್ಟೇ ಅಲ್ಲದೆ ಅವರ ಪ್ರಾಮಾಣಿಕತೆಯನ್ನು ಸ್ಪಷ್ಟವಾಗಿ ಸಾರುತ್ತಿದೆ. ಪರಂಜ್ಯೋತಿ ಎಂಬ ಕೆಟ್ಟ ಕತೆಗಾರರ ಮುಂದೆ ಕಾಳೇಗೌಡ ನಾಗವಾರ, ಬರಗೂರು ರಾಮಚಂದ್ರಪ್ಪ, ಡಾ. ಗಿರಿಜಮ್ಮ, ಪ್ರೊ. ಸುಧಾಕರ್, ಗೀತಾ ನಾಗಭೂಷಣ, ಕೇಶವರೆಡ್ಡಿ ಹಂದ್ರಾಳ, ಚನ್ನಣ್ಣ ವಾಲೀಕಾರ, ಜಿ.ಪಿ. ಬಸವರಾಜ್, ಕೃಷ್ಣಮೂರ್ತಿ ಹನೂರು, ಬಾನು ಮುಷ್ತಾಕ್; ರೇಖಾರಾಣಿ, ಎಂ.ಎಸ್.ವೇದಾ,

> ತಮ್ಮ ಶ್ರೀಮತಿ ಜಯಶ್ರೀ ದಿವಾಕರ್ ಅವರ ಸಾಧಾರಣ ಕತೆಯನ್ನು ದಿವಾಕರ್ ಆಯ್ಕೆ ಮಾಡುವುದಾದರೆ ಮತ್ತು ಅವರ ಕತೆಗೆ ೬೯೦ ಪುಟಗಳಷ್ಟು ಬೃಹತ್ ಸಂಕಲನದಲ್ಲಿ 'ಸ್ಥಾನ' ದಕ್ಕುವುದಾದರೆ ಇಲ್ಲಿ ಉಳಿದವರ ಕತೆಗಳಿಗೆ ಹೇಗೆ ಪುಟಗಳು ಸಿಗದೇ ಹೋದವು ಎಂಬುದು ಚೋದ್ಯವಾಗಿದೆ.

ಕರೀಗೌಡ ಬೀಚನಹಳ್ಳಿ ಇಂತಹ ಅನೇಕ ಕತೆಗಾರರು ಕಣ್ಣಿಗೆ ಕಾಣುವುದೇ ಇಲ್ಲ. ಜನಪ್ರಿಯ ಕತೆಗಾರರನ್ನಂತೂ ದಿವಾಕರ್ ಕ್ರೂರವಾಗಿ ತಿರಸ್ಕರಿಸಿರುವುದು ವಿಪರ್ಯಾಸವಾಗಿದೆ. ತಮ್ಮ ಶ್ರೀಮತಿ ಜಯಶ್ರೀ ದಿವಾಕರ್ ಅವರ ಸಾಧಾರಣ ಕತೆಯನ್ನು ದಿವಾಕರ್ ಆಯ್ಕೆ ಮಾಡುವುದಾದರೆ ಮತ್ತು ಅವರ ಕತೆಗೆ ೬೮೦ ಪುಟಗಳಷ್ಟು ಬೃಹತ್ ಸಂಕಲನದಲ್ಲಿ 'ಸ್ಥಾನ' ದಕ್ಕುವುದಾದರೆ ಇಲ್ಲಿ ಉಳಿದವರ ಕತೆಗಳಿಗೆ ಹೇಗೆ ಪುಟಗಳು ಸಿಗದೇ ಹೋದವು ಎಂಬುದು ಚೋದ್ಯವಾಗಿದೆ. ಅಂದರೆ ಅವರ ಆಯ್ಕೆಯ ಮಾನದಂಡಗಳ ಹಿಂದೆ ಸಾಹಿತ್ಯೇತರ ಕಾರಣಗಳೂ ಗಾಢವಾಗಿರುವಂತಿದೆ. ಜೊತೆಗೆ ಒಂದು ಶತಮಾನದ ಹಂತಗಳಲ್ಲಿ ಕನ್ನಡದ ಕತೆಗಳಲ್ಲಿ ಅನೇಕ ಪ್ರಯೋಗಗಳಾಗಿದ್ದೂ ಅದರಲ್ಲಿ ನೀಳ್ಗತೆ, ಮಿನಿಕತೆ, ಪತ್ತೆದ್ದಾರಿ ಕತೆ, ಹಾಸ್ಯ ವಿಡಂಬನೆ ಬೆರೆತ ಕತೆಗಳು ಮಕ್ಕಳ ಕತೆಗಳು ಸಾಹಸದ ಕತೆಗಳು ಹಾಗು ವೈಜ್ಞಾನಿಕ ಕತೆಗಳು, ಜನಪ್ರಿಯ ಕತೆಗಳು ಹೀಗೆ ನೂರಾರು ರೀತಿಯಲ್ಲಿ ಬೆಳೆದುಕೊಂಡಿವೆ. ಇಂತಹ ಕತೆಗಳಲ್ಲಿ ಇರುವ ಅತ್ಯುತ್ತಮವಾದ ಒಂದೊಂದು ಮಾದರಿಯನ್ನು ಕೊಡುವ ಸರಳ ತಿಳುವಳಿಕೆಗೂ ದಿವಾಕರ್ ಮನಸ್ಸು ಕೊಟ್ಟಿಲ್ಲ. ಈ ಸಂಕಲನದಲ್ಲಿರುವ ಒಟ್ಟು ಕತೆಗಳ ಭಾವನಾ ಲೋಕದಲ್ಲಿ ಹೆಚ್ಚು ವೈವಿಧ್ಯವೇ ಇಲ್ಲದೆ ಬಹುಪಾಲು ಎಲ್ಲವೂ ಒಂದೇ ನಾದದಲ್ಲಿ ಕೆಲವೊಂದು ಧ್ವನಿಗಳಲ್ಲಿ ವಿವರಗಳಲ್ಲಿ ಮಾತ್ರ ಭಿನ್ನವಾದಂತಿವೆ. ಮೂಲತಃ ದಿವಾಕರ್ ಅವರ ಮಾನದಂಡಗಳೇ ಸರಿಯಿಲ್ಲ. ನವ್ಯದ ಜಾಡಿನಲ್ಲಿ ತಡಕಾಡಿ ಬಂದ ದಿವಾಕರ್ ಅವರ ಒಟ್ಟು ಕಥಾ ಜಗತ್ತಿನ ಧೋರಣೆಯ ವಿಸ್ತಾರವಾಗಿಲ್ಲ.

ಹೊಸ ತಲೆಮಾರಿನ ಕತೆಗಾರ ಕತೆಗಳ ಆಯ್ಕೆಯಲ್ಲೂ ದಿವಾಕರ್ ತಾಳ್ಮೆಯಿಂದ ಸೂಕ್ಷ್ಮತೆಯಿಂದ ನೋಡಿಲ್ಲ. ಚಾಲ್ತಿಗೆ ಬಂದವರ ಕತೆಗಳೇ ಅವರ ಗಮನಕ್ಕೆ ಬಂದಂತಿದ್ದು ಅನೇಕ ಹೊಸಬರ ಕತೆಗಳನ್ನು ಭಾಗಶಃ ಅವರು ಓದಿಯೇ ಇಲ್ಲವೇನೋ. ಒಟ್ಟು ಈ ಸಂಕಲನದಲ್ಲಿ ಕನಿಷ್ಠ ಎಂದರೂ ಇಪ್ಪತ್ತೈದು ಮಂದಿಯ ಕತೆಗಳನ್ನು ಸೇರಿಸಬೇಕಾದ ಅಗತ್ಯವೇ ಇರಲಿಲ್ಲ. ಒಂದು ಯುಗದ ಕತೆಗಳೆಂದು ಇವನ್ನು ಅತ್ಯುತ್ತಮ ಎಂದು ಹೊರಗಿನವರಿಗೆ ತೋರಿಸುವುದಕ್ಕೆ ದಿವಾಕರ್‌ಗೆ ಅಂಜಿಕೆ ಅವಮಾನ ಆಗದಿದ್ದರೂ ನನಗಂತು ಇಂತಹ ಒಂದು ಸಂಕಲನವನ್ನು ಕನ್ನಡದ ಶತಮಾನದ ಶ್ರೇಷ್ಠ ಕತೆಗಳೆಂದು ಕೊಡುವುದಕ್ಕೆ ಸಾಧ್ಯವೇ ಇಲ್ಲ. ನವ್ಯ ಸಾಹಿತ್ಯದ ಕೊನೆಯ ಘಟ್ಟದಲ್ಲಿ ಅಂದರೆ ಆಗತಾನೆ ದಲಿತ ಬಂಡಾಯ ಮೊಳಕೆಯೊಡೆವ ವೇಳೆಯಲ್ಲಿ ಅತ್ತ ನವ್ಯಕ್ಕೂ ಹೋಗದೆ ಇತ್ತ ದಲಿತ ಬಂಡಾಯಕ್ಕೂ ಸೇರದೆ ಒಂಟಿಯಾಗಿ ಅಲ್ಲಲ್ಲಿದ್ದು ಕೊಂಡು ಬರೆದ ಕತೆಗಾರರ ಕತೆಗಳು ಕೂಡ ಬಹಳ ಮುಖ್ಯವಾಗುತ್ತವೆ. ಸ್ವತಃ ದಿವಾಕರರೇ ಇಂತವರ ಗುಂಪಿನಿಂದ ಬಂದವರಾಗಿದ್ದು ಅವರಿಗೆ ಮರೆಯಲ್ಲಿದ್ದ ಕತೆಗಾರರ ಕತೆಗಳು ಗೊತ್ತಿದ್ದರೂ

ದಿವಾಕರ್ ತನ್ನ ಅರಿವಿನ ಮಾನದಂಡಗಳಿಂದಲೇ ಸಿಕ್ಕಿಬಿದ್ದು ನವ್ಯದ ಕುದುರೆಯಾಗಿ ಓಡಾಡಿ ಕಣ್ಣಿಗೆ ಕಂಡಷ್ಟು ಕತೆಗಳನ್ನು ಆಯ್ಕೆ ಮಾಡಿದ್ದಾರೆ. ಪಶ್ಚಿಮದ ಸಾಹಿತ್ಯದಲ್ಲಿ ಇಂತಹ ಸಂಕಲನಗಳನ್ನು ತರುವುದು ಹಳೆಯ ಫ್ಯಾಷನ್.

ಉಪೇಕ್ಷಿಸಿದ್ದಾರೆ.

ಮುಖ್ಯವಾಗಿ ಇಂತಹ ಸಂಕಲನಗಳನ್ನು ರೂಪಿಸುವಾಗ ಇವತ್ತು ನಾವು ಅನಿವಾರ್ಯವಾಗಿ ಪರಿಧಿಗೆ ಸರಿಸಲ್ಪಟ್ಟ ಮತ್ತು ಸ್ವತಃ ತಾವೇ ಪರಿಧಿಗೆ ಸರಿದುಕೊಂಡ ಸಮುದಾಯಗಳ ಅನುಭವದ ಸಾಂಸ್ಕೃತಿಕ ಜಗತ್ತಿನ ಬಹುರೂಪಿ ಬಹು ಸಂವೇದನೆಗಳನ್ನು ಪ್ರಧಾನ ಸಮುದಾಯಗಳ ಧ್ವನಿಗಳಿಗೆ ಕೊಡುವಷ್ಟೇ ಮಹತ್ವದ ಹಿನ್ನೆಲೆಯಲ್ಲಿ ಗುರುತಿಸಬೇಕಾಗುತ್ತದೆ. ಭಾರತದಂತಹ ಬಹುತ್ವ ಸಂಸ್ಕೃತಿಯ ಕಥನ ಲೋಕ ಅಗಾಧವಾದ ಜೀವನ ಮರ್ಮಗಳನ್ನು ಬಚ್ಚಿಟ್ಟುಕೊಂಡಿರುತ್ತದೆ. ಅದು ಕೇವಲ ಒಂದೇ ಉಪಭಾಷೆಯಲ್ಲಿ ಒಂದೇ ರೀತಿ ಅಭಿವ್ಯಕ್ತವಾಗುವುದಿಲ್ಲ. ಒಂದೇ ಉಪಭಾಷೆ ಭಿನ್ನ ಭಿನ್ನ ಸಮುದಾಯಗಳ ವ್ಯಕ್ತಿಗಳಿಗೆ ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಮುಖಾಮುಖಿಗಳಲ್ಲಿ ವಿವಿಧ ವ್ಯವಸ್ಥೆಗಳಲ್ಲಿ ವಿವಿದಾಕೃತಿಗಳಲ್ಲಿ ವಿಕಾಸ ವಾಗುತ್ತಲೆ ಇರುತ್ತದೆ. ಆದ್ದರಿಂದಲೆ ಒಂದು ಕೃತಿಯ ಸಂಸ್ಕೃತಿಯನ್ನು ನಿಚ್ಚಳವಾಗಿ ಅರಿಯಲು ಸಂಗ್ರಹಕಾರ ಮೊದಲು ತನ್ನ ಮಾನದಂಡಗಳ ಮಿತಿಯಿಂದ ತನ್ನನ್ನು ಬಿಡುಗಡೆ ಮಾಡಿಕೊಳ್ಳ ಬೇಕು. ದಿವಾಕರ್ ತನ್ನ ಅರಿವಿನ ಮಾನದಂಡ ಗಳಿಂದಲೇ ಸಿಕ್ಕಿಬಿದ್ದು ನವ್ಯದ ಕುದುರೆಯಾಗಿ ಓಡಾಡಿ ಕಣ್ಣಿಗೆ ಕಂಡಷ್ಟು ಕತೆಗಳನ್ನು ಆಯ್ಕೆ ಮಾಡಿದ್ದಾರೆ. ಪಶ್ಚಿಮದ ಸಾಹಿತ್ಯದಲ್ಲಿ ಇಂತಹ ಸಂಕಲನಗಳನ್ನು ತರುವುದು ಹಳೆಯ ಫ್ಯಾಷನ್. ದಿವಾಕರ್ ಇಲ್ಲಿ ಅದನ್ನು ಹೊಸದಾಗಿ ಮಾಡಲು ಹೊರಟಿದ್ದಾರೆ. ವಿಷಾದ ಎಂದರೆ ಇಂತಲ್ಲಿ ಅತ್ಯಂತ ಗಾಢವೂ ಅರ್ಥಪೂರ್ಣವೂ ಮಾನವೀಯವೂ ಆದಂತಹ ಬರಹಗಳು ಸಂಗ್ರಹಕಾರರ ಗುಂಡೇಟಿಗೆ ಈಡಾಗಿ ಮುರುಟಿಹೋಗುವ ಸಾಧ್ಯತೆಯೂ ಇರುತ್ತದೆ. ಹಾಗೆಯೆ ಇಂತಹ ಸಂಕಲನಗಳು ಓದುಗ ಕೇಂದ್ರಿತವಾಗದೆ ಆ ಸಂಗ್ರಹಕಾರನ ಮುಖವಾಣಿಯಾಗುವ ಸಾಧ್ಯತೆಯೂ ಇರುತ್ತದೆ. ನಿರ್ಜಾತೀಕರಣದಿಂದ ನಿರ್ವರ್ಗೀಕರಣದಿಂದ ರೂಪಿಸಬೇಕಾದ ಇಂತಹ ಸಂಕಲನದಲ್ಲಿ ಸಂಗ್ರಹಕಾರ ಎಚ್ಚರಿಕೆ ವಹಿಸದೆ ಇದ್ದರೆ ಇಂತಹ ಇಕ್ಕಟ್ಟುಗಳು ತಂತಾನೆ ಉಂಟಾಗುತ್ತವೆ.


ದಿವಾಕರ್ ಅವರ ಪ್ರಯತ್ನವನ್ನು ಹೊಗಳ ಬಹುದಾದರೂ ಆ ಪ್ರಯತ್ನದ ಕ್ರಿಯೆ ಯಾವ ಪರಿಣಾಮವನ್ನು ಉಂಟುಮಾಡುತ್ತದೆ ಎನ್ನುವಾಗ ಒಟ್ಟು ಅವರ ಆಯ್ಕೆಯ ಬಗ್ಗೆಯೆ ಅನೇಕ ತಕರಾರುಗಳು ಏಳುತ್ತವೆ. ನಮ್ಮ ಆಯ್ಕೆಯು ಕಣ್ಣನಲ್ಲಿ ಸದೂರವಿರಬೇಕು. ಸಂವೇದನೆಯ ಗ್ರಹಿಕೆಯಲ್ಲಿ ಒಟ್ಟು ಆ ಕಾಲದ ಪ್ರಜ್ಞೆಯಿರಬೇಕು. ಆನೆಯ ಶಕ್ತಿಯ ಬಗ್ಗೆ ನಮಗೆ ಅನುಮಾನ ವಿಲ್ಲದಿದ್ದರೂ ಅದರ ಕಣ್ಣಿನಿಂದಲೇ ಎಲ್ಲವನ್ನೂ ಸ್ಪಷ್ಟವಾಗಿ ಕಾಣಲು ಸಾಧ್ಯ ಎಂಬ ಅರಿವಿನ ಅಭಿರುಚಿಯ ಅಹಂಕಾರ ಇರಬಾರದು. ಆನೆಯ ಕಣ್ಣಲ್ಲಿ ನಾವೆಲ್ಲ ತೃಣವಾಗಿ ಕಾಣಬಹುದಾದರೂ ಅದರ ಕಣ್ಣಳತೆ ಹಾಗೂ ದೃಷ್ಟಿಯ ಸಂವೇದನೆಯ ಗ್ರಹಿಕೆಯ ದೂರ ಮತ್ತು ಗಾತ್ರ ಹಾಗೂ ಅರ್ಥ ಸರಿ ಇಲ್ಲದಿರಬಹುದು. ತನ್ನ ಕಣ್ಣಲ್ಲಿ ಈ ಚಿಟ್ಟೆ ಎಷ್ಟೊಂದು ಕ್ಷುಲ್ಲಕವಾಗಿದೆ ಎನಿಸಬಹುದು. ಅದು ಆನೆಗೆ ಸರಿ ಮತ್ತು ಸತ್ಯ. ಆದರೆ ಅದೇ ಚಿಟ್ಟೆಯ ಕಣ್ಣಲ್ಲಿ ಅದೇ ಆನೆ ಅತ್ಯಂತ ಅಸಹಾಯಕವಾದ ಕೃಶವಾದ ತೃಣವಾದ ಜೀವಿ ಯಂತೆ ಕಂಡಿದ್ದರೆ ಆಗ ನಮ್ಮ ಮಾನದಂಡಗಳು ಹೇಗಾಗುತ್ತವೆ? ಇದೇ ಹೋಲಿಕೆಯನ್ನು ನಾನು ಈ ಶತಮಾನದ ಅನೇಕ ನೋಟಗಳ ಸಂದರ್ಭಕ್ಕೆ ಹೊಂದಿಸುವಂತೆಯೇ ದಿವಾಕರ್ ಅವರ ಸಂಕಲನಕ್ಕೂ ಹೊಂದಿಸಿ ಒಟ್ಟು ನಮ್ಮ ಮಾನದಂಡಗಳನ್ನು ನೋಡಿಕೊಳ್ಳಬೇಕೆಂದು ಬಯಸುವೆನು. ದಿವಾಕರ್ ಅವರು ರೂಪಿಸಿರುವ ಈ ಶತಮಾನದ ಸಣ್ಣ ಕಥೆಗಳ ಸಂಕಲನ ಕನ್ನಡದ ಅತ್ಯುತ್ತಮ ಕತೆಗಳನ್ನು ಒಂದೆಡೆ ಸೇರಿಸುತ್ತಲೇ ಅವುಗಳ ಜೊತೆಯಲ್ಲೆ ಅತ್ಯಂತ ಕೆಟ್ಟ ಕತೆಗಳನ್ನು ಕೂಡಿಸಿ ಒಟ್ಟು ಸಂಕಲನದ ಘನತೆಯನ್ನು ತಾವೇ ಕೆಡಿಸಿದ್ದಾರೆ.

[ಕೃಪೆ : ಸಂಕ್ರಮಣ, ಮಾರ್ಚ್ ೧೯೯೮]

ಬಿಜಾಪುರ :

ನೀರು ಬಿಟ್ಟು ಬೇರೆ ಏನನ್ನಾದರೂ ಕೇಳಿ!


ಡಾ. ವಸಂತ ಅ. ಕುಲಕರ್ಣಿ



ಬಿಜಾಪುರದ ಪೇಟೆಯುದ್ದಕ್ಕೂ ನೀವು ಅಲೆದಾಡುವಾಗ-ತರತರಹದ ದ್ರಾಕ್ಷಿ ಗೊಂಚಲುಗಳು, ರಕ್ತರಂಜಿತ ಪಂಕ್ತಿಗಳುಳ್ಳ ದಾಳಿಂಬೆಗಳು, ನೈವಾನ್ ಜಾಲದಲ್ಲಿ ಇಳಿಬಿಟ್ಟ ಬೋರೆ ಹಣ್ಣುಗಳು, ಗುಂಪಿನಲ್ಲಿದ್ದ (ಚಿಕ್ಕು) ಸಪೋಟಾಗಳು ಹೀಗೆ ಪಂಚ ನದಿಗಳನ್ನು ಪಡೆದ ವಿಜಾಪುರ ಜಿಲ್ಲೆ ಹಣ್ಣುಗಳ ಸಮೃದ್ಧಿಯ ತವರೂರು ಕೂಡ ಹೌದು ಅಷ್ಟೇ ಏಕೆ? ಇತ್ತೀಚೆಗೆ ರೇಷ್ಮೆ ಉದ್ಯಮವು ಕೂಡ ಬೆಳೆಯುತ್ತಿದೆ. ಕುಡಿಯಲು ನೀರು ಬೇಡಿದಾಗ ಮಾತ್ರ ಜನ ಮೂಗು ಮುರಿಯಬಹುದು. ಯಾಕೆಂದರೆ ಮುಪ್ಪರದ ಜನ ನಿಮ್ಮನ್ನು ಹಣ್ಣು-ಹಂಪಲುಗಳಿಂದ ಸತ್ಕರಿಸಬಹುದು. ಆದರೆ ಹನ್ನೆರಡು ದಿನಕ್ಕೆ ಒಮ್ಮೆ ನೀರು ಪಡೆಯುವ ಜನ ಚಾತಕಪಕ್ಷಿಯಂತೆ ಕಾಯುವ ಸಹನಶಕ್ತಿ ಗೋಳಗುಮ್ಮಟದಷ್ಟೇ ವಿಶ್ವಖ್ಯಾತಿಯಾಗಿದೆ. ಹನ್ನೆರಡು ದಿನಕ್ಕೊಮ್ಮೆ ನೀರು ಕುಡಿಯುವ ಜನ ಬಹುಶಃ ಪೂರ್ವ ಜನ್ಮದಲ್ಲಿ ಒಂಟೆಯಾಗಿರಬಹುದೆಂದು ಕೆಲವರು ಅಣಕಿಸುತ್ತಾರೆ. ಸುಮಾರು ಐವತ್ತು ವರುಷಗಳಿಂದ ಅಂದರೆ ಈಗ ಕೋಲು ಹಿಡಿಯುವ ಮುದಕರ ತಮ್ಮ ಬಾಲ್ಯದಲ್ಲಿಯ ನೀರಿನ ಪರದಾಟದ ರಂಜನೀಯ ಕತೆಗಳು ಗುಮ್ಮಟಗಳ ಕತೆಯಷ್ಟೇ ರೋಚಕವಾಗಿವೆ. ಹನ್ನೆರಡು ದಿವಸಕ್ಕೆ ಬೇಕಾಗುವ ನೀರನ್ನು ನೀವು ಸಂಗ್ರಹಿಸುವ ತಾಕತ್ತು ಪಡೆದರೆ ಮಾತ್ರ ನೀವು ಇಲ್ಲಿ ಮನೆ ಮಾಡಬಹುದು. ಅಂಥವರ ಮುಖ ನೋಡಿ ಮನೆ ಬಾಡಿಗೆಗೆ ಕೊಡುತ್ತಾರೆ. ಹನ್ನೆರಡು ದಿವಸಕ್ಕೆ ನೀರು ಬರಲಿ, ಆದರೆ ಯಾವಾಗ? ಎಂತು? ಎಷ್ಟು? ಇದು ಯಕ್ಷ ಪ್ರಶ್ನೆ. ಇದು ನೀರು ಸರಬರಾಜು ಕೇಂದ್ರಕ್ಕೂ ಗೊತ್ತಿಲ್ಲ.

ಕವಿಗಳೊಬ್ಬರು ಹೇಳಿದಂತೆ ''ಇಲ್ಲಿ ಬಿಸಿಲೇ ಬೆಳದಿಂಗಳು''. ಇಂಥ ವಾತಾವರಣದಲ್ಲಿ ನಳ ಬರುವದೆಂದು ಕಾಯುವದು ಬಸಿರು ಹೆಣ್ಣುಮಗಳು ಹೆರಿಗೆಗಾಗಿ ಕಾಯುವಂತೆ. ಈ ಎದುರು ನೋಡುವ ನಿಮ್ಮ ದಿನಮಾನದ ಪ್ರವೃತ್ತಿಯಾಗಿರುವುದು. ಹನ್ನೆರಡನೇ ದಿನ - ನಳ ಬರುವ ಸಂಭ್ರಮ. ನಳದಲ್ಲಿ ಗಾಳಿ ಬರಲು-ಆರಂಭ. ನಂತರ ಜೊಲ್ಲಿನಂತೆ ತೊಟ್ಟಿಕ್ಕುವ ಹನಿ, ಹನಿ ಬಂದಾಗ ಇಡೀ ಓಣಿಯಲ್ಲವೂ ಹೊಸ ಜೀವ ಪಡೆಯುತ್ತವೆ. ನಿಮ್ಮ ಕಚೇರಿ, ನಿಮ್ಮ ಆಫೀಸು, ನಿಮ್ಮ ಅಂಗಡಿ, ದಿನ ನಿತ್ಯದ ಕಾಯಕಗಳಿಗೆಲ್ಲ ಅಂದು ರಜ. ನೀವು ತಡವಾಗಿ ಆಫೀಸಿಗೆ ಹೋದರೆ 'ಬಾಸ್' ಬಯ್ಯುವದಿಲ್ಲ. ಕಾರಣ ಅಂದು ಅವನು ಕೂಡ ನೀರು ತುಂಬಿ ಬಂದಿರುತ್ತಾನೆ. ಒಮ್ಮೊಮ್ಮೆ ಮಧ್ಯರಾತ್ರಿ ಈ ಜಲದೇವತೆ ಪ್ರತ್ಯಕ್ಷವಾದಾಗ ಇಡೀ ಊರಿಗೆ ಊರು ಎಚ್ಚರಗೊಂಡು ರಾತ್ರಿಯೇ ಹಗಲು-ಹಗಲೇ ರಾತ್ರಿಯಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಮಧ್ಯ ರಾತ್ರಿಯಲ್ಲಿಯೂ ನೀರೆಯರು ನೀರಿಗಾಗಿ ನಿರ್ಭಯದಿಂದ ಅಡ್ಡಾಡುತ್ತಾರೆ. ಯಮ ತನ್ನ ಪಾಶದೊಂದಿಗೆ ಜೀವ ಹರಣಕ್ಕೆ ಬಂದಾಗ-ವೃದ್ಧನೊಬ್ಬ 'ನೀರು ತುಂಬಿ ಬರುವ ನಳ ಬಂದಿದೆ' ತಾಳು ಎಂದು ಯಮನಿಗೆ ಸವಾಲು ಒಡ್ಡುತ್ತಾನಂತೆ. ಅಲ್ಲದೆ ನೀರಿನ ಬವಣೆಯ ಅನೇಕ ಕದನಗಳು-ಲಾವಣಿಗಳನ್ನು ಕಟ್ಟಿ ಜನ ಹಾಡುತ್ತಾರೆ. ಹಸೆಮಣೆಯ ಮೇಲೆ ಕುಳಿತ ವರನೊಬ್ಬ ನಳ ಬಂದಾಗ ಓಡೋಡಿ ಹೋಗಿ ನೀರು ತುಂಬಲು 'ಕ್ಯೂ'ನಲ್ಲಿ ನಿಲ್ಲುತ್ತಾನೆ. ಮುಹೂರ್ತ-ಲಗ್ನಕ್ಕಾಗಿ ಇನ್ನೊಂದು ಸಿಗಬಹುದು ಆದರೆ ನೀರು ಸಿಗಬಹುದೆ? ಎಂದೂ ಕೇಳುತ್ತಾನೆ. ಬೊಗಸೆ ನೀರಿಗಾಗಿ ಪಡುವ ಬವಣೆಯು ರಾಮಾಯಣದಷ್ಟೇ ಇಲ್ಲಿ ಹಳೆಯದು - ಹೀಗಾಗಿ 'ಇಲ್ಲಿ ಬದುಕಿದವ ಜಗತ್ತಿನಲ್ಲಿ ಎಲ್ಲಿಯಾದರೂ ಸಲೀಸಾಗಿ ಜೀವಿಸಬಲ್ಲ' ಎಂದೂ ಹೇಳುತ್ತಾರೆ.

ನಿಮಗೆ ಆಶ್ಚರ್ಯವಾಗಬಹುದು. ಇಲ್ಲಿ ಅಂತರ್ಜಲ ಭೂಮಿಯ ಕೆಲವೇ ಅಡಿಗಳ ಕೆಳಗೆ ಸಮೃದ್ಧ ರೀತಿಯಲ್ಲಿ ಇದೆ. ಊರು ಮಧ್ಯದಲ್ಲಿ ಇರುವ 'ತಾಸದಾವಡಿ' ಅಗಲ-ವಿಸ್ತಾರದ ತುಂಬಿದ ಸುಸಜ್ಜಿತ ಬಾವಿಯನ್ನು ಕಂಡಾಗ ಬೆಚ್ಚಿ ಬೀಳುವಿರಿ. ಅದರಂತೆ 'ಚಾಂದ ಬಾವಡಿ' 'ಗ್ಯಾಂಗ ಬಾವಡಿ' ಹೀಗೆ 'ಬಾವಡಿಗಳ' ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ''ಬಾವಡಿ'' ಅಂದರೆ ಬಾವಿ. ಇವುಗಳಲ್ಲಿ ವಿಪುಲ ನೀರಿನ ಸಂಗ್ರಹವುಂಟು, ಮೊಗಲ ಅವಧಿಯಲ್ಲಿ ವಿಜಾಪುರ ನಗರದಲ್ಲಿ ಆರು ಲಕ್ಷ ಜನಸಂಖ್ಯೆ ಇತ್ತಂತೆ. ಸಮೃದ್ಧವಾಗಿ ನೀರು ಪೂರೈಕೆ ವ್ಯವಸ್ಥಿತ ಯೋಜನೆಯಿತ್ತು. ಈಗ ಎರಡು ಲಕ್ಷ ಜನರಿಗೆ ನೀರು ಪೂರೈಕೆ ಯೋಜನೆ ಹಲವಾರು ದಶಕಗಳ ಕಾಲ ಕುಂಟುತ್ತಲೇ ನಡೆದಿದೆ. ಇದೊಂದು ಶಾಪವೆಂದೇ ಕೆಲವರ ಅಭಿಮತ. ಪ್ರಸ್ತುತ ಭಾವಿಗಳ ನೀರು ಬಳಕೆಗೆ ಅರ್ಹವಲ್ಲವೆಂದು ಅವನ್ನು ಉಪಯೋಗಿಸುತ್ತಿಲ್ಲ. ಈಗಲೂ ಭೂಮಿ ಅಗೆದಾಗ ಮೊಗಲ ಕಾಲದ ನೀರಿನ ವ್ಯವಸ್ಥೆಯ ಗಚ್ಚಿನಲ್ಲಿ ಮಾಡಿದ ಪೈಪ್‌ಗಳು ದೊರಕುವವು. ಪ್ರತಿಯೊಂದು ಮನೆ ಮುಂದೆ ನೀರು ತುಂಬುವ ತೆಗ್ಗುಗಳು ಅಲ್ಲಲ್ಲಿ ಗೋಚರಿಸುವವು. ●



ಚಿತ್ರ : ಜಗನ್ನಾಥ ಮರಾಠೆ

ಉತ್ತರ ಕನ್ನಡ ಜಿಲ್ಲೆಯ ಪ್ರಕೃತಿ ವಿಸ್ಮಯದ

ಕಳಚೆ ಏಕಶಿಲಾಬಂಡೆ

ನಿತ್ಯಹರಿದ್ವರ್ಣತೆ, ಎಲ್ಲಾ ಕಾಲದಲ್ಲಿಯೂ ಝುಳಝುಳ ಹರಿಯುವ ನೀರಿನ ಝುರಿಗಳು, ಆಕಾಶವನ್ನು ಚುಂಬಿಸಿದಂತೆ ಭಾಸವಾಗುವಷ್ಟು ಎತ್ತರಕ್ಕೆ ಬೆಳೆದ ಗಿಡಮರಗಳು, ಎಲ್ಲಿ ನೋಡಿದರಲ್ಲಿ ಹಚ್ಚ ಹಸಿರಿನ ಪೈರು, ಹುಲ್ಲು. ಇಲ್ಲಿಗೆ ಪ್ರವಾಸಿಗ ಬಂದರೆ ಪ್ರಕೃತಿಯ ಸೌಂದರ್ಯಕ್ಕೆ ಸೋತು 'ನಾನಿಲ್ಲಿಯೇ ವಾಸವಾಗಿ ಬಿಡಲೇ'? ಎನ್ನುವ ವಿಚಾರ ಕ್ಷಣಕಾಲ ಆತನಲ್ಲಿ ಬಂದು ಹೋದರೆ ಅಚ್ಚರಿಯಿಲ್ಲ. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಕಳಚೆ ಗ್ರಾಮದ ಆಸುಪಾಸಿನ ಪ್ರದೇಶವೆಲ್ಲಾ ಕಣ್ಣುಕೋರೈಸುವಂತೆ ನಿಸರ್ಗ ಶ್ರೀಮಂತಿಕೆಯಿಂದ ಆಚ್ಛಾದಿತವಾಗಿದೆ. ಹತ್ತಿರದಲ್ಲಿಯೇ ಕಣ್ಣಿಗೆ ಇಂಪನ್ನು ಸೂಸುವ ಜಲಧಾರೆಗಳಿವೆ. ಪುರಾತನ ಕಾಲದ ದೇವಾಲಯಗಳಿವೆ. ಕೋಟೆ-ಕೊತ್ತಳಗಳಿವೆ; ಗವಿ-ಗುಹೆಗಳಿವೆ. ಉತ್ತರ ಕನ್ನಡದ ಕಳಚೆ ಭೂ ಭಾಗ 'ಕರ್ನಾಟಕದ ಕಾಶ್ಮೀರ'ವೆಂದೂ ಹೊಗಳಿಕೆಗೆ ಪಾತ್ರವಾಗಿದೆ. ಇಂತಹ ರಮಣೀಯ ಸ್ಥಳದಲ್ಲಿ ಪ್ರಕೃತಿ ವಿಸ್ಮಯದ ಏಕಶಿಲಾ ಕಲ್ಲು ಬಂಡೆಯೊಂದು ದೈತ್ಯಾಕಾರದಲ್ಲಿ ಬೆಳೆದು ನಿಂತಿದ್ದು ಪ್ರವಾಸಿಗರ ಆಕರ್ಷಣೀಯ ನೋಟವೆನಿಸಿದೆ.

ಹುಬ್ಬಳ್ಳಿಯಿಂದ ೬೮ ಕಿ.ಮೀ. ದೂರದಲ್ಲಿರುವ ಉತ್ತರ ಕನ್ನಡದ ಯಲ್ಲಾಪುರ. ಯಲ್ಲಾಪುರದಿಂದ ೨೦ ಕಿ.ಮೀ. ಅಂತರದಲ್ಲಿ ರಾಜ್ಯದಲ್ಲಿ ಕಳಚೆ ಗ್ರಾಮ. ಕಳಚೆ ತೆಂಗಿನಕಾಯಿಗೆ ಹೆಸರುವಾಸಿ ರಾಜ್ಯದಲ್ಲಿ ಕಳಚೆ ಕಾಯಿಗೆ ಮೊದಲ ಆದ್ಯತೆ. ಯಲ್ಲಾಪುರ ತಾಲೂಕಿನ ಪ್ರಕೃತಿ ಸೌಂದರ್ಯದ ತಾಣಗಳನ್ನು ನೋಡಬೇಕೆನ್ನುವವರಿಗೆ ಕಳಚೆ ಗ್ರಾಮದ ಏಕಶಿಲಾಕಲ್ಲು ಬಂಡೆ ತನ್ನತ್ತ ಕೈಬೀಸಿ ಕರೆಯುತ್ತದೆ. ನೋಡುಗರನ್ನು ಅದು ಸೂಜಿಗಲ್ಲಿನಂತೆ ಆಕರ್ಷಿಸುತ್ತದೆ. ಈ ಶಿಲಾಬಂಡೆಗೆ ಅಲ್ಲಿ ''ಜೇನುಕಲ್ಲುಬಂಡೆ'' ಎಂದು ಹೆಸರು. ಕಳಚೆ ಬಸ್ ನಿಲ್ದಾಣದ ಒಂದು ಫರ್ಲಾಂಗ್ ಹಿಂದೆಯೇ ರಸ್ತೆಯ ಎಡಭಾಗದಲ್ಲಿ ೧೦೦-೧೨೦ ಅಡಿ ಎತ್ತರಕ್ಕೆ ಜೇನುಕಲ್ಲುಬಂಡೆ ರಾಜಗಾಂಭೀರ್ಯತೆಯಿಂದ ತಲೆಯೆತ್ತಿ ನಿಂತಿದೆ. ಚೌಕಾಕೃತಿಯದೆಂದು ಹೇಳಬಹುದಾದ ಈ ನೀಳಬಂಡೆಯಲ್ಲಿ ನೈಜ ವಿಸ್ಮಯವಿದೆ. ಬಂಡೆಯ ಮುಂಭಾಗ ಮತ್ತು ಹಿಂಭಾಗಗಳನ್ನು ನೋಡಿದಾಗ ಸಾಮಾನ್ಯವಾಗಿ ಎಲ್ಲರೂ ಇವೆರಡೂ ಬೇರೆ ಬೇರೆ ಕಲ್ಲಿನ ಭಾಗಗಳೆಂದೇ ಅಭಿಪ್ರಾಯಕ್ಕೆ ಬರುತ್ತಾರೆ. ಕಲ್ಲಿನ ಮುಂಭಾಗ ಪೂರ್ತಿ ಕರಿಯ ಬಣ್ಣದ್ದಾಗಿದ್ದು, ಹಿಂಭಾಗ ಬಂಡೆ ಕರಿ, ಬಿಳಿ ಮತ್ತು ಹಳದಿ ಈ ಮೂರೂ ಬಣ್ಣಗಳಿಂದ ಕೂಡಿದೆ. ಕಲ್ಲಿನ ಹಿಂಭಾಗದಲ್ಲಿ ವಿಶೇಷವಾಗಿ ಬಿಳಿ ಹಳದಿ ಬಣ್ಣದ ಮಿಶ್ರಣವೇ ಎದ್ದು ಕಾಣುತ್ತದೆ. ಕಲ್ಲಿನ ಮುಂಭಾಗದ ಸ್ವರೂಪ ಸಹಜ ಕಲ್ಲಿನದಾಗಿದ್ದರೆ ಹಿಂಭಾಗ ಮಾತ್ರ ವೈಶಿಷ್ಟ್ಯಪೂರ್ಣವಾಗಿದೆ. ಮುಂಭಾಗದ ಚೌಕಾಕೃತಿಯನ್ನು ಮರೆಸಿ ಬಿಡುವ ಹಿಂಭಾಗ ಷೋಕೇಸ್‌ನಲ್ಲಿ ಇಡುವ ಗಂಧದ ಕೆತ್ತನೆ, ಗಾಜಿನ ಅಲಂಕಾರಿಕ ವಸ್ತುಗಳ ವಿನ್ಯಾಸವನ್ನು ನೆನಪಿಸುತ್ತದೆ. ಚತುರ ಶಿಲ್ಪಿಯೊಬ್ಬ ತನ್ನ ಮನಸ್ಸಿನಲ್ಲಿ ಆಕೃತಿಯೊಂದನ್ನು ಕಲ್ಪಿಸಿಕೊಂಡು ಕಡಿದ ಶಿಲಾಬಂಡೆಯಿದು ಎಂಬ ಭಾವ ಸ್ಮೃತಿಪಟಲದ ಮೇಲೆ ಸುಳಿದು ಹೋದಲ್ಲಿ ಅಚ್ಚರಿಯೇನಿಲ್ಲ. ಮುಂಭಾಗದಲ್ಲಿ ಸುತ್ತಲಿನ ಗಿಡಗಂಟಿಗಳ ಬೇರುಗಳು, ಬಳ್ಳಿಗಳು ತುತ್ತತುದಿಯವರೆಗೆ ಮರದ ಬಿಸಿಲಿನಂತೆ ಬೆಳೆಯುತ್ತಾ ಏರಿವೆ. ಹಿಂಭಾಗದ ಭಾಗ ಮಾತ್ರ ಸಾಪಾಗಿ ಸ್ಫುಟವಾಗಿದೆ. ಕಲ್ಲಿನ ಅಗಲದಲ್ಲಿಯೂ ವೈವಿಧ್ಯತೆಯಿದೆ. ಕೆಳಗಿನಿಂದ ಮೇಲ್ಭಾಗಕ್ಕೆ ೮೦ ಅಡಿ ಎತ್ತರದವರೆಗೆ, ೭೫-೮೦ ಅಡಿ ಅಗಲವಿರುವ ಕಲ್ಲು ಬಂಡೆಯ ಇನ್ನುಳಿದ ೪೦ ಅಡಿ ಎತ್ತರದ ಭಾಗ ಅಗಲದಲ್ಲಿ ಕಡಿಮೆಯಾಗುತ್ತಾ ಹೋಗಿದೆ. ಮುಂಭಾಗದಲ್ಲಿ ಸ್ವಲ್ಪ ದೂರದಿಂದ ವೀಕ್ಷಿಸಿದಾಗ ನೋಡುಗನಿಗೆ ಆತ್ಯಾಶ್ಚರ್ಯವಾದ ಅಭೂತವಾದ ದೃಶ್ಯವೊಂದು ಕಾಣಸಿಗುತ್ತದೆ. ಮುಂಭಾಗದ ತುತ್ತತುದಿಯ ಆಕಾರ 'ನಂದಿಮೂರ್ತಿ'ಯನ್ನು ನೆನಪಿಸುತ್ತದೆ. 'ಕಲ್ಲಿನ ಮೇಲ್ಭಾಗದಲ್ಲಿ ಆಸ್ತಿಕನೊಬ್ಬ ಬಸವನ ಮೂರ್ತಿಯನ್ನು ತಂದಿರಿಸಿರಬಹುದೇನೋ' ಅಥವಾ 'ಪುರಾತನ ಕಾಲದ ರಾಜನೊಬ್ಬ ಶಿಲ್ಪಿಯೊಬ್ಬನಿಂದ ಈ ಶಿಲೆಯನ್ನು ದೈವಸ್ವರೂಪದ್ದಾಗಿರಲೆಂದು ಕೆತ್ತಿಸಿರಬಹುದೇನೋ' ಎಂಬಷ್ಟು ನೈಜತೆಯ ಭಾಸ ಕಲ್ಲಿನ ಮೇಲ್ಭಾಗದಲ್ಲಿ ಕಾಣುತ್ತದೆ. ಓದುಗರು ಚಿತ್ರದಲ್ಲಿ 'ನಂದಿಮೂರ್ತಿ'ಯ ಆಕಾರವನ್ನು ಸ್ಪಷ್ಟವಾಗಿ ಕಾಣಬಹುದು. ನಂದಿ ಮೂರ್ತಿಯಂತೆ ಕಾಣುವ ತುದಿಯ ಭಾಗ ಸುಮಾರು ೧೦-೧೫ ಅಡಿಗಳಷ್ಟು ಎತ್ತರವಾಗಿದೆ. ಕಲ್ಲು ನೇರವಾಗಿರುವುದರಿಂದ ಕಲ್ಲಿಗೆ ವಿಶೇಷ ಸೌಂದರ್ಯತೆ ಬಂದಿದೆ. ನೇರವಾಗಿರುವುದನ್ನು ಯಾವ ಸಾಹಸಿಯೂ ಈ ಬಂಡೆಯನ್ನು ಏರಲಾರ. ಕಲ್ಲಿನ ಮುಂಭಾಗದಲ್ಲಿ ಕಲ್ಲು ತುದಿಯ ಕೆಳಗೆ ಗೋಲಾಕಾರವಾಗಿ ೧೦ ಅಡಿಗಳಷ್ಟು ಒಳಗೆ ಸರಿದಿದ್ದು ಆ ನೆರಳಿನ ಭಾಗದಲ್ಲಿ ಜೇನು ಕಟ್ಟುತ್ತವೆ. ಜೇನು ಖಾಯಂ ಆಗಿ ಕಟ್ಟುವುದರಿಂದ ಈ ನೀಳಕಲ್ಲು ''ಜೇನುಕಲ್ಲು'' ಎಂದು ಕರೆಸಿಕೊಂಡಿದೆ. ಜೇನುಕಲ್ಲಿನ ಎದುರಿನ ವನದೇವಿ ಕಲ್ಲು ಸಹ ೬೦ ಅಡಿ ದೊಡ್ಡದಾಗಿದ್ದು ಅದನ್ನು ಏರಬಹುದು. ವನದೇವಿ ಕಲ್ಲಿನ ಮೇಲೆ ನಿಂತಲ್ಲಿ ಸುತ್ತಮುತ್ತಲಿನ ಏಳೆಂಟು ಕಿ.ಮೀ. ದೂರದ ಪ್ರಕೃತಿಯ ವಿಹಂಗಮ ನೋಟ ಗೋಚರಿಸುತ್ತದೆ.


ಜೇನುಕಲ್ಲಿನಿಂದ ಜೇನು ತೆಗೆಯುವ ಸಾಹಸ :

ಏಕಶಿಲಾಬಂಡೆ ಜೇನುಕಲ್ಲನ್ನು ಯಾರೂ ಏರಲು ಸಾಧ್ಯವಿಲ್ಲ ನಿಜ. ಆದರೆ ಕಲ್ಲಿನ ತುದಿಯ ಕೆಳಗೆ ಕಟ್ಟುವ ಜೇನನ್ನು ಇಳಿಸುವ ಸಾಹಸಿಗರು ಇಲ್ಲಿದ್ದಾರೆ. ಜೇನು ತೆಗೆಯುವ ಸಾಹಸ ಮಾತ್ರ ಅಸಾಧಾರಣವಾದದ್ದು. ಮೃತ್ಯುವಿನೊಡನೆ ಸೆಣಸಾಟವೆಂದರೆ ತಪ್ಪಾಗದು. ಅಮವಾಸ್ಯೆ ಅವಧಿಯಲ್ಲೇ ಜೇನು ಇಳಿಸಬೇಕು. ಉಳಿದ ದಿನಗಳಲ್ಲಿ ಬೆಳಕಿರುವುದರಿಂದ ಹುಳುಗಳ ಹತ್ತಿರ ಹೋಗಲಾಗುವುದಿಲ್ಲ. ಜೇನು ಕಲ್ಲು ಬಂಡೆಯ ಪಕ್ಕದಲ್ಲಿ ದೊಡ್ಡ ಮರವಿದೆ. ಆ ಮರದ ಮಧ್ಯಕಾಂಡದಿಂದ ಜೇನು ಕಟ್ಟಿದ ಆಯಕಟ್ಟಿನ ಸಂದಿಗೆ ಅಡಿಕೆ ಮರದ ದಿಮ್ಮಿಗಳನ್ನು ಆನಿಸಿಕೊಂಡು ಅವು ಬೀಳದ ಹಾಗೆ ನಾಲ್ಕು ಕಡೆಗಳಿಂದಲೂ ಹಗ್ಗದಿಂದ ಬಿಗಿದಿರುತ್ತಾರೆ. ಆ ಮೇಲೆ ಅಡಿಕೆ ಮರದ ದಿಮ್ಮಿಗಳ ಮೇಲೆ ಅಡ್ಡಲಾಗಿ ಬಿದ್ದು ತೆಂಗಿನಕಾಯಿ ಸಿಪ್ಪೆಯ ಪಂಜಿನ ಹೊಗೆಯನ್ನು ಕೈಯಲ್ಲಿ ಹಿಡಿದುಕೊಂಡು ಸದ್ದಾಗದಂತೆ ಜೇನುಕಟ್ಟಿದ ಎತ್ತರಕ್ಕೆ ಏರುತ್ತಾ ಹೋಗುತ್ತಾರೆ. ಕಲ್ಲಿನ ಅಂಚೊಂದನ್ನು ಆಧರಿಸಿಕೊಂಡು ಹೊಗೆ ತೋರಿಸಿ ಜೇನುನೊಣಗಳನ್ನು ಚದುರಿಸಿ ತುಪ್ಪವನ್ನು ಬಟ್ಟಲಲ್ಲಿ ಇಳಿಸಿಕೊಂಡು ಇಳಿಯುತ್ತಾರೆ. ಕಡಿದಾದ ಬಂಡೆಯ ತುದಿಯಲ್ಲಿ ಕಟ್ಟಿದ ಜೇನು ಸಂಗ್ರಹಣೆ ತುಂಬಾ ಅಪಾಯಕಾರಿ. ಕಗ್ಗತ್ತಲೆಯಲ್ಲಿ ಸುಮಾರು ೭೦ ಅಡಿಗಳಷ್ಟು ಎತ್ತರಕ್ಕೆ ಸರ್ಕಸ್ ಮಾಡಿದಂತೆ ಸಾಗಬೇಕಾದ ಕಸರತ್ತು, ಇನ್ನೊಂದು ಜೇನುನೊಣಗಳು ಚದರುವಾಗ ಅಲುಗಾಡದಂತೆ ಸ್ಥಿತಪ್ರಜ್ಞನಾಗ ಬೇಕಾದ ತಾಳ್ಮೆ. ಆಕಸ್ಮಾತಾಗಿ ಜೇನು ತೆಗೆಯುವ ಸಾಹಸದಲ್ಲಿ ಕೊಂಚ ಆಯ ತಪ್ಪಿದರೂ ಸಾಹಸಿ ಪ್ರಪಾತಕ್ಕೆ ಬಿದ್ದು ಪ್ರಾಣ ಕಳೆದುಕೊಳ್ಳಬೇಕಾಗುತ್ತದೆ.

○ ವೀರೇಶ ಯಂಗಟಿ

ಸೊಲ್ಲಾಪುರದ ಕನ್ನಡಾಭಿಮಾನಿ

ಅಶೋಕ ಥೋರಾತ್



ಮನದಲ್ಲಿ ಕನ್ನಡದ ಅಭಿಮಾನ ತುಂಬಿಕೊಂಡು ಕನ್ನಡದ ಕಾರ್ಯಕ್ರಮ ಎಲ್ಲಿದ್ದರೂ ಓಡೋಡಿ ಬರುವ ಉತ್ಸಾಹ ತರುಣ ಕವಿ, ಲೇಖಕ ಅಶೋಕ ಥೋರಾತ್.

ಶಾಲೆಯ ದಿನಗಳಿಂದಲೇ ಸಾಹಿತ್ಯದ ರುಚಿ ಹಚ್ಚಿಸಿಕೊಂಡು ಸೊಲ್ಲಾಪುರ ಸಂಗಮೇಶ್ವರ ಮತ್ತು ದಯಾನಂದ ಕಾಲೇಜಿನಲ್ಲಿ ಶಿಕ್ಷಣ ಮುಗಿಸಿ ಬೆಂಗಳೂರು ಕೆನರಾ ಬ್ಯಾಂಕಿನಲ್ಲಿ ಉದ್ಯೋಗ ಸಿಕ್ಕಾಗ ಯಾದಗಿರಿಯಿಂದ ಸೊಲ್ಲಾಪುರಕ್ಕೆ ಬಂದು ಅದೇ ಬ್ಯಾಂಕಿನಲ್ಲಿದ್ದು ಇಲ್ಲಿ ಕನ್ನಡ ಉಳಿಸಿ ಬೆಳೆಸುವದಕ್ಕಾಗಿ ಸಾಹಿತ್ಯದ ಪೆನ್ನು ಹಿಡಿದರು.

''ಎಲೆ ಮರೆಯ ಕಾಯಿಯಂತಿರುವ ಇಲ್ಲಿನ ಲೇಖಕರು ಹೊರ ಬರಲೆಂದು ದೀಪಕಕುಮಾರ ಕಾಸಾರರ ಜೊತೆಗೂಡಿ, ಸಹ ಸಂಪಾದಕರಾಗಿ ''ಸೊಲ್ಲಾಪುರ ಸಂಕೀರ್ಣ'' ಎಂಬ ತ್ರೈಮಾಸಿಕ ಪತ್ರಿಕೆ ಹೊರ ತಂದರು. ಕಾಸಾರ ಇಗ ನಮ್ಮ ಮಧ್ಯೆ ಇಲ್ಲವೆಂದು ದುಃಖ ವ್ಯಕ್ತಪಡಿಸಿ ಈಲ್ಲಿಯ ಶಾಲೆಗಳ ಸ್ಥಿತಿ ಕಂಡು ತಳಮಳಗೊಳ್ಳುವ ಇವರು ಕೇವಲ ಸಾಹಿತಿಗಳಿಂದ ಇಲ್ಲಿ ಕನ್ನಡ ಉಳಿಸಿ ಬೆಳೆಸಲು ಸಾಧ್ಯವೇ? ಅಂತಾರೆ.

ಕನ್ನಡದ ಲೇಖಕರೆಂದು ಕಣ್ಣೀರು ಒರಿಸುವದು ಬೇಡ. ಕನ್ನಡಕ್ಕಾಗಿ ತನು-ಮನ-ಧನ, ಅರ್ಪಿಸುವ ಪ್ರತಿಭಾವಂತ ರಾಜಕೀಯ ಮುಖಂಡರು ಮುಂದೆ ಬಂದರೆ, ಇಲ್ಲಿ ಕನ್ನಡ ಉಳಿದು ಬೆಳೆಯಲು ಸಾಧ್ಯವೆನ್ನುವುದು ಇವರ ಅಭಿಪ್ರಾಯ.

ಇವರ ''ಬಣ್ಣವಿಲ್ಲದ ಕುಂಚ'' ಮುಗಿದ ಕಥೆ, ಕಾದಂಬರಿ ''ತೃಪ್ತಿ'' ಕಥಾ ಸಂಕಲನ ''ಕನಸ್ಸುಗಳ ಜಾಡಿನಲ್ಲಿ'' ನೂರಾರು ಕವನಗಳು ಪ್ರಕಟಗೊಂಡಿವೆ.

ಪತ್ರಿಕೆಗಳು ಈ ಭಾಗದವರಿಗೆ ಅವಕಾಶ ಕೊಡುವುದಿಲ್ಲವೆನ್ನುತ್ತಾರೆ ಅಶೋಕ. ಇಲ್ಲಿ ಒಂದು ಪ್ರಕಾಶನವಾಗಲಿ ಒಂದು ಪತ್ರಿಕೆಯಾಗಲಿ, ಎದೆ ತಟ್ಟಿ ನಿಂತರೆ ಮಾತ್ರ ಈ ಭಾಗದ ಲೇಖಕರು ಬೆಳಕಿಗೆ ಬರಲು ಸಾಧ್ಯ ಅಂತಾರೆ, ಸದಾ ಕನ್ನಡದ ಅಭಿಮಾನ ತುಂಬಿಕೊಂಡಿರುವ ಅಶೋಕ ಅವರಂತಹವರು ಸೊಲ್ಲಾಪುರದಲ್ಲಿ ಅನೇಕರು ಸಿಕ್ಕಾರು. ಇತ್ತ ಗಮನಹರಿಸಿ ಕನ್ನಡ ಉಳಿಸಲು ಸಹಾಯ ಮಾಡಲೇಬೇಕು!

○ ಅಶೋಕ ಉಮರಾಣೆಕರ



ಮಧುಚಂದ್ರ

ಬಚ್ಚಿಟ್ಟ
ಬತ್ತಲೆಯ
ಬಿಚ್ಚಿ,
ಮುಚ್ಚಿಟ್ಟ
ಬಯಕೆಗಳ
ಸವಿ-
ಯುವ
ಸಮಯ

- ಕೈ.ರಾ. ಸುಬ್ಬರಾವ್

ಕ್ಲಾಸ್ ರೂಂ

ವಾಟ್ ಎಂದರೇನು?

ಸುಮಾರು ಹತ್ತು ವರ್ಷಗಳ ಹಿಂದಿನ ಮಾತು. ನಾನು ೫ನೇ ತರಗತಿಯಲ್ಲಿ ಓದುತ್ತಿದ್ದೆ. ನಾವೆಲ್ಲಾ ಇಂಗ್ಲಿಷ್ ಅಕ್ಷರ ಮಾಲೆಯನ್ನು ಆಗ ತಾನೇ ಕಲಿತಿದ್ದೆವು. ನಮಗೆ ಇನ್ನು ಇಂಗ್ಲಿಷ್ ಪದಗಳ ಅರ್ಥ ತಿಳಿದಿರಲಿಲ್ಲ. ಆಗ ನಮ್ಮ ಇಂಗ್ಲಿಷ್ ಉಪಾಧ್ಯಾಯರು ಎಲ್ಲರನ್ನು "What" ಎಂದರೇನು? ಎಂದು ಪ್ರಶ್ನಿಸಿದರು. ಅದರ ಅರ್ಥ ಯಾರಿಗೂ ತಿಳಿದಿರಲಿಲ್ಲ. ಯಾರೂ ಉತ್ತರಿಸಲಿಲ್ಲ. ಆಗ ಎಲ್ಲರನ್ನು ಎಬ್ಬಿಸಿ, ಒಂದು ಕಡೆಯಿಂದ ಎಲ್ಲರನ್ನೂ ಭಾರಿಸುತ್ತಾ ಬಂದರು. ನನ್ನ ಸ್ನೇಹಿತ ಒಬ್ಬ ತುಂಬಾ ಕೋಪಿಷ್ಟ. ಅವನನ್ನು ಮಾಸ್ಟರು ''ಕೈಹಿಡಿ'' ಎಂದರು ಅವನು ಕೈ ಚಾಚಲಿಲ್ಲ. ಆಗ ಅವನ ಬೆನ್ನಿಗೆ ಒಂದೇಟುಕೊಟ್ಟರು. ತಕ್ಷಣ ಅವನು ''ಏನು ಸಾರ್'' ಎಂದ. ಆಗ ಅವನ ಬೆನ್ನು ತಟ್ಟಿ ''ಇದೆ ಉತ್ತರ'' ಎಂದರು. ತಕ್ಷಣ ಅಳುತಿದ್ದ ನಾವೆಲ್ಲ ''ಗೊಳ್'' ಎಂದು ನಕ್ಕೆವು.

-ವಿ. ಜನಾರ್ಧನ,
ಶ್ರೀನಿವಾಸಪುರ

ಪೆನ್ನು ಕೊಡಿಸಾರ್

ನಾನು ಮೊದಲ ಪದವಿ ತರಗತಿಯಲ್ಲಿ ಓದುತ್ತಿದ್ದೆ. ಕನ್ನಡ ಉಪನ್ಯಾಸಕರೊಬ್ಬರು ತುಂಬಾ ಶಿಸ್ತು, ಸಮಯ ಪ್ರಜ್ಞೆಯನ್ನು ಬೆಳಸಿಕೊಂಡಿದ್ದರು. ಅವರನ್ನು ಕಂಡರೆ ಎಲ್ಲರಿಗೂ ಭಯ.

ಒಂದು ದಿನ ತರಗತಿಗೆ ಬಂದವರೆ, ಸಹಜವಾಗಿಯೇ ಗಡಿಬಿಡಿ ಎಂಬಂತೆ ಹಾಜರಾತಿ ಪುಸ್ತಕ ತೆರೆದು, ಹಾಜರಾತಿ ಹಾಕಿ ಮುಗಿಸಿ, ಪಾಠದತ್ತ ಸಾಗಿದರು ಸರಿ, ಒಂದು ಟಿಪ್ಪಣಿ ಬರೆದುಕೊಳ್ಳಲು ಹೇಳಿದರು.

ಆಗ ಒಬ್ಬ ವಿದ್ಯಾರ್ಥಿ ಎದ್ದು ನಿಂತು ತುಂಬಾ ಅಂಜಿಕೆಯಿಂದ, ''ಸಾರ್ ಪೆನ್ನುಕೊಡಿ ಸಾರ್''. ಎಂದ ತಕ್ಷಣ ಕೆಂಡಮಂಡಲರಾದ ಆ ಮಾಸ್ತರರು, ''ಬುದ್ಧಿ ಇದಿಯಾ ನಿನಗೆ? ಪೆನ್ನು ತರದಿದ್ದ ಮೇಲೆ ಏಕೆ ಬರಬೇಕು ಕಾಲೇಜಿಗೆ?'' ಗುಡುಗಿದರು. ಆ ವಿದ್ಯಾರ್ಥಿ ಅಷ್ಟಕ್ಕೆ ಸುಮ್ಮನಿರದೆ ಮತ್ತೆ ''ಪೆನ್ನು ಕೊಡಿ ಸಾರ್'' ಎಂದ. ಮಾಸ್ತರಿಂದ ಇನ್ನಷ್ಟು ಬೈಗುಳ ಪ್ರಹಾರ. ಆ ವಿದ್ಯಾರ್ಥಿ ವಿನಮ್ರವಾಗಿ ''ಸಾರ್, ಹಾಜರಾತಿ ಹಾಕಲು ನೀವು ನನ್ನ ಪೆನ್ನನ್ನೇ ಪಡೆದುಕೊಂಡಿದ್ದು ಎಂದು ಸ್ವಲ್ಪ ಧೈರ್ಯವಾಗಿ'' ಹೇಳಿದ.

ಆ ಕ್ಷಣ ಉಪನ್ಯಾಸಕರು ಪರಿತಪಿಸಿ, ಆತ್ಮಾವಲೋಕನ ಮಾಡಿಕೊಂಡು ಮರುಗಿ ಪಶ್ಚಾತ್ತಾಪಪಟ್ಟರು. ಆ ಉಪನ್ಯಾಸಕರೇ ''ಅಂಗಿಬಟ್ಟೆ'' ನಾಟಕ ಖ್ಯಾತಿಯ ಡಾ. ಸಿ.ಪಿ. ನಾಗರಾಜ್. ಆ ವಿದ್ಯಾರ್ಥಿಯೇ ನಾನು.

- ಚಾ.ಮ. ಮಲ್ಲೇಶ್
ತೊರೆಚಾಕನಹಳ್ಳಿ (ಮಂಡ್ಯ)

ಹುಡುಗಿ ಹೆಗಲಿಗೆ....!



ನಾನು ಆಗ ಆರನೇ ತರಗತಿಯಲ್ಲಿ ಓದುತ್ತಿದ್ದೆ. ಎಂದಿನಂತೆ ನಾಲ್ಕುವರೆಗೆ ಶಾಲೆಯ ಗಂಟೆ ಭಾರಿಸಿತು. ಆ ದಿನ ಶಾಲೆಯಲ್ಲಿ ಶಾರದಾ ಪೂಜೆಯಾದ್ದರಿಂದ ಎಲ್ಲಾ ವಿದ್ಯಾರ್ಥಿಗಳು ಸಂತೋಷವಾಗಿದ್ದೆವು.

ನನ್ನ ಆತ್ಮೀಯ ಗೆಳೆಯನ ಜೊತೆ ಹೊರ ಬರುತ್ತಿದ್ದೆ, ಗೆಳೆಯನ ಹೆಗಲ ಮೇಲೆ ಕೈ ಇಟ್ಟು ಮತ್ತೊಬ್ಬನ ಹತ್ತಿರ ಮಾತಾಡುತ್ತಾ ಬರುತ್ತಿದ್ದೆ. ಯಾವುದೋ 'ಮೂಡ್'ನಲ್ಲಿದ್ದ ನಾನು ನನ್ನ ಕೈಗಳನ್ನು ಇಟ್ಟ ಜಾಗ ನೋಡಿ ಒಂದು ಸಲ ನಾಚಿಕೆ ಅವಮಾನದಿಂದ ಕುಗ್ಗಿ ಹೋದೆ. ನಾನು ಕೈಯಿರಿಸಿದ್ದ ಜಾಗ ನಮ್ಮ ತರಗತಿಯ ವಿದ್ಯಾರ್ಥಿನಿಯ ಹೆಗಲು! ಅವಳಿಗೂ ಅಚಾತುರ್ಯದ ಅರಿವಿಲ್ಲದೆ ತನ್ನ ಸ್ನೇಹಿತೆಯರೊಂದಿಗೆ ಮಾತಾಡುತ್ತಾ ಹೋಗುತ್ತಿದ್ದಳು. ತಕ್ಷಣ ಕೈ ತೆಗೆದು ಹಿಂದೆ ಉಳಿದುಕೊಂಡೆ. ಆದರೆ ನನ್ನ ಸಹಪಾಠಿಗಳು ಚೇಕಂತಲೆ ಕೇಕೆ ಹಾಕಿ ನಗುತ್ತಿದ್ದರು. ನನಗೆ ಅವರನ್ನೆಲ್ಲಾ ತಿನ್ನುವಷ್ಟು ಸಿಟ್ಟು ಬರುತ್ತಿತ್ತು.

- ರಮೇಶ್ ವಾ.ಹಾ., ಶೃಂಗೇರಿ.

ಕೆನರಾ ಬ್ಯಾಂಕ್

ನಾನು ಹೈಸ್ಕೂಲ್‌ನಲ್ಲಿ ಓದುತ್ತಿರುವಾಗ, ನಮ್ಮ English Lecturer ಕಳೆದ ಕ್ಲಾಸ್‌ನಲ್ಲಿ ಹೇಳಿದ Letter ಬಗ್ಗೆ ಕೇಳುತ್ತಿದ್ದರು. ಹೀಗೆ ಕೇಳುವಾಗ ಒಬ್ಬ ಹುಡುಗನನ್ನು ''ನೀನು Letter ನಲ್ಲಿ ಏನೆಂದು ಬರೆದೆ ಮತ್ತು ಯಾರಿಗೆ ಬರೆದಿದ್ದೀಯಾ?'' ಎಂದು ಕೇಳಿದರು. ಆಗ ಆ ಹುಡುಗನು, 'ಸರ್ ನಾನು ನನ್ನ ತಂದೆ-ತಾಯಿಯವರಿಗೆ ಬರೆದಿದ್ದೇನೆ ಮತ್ತು ಅವರಿಗೆ ಉಂಡಿ ತರಲು ತಿಳಿಸಿದ್ದೇನೆ' ಎಂದನು. ಆಗ ನಮ್ಮ ಸರ್, ಇಂಗ್ಲಿಷ್‌ನಲ್ಲಿ ಹೇಳಲು ತಿಳಿಸಿದರು. ಆಗ ಅವನು Please bring Undi ಎಂದನು. ಇನ್ನೊಂದು ಕ್ಲಾಸ್‌ನಲ್ಲಿ ಅವನಿಗೆ What is your father? ಎಂದರು. ಆಗ ಅವನು My father is canara bank ಎಂದು ಉತ್ತರಿಸಿದನು. ಇಷ್ಟು ಹೇಳಿದ್ದೇ ತಡ ಎಲ್ಲರೂ ಕ್ಲಾಸ್‌ನಲ್ಲಿ ಬಿದ್ದು ಬಿದ್ದು ನಕ್ಕಿದ್ದರು ಮತ್ತು ಅಂದಿನಿಂದ ಅವನಿಗೆ Canara Bank Child ಎಂದು ಕರೆಯುತ್ತಿದ್ದರು.

- ನಳಿನಿ ಎಸ್.
ದೇವದುರ್ಗ

ಶಶಿಕಲಾ ಟೀಚರ್!

ವಿಜ್ಞಾನ ಶಿಕ್ಷಕಿಯಾದರೂ ಆಂಗ್ಲ ಭಾಷೆ ಶಿಕ್ಷಕರಿಲ್ಲದ ಕಾರಣ ನಮ್ಮ ಕಾಲೇಜಿನಲ್ಲಿ ನಾನೇ ಆಂಗ್ಲಭಾಷೆ ಬೋಧಿಸುತ್ತಿದ್ದೆ. ಆ ಹಳ್ಳಿಯ ಕಾಲೇಜಿಗೆ ನಾನೊಬ್ಬಳೇ ಶಿಕ್ಷಕಿಯಾದ್ದರಿಂದ ಕೆಲವೇ



ಬಸವಣ್ಣ

ನಾನು ಐದನೇ ತರಗತಿಯಲ್ಲಿ ಓದುತ್ತಿರುವಾಗ ನಡೆದ ಘಟನೆ. ನಮ್ಮ ವರ್ಗದ ಗುರುಗಳು ಚರಿತ್ರೆಯ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿದರು. ಅದರಲ್ಲಿ ಬಸವಣ್ಣ ಹುಟ್ಟಿದ ಸ್ಥಳ ಯಾವದು? ಎಂಬುದು ಒಂದು ಪ್ರಶ್ನೆ. ನಮ್ಮ ತರಗತಿಯ ಬಸವ ಎದ್ದು ನಿಂತು, ಬಸವಣ್ಣ ಹುಟ್ಟಿದ ಸ್ಥಳ ರಾಯಚೂರು ಜಿಲ್ಲೆಯ ಐಗಳಕೆರೆ ಎಂದು ತನ್ನ ಹುಟ್ಟಿದ ಸ್ಥಳ ಹೇಳಿದಾಗ ಇಡೀ ವರ್ಗವೇ ನಗೆಯ ಹೊನಲಿನಲ್ಲಿ ಮುಳುಗಿತ್ತು. ಅವನು ಆ ಉತ್ತರ ಹೇಳುವುದಕ್ಕೆ ಕಾರಣ ಅವನನ್ನು ನಾವು ಪ್ರೀತಿಯಿಂದ ಬಸವಣ್ಣ ಎಂದು ಕರೆಯುತ್ತಿದ್ದೆವು.

– ಶರಣಬಸವರಾಜ
ಹಂಪಿ

ನೀವೂ ಬರೆಯಿರಿ

ಶಾಲೆ ಕಾಲೇಜುಗಳ ತರಗತಿ ಕೋಣೆಗಳಲ್ಲಿ ತಮಾಷೆಗಳಿಗೆ ಬರವುಂಟೆ? ಇಂಥ ಪ್ರಸಂಗಗಳು ಹಲವೊಮ್ಮೆ ಗಂಭೀರ ತಿರುವು ಪಡೆಯುವುದು ಅಸಂಭವವಲ್ಲ. ಈ ಬಗ್ಗೆ ವಿದ್ಯಾರ್ಥಿಗಳು, ಶಿಕ್ಷಕ ವೃಂದದವರು ಈ ಅಂಕಣದಲ್ಲಿ ಬರೆಯಬಹುದು.

ದಿನಗಳಲ್ಲಿ ವಿದ್ಯಾರ್ಥಿಗಳ ಅಚ್ಚು ಮೆಚ್ಚಿನ ಶಿಕ್ಷಕಿಯಾದೆ.

ನಾನು ಸೇರಿದ ಎರಡೇ ತಿಂಗಳಿಗೆ ವಾರ್ಷಿಕ ಪರೀಕ್ಷೆ ನಡೆದು ಮೌಲ್ಯ ಮಾಪನ ಮಾಡಬೇಕಾಯಿತು. ಆಂಗ್ಲಭಾಷೆ ಮೌಲ್ಯಮಾಪನ ನಡೆಯುವಾಗ ಈ ಘಟನೆ ನಡೆಯಿತು. Give one word for the following ಎನ್ನುವ ತಲೆ ಬರಹದಡಿಯಲ್ಲಿ ಇರುವ ಪ್ರಶ್ನೆಯಲ್ಲಿ one who teaches in a school is called..... ಎಂದಿತ್ತು. ಆ ಪ್ರಶ್ನೆಗೆ ಒಬ್ಬ ವಿದ್ಯಾರ್ಥಿ 'ಶಶಿಕಲಾ ಮೇಡಂ' ಎಂದು ಬರೆದಿದ್ದ. ಈ ವಿಷಯ ತಿಳಿದು ನಮ್ಮ ಪ್ರಾಚಾರ್ಯರು So you are the only teacher here ಎಂದು ಜೋರಾಗಿ ನಕ್ಕಾಗ ನಮ್ಮ ಸ್ಟಾಫ್ ಎಲ್ಲಾ ನಗೆಗಡಲಿನಲಿ ತೇಲಿತ್ತು.

– ಕೆ. ಶಶಿಕಲಾ
ಬಳ್ಳಾರಿ

ತೇಜಾಬ್ ಹಾಡು


ನಾನು ಒಂಭತ್ತನೇ ತರಗತಿಯಲ್ಲಿ ಓದುತ್ತಿದ್ದಾಗ ನಡೆದ ಘಟನೆಯಿದು. ನಮಗೆ 'ಹಿಂದಿ' ವಿಷಯವನ್ನು ಬೋಧಿಸುವ ಶಿಕ್ಷಕರು ಹಿಂದಿಯಲ್ಲಿ ೧ ರಿಂದ ೨೦ರವರೆಗಿನ ಅಂಕೆಗಳನ್ನು ಕಲಿತುಕೊಂಡು ಬರಲು ತಿಳಿಸಿದ್ದರು.

ಸರಿ, ಮಾರನೆಯ ದಿನ ಬಂದ ಶಿಕ್ಷಕರು ನನ್ನ ಗೆಳತಿಯೊಬ್ಬಳನ್ನು ಹಿಂದಿ ಅಂಕಿ (ಏಕ್...ಬೀಸ್) ಹೇಳು ಎಂದರು. ಏನನ್ನೋ ಯೋಚನೆ ಮಾಡುತ್ತಿದ್ದ ಆಕೆ ಶಿಕ್ಷಕರು ಕೇಳಿದಾಕ್ಷಣವೇ ಎದ್ದು ನಿಂತು ಯಾವುದೇ ಅಳುಕಿಲ್ಲದೆ 'ಏಕ್ ದೋ ತೀನ್ ಚಾರ್ ಪಾಂಚ್ ಛೇ ಸಾತ್ ಆಠ್ ನೌ ದಸ್ ಗ್ಯಾರಾಹ್ ಬಾರಾಹ್ ತೇರಾ...' ಎಂದು ಹಾಡಲು ಪ್ರಾರಂಭಿಸಿದಳು. ನಮಗೋ ತಾಳಲಾರದಷ್ಟು ನಗು. ಎಲ್ಲರೂ ನಕ್ಕಿದ್ದೇ ನಕ್ಕಿದ್ದು. ನಮ್ಮ ಶಿಕ್ಷಕರೂ ನಗುವಿನಲ್ಲಿ ಪಾಲ್ಗೊಳ್ಳುತ್ತಾ ಮುಂದುವರಿಸು ಹೂಂ... ಎಂದರು. ಆಗ ಅವಳ ಮುಖ ನೋಡಬೇಕಾಗಿತ್ತು.

ಗೆಳತಿಯರ ಹಿಂಡಿನತ್ತ ನೋಡಿದ ಅವಳ ತುಂಟ ಕಣ್ಣುಗಳು ನಾವೆಲ್ಲರೂ ಹಿಂದಿನ ದಿನ ನೋಡಿದ 'ತೇಜಾಬ್' ಚಿತ್ರದ ಥಳುಕಿನ ನೃತ್ಯವನ್ನು ಬಣ್ಣಿಸುವಂತಿದ್ದವು.

– ಚಂದ್ರಕಲಾ ಬಿ.ಎಂ.


W ಮಹಾತ್ಮೆ



ನಾನು ದ್ವಿತೀಯ ಬಿ.ಹೆಚ್.ಡಬ್ಲ್ಯೂ ಓದುತ್ತಿದ್ದೆ. ಕ್ಲಾಸಿನಲ್ಲಿ ವಿಶೇಷವಾದುದನ್ನು ತಿಳಿಸಿ ಅಚ್ಚರಿ ಪಡಿಸುವ ಹವ್ಯಾಸ. ಒಂದು ದಿನ ಸಾರ್ ಬಿಡಲು ತಡವಾದದ್ದನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಬೋರ್ಡಿನ ಮೇಲೆ COWಗೆ ಹಿಂದೆ ಏನಿರುತ್ತೆ? WOMANಗೆ ಮುಂದೆ ಏನಿರುತ್ತೆ?' ಎಂದು ಬರೆದೆ. ಇದನ್ನೋದಿದ ಹುಡುಗಿಯರು ಮನಸ್ಸಿನಲ್ಲೇ ಶಪಿಸುತ್ತಿದ್ದರೆ, ಹುಡುಗರು ಜಗಳಕ್ಕೆ ಶುರು ಮಾಡಿದರು. ಏನಿರುತ್ತೆ? ಎಂದು ಮರು ಪ್ರಶ್ನೆ ಹಾಕಿದಾಗ. ಏನಿರುತ್ತೆ ಅಂತ ಕೇಳ್ತೀರೇನ್ರಿ ಎಂದು ಮೇಲೆ ಬಂದಾಗ, ತಡೆದು COWಗೆ ಹಿಂದೆ W ಇರುತ್ತೆ. WOMANಗೆ ಮುಂದೆ W ಇರುತ್ತೆ ಎಂದು ಹೇಳಿದಾಗ ಪೆಚ್ಚು ಮೂತಿ ಮಾಡಿಕೊಂಡು ಕೂಡುವ ಸರದಿ ಅವರದಾದಾಗ ನಗುವ ಸರದಿ ನಮ್ಮದಾಗಿತ್ತು.

– ಪಂಪಾಪತಿ, ಕೊಂಚಿಗೇರಿ.

ಬಿಜೆಪಿ ಬೆಳೆಯಲು ಜನತಾದಳ ಕಾರಣವೇ?



ಬಿಜೆಪಿ ತೆಕ್ಕೆಯೊಳಕ್ಕೆ ಜಾರ್ಜ್ ಫರ್ನಾಂಡೀಸ್, ರಾಮಕೃಷ್ಣ ಹೆಗಡೆ ಅವರಂಥವರನ್ನು ನೂಕಿ, ಸಂಘ ಪರಿವಾರದ ಶಕ್ತಿ ವರ್ಧನೆಗೆ ಸಹಾಯ ಮಾಡಿದ ದಳದ ಪಾತ್ರವೇನೂ ಸಣ್ಣದಲ್ಲ. ಜಾರ್ಜ್ ಅಪ್ಪಟ ಗಾಂಧೀವಾದಿ. ಜಾತೀಯತೆ ಸೋಂಕದ ಸಮಾಜವಾದೀ ಧುರೀಣ. ಅಂಥವರು ಬಿಹಾರದಲ್ಲಿ ಬಿಜೆಪಿಯೊಡನೆ ಹೊಂದಾಣಿಕೆ ಮಾಡಿಕೊಳ್ಳುವಂಥ ಪರಿಸ್ಥಿತಿಯನ್ನು ದಳ ನಿರ್ಮಿಸಿತು.

○ **ಕೋ. ಚೆನ್ನಬಸಪ್ಪ**
ನಿವೃತ್ತ ನ್ಯಾಯಾಧೀಶರು
೧೨೭, ಪಶ್ಚಿಮ ಕಾರ್ಡ್ ರಸ್ತೆ,
ಮಹಾಲಕ್ಷ್ಮೀಪುರ, ಬೆಂಗಳೂರು - ೮೬

ನಿರೀಕ್ಷಿಸಿದಂತೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಹತ್ತೊಂಬತ್ತು ಪಕ್ಷಗಳ ಸರ್ಕಾರ ಸ್ಥಾಪನೆ ಆಗಿಯೆ ಬಿಟ್ಟಿದೆ. ಹದಿಮೂರು ಪಕ್ಷಗಳ ಸಂಯುಕ್ತರಂಗ ಸರ್ಕಾರವನ್ನು ಗೇಲಿ ಮಾಡಿದ ಇದೇ ಬಿಜೆಪಿ ಈಗ ಹತ್ತೊಂಬತ್ತು ಪಕ್ಷಗಳ ಸುಭದ್ರ ಸರ್ಕಾರವನ್ನು ಸ್ಥಾಪಿಸಿದೆ. ಹದಿಮೂರು ಪಕ್ಷಗಳ ಸರ್ಕಾರ ಸುಭದ್ರ ಸರ್ಕಾರ ನೀಡಲು ಅಸಾಧ್ಯ ಎಂದು ಗಂಟಲು ಹರಿದುಕೊಂಡ ಬಿಜೆಪಿ ಈಗ ಏಕಪಕ್ಷ ಆಡಳಿತೆಯ ಕಾಲ ಮುಗಿದಿದೆ' ಎನ್ನುತ್ತದೆ.

ಆ ಹತ್ತೊಂಬತ್ತು ಪಕ್ಷಗಳಾದರೂ ಎಂಥವು? ಭ್ರಷ್ಟಾಚಾರದ ಕಳಂಕಿತಳಾದ ಜಯಲಲಿತಾ ಮೇಲೆ ಕ್ರಮಕೈಗೊಳ್ಳಬೇಕೆಂದು ಇದೇ ಬಿಜೆಪಿ ಸಂಸತ್ತಿನ ಕಾರ್ಯಕಲಾಪಗಳಿಗೆ ಅಡ್ಡಿ ಮಾಡಿ ಸದನದ ಕೂಪಕ್ಕೆ ನುಗ್ಗಿ ಘೋಷಣೆಗಳನ್ನು ಕೂಗಿ ಸತತವಾಗಿ ಮೂರ್ನಾಲ್ಕು ದಿನ ಧರಣಿ ನಡೆಸಿದರು. ಆದರೆ ಈಗ ಅದೇ ಜಯಲಲಿತ ಬೆಂಬಲದಿಂದ ಬಿಜೆಪಿ ಸುಭದ್ರ ಸರ್ಕಾರ ಸ್ಥಾಪನೆ ಮಾಡಿದೆ. ಜಯಲಲಿತಮ್ಮನವರ ಆಜ್ಞಾನುಸಾರ ಸತ್ಯ ನ್ಯಾಯ ಪ್ರಾಮಾಣಿಕತೆಗೆ ಜಗದ್ವಿಖ್ಯಾತವಾದ ಭಾರತೀಯ ಉಜ್ವಲ ಪರಂಪರೆಯನ್ನು ಆಕಾಶಕ್ಕೆ ಎತ್ತಿ ಹಿಡಿಯಲು ಕುಸಿದು ಹೋಗಿರುವ ನೈತಿಕ ಪತನವನ್ನು ಎತ್ತಿ ಹಿಡಿಯಲು ಬಿಜೆಪಿ ಪಣ ತೊಟ್ಟಿದೆ!!.

ಹಿಂದೆ ಇದೇ ಜಯಲಲಿತಾ ಅಮ್ಮನವರನ್ನು ತುಚ್ಛೀಕರಿಸಿದ ನೀವು ಇಂದು ಅವರ ಅವಿಭಾಜ್ಯ ಅಂಗದಂತೆ ಹೇಗೆ ಆಗಿದ್ದೀರಿ? ಇಂಥ ಪ್ರಶ್ನೆ ಕೇಳುವವರಿಗೆ ರಾಜನೀತಿಶಾಸ್ತ್ರದ ಪ್ರಾಥಮಿಕ ತಿಳುವಳಿಕೆಯೂ ಇಲ್ಲ. ಅಮ್ಮನವರ ಸಖ್ಯವನ್ನು ಸಮರ್ಥಿಸಿಕೊಳ್ಳಲು ಬಿಜೆಪಿ ಹೇಳುತ್ತದೆ:

'ಅಂದಿನ ಪರಿಸ್ಥಿತಿಯೆ ಬೇರೆ. ಇಂದಿನ ಪರಿಸ್ಥಿತಿಯೆ ಬೇರೆ. ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳಬೇಕು. ಇದು ರಾಜನೀತಿ'.

'ರಾಜಕೀಯದಲ್ಲಿ ಯಾರೂ ಶಾಶ್ವತ ಶತ್ರುಗಳಲ್ಲ, ಯಾರೂ ಶಾಶ್ವತ ಮಿತ್ರರಲ್ಲ'. - ಇದೂ ಇನ್ನೊಂದು ಸೈದ್ಧಾಂತಿಕ, ತಾತ್ವಿಕ ಸಮರ್ಥನೆ. ಭ್ರಷ್ಟಾಚಾರದಲ್ಲಿ ತೊಡಗಿದವರು, ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳಲ್ಲಿ ವಿಚಾರಣೆಗೆ ಗುರಿಯಾದವರು ಅಧಿಕಾರ ಸ್ಥಾನದಲ್ಲಿರಬಾರದು. ಇದು ಹಿಂದೆ ಬಿಜೆಪಿ ಊದುತ್ತಿದ್ದ ಪಾಂಚಜನ್ಯ. ಈ ಔಷಧದ ರುಚಿಯನ್ನು ಜಯಲಲಿತ ಅಮ್ಮನವರು ಮುತ್ತಯ್ಯ ಮಂತ್ರಿ ಮಹೋದಯರ ರಾಜೀನಾಮೆಯಿಂದ ಬಿಜೆಪಿಗೆ ತೋರಿಸಿದರು.

'ಮುತ್ತಯ್ಯ ರಾಜೀನಾಮೆ ಕೊಟ್ಟಿರುವುದರಿಂದ ಅವರಂತೆ ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿರುವ ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ ಜೋಷಿ, ಉಮಾಭಾರತಿ, ಬೂಟಾಸಿಂಗ್ ಮುಂತಾದವರೂ ರಾಜೀನಾಮೆ ಕೊಡಬೇಕು' ಎಂದು ಅಮ್ಮನವರು ನ್ಯಾಯವಾಗಿಯೆ ಕೇಳುತ್ತಾರೆ. ಅದಕ್ಕೆ ಬಿಜೆಪಿ ವಿವರಣೆ.

'ಇಲ್ಲ ಇಲ್ಲ, ಮುತ್ತಯ್ಯನ ವಿಚಾರವೇ ಬೇರೆ. ಅಡ್ವಾಣಿ, ಜೋಷಿ, ಉಮಾಭಾರತಿ.... ವಿಚಾರವೇ ಬೇರೆ'.

'ಹೇಗೆ?'

'ಈ ಬಿಜೆಪಿ ನಾಯಕರ ಮೇಲಿರುವ ಮೊಕದ್ದಮೆ ರಾಜಕೀಯ ಸ್ವರೂಪದವು. ರಾಜಕೀಯ ಆರೋಪ ಬೇರೆ. ಲಂಚ ತಿಂದ ಆರೋಪ ಬೇರೆ!'

ನಾಲ್ಕು ನೂರು ವರ್ಷಗಳ ಹಳೆಯದಾದ ಒಂದು ಪ್ರಾರ್ಥನಾ ಸ್ಥಳವನ್ನು ಸ್ಥಾಪಿತ ಶಾಸನಕ್ಕೆ ವಿರುದ್ಧವಾಗಿ ಧ್ವಂಸ ಮಾಡುವುದು ದಂಡನ್ಯಾಯದ ಪ್ರಕಾರ ಅಪರಾಧ. ನ್ಯಾಯದ ಉಲ್ಲಂಘನೆ ಶಿಕ್ಷಾಪರಾಧ. ಹೇಗೆ ವ್ಯತ್ಯಾಸ? ವ್ಯತ್ಯಾಸವಿದೆ. ಅದು ರಾಜನೀತಿ ಶಾಸ್ತ್ರ ನಿಪುಣರಿಗೇ ಗೊತ್ತು. ಸಾಧಾರಣ ಕುರಿಗಳಂತಿರುವ ಜನಗಳಿಗೆ ಗೊತ್ತಾಗದು! ಕೌಟಿಲ್ಯನ ಅರ್ಥಶಾಸ್ತ್ರ ಪಾರಂಗತರಾದ, ಮನುಧರ್ಮ ಪ್ರತಿಷ್ಠಾಪನಾ ಚಾರ್ಯರಿಗೆ ರಾಜ್ಯಾಡಳಿತೆಯ ಮರ್ಮ ಗೊತ್ತು. ಸಾಧಾರಣ ಸಾಮಾಜಿಕ ನೀತಿಶಾಸ್ತ್ರವೆ ಬೇರೆ. ರಾಜನೀತಿಶಾಸ್ತ್ರವೆ ಬೇರೆ. ಸಾಮಾಜಿಕ ನೀತಿ ಶಾಸ್ತ್ರದಲ್ಲಿ ಪರಸ್ತ್ರೀ ಸಂಗ ಪರಪುರುಷ ಸಂಗ ನೀತಿ ಬಾಹಿರ. ಆದರೆ ರಾಜನೀತಿಶಾಸ್ತ್ರದಲ್ಲಿ ಒಂದು ರಾಜ್ಯವನ್ನು ಗೆದ್ದುಕೊಳ್ಳಬೇಕೆಂದರೆ, ಒಬ್ಬ ರಾಜನನ್ನು ಸೋಲಿಸಬೇಕೆಂದರೆ ಆ ರಾಜ್ಯದ ರಾಜನನ್ನು ಸ್ತ್ರೀ ವ್ಯಾಮೋಹದಿಂದ ದುರ್ಬಲ ಗೊಳಿಸುವುದು. ಆ ರಾಜ್ಯದ ಅಧಿಕಾರಿಗಳಿಂದ ರಾಜ್ಯದ ರಹಸ್ಯಗಳನ್ನು ಭೇದಿಸಲು ಅವರಲ್ಲಿಗೆ ಕುಲೀನ ಅಥವಾ ವೇಶ್ಯಾ ಸ್ತ್ರೀಯರನ್ನು ಕಳಿಸಿ ವಶಪಡಿಸಿಕೊಳ್ಳುವುದು ರಾಜನೀತಿಶಾಸ್ತ್ರ!!

ಆದ್ದರಿಂದ ಯಾವ ಯಾವ ಸಂಸದರಿಗೆ ಏನೇನು ದೌರ್ಬಲ್ಯಗಳಿವೆ ಆ ದೌರ್ಬಲ್ಯಗಳ ಉಪಯೋಗ ಮಾಡಿಕೊಳ್ಳುವುದು. ಅಧಿಕಾರದ ಆಮಿಷ, ಹಣದ ಆಸೆ, ಹೆಣ್ಣಿನ ವ್ಯಾಮೋಹಗಳನ್ನು ಪೂರೈಸುವುದರಲ್ಲಿ ಏನೇನೂ ತಪ್ಪಿಲ್ಲ!! ಯಾಕೆಂದರೆ ಬಿಜೆಪಿಯ ಮುಖ್ಯವಾದ

ಮಹೋದ್ದೇಶ : ಈ ದೇಶದಲ್ಲಿ ಶ್ರೀರಾಮ (ಭಕ್ತರ) ಪಟ್ಟಾಭಿಷೇಕ!! ಆ ಮಹೋನ್ನತ ಉದ್ದೇಶದ ಈಡೇರಿಕೆಗೆ, ಭ್ರಷ್ಟಾಚಾರ ಕಳಂಕಿತರೊಡನೆ ಸಖ್ಯ ಮಾಡಿಕೊಳ್ಳುವುದು, ಕ್ರಿಮಿನಲ್ ಮೊಕದ್ದಮೆ ಎದುರಿಸುವವರಿಗೆ ಮಂತ್ರಿ ಪದವಿ ಕೊಡುವುದು ಗೌಣವಾದ ಸಂಗತಿ!! ಇದು ವ್ಯಾವಹಾರಿಕ ರಾಜನೀತಿ.

ಈ ಸಾಮಾಜಿಕ ನೀತಿ ಸೂತ್ರ ಮತ್ತು ರಾಜನೀತಿ ಸೂತ್ರಗಳ ನಡುವಿನ ಸೂಕ್ಷ್ಮ ವ್ಯತ್ಯಾಸ ಬಲ್ಲವರಿಗೆ ಬಿಜೆಪಿಯ ಧೋರಣೆಯಲ್ಲಿ ಯಾವ ವೈಪರೀತ್ಯವೂ ಇಲ್ಲ. ಇದೆಲ್ಲ ಕೌಟಿಲ್ಯನ ಅರ್ಥಶಾಸ್ತ್ರಕ್ಕೆ ಅನುಗುಣವಾಗಿಯೆ ಇದೆ!! ಆ ಧರ್ಮ, ನ್ಯಾಯ, ನೀತಿ ಸೂಕ್ಷ್ಮಗಳನ್ನೆಲ್ಲ ಬೃಹತ್ ರಾಜ್ಯಭಾರ ಧೋರಣೆಯಲ್ಲಿ ತರಬಾರದು. ಇದೇ ಸತ್ಯ! ಇದೇ ನ್ಯಾಯ!!

ಈ ವಿಚಾರವನ್ನು ಬದಿಗಿಟ್ಟು ಇನ್ನೊಂದು ಸಂಗತಿಯನ್ನು ಗಮನಿಸಬೇಕು. ಬಿಜೆಪಿ ಚುನಾವಣಾ ಘೋಷಣೆಯಲ್ಲಿ : ಅಯೋಧ್ಯೆಯಲ್ಲಿ ಮಸೀದಿ ಇದ್ದ ಜಾಗದಲ್ಲೇ ರಾಮಮಂದಿರ ನಿರ್ಮಾಣ ಆಗಬೇಕು. ಆ ಉದ್ದೇಶ ಈಡೇರಬೇಕಾದರೆ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕು. ಈ ದೇಶಕ್ಕೆಲ್ಲ ಒಂದೇ ಬಗೆಯ ನಾಗರೀಕ ಸಂಹಿತೆ ಇರಬೇಕು. ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಈ ಉದ್ದೇಶ ನೆರವೇರುತ್ತದೆ. ಕಾಶ್ಮೀರಕ್ಕೆ ವಿಶೇಷ ಸ್ಥಾನಕೊಟ್ಟ ೩೭೦ನೇ ಆರ್ಟಿಕಲ್ ರದ್ದಾಗಬೇಕು. ಅದು ಈಡೇರಬೇಕಾದರೆ ಕೇಂದ್ರದಲ್ಲಿ ಬಿಜೆಪಿ ಅಧಿಕಾರ ಸ್ಥಾಪನೆ ಆಗಬೇಕು. ಇದು ಸಂಘ ಪರಿವಾರದ ಪ್ರತಿಜ್ಞಾಪತ್ರ. ಚುನಾವಣಾ ಘೋಷಣೆ!.

ಮತದಾರರು ಸಂಘ ಪರಿವಾರಕ್ಕೆ ಬೆಂಬಲಕೊಟ್ಟು, ಅವರು ಹೇಳುವಂತೆ ಆಡಳಿತ ನಡೆಸುವ ಆದೇಶ (Mandate) ಕೊಟ್ಟಿದ್ದು, ಈ ಚುನಾವಣಾ ಘೋಷಣೆಯನ್ನು ನಂಬಿ. ಅಧಿಕಾರಕ್ಕೆ ಬರಲು ಬೇಕಾದ ಸಂಖ್ಯಾಬಲ ಪೂರ್ಣ ಸಿಕ್ಕಲಿಲ್ಲ. ಆದರೂ ಇತರರ ಬೆಂಬಲದಿಂದ ಅಧಿಕಾರಕ್ಕೆ ಬಂದರು. ಈಗ ಹೇಳುತ್ತಾರೆ. 'ಆ ಮೂರು ಉದ್ದೇಶಗಳನ್ನು ಸದ್ಯಕ್ಕೆ ಹಿಂದಕ್ಕಿಡಲಾಗಿದೆ' ಎಂದು. ಹಾಗಾದರೆ ಇದು ಮತದಾರರ ವಿಶ್ವಾಸ ದ್ರೋಹವಾಗುವುದಿಲ್ಲವೆ?

ಇಲ್ಲ ಎನ್ನುತ್ತಾರೆ ಸಂಘ ಪರಿವಾರದ ನಾಯಕರು.

ಹೇಗೆ? 'ಇದು ರಾಜನೀತಿ ತಂತ್ರ (Political strategy)' ಇದನ್ನೂ ಕೌಟಿಲ್ಯದ ಅರ್ಥಶಾಸ್ತ್ರದಲ್ಲಿ ನಿರೂಪಿಸಲಾಗಿದೆ. ಇದರಲ್ಲಿ ತಪ್ಪಿಲ್ಲ. ಇನ್ನೊಂದು ರೀತಿಯಿಂದಲೂ ಸಮರ್ಥಿಸಿಕೊಳ್ಳುತ್ತಾರೆ. ಸಂಘ ಪರಿವಾರದ ಧೋರಣೆಯನ್ನು ಈ ಸರ್ಕಾರದ ಧೋರಣೆಯೊಡನೆ ಒಂದು ಮಾಡಬೇಡಿ. ಸಂಘ ಪರಿವಾರ ಒಂದು ರಾಜಕೀಯ ಪಕ್ಷವಾಗಿ, ಅದರ ಧೋರಣೆಯನ್ನು ಮುಂದುವರಿಸಿಕೊಂಡು ಹೋಗುತ್ತದೆ. ಕಾಲ ಬಂದಾಗ ಅದನ್ನು ಕಾರ್ಯಾಗತಗೊಳಿಸುತ್ತದೆ.

ಕೊಚ್ಚೆ ಚಿಂತನ

ಎಲ್.ಕೆ.ಅದ್ವಾಣಿ ಘೋಷಿಸುತ್ತಾರೆ: ಬಿಜೆಪಿ ಉತ್ಕರ್ಷಕ್ಕೆ ರಾಮಮಂದಿರ ನಿರ್ಮಾಣ ಕಾರ್ಯಕ್ರಮವೇ ಮುಖ್ಯ. ಆ ಘೋಷಣೆಯ ಬೆನ್ನೇರಿ ಈ ಬೃಹತ್ ಪ್ರಮಾಣಕ್ಕೆ ಬೆಳೆದಿರುವ ಬಿಜೆಪಿ ಆ ಕಾರ್ಯಕ್ರಮವನ್ನು ಕೈಬಿಡುವ ಮಾತೇ ಇಲ್ಲ! ಇವರು ಕೇಂದ್ರದ ಗೃಹಮಂತ್ರಿಗಳು. ಹಾಗಾದರೆ ಪ್ರಧಾನಿ ವಾಜಪೇಯಿ ಅವರ ಸಂಸತ್ ಘೋಷಣೆಗೂ, ಆದ್ವಾಣಿ ಅವರ ಬಿಜೆಪಿ ವೇದಿಕೆ ಘೋಷಣೆಗೂ ಹೇಗೆ ಹೊಂದಾಣಿಕೆ ಆಗುತ್ತದೆ?


ಅದೇ ಮರ್ಮವಯ್ಯಾ! ಆ ಮರ್ಮ ಸಾಮಾನ್ಯರಿಗೆ ತಿಳಿಯದು.

ಆ ತಿಳುವಳಿಕೆ ಸಾಮಾನ್ಯರಿಗೆ ಬರುವುದಿಲ್ಲ! ಇದು ಮನುಧರ್ಮಶಾಸ್ತ್ರ!!

ಆರ್ಟಿಕಲ್ ೩೫೬ ಅನ್ನು ರಾಜ್ಯ ಸರ್ಕಾರಗಳನ್ನು ಉರುಳಿಸಲು ಉಪಯೋಗಿಸಲಾಗದು ಎಂಬುದು ಬಿಜೆಪಿ, ಘೋಷಿತ ನೀತಿ. ತಮಿಳುನಾಡಿನಲ್ಲಿ ಡಿಎಂಕೆ ಆಡಳಿತೆಯಲ್ಲಿ ಶಾಸನ ಸುವ್ಯವಸ್ಥೆ (Law and order) ಹದಗೆಟ್ಟಿದೆ. ಆ ಸರ್ಕಾರವನ್ನು ಕಿತ್ತು ಹಾಕಿ ಎಂದು ಜಯಲಲಿತ ಅಮ್ಮನವರ ಒತ್ತಾಯಕ್ಕೆ ಮಣಿದು ಆ ರಾಜ್ಯದ ಆಡಳಿತೆಯ ಸಮೀಕ್ಷೆಗಾಗಿ ಒಂದು ವೀಕ್ಷಕ ತಂಡ ಕಳಿಸುತ್ತಾರೆ. ಆ ತಂಡ 'ತಮಿಳುನಾಡಿನಲ್ಲಿ ಅಂಥ ದುಃಸ್ಥಿತಿಯಿಲ್ಲ' ಎಂದು ವರದಿ ಮಾಡುತ್ತದೆ. ಆ ಹೇಳಿಕೆಗೆ ಗೃಹ ಮಂತ್ರಿ ಅಡ್ವಾಣಿ ಅತೃಪ್ತಿ ವ್ಯಕ್ತಪಡಿಸುತ್ತಾರೆ!! ವೀಕ್ಷಕ ತಂಡ ಕಳಿಸಿದ್ದೇಕೆ? ಅದರ ಅಭಿಪ್ರಾಯಕ್ಕೆ ಅಸಮಾಧಾನವೇಕೆ? ಇದು ರಾಜನೀತಿ ನೈಪುಣ್ಯ!

ಸಂಘ ಪರಿವಾರ ತನ್ನ ಸ್ಥಾನ ಭದ್ರಪಡಿಸಿಕೊಳ್ಳುತ್ತಿದೆ. ಮುಂದಿನ ಚುನಾವಣೆಯಲ್ಲಿ ಏಕ ಪಕ್ಷದ ಆಡಳಿತೆಗೆ ಭದ್ರಬುನಾದಿ ಹಾಕುತ್ತಿದೆ. ಈ ಪ್ರಯತ್ನದಲ್ಲಿ ಯಾವ ನೀತಿಯೂ, ಸಾಧನವೂ ಸಾಧುವೇ.

ಇದು ಬೆಳೆಯಲು ಯಾರು ಕಾರಣ? ಪ್ರಪ್ರಥಮ ಪಾತಕಿ ಕಾಂಗ್ರೆಸ್(ಐ)! ಎರಡು ಸರಕಾರಗಳನ್ನು ಉರುಳಿಸಿ ಮರು ಚುನಾವಣೆಗೆ ಅವಕಾಶ ಕಲ್ಪಿಸಿದ ಕಾಂಗ್ರೆಸ್, ಸಂಘ ಪರಿವಾರದ ಬೇಡಿಕೆ/ಒತ್ತಾಯಕ್ಕೆ ಬೆಂಬಲಕೊಟ್ಟಿತು. ಬೇಡವಾಗಿದ್ದ ಚುನಾವಣೆಯನ್ನು ತಂದು ಪರಿವಾರದ



ಏನ್ ಡಾಕ್ಟ್ರೆ!?... ಇನ್ನೊಂದು ಚುನಾವಣೆ ಬರುವ ಹೊತ್ತಿಗಾದ್ರೂ, ನನ್ನ ಆರೋಗ್ಯ ಸುಧಾರಿಸಬಹುದೆ?

ಬೇರನ್ನು ಬಲಪಡಿಸಿದ್ದು ಕಾಂಗ್ರೆಸ್. ಕಾಂಗ್ರೆಸ್ಸು ಕೋಮುವಾದಿ ಶಕ್ತಿಗಳಿಗೆ ಲಾಗಾಯ್ತು ಬೆಂಬಲ ಕೊಡುತ್ತಲೆ ಬಂದಿದೆ. ಅಯೋಧ್ಯೆಯ ರಾಮಮಂದಿರದ ಬೀಗ ತೆಗೆಸಿದ್ದು ರಾಮಭಕ್ತರ ಪ್ರೀತ್ಯರ್ಥವಾಗಿಯೆ. ಶಿಲಾನ್ಯಾಸ ಸಮಾರಂಭ ಆಗಿದ್ದೂ ಕಾಂಗ್ರೆಸ್ ಆಶೀರ್ವಾದದಿಂದಲೆ. ಬಾಬ್ರಿ ಮಸೀದಿ ಧ್ವಂಸ ಆಗಿದ್ದೂ ಕಾಂಗ್ರೆಸ್ ಆಡಳಿತೆಯ ಕಾಲದಲ್ಲಿಯೆ! ಈ ಮಾತನ್ನು ದೃಢಪಡಿಸಿ ಹಿಂದಿನ ಗೃಹ ಕಾರ್ಯದರ್ಶಿ ಕೆ.ಎಫ್.ರುಸ್ತುಮಜಿ ಮುಂಬೈನಲ್ಲಿ ಮೊನ್ನೆ (೧೭.೪.೯೮ರಂದು) ತಾನೆ ಹೇಳಿದರು.

ಬಿಜೆಪಿ ತೆಕ್ಕೆಯೊಳಕ್ಕೆ ಜಾರ್ಜ್ ಫರ್ನಾಂಡೀಸ್, ರಾಮಕೃಷ್ಣ ಹೆಗಡೆ ಅವರಂಥವರನ್ನು ನೂಕಿ, ಸಂಘ ಪರಿವಾರದ ಶಕ್ತಿ ವರ್ಧನೆಗೆ ಸಹಾಯ ಮಾಡಿದ ದಳದ ಪಾತ್ರವೇನೂ ಸಣ್ಣದಲ್ಲ. ಜಾರ್ಜ್ ಅಪ್ಪಟ ಗಾಂಧೀವಾದಿ. ಜಾತೀಯತೆ ಸೋಂಕದ ಸಮಾಜವಾದೀ ಧುರೀಣ. ಅಂಥವರು ಬಿಹಾರದಲ್ಲಿ ಬಿಜೆಪಿಯೊಡನೆ ಹೊಂದಾಣಿಕೆ ಮಾಡಿಕೊಳ್ಳುವಂಥ ಪರಿಸ್ಥಿತಿಯನ್ನು ದಳ ನಿರ್ಮಿಸಿತು. ಹಾಗೆಯೆ ಕರ್ನಾಟಕದಲ್ಲಿ ಕಾಂಗ್ರೆಸಿನ ಬುಡ ಅಲ್ಲಾಡಿಸಿ, ಬೇರಿಗೆ ಕೊಡಲಿ ಹಾಕಿದ ಹೆಗಡೆ ಅವರು ಬಿಜೆಪಿಯೊಡನೆ ಮೈತ್ರಿ ಮಾಡಿಕೊಳ್ಳಲು ಯಾರು ಕಾರಣ? ಇತ್ತೀಚೆಗೆ ಕರ್ನಾಟಕದ ದಳದ ಮುಖಂಡರು, ಸಚಿವರು ಬಹಿರಂಗ ಪಡಿಸಿರುವಂತೆ, ದಳ ಕೆಲವೇ ಕೆಲವು ವ್ಯಕ್ತಿಗಳ ಖಾಸಗಿ ಆಸ್ತಿ ಆಗಿ ಹೋಯಿತು. ಆ ಉಸಿರುಕಟ್ಟುವ, ಮರ್ಯಾದೆಯಿಲ್ಲದ ಪರಿಸ್ಥಿತಿಯಿಂದ ಹೊರ ನಡೆದು ಸಂಘ ಪರಿವಾರದೊಡನೆ ಸಖ್ಯ ಮಾಡಿಕೊಂಡರು!

ಅತ್ತ ಆಂಧ್ರದಲ್ಲಿ ಚಂದ್ರಬಾಬು ನಾಯ್ಡು ಕೂಡ ಹಾಗೆಯೆ ಮಾಡಿದರು. ಇವೆಲ್ಲ ಶಕ್ತಿಗಳಿಗಿಂತ ಹೆಚ್ಚಾಗಿ ಬಿಜೆಪಿ ಬೆಳವಣಿಗೆಗೆ ಬಿಎಸ್‌ಪಿ ಕೊಡುಗೆಯೆ ಅತ್ಯಧಿಕ. ಬಿಜೆಪಿಯೊಡನೆ ಒಂದಾಗಿ ಅಧಿಕಾರಕ್ಕೆ ಬಂದ ಮಾಯಾವತಿ ಆರೇ ತಿಂಗಳಲ್ಲಿ ದಲಿತರ ಉದ್ಧಾರದ ಉತ್ಸಾಹದಲ್ಲಿ ಇತರ ಎಲ್ಲರ ಅಸಮಾಧಾನಕ್ಕೆ ವೈರಕ್ಕೆ ಕಾರಣರಾದರು. ಆ ಆರು ತಿಂಗಳಲ್ಲಿ ಉ.ಪ್ರದೇಶದಲ್ಲಿ ಎಸ್.ಸಿ., ಎಸ್‌ಟಿ. ಕಾಯಿದೆಯನ್ನು, ಸವರ್ಣೀಯರ ಮೇಲೆ ತಾರತಮ್ಯವಿಲ್ಲದೆ ಪ್ರಯೋಗಿಸಿ, ಜನರಿಗೆ ಭೀತಿ ಹುಟ್ಟಿಸಿ ಬಿಜೆಪಿ ಬಾವುಟದ ನೆರಳಿಗೆ ದೂಡಿದರು. ಮಯಾವತಿ ಆಡಳಿತೆಯ ಬಿಸಿ ತಾಕಿದ ಜನತೆಗೆ, ದಲಿತರಿಂದ ಬಹಿರಂಗವಾಗಿ ಹೊಡೆತ ತಿನ್ನುವುದಕ್ಕಿಂತ, ಗೊತ್ತಾಗದೆ ಪ್ರಾಣ ಕಳೆಯುವ ಸಂಘ ಪರಿವಾರದ ವಿಷ ಸೇವನೆಯೆ ಲೇಸು ಎನಿಸಿರಬೇಕು!! ಇಲ್ಲದಿದ್ದರೆ ಹಿಂದಿನ ಸಂಸತ್ತಿನಲ್ಲಿ ಇಪ್ಪತ್ತು ಸದಸ್ಯರಿದ್ದ ಬಿಎಸ್‌ಪಿ, ಕೇವಲ ಆರಕ್ಕೆ ಇಳಿಯುತ್ತಿರಲಿಲ್ಲ!!.

ಈ ಪರಿಸ್ಥಿತಿಯಿಂದ ಪಾರಾಗುವ ಬಗೆ? ಈಗ್ಗೆ ಅರವತ್ತು ವರ್ಷಗಳ ಹಿಂದೆ ಮೇ. ೩, ೧೯೨೮ ರಂದು ಸುಭಾಸ ಚಂದ್ರಬೋಸ್, ಪುಣೆಯಲ್ಲಿ ಮಹಾರಾಷ್ಟ್ರ ಪ್ರಾಂತೀಯ ಸಮ್ಮೇಳನದಲ್ಲಿ ಮಾತನಾಡುತ್ತಾ; ''ಮತಾಂಧತೆ; ಧರ್ಮಭ್ರಾಂತಿ (Fanaticism) ಸಾಂಸ್ಕೃತಿಕ ಸೌಹಾರ್ದತೆಯ ಹಾದಿಯಲ್ಲಿರುವ ಘೋರ ಮುಳ್ಳು. ಈ ಮತಾಂಧತೆ ಮತ್ತು ಧರ್ಮಭ್ರಾಂತಿಗೆ ಜಾತ್ಯತೀತ ಮತ್ತು ವೈಜ್ಞಾನಿಕ (Secular and Scientific) ಶಿಕ್ಷಣಕ್ಕಿಂತ ಉತ್ತಮ ಪರಿಹಾರವಿಲ್ಲ'' ಎಂದು ಆಗಲೆ ಹೇಳಿದ್ದಾರೆ.

ಆದರೆ ಅವರ ಮಾತಿಗೆ ಕಿವಿಗೊಡುವವರು ಯಾರು? ಬೆಲೆ ಎಲ್ಲಿದೆ?

●

'ಬದುಕು' ಕಥಾ ಸ್ಪರ್ಧೆ ಬಹುಮಾನಿತರು

ಅಮೂರ್ತರ ಲೋಕದಲ್ಲಿ
ಚಿಂತಾಮಣಿ ಕೊಡ್ಲೆಕೆರೆ

ನರಸಿಂಹ ಐತಾಳರೂ ಪುಟ್ಮಾಣಿಯೂ
ಯು.ಆರ್. ಲಲಿತಾ

ಪಟ್ಟಾ
ಚಿತ್ರಶೇಖರ ಕಂಠಿ


ಬಹುಮಾನ ಮೊತ್ತವಾದ ರೂ. ೫೦೦೦ವನ್ನು ಮೂರು ಕಥೆಗಳಿಗೆ ಸಮವಾಗಿ ಹಂಚಲಾಗಿದೆ.



ಚಿಂತಾಮಣಿ ಕೊಡ್ಲೆಕೆರೆ
ಸಿ-೨-೨, ಡಬ್ಲ್ಯೂ.ಎಂ.ಎಸ್. ಕಾಂಪೌಂಡ್
ಜಯನಗರ, ೫ನೇ ಬ್ಲಾಕ್
ಬೆಂಗಳೂರು- ೫೬೦ ೦೪೧



ಯು.ಆರ್. ಲಲಿತಾ
'ಮಧುರಾ', ೩೨೫, 'ಎಚ್'
೯ನೇ 'ಕೆ' ಮುಖ್ಯ ರಸ್ತೆ, ವಿಜಯನಗರ
ಬೆಂಗಳೂರು- ೫೬೦ ೦೪೦



ಚಿತ್ರಶೇಖರ ಕಂಠಿ
''ಗ್ರೀಷ್ಮ'' ಸಂ. ೧೪೫/೨ ಎ
ಮಾಕಾ ಬಡಾವಣೆ, ಜೇವರ್ಗಿ ರಸ್ತೆ
ಗುಲಬರ್ಗಾ - ೫೮೫ ೧೦೨

ದೈವ ಇದ್ದರೂ ದರಿದ್ರ

ನನ್ನೂರು ಹಾವೇರಿ ಜಿಲ್ಲೆಗೆ ಸೇರಿರುವ ಹಾನಗಲ್ಲ ತಾಲ್ಲೂಕಿನ ಹಿರೇಣಗಿ ಗ್ರಾಮ. ಇದು ಹಾನಗಲ್ಲಿನಿಂದ ೬ ಕಿ.ಮೀ. ದೂರದಲ್ಲಿದೆ. ಹಾನಗಲ್ಲಿನ ಪ್ರಸಿದ್ಧ ಶ್ರೀ ಕುಮಾರಸ್ವಾಮಿ ಮಠದ ದರ್ಶನ ಪಡೆದೆ ಮುಂದೆ ಹೋಗುವ ಭಾಗ್ಯ ನಮಗಿದೆ. ನಮ್ಮೂರಿನಲ್ಲಿ ಗ್ರಾಮ ಪಂಚಾಯಿತಿ ಇದೆ. ಪ್ರಾಥಮಿಕ, ಪ್ರೌಢಶಾಲೆ ಇದೆ. ಅಂಚೆ ಕಛೇರಿಯೂ ಇದೆ. ಆದರೆ ನಮ್ಮೂರಿನಲ್ಲಿರುವ ಸೌಕರ್ಯಗಳನ್ನು ಉಪಯೋಗಿಸಿ ಕೊಳ್ಳಲು ಜನರಿಗೆ ಸರಿಯಾದ ಮಾರ್ಗ ಗಳಿದ್ದರೂ ಉಪಯೋಗ ಪಡೆದು ಕೊಳ್ಳುವಂತಹ ಧೀಮಂತ ಜನರ ಕೊರತೆ ಕಾಡುತ್ತಿದೆ. ಆದರಂತೆ 'ಸಾರ್ವಜನಿಕ ಗ್ರಂಥಾಲಯದ' ಕೊರತೆ ಇದೆ.

- ಪ್ರದೀಪ ಕಾಮನಹಳ್ಳಿ, ಹಿರೇಕಣಗಿ

ಗೋಗಿಯ ಕೆರೆ

ಗೋಗಿಯ ಕೆರೆ ಮೊದಲು ಸುಂದರವಾಗಿತ್ತು. ಆದರೆ ಈಗ ಅದರ ಸುಂದರತೆ ನಾಶವಾಗಿದೆ. ಹೇಗೆ ಎಂದು ಕೇಳ್ತೀರಾ? ನಮ್ಮ ಅಜ್ಞಾನಿ ಜನರು ಅದರಲ್ಲಿ ಬಟ್ಟೆ ಒಗೆಯುವುದು, ಯಾವುದಾದರೂ ಪ್ರಾಣಿ ಸತ್ತರೆ ಅದರಲ್ಲಿಯೇ ಎಸೆಯುವುದು. ಮಲ ಮೂತ್ರಗಳನ್ನು ಮಾಡುವುದು. ಈ ಎಲ್ಲಾ ಕಾರಣಗಳಿಂದ ಸರ್ಕಾರದಿಂದ ಇಲ್ಲಿ ಮೀನು ಸಾಕಾಣಿಕೆ ನಡೆದಿದೆ. ಆದರೆ ಈ ಮೀನುಗಳು ಇಲ್ಲಿ ಬದುಕುತ್ತಿಲ್ಲ. ಈ ಕೆರೆಗೆ ಒಂದು ರಕ್ಷಣೆ ಗೋಡೆ ಕಟ್ಟಿದರೆ. ಇಲ್ಲಿ ಮೀನುಗಳು ಆನಂದಿಂದ ಇರುತ್ತವೆ. ಹಾಗೆಯೇ ನಮ್ಮೂರಿಗೆ ಕಳೆ ಬರುತ್ತದೆ.

- ಅರವಿಂದ ಜಿ.ಗೊಳಿದ,
ಗೋಗಿ

ವೈದ್ಯರನ್ನು ನೇಮಿಸಿ

ಬಳ್ಳಾರಿ ತಾಲ್ಲೂಕ ಸೋಮಲಾಪುರ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು, ವೈದ್ಯರಿಲ್ಲ. ಈ ಗ್ರಾಮಧಲ್ಲಿ ೬೦೦ ಮನೆಗಳಿದ್ದು ಜನರು ಅನಾರೋಗ್ಯಕ್ಕೆ ತುತ್ತಾದಾಗ ಪ್ರಾಥಮಿಕ ಆರೋಗ್ಯ ಕೇಂದ್ರದ ಗೋಡೆಗಳಿಗೆ ಶಪಿಸುತ್ತಾರೆ. ಸರ್ಕಾರ ಆದಷ್ಟು ಬೇಗ ವೈದ್ಯರನ್ನು ನೇಮಿಸಬೇಕೆಂದು ನನ್ನ ಮನವಿ. ಸರ್ಕಾರ ಕಣ್ಣು ತೆರೆದೀತೆ?

-ಪಾಂಡುರಂಗಪ್ಪ, ಸೋಮಲಾಪೂರ

ಕೈ ಮುಗಿಯುತ್ತೇನೆ

ನಾನೊಮ್ಮೆ ರಾಯಚೂರ ಜಿಲ್ಲೆಯ ಕಾತರಳ ಎಂಬ ನಮ್ಮಜ್ಜನ ಊರಿಗೆ ಹೋಗಿದ್ದೆ. ಒಂದೆರಡು ದಿನ ಅಲ್ಲಿದ್ದು ಮರಳಿ ನನ್ನೂರಿಗೆ ಬರುವಾಗ ನಮ್ಮಜ್ಜನಿಗೆ 'ಅಜ್ಜ ನಾನು ಊರಿಗೆ ಹೋಗುತ್ತೇನೆ' ಎಂದು ಹೇಳಿದೆ. ಅದಕ್ಕವರು ''ಕೈ ಮುಗಿಯುತ್ತೇನಪ್ಪಾ ಬೇಗ ಹೋಗು ಬಸ್ಸು ಹೊರಡುತ್ತೆ'' ಅಂದರು. ನನಗೆ ಆಶ್ಚರ್ಯವಾಯಿತು. ಏಕೆಂದರೆ ನಾವು ಬೇಡವಾದವರನ್ನು ಹೋಗು ಎನ್ನಲು 'ಕೈ ಮುಗಿಯುತ್ತೇನೆ ಹೋಗು ಎಂದು ಹೇಳುತ್ತೇವೆ' ನಮ್ಮಜ್ಜನಿಗೇನಾದರೂ ಬೇಸರವಾದೆನಾ? ಎಂಬ ಆತಂಕದಲ್ಲಿ ನಮ್ಮ ಮಾವನವರಲ್ಲಿ ವಿಚಾರಿಸಿದೆ. ಆಗ ಮಾವನು ನೀನೇನೂ ಬೇಜಾರಾಗ ಬೇಕಿಲ್ಲ. ಕಲಿತವರಿಗೆ ಹೆಚ್ಚಿನ ಗೌರವ ಕೊಡಲು ಕೈ ಮುಗಿದು ಹೇಳಿದರು ಎಂದರು. ಇದರಿಂದ ಬೇಸರದ ನನ್ನ ಮುಖ ಅರಳಿತು. ಆದರೆ ಈ ಘಟನೆ ನೆನೆದರೆ ಈಗಲೂ ನಗೆಯುಕ್ಕುತ್ತದೆ. ನಗೆಯುಕ್ಕಿಸಿದ ನಮ್ಮಜ್ಜ ಈಗಿಲ್ಲ.

-ಶಿವಕುಮಾರ ಎಸ್.ಪೂಜಾರ,
ಕುಕನೂರು.'

ಸ್ತ್ರೀಯರೇ ಎಳೆಯುವ ತೇರು

ಗಂಗಾವತಿ ತಾಲ್ಲೂಕಿನಲ್ಲಿನ 'ಘಡಿವಡಕಿ' ಗ್ರಾಮವು ತನ್ನದೇ ಆದ ವೈಶಿಷ್ಟತೆಯನ್ನು ಪಡೆದಿದೆ. ಯಾವುದೇ ಜಾತ್ರೆಯಲ್ಲಾಗಲೀ ರಥವನ್ನು ಪುರುಷರೇ ಎಳೆಯವುದು ವಾಡಿಕೆ. ಆದರೆ ಈ ಘಡಿವಡಕಿ ಗ್ರಾಮದಲ್ಲಿನ 'ಲಕ್ಷ್ಮೀ ದೇವಿ'ಯ ಜಾತ್ರೆಯ ಸಮಯದಲ್ಲಿ ಸ್ತ್ರೀಯರೇ ಪ್ರತ್ಯೇಕವಾಗಿ ತೇರನ್ನು ಎಳೆಯುತ್ತಾರೆ. ಬಹಳ ಹಿಂದಿನಿಂದಲೂ ಈ ಪದ್ಧತಿ ನಡೆದು ಬಂದಿದೆ. ಸ್ತ್ರೀಯರಿಗಾಗಿಯೇ ಪ್ರತ್ಯೇಕವಾದ ರಥವಿರುವುದು ಭಾರತದಲ್ಲಿ ಎಲ್ಲಿಯೂ ಕಂಡುಬಂದಿಲ್ಲ. ಪುರುಷರಿಗಾಗಿಯೇ ಒಂದು ಸ್ತ್ರೀಯರಿಗಾಗಿಯೇ ಒಂದು ರಥ ಇಲ್ಲಿನ ವೈಶಿಷ್ಟ. ಸರ್ಕಾರ ಗಮನಹರಿಸಿದರೆ ಇದು ಉತ್ತಮ ಪ್ರವಾಸಿ ತಾಣವಾಗುವುದರಲ್ಲಿ ಸಂದೇಹವಿಲ್ಲ. ಬೆಳಿಗ್ಗೆ ೮ ಗಂಟೆಗೆ ಮತ್ತು ಮಧ್ಯಾಹ್ನ ೩ ಗಂಟೆಗೆ ಗಂಗಾವತಿಯಿಂದ ಈ ಗ್ರಾಮಕ್ಕೆ ಬಸ್ಸು ಹೊರಡುತ್ತವೆ. ಬನ್ನಿ.

-ಜಿ.ಪವನ್‌ಕುಮಾರ, ಗಂಗಾವತಿ

ಗ್ರಾಮವೊಂದರ ಮೊರೆ

ನಾನು ರಾಣೆಬೆನ್ನೂರು ತಾಲ್ಲೂಕಿಗೆ ಸೇರಿದ ಒಂದು ಗ್ರಾಮ. ನನ್ನ ಹೆಸರು ನಲವಾಗಲ. ಮೂರು ಸಾವಿರ ಜನ ನನ್ನ ಮಡಿಲಲ್ಲಿ ವಾಸಿಸುತ್ತಿದ್ದಾರೆ. ಪ್ರಾಥಮಿಕ ಶಾಲೆ, ಅಂಗನವಾಡಿ ಕೇಂದ್ರ, ಬಿಟ್ಟರೆ ಸರಕಾರದಿಂದ ಯಾವ ಸೌಲಭ್ಯವೂ ಇಲ್ಲ. ಬಿರ್ಲಾ ಕಂಪನಿಯೂ ನನ್ನ ಸುತ್ತಮುತ್ತ ಆವರಿಸಿದೆ. ಇದರಿಂದ ಬಂದಿದೆ ನನಗೆ ದುರಂತ. ಕಂಪನಿಯಿಂದ ನನ್ನವರಿಗೆ ಏನೂ ದೊರೆತಿಲ್ಲ. ಕೆಟ್ಟ ವಾಸನೆ ಹೊರತು. ಸ್ವಾತಂತ್ರ್ಯ ಬಂದು ೫೦ ವರ್ಷ ಗಳಾದರೂ ರಸ್ತೆ, ಸಂಚಾರ ವ್ಯವಸ್ಥೆ, ಗ್ರಂಥಾಲಯ ಮತ್ತು ಆರೋಗ್ಯ ಕೇಂದ್ರ ಇಲ್ಲ. ನನಗೇಕೆ ಈ ಶಿಕ್ಷೆ. ಸರಕಾರ ಕೊಡುವುದೇ ರಕ್ಷೆ?

-ಚಂದ್ರಶೇಖರ್.ಹ.ಸಾಲಕಟ್ಟಿ,
ನಲವಾಗಲ

ವೈದ್ಯರ ದುರಾಸೆ

ನಾವು ಸೀನಿದರೂ, ಕೆಮ್ಮಿದರೂ ವೈದ್ಯರ ಹತ್ತಿರ ಹೋಗುವ ಪರಿಪಾಠ ಬೆಳಿಸಿಕೊಂಡು ಬಿಟ್ಟಿದ್ದೇವೆ. ನಮ್ಮ ದೌರ್ಬಲ್ಯವನ್ನು ವೈದ್ಯರು ಹೇಗೆ ಉಪಯೋಗಿಸಿ ಕೊಳ್ತಾರೆ ಎನ್ನುವುದಕ್ಕೆ ಒಂದು ಚಿಕ್ಕ ಘಟನೆ ಹೇಳಿದರೆ ತಪ್ಪಾಗಲಿಕ್ಕಿಲ್ಲ. ಐದು ತಿಂಗಳ ಗರ್ಭಿಣಿಯಾದ ನನ್ನ ತಮ್ಮನ ಪತ್ನಿಯು ನಮ್ಮ ಮನೆಯಲ್ಲಿ ನಡೆಯುತ್ತಿರುವ 'ವರಮಹಾಲಕ್ಷ್ಮಿ' ಪೂಜೆಗೆಂದು ಅವರಿವರನ್ನು ಕರೆಯಲು ಸ್ವಲ್ಪ ತಿರುಗಾಡಿದರು. ಆ ದಿನ ಸ್ವಲ್ಪ ಸುಸ್ತು, ತಲೆ ತಿರುಗು ಎಂದು ಮಲಗಿದರು. ನಾವು ಗಾಬರಿಯಾಗಿ ತಕ್ಷಣ ನರ್ಸಿಂಗ್ ಹೋಮ್‌ಗೆ ಸೇರಿಸಿದೆವು. ನಮ್ಮೂರಿನಲ್ಲಿ ಏಕೈಕ ಲೇಡಿ ಡಾಕ್ಟರ್ ಇರುವ ನರ್ಸಿಂಗ್ ಹೋಮ್ ಅದು. ಡಾಕ್ಟರ್ ಪರೀಕ್ಷಿಸಿ 'ಈ ದಿನ ಮತ್ತು ನಾಳೆ ಇಲ್ಲೆ ಇರಬೇಕು' ಎಂದರು. ಎರಡು ಬಾಟ್ಲಿ ಗ್ಲೂಕೋಸ್, ಕೆಲವು ಮಾತ್ರೆ, ಇಂಜೆಕ್ಷನ್ ಕೊಟ್ಟು ಚಿಕಿತ್ಸೆ ಮಾಡಿದರು. ಸ್ವಲ್ಪ ಹುಷಾರಾದಾಗ ಡಿಸ್‌ಚಾರ್ಜ್ ಮಾಡಿಕೊಳ್ಳಬೇಕೆಂದು ಬಿಲ್ಲು ಕೇಳಿದರೆ 'ಒಂದು ಸಾವಿರ ಕೊಡಿ' ಎಂದರು. ನಾವು ಹೌಹಾರಿ 'ಇಷ್ಟೇಕೆ' ಎಂದು ಕೇಳಿದರೆ ದೊಡ್ಡ ಪಟ್ಟೀನೇ ಕೊಟ್ಟರು. ಒಂದು ರೂಮಿಗೆ ದಿನಕ್ಕೆ ೧೦೦ ರೂಪಾಯಿ. ಒಟ್ಟು ಮೂರು ದಿನ ನೀವು ಇದ್ದದ್ದು ನೀವು ಅಂದರು. ನಾವು ನರ್ಸಿಂಗ್ ಹೋಮ್‌ಗೆ ಹೋಗಿದ್ದು ಶುಕ್ರವಾರದ ರಾತ್ರಿ ೯.೩೦ಕ್ಕೆ ಬಿಡುಗಡೆಯಾಗುತ್ತಿರುವುದು ಭಾನುವಾರ ಸಂಜೆ ೮ಕ್ಕೆ. ನಾವು ಡಾಕ್ಟರಿಗೆ ಪ್ರತಿಭಟಿಸಿ ಶುಕ್ರವಾರ ರಾತ್ರಿ ೯.೩೦ರಿಂದ ಭಾನುವಾರ ೮ರವರೆಗೆ ಎರಡು ದಿನ ಆಗುತ್ತೆ ಎಂದಾಗ ನೂರು ರೂಪಾಯಿ ಕಡಿಮೆ ಮಾಡಿದರು. ಧ್ವನಿ ಇಲ್ಲದವರು ಏನು ಮಾಡಬೇಕು. ಹೀಗೆ ನಮ್ಮ ದೌರ್ಬಲ್ಯಗಳನ್ನು ದುರುಪಯೋಗ ಮಾಡಿಕೊಳ್ಳುವ ಈ ವೈದ್ಯರಿಗೆ ಏನೆನ್ನಬೇಕು.

ಇಂಥ ಹಣಗಳಿಸುವ ವೈದ್ಯರ ಪಡೆಯೇ ಸೃಷ್ಟಿಯಾಗುತ್ತಿದೆ. ಮುಟ್ಟಿದರೆ ಸಾಕು '೩೦ ರೂ. ಕೊಡಿ. ೪೦ ರೂ. ಕೊಡಿ' ಎನ್ನುವರಿದ್ದಾರೆ. ಔಷಧಿ ತಯಾರಿಸುವ ಕಾರ್ಖಾನೆಗಳಿಗೆ ಇವರ ಉದಾರ ಶಿಪಾರಸ್ಸು ಬೇರೆ. ಮಾತ್ರೆ ತೆಗೆದುಕೊಂಡು ಶಕ್ತಿಯಿಲ್ಲದವರ ಸಂಖ್ಯೆ ಹೆಚ್ಚುತ್ತಿದೆ.

ಏನು ಮಾಡುವುದು ಹೇಳಿ, ಆರೋಗ್ಯ ಬೇಕಿದ್ದರೆ ವೈದ್ಯರಲ್ಲಿ ಹೋಗಲೇ ಬೇಕು!

- ಕೆ.ಆರ್. ನಂದಕುಮಾರ, ಸಾಗರ

ವಿದ್ಯೆ-ಉದ್ಯೋಗ

ಮೈಸೂರಿನಲ್ಲಿ ಅಂಗವಿಕಲರ ತಾಂತ್ರಿಕ ಶಿಕ್ಷಣಕ್ಕೆ ಬದ್ಧವಾದ ಸಂಸ್ಥೆ

ಜೆ.ಎಸ್.ಎಸ್. ಅಂಗವಿಕಲರ ಪಾಲಿಟೆಕ್ನಿಕ್

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಶೈಕ್ಷಣಿಕ ಸೌಲಭ್ಯಗಳು ಶೀಘ್ರವಾಗಿ ಬೆಳೆಯುತ್ತಿವೆ. ಇದಕ್ಕೆ ಪೂರಕವಾಗಿ ಕಳೆದ ಐದು ದಶಕಗಳಿಂದಲೂ ಶಿಕ್ಷಣಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಜೆ.ಎಸ್.ಎಸ್. ಮಹಾವಿದ್ಯಾಪೀಠವು ಶಿಶು ವಿಹಾರದಿಂದ ಹಿಡಿದು ವೃತ್ತಿ ಶಿಕ್ಷಣದವರೆಗೆ ಸುಮಾರು ೨೦೦ಕ್ಕೂ ಮಿಕ್ಕ ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ. ಇದರಲ್ಲಿ ವೈದ್ಯಕೀಯ, ತಾಂತ್ರಿಕ, ಫಾರ್ಮಸಿ, ಕಾನೂನು, ವಿಜ್ಞಾನ, ಕಲೆ, ವಾಣಿಜ್ಯ ಮತ್ತು ಸಾಮಾನ್ಯ ಶಿಕ್ಷಣ ಸಂಸ್ಥೆಗಳೂ ಸೇರಿವೆ. ಈ ಸಂಸ್ಥೆಗಳಲ್ಲಿ ಅಂಗವಿಕಲರಿಗಾಗಿ ಮೂರು ಸಂಸ್ಥೆಗಳಿವೆ. ಈ ಎಲ್ಲದರಲ್ಲಿಯೂ ವಿಶಿಷ್ಟವಾದ, ವಿಶೇಷವಾದ ಸಂಸ್ಥೆಯೆಂದರೆ ಜೆ.ಎಸ್.ಎಸ್. ಅಂಗವಿಕಲರ ಪಾಲಿಟೆಕ್ನಿಕ್. ಈ ಸಂಸ್ಥೆಯ ಭಾರತದಲ್ಲಿಯೇ ಅಂಗವಿಕಲರಿಗೆ ತಾಂತ್ರಿಕ ಶಿಕ್ಷಣ ಒದಗಿಸುವುದರಲ್ಲಿ ಮೊದಲನೆಯದಾಗಿದ್ದು, ಇದು ಮೈಸೂರಿನ ಪ್ರತಿಷ್ಠಿತ ಶ್ರೀ ಜಯಚಾಮ ರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿದೆ.

ನಮ್ಮ ದೇಶದಲ್ಲಿ ಜನಸಂಖ್ಯೆಯ ಶೇ.೧೦ರಷ್ಟು ಅಂಗವೈಕಲ್ಯವುಳ್ಳವರಿದ್ದಾರೆ. ಶೇ. ೧ರಷ್ಟು ಮನೋವಿಕಲರಿದ್ದಾರೆ. ಅಂಗವೈಕಲ್ಯತೆಯುಳ್ಳವರು ಎಂದರೆ ದೈಹಿಕ ಅಂಗವೈಕಲ್ಯತೆ, ಶ್ರವಣ ದೋಷ, ದೃಷ್ಟಿದೋಷ ಇರುವವರು. ಪ್ರಕೃತಿಯ ಆಕಸ್ಮಿಕ ಕೊಡುಗೆಯಿಂದಲೋ, ಅಪಘಾತದಿಂದಲೋ, ಅನುವಂಶೀಯ ಗುಣಗಳಿಂದಲೋ ಅಥವಾ ಅಪೌಷ್ಟಿಕತೆಯಿಂದಲೊ ಅಂಗವಿಕಲರಾಗಿ ಸಾಮಾನ್ಯ ಸದೃಢರು ಮಾಡಬಹುದಾದ ಚಟುವಟಿಕೆಗಳಿಂದ ವಂಚಿತರಾಗಿರುತ್ತಾರೆ. ತಮ್ಮ ಅಂಗವಿಕಲತೆಯಿಂದಾಗಿ ಇತರರೊಡನೆ ಸ್ಪರ್ಧಿಸಲಾಗದ ಇವರನ್ನು ಎಲ್ಲರಂತೆ ಬದುಕಿನ ಮುಖ್ಯವಾಹಿನಿಗೆ ತರಲು ವಿಶೇಷ ಸಂಸ್ಥೆಗಳ ಅಗತ್ಯವಿದೆ. ಅವರ ಬಾಳು ಹಸನಾಗಲು ಮತ್ತು ಅವರು ಬೇರೆಯವರನ್ನು ಅವಲಂಬಿಸದೆ ಸ್ವತಂತ್ರವಾಗಿ ಜೀವನ ನಡೆಸುವಂತಾಗಲು ಅನೇಕ ಸೌಲಭ್ಯಗಳನ್ನು ಅವರಿಗಾಗಿಯೇ ರೂಪಿಸಲಾಗುತ್ತಿದೆ. ಆದುದರಿಂದ ತಾಂತ್ರಿಕ ಹಾಗೂ ತಾಂತ್ರಿಕೇತರ ಶಿಕ್ಷಣಗಳ ಪ್ರಯೋಜನವನ್ನು ಅಂಗವಿಕಲ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಡೆಯುವಂತೆ ಪ್ರೋತ್ಸಾಹಿಸಲು ಈ ವಿಶೇಷ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಪರಿಣಾಮವಾಗಿ ಅನೇಕ ಅಂಗವಿಕಲ ಮಕ್ಕಳು ಶಿಕ್ಷಣ ಸೌಲಭ್ಯಗಳಿಂದ ವಂಚಿತರಾಗುತ್ತಾರೆ ಹಾಗೂ ಹೀಗೂ ಎಸ್.ಎಸ್.ಎಲ್.ಸಿ.ಯವರೆಗೆ ಓದಿ ಉನ್ನತ ಶಿಕ್ಷಣವನ್ನು ಪಡೆಯಲಾಗದೆ ಅನಿವಾರ್ಯವಾಗಿ ವೃತ್ತಿ ತರಬೇತಿಗೆ ಹೋಗುತ್ತಾರೆ.

ಆದ್ದರಿಂದ ೧೯೮೬ರ ರಾಷ್ಟ್ರೀಯ ಶಿಕ್ಷಣ ಕಾರ್ಯನೀತಿಯನ್ವಯ (National Educational Policy) ಅಂಗವಿಕಲರಿಗೂ ಸಮಾನ ಶಿಕ್ಷಣ ಹಾಗೂ ವಿಶೇಷ ಗಮನ ನೀಡುವ ಸಲುವಾಗಿ ಈ ಸಂಸ್ಥೆಯು ೧೯೯೧ರಲ್ಲಿ ಪ್ರಾರಂಭವಾಗಿದೆ. ಇದು ಭಾರತದಲ್ಲಿಯೇ ಮೊಟ್ಟ ಮೊದಲನೆಯದಾಗಿದ್ದು ವಿಶ್ವಬ್ಯಾಂಕ್ ಯೋಜನೆಯಡಿ ಕರ್ನಾಟಕ ಸರ್ಕಾರದ ಅನುದಾನ ನಿಯಮಗಳಿಗೊಳಪಟ್ಟಿದೆ. ಈ ಸಂಸ್ಥೆಯಲ್ಲಿ ಈ ಕೆಳಕಂಡ ವಿಷಯದಲ್ಲಿ ಡಿಪ್ಲೊಮಾ ತರಗತಿಗಳನ್ನು ನಡೆಸಲಾಗುತ್ತಿದೆ.

೧. ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್
೨. ಆರ್ಕಿಟೆಕ್ಚರ್
೩. ಮಾಡರ್ನ್ ಆಫೀಸ್ ಪ್ರಾಕ್ಟೀಸ್

ಈ ಎಲ್ಲಾ ಕೋರ್ಸುಗಳ ಕಾಲಾವಧಿ ೩



ವಿಶ್ವಬ್ಯಾಂಕ್ ನೆರವಿನೊಂದಿಗೆ ೮.೫ ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಕಾಲೇಜು ಕಟ್ಟಡ.

ವರ್ಷಗಳಾಗಿದ್ದು, ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸಲಾಗುವುದು. ಪ್ರವೇಶಕ್ಕಾಗಿ ಈ ಕೆಳಕಂಡ ಅಂಗವಿಕಲ ವಿದ್ಯಾರ್ಥಿಗಳನ್ನು ಪರಿಗಣಿಸಲಾಗುವುದು.

೧. ಮೂಳೆ ಮತ್ತು ಕೀಲು ಸಂಬಂಧದಲ್ಲಿ ಅಂಗವಿಕಲತೆ ಶೇ. ೪೦ಕ್ಕಿಂತ ಹೆಚ್ಚಿರಬೇಕು.

೨. ಶ್ರವಣದೋಷ ಸಂಬಂಧದಲ್ಲಿನ ಅಂಗವೈಕಲ್ಯತೆಯು ಶೇ.೭೦ಡಿಬಿಗಿಂತ ಹೆಚ್ಚಿರಬೇಕು.

ವಿದ್ಯಾರ್ಹತೆ

ಕರ್ನಾಟಕ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಪ್ರವೇಶವು ಅಖಿಲ ಭಾರತ ಮಟ್ಟದಲ್ಲಿರುತ್ತದೆ. ತಜ್ಞರನ್ನೊಳಗೊಂಡ ಸಮಿತಿಯಿಂದ ಆಯ್ಕೆ ನಡೆಸಲಾಗುವುದು. ಪ್ರತಿ ವಿಭಾಗಕ್ಕೂ ೩೦ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡಲಾಗುವುದು.

ಪಠ್ಯಕ್ರಮ ಪರೀಕ್ಷಾ ವಿಧಾನ ಮತ್ತು ಮೌಲ್ಯಮಾಪನ

ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಮಂಡಳಿಯು ನಿಗದಿಪಡಿಸಿರುವ ಪಠ್ಯಕ್ರಮವೇ ಇವರಿಗೂ ಇರುತ್ತದೆ. ಅಂದರೆ ಪಠ್ಯಕ್ರಮ, ಪರೀಕ್ಷೆ ಮತ್ತು ಮೌಲ್ಯಮಾಪನಗಳು ಇನ್ನಿತರ ಸಾಮಾನ್ಯ ವಿದ್ಯಾರ್ಥಿಗಳಿಗಿರುವಂತೆಯೇ ಇವರಿಗೂ ಇರುತ್ತದೆ. ಆದರೆ ವಿದ್ಯಾರ್ಥಿಗಳ ಅಂಗವೈಕಲ್ಯವನ್ನು ಗಮನದಲ್ಲಿಟ್ಟುಕೊಂಡು ತೀರಾ ಅಗತ್ಯವೆನಿಸಿದಲ್ಲಿ ಮಾತ್ರ ಪಠ್ಯಕ್ರಮದಲ್ಲಿ ಶೇ.೫ರಷ್ಟನ್ನು ತಾಂತ್ರಿಕ ಶಿಕ್ಷಣ ಮಂಡಳಿಯ ಅನುಮೋದನೆಯೊಂದಿಗೆ ಮಾರ್ಪಾಟು ಮಾಡಲಾಗುವುದು. ಹಾಗೆಂದು ಇವರ ಪಠ್ಯಕ್ರಮದ ಗುಣಮಟ್ಟವನ್ನು ಯಾವ ರೀತಿಯಲ್ಲಿಯೂ ದುರ್ಬಲಗೊಳಿಸಲಾಗಿಲ್ಲ. ಮೂರು ವರ್ಷಗಳ ಡಿಪ್ಲೊಮಾ ತರಗತಿಗಳಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಕರ್ನಾಟಕ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ಡಿಪ್ಲೊಮಾ ಸರ್ಟಿಫಿಕೇಟ್ ನೀಡಲಾಗುವುದು.

ಬ್ರಿಡ್ಜ್ ಕೋರ್ಸ್

ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಪ್ರಾರಂಭದಲ್ಲಿ ಆಂಗ್ಲಭಾಷೆಯ ತೊಡಕುಂಟಾಗುತ್ತದೆ. ಆದ್ದರಿಂದ ಮೊದಲನೆಯ ವರ್ಷದ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯ ತರಗತಿಗಳನ್ನು ವಿಶೇಷವಾಗಿ ನಡೆಸಲಾಗುವುದು.

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಮತ್ತು ಉತ್ತೇಜನ ನೀಡಲು ಮನಃಶಾಸ್ತ್ರ ಪರಿಣತ ಉಪನ್ಯಾಸಕರೊಬ್ಬರು ತರಗತಿಗಳನ್ನು ನಡೆಸುತ್ತಾರೆ.


ಸಿಬ್ಬಂದಿ ವರ್ಗ

ಸಾಕಷ್ಟು ಸಾಮರ್ಥ್ಯವುಳ್ಳ ಹಾಗೂ ಅರ್ಪಣಾ ಮನೋಭಾವದಿಂದ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿವರ್ಗದವರಿದ್ದಾರೆ. ಇವರಲ್ಲಿ ಆರು ಮಂದಿ ಉಪಾಧ್ಯಾಯರು ಕೆನಡಾ ಮತ್ತು ಇಂಗ್ಲೆಂಡ್ ದೇಶಗಳಲ್ಲಿನ ಪ್ರತಿಷ್ಠಿತ ಸಂಸ್ಥೆಗಳಿಂದ ಈ ವಿಷಯವಾಗಿ ತರಬೇತಿ ಪಡೆದು ಬಂದಿದ್ದಾರೆ.

ಸೌಲಭ್ಯಗಳು

ಕಟ್ಟಡ : ಅಂಗವಿಕಲ ವಿದ್ಯಾರ್ಥಿಗಳ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ವಿಶೇಷವಾಗಿಯೇ ವಿನ್ಯಾಸಪಡಿಸಿದ ಕಟ್ಟಡಗಳಿವೆ. ಈ ಕಟ್ಟಡಗಳನ್ನು ಸುಮಾರು ೧೧,೮೦೦ ಚದರ ಮೀಟರ್‌ಗಳ ವಿಸ್ತಾರದಲ್ಲಿ ೮.೫ ಕೋಟಿ ರೂ.ಗಳ ವೆಚ್ಚದಲ್ಲಿ ಪ್ರತಿಷ್ಠಿತ ವಿನ್ಯಾಸಕಾರರ (ಆರ್ಕಿಟೆಕ್ಟ್) ಮಾರ್ಗದರ್ಶನದಲ್ಲಿ ಕಟ್ಟಲಾಗಿದೆ.

ಪ್ರಯೋಗಾಲಯಗಳು : ಮೂರು ಕೋರ್ಸುಗಳ ಎಲ್ಲಾ ಪ್ರಯೋಗಾಲಯಗಳಿಗೆ ರೂ. ೭೦ ಲಕ್ಷಗಳ ವೆಚ್ಚ ತಗುಲಿದೆ. ಇದರಲ್ಲಿ ಅಂಗವಿಕಲರಿಗಾಗಿ ಬೇಕಾಗುವ ವಿಶೇಷ ಉಪಕರಣಗಳೂ (Special Equipments) ಸೇರಿವೆ.



ಪೀಠೋಪಕರಣಗಳು : ಅಂಗವಿಕಲರಿಗೆ ಅನುಕೂಲವಾಗುವಂತೆ ವಿಶೇಷ ಪೀಠೋಪಕರಣಗಳ ವ್ಯವಸ್ಥೆಯಿದೆ.

ಕಂಪ್ಯೂಟರ್ ಸೆಂಟರ್ : ಆಧುನಿಕ ಉಪಕರಣಗಳನ್ನೊಳಗೊಂಡಿರುವ ಕಂಪ್ಯೂಟರ್ ಸೆಂಟರ್ ಈಗಾಗಲೇ ೦.೫ ಕೋಟಿ ರೂ.ಗಳ ವೆಚ್ಚದಲ್ಲಿ ಪ್ರಾರಂಭವಾಗಿದೆ. ಇದರಲ್ಲಿ ಅಂಗವಿಕಲರಿಗಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಲಾಗಿರುವ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳಿವೆ. ಈ ಕಂಪ್ಯೂಟರ್ ಸೆಂಟರ್ ಕಟ್ಟಡದಲ್ಲಿನ ಎಲ್ಲಾ ವಿಭಾಗಗಳೊಂದಿಗೆ ಸಂಪರ್ಕಜಾಲವನ್ನು ಹೊಂದಿರುತ್ತದೆ.

ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ : ಈ ಸಂಸ್ಥೆಯು ಅತ್ಯುತ್ತಮ ಗ್ರಂಥಾಲಯವನ್ನೊಳಗೊಂಡಿದ್ದು ಇದರಲ್ಲಿ ಈಗಾಗಲೇ ಸುಮಾರು ೫೦೦೦ ಪುಸ್ತಕಗಳಿವೆ. ಇಲ್ಲಿ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಎಲ್ಲಾ ಪುಸ್ತಕಗಳಿವೆ. ಅಲ್ಲದೆ ಇಂಗ್ಲಿಷ್ ಭಾಷೆಯ ವಿಷಯಕ್ಕೆ ಸಂಬಂಧಪಟ್ಟ



ರಾಜ್ಯಮಟ್ಟದ 'ನೀವೇ ಮಾಡಿ' ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ವಾಸ್ತುಶಿಲ್ಪ ವಿಭಾಗದ ವಿದ್ಯಾರ್ಥಿಗಳು ನಿರ್ಮಿಸಿದ ಮಾಡೆಲ್

ಮತ್ತು ಸಾಮಾನ್ಯ ವಿಷಯಗಳಿಗೂ ಸಂಬಂಧಪಟ್ಟ ಪುಸ್ತಕಗಳಿವೆ.

ಈ ಗ್ರಂಥಾಲಯದಲ್ಲಿ ಸಾಕಷ್ಟು ತಾಂತ್ರಿಕ ಹಾಗೂ ಸಾಮಾನ್ಯ ನಿಯತಕಾಲಿಕೆಗಳನ್ನು ತರಿಸಲಾಗುತ್ತಿದೆ. ವಿಶ್ವಸಂಪರ್ಕ ಜಾಲದ (Network) ಸೌಲಭ್ಯವೂ ಇರುತ್ತದೆ.

ವಿದ್ಯಾರ್ಥಿ ವೇತನ : ರಾಜ್ಯ ಮತ್ತು ಕೇಂದ್ರ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳಿಂದ ಬರುವ ವಿದ್ಯಾರ್ಥಿ ವೇತನ ಮತ್ತು ಆರ್ಥಿಕ ಸಹಾಯಗಳನ್ನು ಒದಗಿಸಲಾಗುವುದು.

ಆರೋಗ್ಯ ಕೇಂದ್ರ : ಇಬ್ಬರು ವೈದ್ಯಾಧಿಕಾರಿಗಳಿರುವ ಪ್ರಾಥಮಿಕ ಆರೋಗ್ಯ ಕೇಂದ್ರವು ಪಾಲಿಟೆಕ್ನಿಕ್‌ನ ಆವರಣದಲ್ಲಿಯೇ ಇರುತ್ತದೆ.

ಕ್ರೀಡಾ ಮತ್ತು ಚಿಕಿತ್ಸೆಯ ಸೌಲಭ್ಯಗಳು : ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಒಳ ಕ್ರೀಡಾಂಗಣವನ್ನು ಫಿಸಿಯೋಥೆರಪಿ ಮತ್ತು ಹೈಡ್ರೋಥೆರಪಿಗಳ ಸೌಲಭ್ಯಗಳನ್ನು ಒದಗಿಸಲಾಗಿದೆ.

ಹಾಸ್ಟಲ್ : ಅಂಗವಿಕಲ ವಿದ್ಯಾರ್ಥಿಗಳ ಅಗತ್ಯವನ್ನು ಗಮನದಲ್ಲಿರಿಸಿಕೊಂಡು ಹಾಸ್ಟಲ್ ಕಟ್ಟಡವನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಅತ್ಯಂತ ಕಡು ಬಡ ವಿದ್ಯಾರ್ಥಿಗಳಿಗೆ ಉಚಿತ ವಸತಿ ಸೌಲಭ್ಯವನ್ನು ಒದಗಿಸಲು ಯೋಜಿಸಲಾಗಿದ್ದು, ಇದಕ್ಕಾಗಿ ೨೫ ಲಕ್ಷ ರೂ.ಗಳ ಕಾರ್ಪಸ್ ಫಂಡ್ ನಿಧಿಯನ್ನು ಸ್ಥಾಪಿಸಲು ಯೋಜಿಸಲಾಗಿದೆ. ಇದಕ್ಕೆ ಪೂರಕವಾಗಿ ಇಲ್ಲಿನ ಎಲ್ಲಾ ಸಿಬ್ಬಂದಿ ವರ್ಗದವರು ತಮ್ಮ ಒಂದು ತಿಂಗಳ ಸಂಬಳವನ್ನು ಉದಾರವಾಗಿ ನೀಡಿರುತ್ತಾರೆ. ಇದನ್ನು ಇನ್ನೂ ಅನೇಕ ದಾನಿಗಳ ಕೊಡುಗೆಯಿಂದ ಪ್ರಾರಂಭಿಸಬೇಕಾಗಿದೆ.

ರಿಸೋರ್ಸ್ ಇಂಜಿನಿಯರಿಂಗ್ ಸೆಂಟರ್ : ಈ ಕೇಂದ್ರವನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಅನುದಾನದೊಂದಿಗೆ ಪ್ರಾರಂಭಿಸಲಾಗಿದೆ. ಈ ಕೇಂದ್ರದ ಮುಖ್ಯ ಉದ್ದೇಶಗಳು ಅಂಗವಿಕಲರಿಗೆ ಬೋಧಿಸಲು ಅನುಕೂಲವಾಗುವ ವಿಶೇಷ ವಿಧಾನಗಳನ್ನು ರೂಪಿಸಲಾಗುವುದು. ಅದರಲ್ಲೂ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ದೃಶ್ಯ ಮಾಧ್ಯಮಗಳಾದ ವಿಡಿಯೋ ಕ್ಯಾಸೆಟ್ಸ್, ಕಂಪ್ಯೂಟರ್ ಏಡೆಡ್ ಇನ್‌ಸ್ಟ್ರಕ್ಷನಲ್ ಪ್ಯಾಕೇಜಸ್, ಸಂಜ್ಞಾಭಾಷೆಯ ಉಪಕರಣ (Sign Language modules)ಗಳನ್ನು, ಚಿತ್ರ, ನಕಾಶೆ ಮತ್ತು ಇನ್ನಿತರ ವಸ್ತುಗಳನ್ನು ತಯಾರಿಸಲಾಗುವುದು. ಈ ಮೂಲಕ ಬೋಧಿಸುವ ಹೊಸ ಹೊಸ ವಿಧಾನಗಳ ಬಗೆಗೆ ಸಂಶೋಧನೆ ಮಾಡಲಾಗುವುದು.

ಪ್ಲೇಸ್‌ಮೆಂಟ್ ಅಂಡ್ ಟ್ರೈನಿಂಗ್ : ಈ ಕೇಂದ್ರವು ಅನೇಕ ಕೈಗಾರಿಕೆಗಳೊಂದಿಗೆ ಸಂಪರ್ಕ ಹೊಂದಿದ್ದು ವಿದ್ಯಾರ್ಥಿಗಳಿಗೆ ಪಾಲಿಟೆಕ್ನಿಕ್ ಆವರಣದಲ್ಲಿಯೇ ಸಂದರ್ಶನಗಳನ್ನು ಏರ್ಪಡಿಸುತ್ತದೆ. ಈ ಮೂಲಕ ಇಲ್ಲಿಂದ ಪಾಸಾದ ವಿದ್ಯಾರ್ಥಿಗಳಿಗೆ ತರಬೇತಿ ಮತ್ತು ಕೆಲಸ ಸಿಗುವ ಸಾಧ್ಯತೆಗಳು ಹೆಚ್ಚಾಗಿವೆ.

ಸಮುದಾಯ ಪಾಲಿಟೆಕ್ನಿಕ್ ಯೋಜನೆ : ಈ ಯೋಜನೆಯು ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಿಂದ ಪ್ರಾಯೋಜಿತವಾದ ಒಂದು ಯೋಜನೆಯಾಗಿದ್ದು, ಇದರ ಮೂಲ ಉದ್ದೇಶ ಗ್ರಾಮಾಭಿವೃದ್ಧಿಯಾಗಿರುತ್ತದೆ. ಈ ಯೋಜನೆಯಡಿ ಗ್ರಾಮಾಂತರ ಪ್ರದೇಶದ ಜನರ ಜೀವನಮಟ್ಟವನ್ನು ಅದರಲ್ಲಿಯೂ ಅಂಗವಿಕಲರಿಗೆ ಆದ್ಯತೆ ಮೇರೆಗೆ ಉತ್ತಮ ಪಡಿಸುವ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಯೋಜನೆಯ ಕಾರ್ಯಕ್ರಮಗಳೆಂದರೆ.



ಎಲೆಕ್ಟ್ರಾನಿಕ್ಸ್ ಪ್ರಯೋಗಾಲಯದಲ್ಲಿ ತರಬೇತಿ ನಿರತ ವಿದ್ಯಾರ್ಥಿಗಳು

೧. ಗ್ರಾಮಾಂತರ ಪ್ರದೇಶಗಳಲ್ಲಿ ಜನರ ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆ ನಡೆಸಿ ಅವರ ಅವಶ್ಯಕತೆಗಳು ಉದ್ಯೋಗ ಸೃಷ್ಟಿಗೆ ಇರುವ ಅವಕಾಶಗಳು, ಅಲ್ಲಿನ ಜನರ ಕೆಲಸ ಕಾರ್ಯಗಳಲ್ಲಿ ಸೂಕ್ತ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಇರುವ ಅವಕಾಶಗಳು ಮತ್ತು ಲಭ್ಯವಿರುವ ಸಂಪನ್ಮೂಲಗಳ ಬಗ್ಗೆ ವಿವರಗಳನ್ನು ಸಂಗ್ರಹಿಸುವುದು.

೨. ಗ್ರಾಮಾಂತರ ಪ್ರದೇಶಗಳಲ್ಲಿನ ನಿರುದ್ಯೋಗಿಗಳಿಗೆ ವಿವಿಧ ವಿಷಯಗಳಲ್ಲಿ ಉಚಿತವಾಗಿ ಒಂದು ತಿಂಗಳಿನಿಂದ ಆರು ತಿಂಗಳ ಅವಧಿಯ ತರಬೇತಿ ನೀಡಲಾಗುವುದು. ಈ ತರಬೇತಿಯ ನಂತರ ತರಬೇತಿ ಪಡೆದವರು ಸ್ವಯಂ ಉದ್ಯೋಗ ಅಥವಾ ಬೇರೆ ಉದ್ಯೋಗಗಳಲ್ಲಿ ತೊಡಗಿ ತಮ್ಮ ಆರ್ಥಿಕ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಬಹುದಾಗಿರುತ್ತದೆ.

೩. ಅಲ್ಲಿನ ಜನರಿಗೆ ಸೂಕ್ತ ತಂತ್ರಜ್ಞಾನದ ಬಗೆಗೆ ಅರಿವು ಮೂಡಿಸಿ ಅವುಗಳನ್ನು ಅವರ ಕೆಲಸ ಕಾರ್ಯಗಳಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು.

೪. ಗ್ರಾಮಾಂತರ ಪ್ರದೇಶಗಳಲ್ಲಿ ತಾಂತ್ರಿಕ ಸೇವಾ ಕೇಂದ್ರಗಳನ್ನು ತೆರೆಯುವುದು ಹಾಗೂ ತಾಂತ್ರಿಕ ಸೇವಾ ಶಿಬಿರಗಳನ್ನು ನಡೆಸುವುದು. ಈ ಮೂಲಕ ಅವರು ಬಳಸುವ ಗೃಹೋಪಯೋಗಿ, ವ್ಯವಸಾಯ ಹಾಗೂ ಇತರ ಕೆಲಸಗಳಲ್ಲಿ ಉಪಯೋಗಿಸುವ ವಿವಿಧ ರೀತಿಯ ಉಪಕರಣಗಳ ದುರಸ್ತಿಗೆ ಬೇಕಾದ ತರಬೇತಿ ಸೌಲಭ್ಯಗಳನ್ನು ಒದಗಿಸಿ ಮಾರ್ಗದರ್ಶನ ನೀಡುವುದು.

೫. ಗ್ರಾಮಾಂತರ ಪ್ರದೇಶದ ಜನರಿಗೆ ಕುಡಿಯುವ ನೀರು, ನೈರ್ಮಲೀಕರಣ, ಕಡಿಮೆ ವೆಚ್ಚದ ಮನೆಗಳ ನಿರ್ಮಾಣ ಹಾಗೂ ಇತರ ಉಪಯುಕ್ತ ವಿಷಯಗಳಲ್ಲಿ ಸೂಕ್ತ ತಿಳುವಳಿಕೆ ಹಾಗೂ ಮಾರ್ಗದರ್ಶನ ನೀಡುವುದು.

೬. ಗ್ರಾಮಾಂತರ ಪ್ರದೇಶದ ಜನರ ಏಳಿಗೆ ಹಾಗೂ ಜೀವನ ಮಟ್ಟವನ್ನು ಸುಧಾರಿಸುವ ಸಲುವಾಗಿ ಸರ್ಕಾರದ ವಿವಿಧ ಇಲಾಖೆಗಳು ರೂಪಿಸಿರುವ ಅಭಿವೃದ್ಧಿ ಯೋಜನೆಗಳು ಹಾಗೂ ತಂತ್ರಜ್ಞಾನದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ ಕಾರ್ಯ ಕೈಗೊಳ್ಳುವುದು.

ಪಾಲಿಟೆಕ್ನಿಕ್‌ನ ಇನ್ನಿತರ ಧ್ಯೇಯೋದ್ದೇಶಗಳು

೧. ಜೆ.ಎಸ್.ಎಸ್. ವೈದ್ಯಕೀಯ ಕಾಲೇಜಿನ ಸಹಯೋಗದೊಂದಿಗೆ ಪುನರ್ವಸತಿ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

೨. ವಿಸ್ತರಣಾ ಕಾರ್ಯಕ್ರಮಗಳು

ಅ. ಪಾಲಿಟೆಕ್ನಿಕ್‌ಗೆ ಸೇರಲಾಗದ ಅಂಗವಿಕಲ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶವಾಗುವಂಥ ವಿವಿಧ ತರಬೇತಿಗಳನ್ನು ನೀಡುವುದು.

ಆ. ಕನಿಷ್ಠ ಅವಧಿಯ ಮತ್ತು ರಿಫ್ರೆಶರ್ ಕೋರ್ಸ್‌ಗಳನ್ನು ಪಾಲಿಟೆಕ್ನಿಕ್‌ನ ಸಿಬ್ಬಂದಿ ವರ್ಗದವರಿಗೆ ಏರ್ಪಡಿಸುವುದು.

ಇ. ಅಂಗವಿಕಲತೆಗೆ ಸಂಬಂಧಪಟ್ಟಂತೆ ಅಧಿವೇಶನ ಮತ್ತು ಕಾರ್ಯಾಗಾರಗಳನ್ನು ಏರ್ಪಡಿಸುವುದು.

ಈ. ಜನಸಾಮಾನ್ಯರಲ್ಲಿ ಅಂಗವಿಕಲತೆಯ ಬಗೆಗೆ ಮತ್ತು ಪುನರ್ವಸತಿ ವಿಷಯಗಳಲ್ಲಿ ತಿಳುವಳಿಕೆ ಮೂಡಿಸಲು ಕಾರ್ಯಕ್ರಮವನ್ನು ಏರ್ಪಡಿಸುವುದು.

೩. ಇತರ ಅಂಗವಿಕಲ ತರಬೇತಿ ಸಂಸ್ಥೆಗಳಲ್ಲಿನ ಅಧ್ಯಾಪಕರಿಗೆ ಸಮನ್ವಯ ಶಿಕ್ಷಣದ ಬಗೆಗೆ ತರಬೇತಿ ನೀಡುವುದು.

೪. **ನೋಡಲ್ ಸೆಂಟರ್** : ಈ ಕೇಂದ್ರದಲ್ಲಿ ಅಂಗವೈಕಲ್ಯತೆಗೆ ಸಂಬಂಧಪಟ್ಟ ನೂತನ ಪುಸ್ತಕಗಳ ಗ್ರಂಥಾಲಯ, ನಿಯತಕಾಲಿಕೆಗಳು, ಪತ್ರಿಕೆಗಳು, ಪುನರ್ವಸತಿ ಬಗೆಗೆ ಮಾಹಿತಿ ನೀಡುವ ಪುಸ್ತಕಗಳು ಇರುತ್ತವೆ. ಈ ಕೇಂದ್ರವು ಅಂಗವೈಕಲ್ಯತೆಗೆ ಸಂಬಂಧಪಟ್ಟಂತೆ ಅಂಕಿ ಅಂಶ ಹಾಗೂ ಇನ್ನಿತರ ಮಾಹಿತಿಗಳನ್ನೊಳಗೊಂಡಿದ್ದು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿರುತ್ತದೆ.

೫. **ಇತರ ಸಂಸ್ಥೆಗಳೊಂದಿಗೆ ಸಂಪರ್ಕ :**

ಅ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪರಿಣತರನ್ನು ಕರೆಸಿ ಅವರಿಂದ ಅಂಗವಿಕಲರಿಗೆ ಬೋಧನಾಕ್ರಮ ಮತ್ತು ತರಬೇತಿಯಲ್ಲಿ ಉಂಟಾಗಿರುವ ಆಧುನಿಕ ಬೆಳವಣಿಗೆಗಳು ಮತ್ತು ತಾಂತ್ರಿಕತೆಯ ಬಗೆಗೆ ಮಾಹಿತಿ ಪಡೆಯುವುದು.

ಆ. ಪಾಲಿಟೆಕ್ನಿಕ್‌ನ ಸಿಬ್ಬಂದಿ ವರ್ಗದವರನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರತಿಷ್ಠಿತ ಅಂಗವಿಕಲ ಸಂಸ್ಥೆಗಳಿಗೆ ತರಬೇತು ಪಡೆಯಲು ಕಳುಹಿಸುವುದು.

ಇ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಂಪರ್ಕವನ್ನು ಹೊಂದಿದ್ದು ಅವರಿಂದ ಅಂಗವಿಕಲರ ವಿಷಯದಲ್ಲಿ ಮಾಹಿತಿಯನ್ನು ಪಡೆಯುವುದು.

ಭವಿಷ್ಯದ ಕಾರ್ಯಕ್ರಮಗಳು

೧. ಅಂಗವಿಕಲರಿಗಾಗಿ ಹೊಸ ಕೋರ್ಸುಗಳನ್ನು ತೆರೆಯುವುದು.


೨. ದೃಷ್ಟಿದೋಷವುಳ್ಳವರಿಗೂ ಪ್ರವೇಶಾವಕಾಶ ಮಾಡುವುದು.

೩. ಬುದ್ಧಿಮಾಂದ್ಯರಿಗೆ ಅನುಕೂಲವಾಗುವಂತಹ ತಾಂತ್ರಿಕೇತರ ಕೋರ್ಸುಗಳನ್ನು ಪ್ರಾರಂಭಿಸುವುದು.

೪. ಇನ್ನಿತರ ಅಂಗವಿಕಲರ ಸಂಸ್ಥೆಗಳಲ್ಲಿರುವ ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡುವುದು.

೫. ಇನ್ನೂ ಕೆಲವು ಉಪಾಧ್ಯಾಯರನ್ನು ತರಬೇತಿ ಪಡೆಯಲು ವಿದೇಶಗಳಿಗೆ ಕಳುಹಿಸುವುದು.

೬. ಪುನರ್ವಸತಿ ಕೇಂದ್ರ ಸ್ಥಾಪಿಸುವುದು.



○ **ಕೆ. ಲೀಲಾವತಿ**
ಕಂಪ್ಯೂಟರ್ ಆಪರೇಟರ್
ಜೆ.ಎಸ್.ಎಸ್. ಅಂಗವಿಕಲರ ಪಾಲಿಟೆಕ್ನಿಕ್
ಮೈಸೂರು - ೫೭೦ ೦೦೬

ಭೌಗೋಳಿಕ ರಸಪ್ರಶ್ನೆಗಳು

೧. ಪ್ರಪಂಚದ ಅತಿ ದೊಡ್ಡ ದ್ವೀಪ ಯಾವುದು?

೨. ಏಷ್ಯಾ ಖಂಡದ ತೀರ ಪ್ರದೇಶದ ಉದ್ದವೆಷ್ಟು?

೩. ಪ್ರಪಂಚದಲ್ಲೇ ಅತೀ ದೊಡ್ಡದಾದ ಸರೋವರ ಯಾವುದು?

೪. ಪೃಥ್ವಿಯ ಅತೀ ಶೀತ ಪ್ರದೇಶ ಯಾವುದು?

೫. ಸಾವಿರ ಸರೋವರಗಳ ನಾಡು ಯಾವುದು?

೬. ಜೋರ್ಡಾನ್ ಮತ್ತು ಇಸ್ರೇಲ್ ನಡುವೆ ಯಾವ ಸಮುದ್ರವಿದೆ?

೭. 'ಎಂಟೈರ್ ಸಿಟಿ' ಎಂದು ಯಾವ ನಗರವನ್ನು ಕರೆಯುವರು?

೮. ಭೂಮಧ್ಯರೇಖೆ ಹಾದು ಹೋಗದ ದೇಶ ಯಾವುದು?

೯. ವಿಶ್ವದಲ್ಲಿಯೇ ಅತ್ಯಂತ ಉದ್ದವಾದ ನದಿ ಯಾವುದು?

೧೦. ಸಹರಾ ಮರುಭೂಮಿಯ ವಿಸ್ತೀರ್ಣವೆಷ್ಟು?

೧೧. ಚಿಲ್ಕಾ ಸರೋವರ ಎಲ್ಲಿದೆ?

೧೨. 'ಪ್ಯಾರಿಸ್' ನಗರವು ಯಾವ ನದಿಯ ದಡದ ಮೇಲೆ ಇದೆ?

ಉತ್ತರಗಳು:

೧. ಗ್ರೀನ್‌ಲ್ಯಾಂಡ್

೨. ೮೦,೦೦೦ ಕಿ.ಮೀ

೩. ಕ್ಯಾಸ್ಪಿಯನ್ ಸಮುದ್ರ

೪. ವರ್ಸ್ಕೋಯಾನಸ್ಕ

೫. ಫಿನ್‌ಲ್ಯಾಂಡ

೬. ಮೃತ್ಯು ಸಮುದ್ರ

೭. ಅಮೇರಿಕದ ನ್ಯೂಯಾರ್ಕ

೮. ತಾಂಜೇನಿಯಾ

೯. ನೈಲ್ ನದಿ

೧೦. ೮೪ ಲಕ್ಷ ಚ. ಕಿ. ಮೀ

೧೧. ಭಾರತದ ಓರಿಸ್ಸಾ

೧೨. ಥೇಮ್ಸ್

- **ಅನ್ನಪೂರ್ಣ ಜಿ.**

NDA [ರಾಷ್ಟ್ರೀಯ ರಕ್ಷಣಾ ಅಕಾಡೆಮಿ]

ದ್ವಿತೀಯ ಪಿ.ಯು.ಸಿ. ನಂತರ ಸುವರ್ಣ ಸುಸಂಧಿ

ಕೇಂದ್ರ ಲೋಕ ಸೇವಾ ಆಯೋಗ, ದೆಹಲಿ ಅವರು ನಡೆಸುವ ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಮತ್ತು ನೌಕಾ ಅಕಾಡೆಮಿ ಪ್ರವೇಶ ಪರೀಕ್ಷೆಗೆ ಅರ್ಜಿ ಕರೆಯಲಾಗಿದೆ.

ಪ್ರವೇಶಕ್ಕಾಗಿ ಕರೆದ ಸ್ಥಾನಗಳ ಸಂಖ್ಯೆ ಒಟ್ಟು-೩೩೭

i.	ಸೈನ್ಯದಲ್ಲಿ	೨೧೪
ii.	ನೌಕಾಪಡೆಯಲ್ಲಿ	೩೦
iii.	ವಾಯುಪಡೆಯಲ್ಲಿ	೭೩
iv.	ನೌಕಾಪಡೆಯಲ್ಲಿ ಕಾರ್ಯನಿರ್ವಾಹಕ ವಿಭಾಗ	೨೦

ಅರ್ಜಿ ದೆಹಲಿ ಆಫೀಸ್ ತಲುಪಬೇಕಾದ ಕೊನೆಯ ದಿನಾಂಕ ೪.೫.೧೯೯೮

ಉಮೇದುವಾರರ ಅರ್ಹತೆ

ರಾಷ್ಟ್ರೀಯತೆ : i.ಭಾರತದ ನಾಗರಿಕನಾಗಿರಬೇಕು ಅಥವಾ ii. ಭೂತಾನ ಅಥವಾ iii.ನೇಪಾಳದ ಪ್ರಜೆಯಾಗಿರಬೇಕು ಅಥವಾ iv. ಭಾರತದಲ್ಲಿ ಶಾಶ್ವತವಾಗಿ ನೆಲೆಸಲು ೧೯೬೨ ಜನವರಿ ೧ರ ಮೊದಲು ಭಾರತಕ್ಕೆ ಬಂದ ಟಿಬೇಟಿನ ನಿರಾಶ್ರಿತರು v. ಭಾರತದ ಮೂಲದವರಾಗಿದ್ದು ಪಾಕ್, ಮಯನ್ಮಾರ, ಶ್ರೀಲಂಕಾ, ಪೂರ್ವ ಆಫ್ರಿಕಾದ ಕೆನ್ಯಾ, ಉಗಾಂಡಾ ಝೂಂಬಿಯಾ, ಝೈರೆ, ಈಥಿಪಿಯಾದಿಂದ ಶಾಶ್ವತವಾಗಿ ನೆಲೆಸಲು ಭಾರತಕ್ಕೆ ಬಂದ ವಸಾಹತುದಾರರು.

ಮೇಲಿನ (ii), (iii.), (iv.), (v.) ಈ ವರ್ಗದವರು ಭಾರತ ಸರಕಾರದಿಂದ ಅರ್ಹತಾ ಪತ್ರ ಹಾಜರಪಡಿಸಬೇಕು.

ವಯಸ್ಸು, ಲಿಂಗ, ವಿವಾಹ : ಅವಿವಾಹಿತ ಪುರುಷರು ೧೯೮೦ ಜುಲೈ ೨ರ ಕ್ಕಿಂತ ಪೂರ್ವದಲ್ಲಿ ಮತ್ತು ೧೯೮೩ ಜನವರಿ ೧ರ ನಂತರ ಜನಿಸದವರು ಮಾತ್ರ ಅರ್ಜಿ ಸಲ್ಲಿಸಬೇಕು.

ಮ್ಯಾಟ್ರಿಕ್ಯುಲೇಶನ್ ಅಥವಾ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರದಲ್ಲಿ ನಮೂದಿಸಿದ ಜನ್ಮ ದಿನಾಂಕವನ್ನು ಮಾತ್ರ ಪರಿಗಣಿಸಲಾಗುವುದು.

ಶಿಕ್ಷಣ : i.ಸೈನ್ಯ ವಿಭಾಗಕ್ಕೆ - ರಾಜ್ಯ ಶಿಕ್ಷಣ ಮಂಡಳಿ ಅಥವಾ ವಿಶ್ವವಿದ್ಯಾಲಯದವರು ನಡೆಸಿದ ೧೨ನೇ ವರ್ಗವನ್ನು (೧೦+೨) ಅಂದರೆ ಕರ್ನಾಟಕದಲ್ಲಿ ದ್ವಿತೀಯ ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆ ಪಾಸಾಗಿರಬೇಕು.

ii. ವಾಯು-ನೌಕಾ ಪಡೆ: ೧೦+೨ (೧೨ನೇ ವರ್ಗ) ಪರೀಕ್ಷೆ ಪಾಸಾಗಿರಬೇಕು. ಅವರು ಭೌತಶಾಸ್ತ್ರ ಹಾಗೂ ಗಣಿತವನ್ನು (Physics and Maths) ಪಾಸಾಗಿರುವದು ಕಡ್ಡಾಯ. ಈ ೧೨ನೇ ವರ್ಗದ ಪರೀಕ್ಷೆಗೆ ಕೂರುವವರು ಅರ್ಜಿ ಸಲ್ಲಿಸಬಹುದು.

ಸೂಚನೆ : ಈ ಮೊದಲು ಈ ಪರೀಕ್ಷೆಯಲ್ಲಿ ಡಿಬಾರ ಆದವರಿಗೆ ಪರವಾನಗಿ ಇಲ್ಲ

ಶುಲ್ಕ

೩೫/- ರೂಪಾಯಿ ಸೆಂಟ್ರಲ್ ರಿಕ್ರೂಟ್‌ಮೆಂಟ್ ಫೀ ಸ್ಟಾಂಪನ್ನು ಅರ್ಜಿಯಲ್ಲಿ ಅದಕ್ಕಾಗಿ ಬಿಡಲಾಗಿರುವ ಜಾಗದಲ್ಲಿ ಅಂಟಿಸಬೇಕು. ಇದು ಅಂಚೆ ಕಚೇರಿ ಸ್ಟ್ಯಾಂಪ್ ಅಲ್ಲ ಅಥವಾ ಮೇಲೆ ಸೂಚಿಸಿದ ಸ್ಟ್ಯಾಂಪ್ ಬಿಟ್ಟು ಬೇರೆ ಯಾವ ರೀತಿಯಿಂದಲೂ ಕಳಿಸಿದ ಹಣವನ್ನು ಸ್ವೀಕರಿಸಲಾಗುವುದಿಲ್ಲ.

ಪರಿಶಿಷ್ಟ ಜಾತಿ/ಪಂಗಡದವರು ಫೀ ಸ್ಟ್ಯಾಂಪ್ ಹಚ್ಚುವ ಅವಶ್ಯಕತೆ ಇಲ್ಲ.

ಈ ಅವಕಾಶ ಪ್ರತಿ ವರ್ಷವೂ ಇರುತ್ತದೆ

Union Public Service Commission New Delhi. National Defence Academy

ಪರೀಕ್ಷೆ : ಪ್ರತಿ ವರ್ಷ ಎರಡು ಸಲ ಏಪ್ರಿಲ್ ಸೆಪ್ಟಂಬರ್/ಅಕ್ಟೋಬರ್‌ದಲ್ಲಿ ನಡೆಸುವರು.

ಅರ್ಜಿ : ನವ್ಹಂಬರ್/ಡಿಸೆಂಬರ್ - ಮಾರ್ಚ್/ಏಪ್ರಿಲ್‌ದಲ್ಲಿ ಅರ್ಜಿ ಆಹ್ವಾನಿಸಿ - ಪ್ರಮುಖ ದಿನ ಪತ್ರಿಕೆಯಲ್ಲಿ ಪ್ರಕಟಿಸುವರು. ಪಠ್ಯಕ್ರಮ ಸಹ ಪ್ರಕಟಿಸುವರು.

ಪರೀಕ್ಷಾ ಕೇಂದ್ರ : ಬೆಂಗಳೂರು, ಧಾರವಾಡ ಸೇರಿ ಒಟ್ಟು ೪೧ ಕೇಂದ್ರ

ವಯೋಮಿತಿ : ೧೬½ ರಿಂದ ೧೯ ವರ್ಷ.

ಅರ್ಹತೆ : ೧೨ನೇ ವರ್ಗ (೧೦+೨) ಪಾಸಾಗಿರಬೇಕು.


ಲಿಖಿತ ಪರೀಕ್ಷೆ : ೧. ಗಣಿತ ೨. ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ಮತ್ತು ೩. ಸಂದರ್ಶನ.

ಇಲ್ಲಿ ಪಾಸಾದವರನ್ನು National Defence Academy Pune ಈ ಸಂಸ್ಥೆಯಲ್ಲಿ ಮೂರು ವರ್ಷ ಶಿಕ್ಷಣ ಕೊಡುವರು. ಮೊದಲಿನ ೨ ವರ್ಷ ೬ ತಿಂಗಳ ತರಬೇತಿ ನೀಡಿ ಪರೀಕ್ಷೆ ನಡೆಸುವರು ಪಾಸಾದವರಿಗೆ ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ದೆಹಲಿ ಇಲ್ಲಿಂದ ಬಿ.ಎ./ಬಿ.ಎಸ್ಸಿ. ಫದವಿಯನ್ನು ನೀಡಲಾಗುವುದು.

ನಂತರ ಸೇನಾ ವಿಭಾಗದವರನ್ನು Indian Military Academy, Dehradun ಮತ್ತು ವಾಯುಪಡೆಯವರನ್ನು Airforce Academy, Hydrabad/BFTS ಅಲಹಬಾದ ಹಾಗೂ ನಾವಿಕ ವಿಭಾಗದವರನ್ನೂ ತರಬೇತಿಗಾಗಿ ಹಡಗಿಗೆ ಕಳಿಸುವರು. ಒಂದು ವರ್ಷದ ಯಶಸ್ವಿ ತರಬೇತಿ ನಂತರ ಅವರನ್ನು ಅಧಿಕಾರಿಗಳನ್ನಾಗಿ ಆಯಾ ವಿಭಾಗದಲ್ಲಿ ನೇಮಿಸಲಾಗುವುದು. ಮೂರು ವಿಭಾಗದ ತತ್ಸಮಾನ ಹುದ್ದೆಗಳ ಯಾದಿಯನ್ನು ಕೊಡಲಾಗಿದೆ. ಆರಂಭದಲ್ಲಿ ೧೧ನೇ ಹುದ್ದೆಗೆ ನೇಮಕಾತಿ ಮಾಡುವರು. ಅಲ್ಲಿಂದ ಭಡ್ತಿ ಇತ್ಯಾದಿ.

ಮೇಲಿನ ಕರಾರುಗಳನ್ನು ಪೂರೈಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವದು. ಉಳಿದವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವದಿಲ್ಲ.

ಸರಿಯಾಗಿ ತುಂಬಿರಬೇಕು. ಇಲ್ಲವಾದಲ್ಲಿ ಅವರ ಜೊತೆ ಯಾವ ಪತ್ರ ವ್ಯವಹಾರ ಮಾಡಲಾಗುವದಿಲ್ಲ.



ರಕ್ಷಣಾ ಪಡೆಯಲ್ಲಿಯ ಅಧಿಕಾರಿ ಹುದ್ದೆಗಳು

(ಮೂರು ವಿಭಾಗದ ತತ್ಸಮಾನ ಹುದ್ದೆಯ ಯಾದಿ)

ಸೈನ್ಯ	ನೌಕಾಪಡೆ	ವಾಯುಪಡೆ
೧. ಫೀಲ್ಡ್‌ಮಾರ್ಷಲ್	ಅಡ್ಮಿರಲ್ ಆಫ್ ಫ್ಲೀಟ್	ಮಾರ್ಷಲ್ ಆಫ್ ಏರ್‌ಫೋರ್ಸ್
೨. ಜನರಲ್	ಅಡ್ಮಿರಲ್	ಏರ್‌ಚೀಫ್ ಮಾರ್ಷಲ್
೩. ಲೆಫ್ಟನೆಂಟ್ ಜನರಲ್	ವೈಸ್ ಅಡ್ಮಿರಲ್	ಏರ್ ಮಾರ್ಷಲ್
೪. ಮೇಜರ ಜನರಲ್	ರಿಯರ್ ಅಡ್ಮಿರಲ್	ಏರ್‌ವೈಸ್ ಮಾರ್ಷಲ್
೫. ಬ್ರಿಗೇಡಿಯರ್	ಕಮಾಂಡರ್	ಏರ್‌ಕಮಾಂಡೋರ್
೬. ಕರ್ನಲ್	ಕ್ಯಾಪ್ಟನ್	ಗ್ರೂಪ್ ಕ್ಯಾಪ್ಟನ್
೭. ಲೆಫ್ಟನಂಟ್ ಕರ್ನಲ್	ಕಮಾಂಡರ್	ವಿಂಗ್ ಕಮಾಂಡರ್
೮. ಮೇಜರ್	ಲೆಫ್ಟನಂಟ್ ಕಮಾಂಡರ	ಸ್ಕ್ವಾಡ್ರನ್ ಲೀಡರ
೯. ಕ್ಯಾಪ್ಟನ್	ಲೆಫ್ಟನಂಟ್	ಫ್ಲೈಟ್ ಲೆಫ್ಟನಂಟ್
೧೦. ಲೆಫ್ಟನೆಂಟ್	ಸಬ್‌ಲೆಫ್ಟನೆಂಟ್	ಫ್ಲೈಯಿಂಗ್ ಆಫೀಸರ್
೧೧. ಸೆಕೆಂಡ್ ಲೆಫ್ಟನೆಂಟ್	ಆ್ಯಕ್ಟಿಂಗ್ ಸಬಲೆಫ್ಟನೆಂಟ್	ಪೈಲಾಟ್ ಆಫೀಸರ್

ಕೆಳಗಿನ ಹುದ್ದೆಯಿಂದ ಸೇವೆ ಪ್ರಾರಂಭವಾಗುವದು.

ಅರ್ಜಿ ಸಲ್ಲಿಸುವ ವಿಧಾನ

ಪರೀಕ್ಷೆಗೆ ಕೂರಬಯಸುವ ಉಮೇದುವಾರರು ೧೯೯೮ ಮಾರ್ಚ್ ೨೧ರಂದು ಪ್ರಮುಖ ದಿನಪತ್ರಿಕೆ ಮತ್ತು ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟಿಸಿದ ಅರ್ಜಿ ನಮೂನೆಯಲ್ಲಿ ಎಲ್ಲ ಕಾಲಂ ತುಂಬಿ ಕೆಳಗಿನ ವಿಳಾಸಕ್ಕೆ ಕಳಿಸಬೇಕು.

The Secretary
Union Public Service Commission
Dholpur House, New Delhi - 110 011.

ಸರಕಾರದಲ್ಲಿ ಅಥವಾ ಸಾರ್ವಜನಿಕ ರಂಗದಲ್ಲಿ ಸೇವೆ ಸಲ್ಲಿಸುತ್ತಿರುವವರು ತಮ್ಮ ಇಲಾಖೆಯ ಮುಖಾಂತರ ಕಳಿಸಿದಲ್ಲಿ ಮಾತ್ರ ಪರಿಗಣಿಸಲಾಗುವುದು.

* ಅರ್ಜಿಯ ಜೊತೆ ಯಾವುದೇ ಪ್ರಮಾಣ ಪತ್ರ ಅಥವಾ ಅದರ ಝೆರಾಕ್ಸ್ ನಕಲನ್ನು ಲಗತ್ತಿಸಬಾರದು. ನಂತರ ಅವುಗಳ ತಪಾಸಣೆ ಮಾಡಿ ಅರ್ಹರಲ್ಲದವರಿಗೆ ಪರೀಕ್ಷಾ ಪ್ರವೇಶ ನಿರಾಕರಿಸಲಾಗುವುದು.
* ಕೊರಿಯರ್ ಸರ್ವಿಸ್‌ದಿಂದ ಬಂದ ಅರ್ಜಿಗಳನ್ನು ಸ್ವತಃ ಕೊಟ್ಟರುವಿರೆಂದು ತಿಳಿಯಲಾಗುವುದು.
* ಅರ್ಜಿಯಲ್ಲಿ ಎಲ್ಲ ಕಾಲಂಗಳನ್ನು

ವಿಳಾಸಗಳು

೧.ಸೈನ್ಯ - ಸೈನ್ಯದ ಮುಖ್ಯ ಕಛೇರಿ. AG's Branch RTG, West Block, III Wing-1, R.K. Puram New Delhi-110 068

೨. ನೌಕಾಪಡೆ - ನೌಕಾಪಡೆಯ ಮುಖ್ಯ ಕಛೇರಿ. Directorate of Man power and recruitment R&R Section "C" Wing Sena Bhavan, New Delhi - 110 011.


೩. ವಾಯುಪಡೆ - ಮುಖ್ಯ ಕಚೇರಿ DTE of Personnel (Officers) Po3 (A) J. Block, New Delhi - 110 011.

ಪರೀಕ್ಷಾ ವಿಧಾನ

ಲಿಖಿತ ಪತ್ರಿಕೆಗಳು ಎರಡು : ಅವು ಕೆಳಗಿನಂತಿವೆ.

ವಿಷಯ	ಕೋಡ್ ನಂ.	ಅವಧಿ	ಗರಿಷ್ಠ ಅಂಕಗಳು
೧. ಗಣಿತಶಾಸ್ತ್ರ	೦೧	೨ ೧/೨ ಗಂಟೆ	೩೦೦
೨. ಜನರಲ್ ಅಬಿಲಿಟಿ ಟೆಸ್ಟ್	೦೨	೨ ೧/೨ ಗಂಟೆ	೬೦೦

* ಪ್ರಶ್ನೆ ಪತ್ರಿಕೆಗಳು ಇಂಗ್ಲಿಷ್‌ನಲ್ಲಿದ್ದು ಪ್ರಶ್ನೆಗಳು ವಸ್ತುನಿಷ್ಠ ಮಾದರಿಯ ಪ್ರಶ್ನೆಗಳು ಮಾತ್ರ ಇರುತ್ತವೆ.
* ಪಠ್ಯಕ್ರಮಕ್ಕಾಗಿ ೨೧-೩-೧೯೯೮ ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆ ಅಥವಾ ಪ್ರಮುಖ ದಿನ ಪತ್ರಿಕೆಗಳನ್ನು ನೋಡಿರಿ.



ಅರ್ಜಿ ಜೊತೆ ಕಳಿಸಬೇಕಾದ ದಾಖಲೆಗಳು

೧. ೩೫ ರೂ. ಸೆಂಟ್ರಲ್ ರಿಕ್ರೂಟಮೆಂಟ್ ಫೀ ಸ್ಟ್ಯಾಂಪ್‌ನ್ನು. ಅರ್ಜಿಯಲ್ಲಿ ಕಾಯ್ದಿರಿಸಿದ ಸ್ಥಳದಲ್ಲಿ ಅಂಟಿಸಬೇಕು.

೨. ಇತ್ತೀಚಿನ ಪಾಸ್‌ಪೋರ್ಟ್ ಸೈಜ್ (5cmx7cm)ನ ಉಮೇದುವಾರರ ಮೂಲ ಭಾವಚಿತ್ರವನ್ನು ಅಂಟಿಸಬೇಕು. ಪಿನ್ ಹಾಕಬಾರದು. ಝೆರಾಕ್ಸ್ ಇತ್ಯಾದಿಗಳನ್ನು ಅಂಟಿಸಬಾರದು. ಭಾವಚಿತ್ರದ ಮೇಲೆ ಸಹಿ ಮಾಡಬೇಕು.

೩. ಲಗತ್ತಿಸಿದಂತಹ ಒಂದು ಭಾವಚಿತ್ರದ ಪ್ರತಿಯನ್ನು ಉಮೇದುವಾರರು ತಮ್ಮ ಹತ್ತಿರ ಇರಿಸಿಕೊಳ್ಳಬೇಕು. ಪ್ರವೇಶ ಪತ್ರ ಬಂದಾಗ ಅದಕ್ಕೆ ಇದನ್ನೆ ಅಂಟಿಸಬೇಕು.

೪. ಸ್ವ ವಿಳಾಸವುಳ್ಳ ೨೫ ಪೈಸೆ ಪೋಸ್ಟ್‌ಕಾರ್ಡಿಗೆ ೧.೨೫ರೂ. ಅಂಚೆ ಚೀಟಿ ಲಗತ್ತಿಸಿರಬೇಕು.

೫. ಸ್ವ ವಿಳಾಸದ ಅಂಚೆ ಚೀಟಿ ಇಲ್ಲದ ಎರಡು ಉತ್ತಮ ಲಕೋಟೆಯನ್ನು (11.5cmx27.5cm) ಕಳಿಸಬೇಕು. ಸ್ವ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

೬. ಅರ್ಜಿ ಬರೆಯಲು ಉತ್ತಮ ಗುಣ ಮಟ್ಟದ ಕಾಗದ ಉಪಯೋಗಿಸಿ, ಕೆಳಗಿನ ಕ್ರಮದಲ್ಲಿ ದಾಖಲೆಗಳನ್ನು ಲಗತ್ತಿಸಿ.

ಎ. ಮುಖ್ಯ ಅರ್ಜಿ ಬಿ. ನಂತರ ಪೋಸ್ಟ್‌ಕಾರ್ಡ್ ಸಿ. ಸ್ವ-ವಿಳಾಸದ ಎರಡು ಲಕೋಟೆ

ಸಂಕ್ಷಿಪ್ತದಲ್ಲಿ ಇಲ್ಲಿ ಕೊಡಲಾಗಿದೆ.

I. Mathematics.:

1. Arithmetic 2. Mensuration 3. Algebra. 3.Geometry 5.Trignometry. 6. Statistics.

II. General Ability Test

A. English (೨೦೦ ಅಂಕಗಳು) B. ಸಾಮಾನ್ಯ ಜ್ಞಾನ (೪೦೦ ಅಂಕಗಳು) i. Physics ii. Chemistry iii. General Science iv. History, Freedom Movement Etc. v. Geography, vi. Current Events.

* ಸಂದರ್ಶನ ಮತ್ತು ವ್ಯಕ್ತಿತ್ವ ಪರೀಕ್ಷೆ
* ಪರೀಕ್ಷಾ ಕೇಂದ್ರಗಳು - ಒಟ್ಟು ೪೧ ಇದ್ದು ಕರ್ನಾಟಕದವರಿಗೆ ಸಮೀಪವಿರುವ ಸ್ಥಳಗಳನ್ನು ಇಲ್ಲಿ ಕೊಡಲಾಗಿದೆ.

೧. ಬೆಂಗಳೂರು ೨. ಧಾರವಾಡ ೩. ಚೆನ್ನೈ ೪. ಹೈದ್ರಾಬ್ರಾದ್ ೫. ಮುಂಬಯಿ ೬. ಪಣಜಿ (ಗೋವಾ)

ಕೈಬೊಂಬೆ ತಯಾರಿಕೆ, ಸಾಹಿತ್ಯ ರಚನೆ [ವಿಜ್ಞಾನ, ಆರೋಗ್ಯ, ಪರಿಸರ, ಕೃಷಿ] ನಿರೂಪಣಾ ತರಬೇತಿ ಕಾರ್ಯಾಗಾರ ೧೯೯೮

ಭಾರತ ಸರ್ಕಾರದ ರಾಷ್ಟ್ರೀಯ ವಿಜ್ಞಾನ ಸಂವಹನ (NCSTC) ಸಂಸ್ಥೆ, ನವದೆಹಲಿ ಇವರ ನೆರವಿನಿಂದ ಗ್ರಾಮಾಂತರ ಸಮುದಾಯ ವಿಜ್ಞಾನ ಕೇಂದ್ರ, ಶೆಡ್ತೀಕೆರೆ ಇವರ ಆಶ್ರಯದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಸಹಕಾರದೊಂದಿಗೆ ರಾಜ್ಯಮಟ್ಟದ ಕೈಬೊಂಬೆ ತಯಾರಿಕೆ, ಸಾಹಿತ್ಯ ರಚನೆ ಮತ್ತು ನಿರೂಪಣಾ ತರಬೇತಿ ಕಾರ್ಯಾಗಾರ ೧೯೯೮ನ್ನು ಏರ್ಪಡಿಸಲಾಗಿದೆ.

ಜೂನ್ ತಿಂಗಳ ಮೊದಲ ವಾರದಲ್ಲಿ ೮ ದಿನಗಳ ಕಾಲ ಸಾಗರ ತಾಲ್ಲೂಕು ಹೆಗ್ಗೋಡಿನ ನೀನಾಸಮ್ ಆವರಣದಲ್ಲಿ ಕಾರ್ಯಾಗಾರ ನಡೆಯುತ್ತದೆ. ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯಮಟ್ಟದ ಆಯ್ದ ೨೦ ಸ್ವಯಂಸೇವಾ ಸಂಸ್ಥೆಗಳ, ವಿಶ್ವವಿದ್ಯಾನಿಲಯಗಳ ೪೦ ಸ್ವಯಂಸೇವಕರಿಗೆ ಭಾಗವಹಿಸುವ ಅವಕಾಶವಿದೆ. ಪ್ರತಿ ಸಂಸ್ಥೆಯಿಂದ ಎರಡು ಜನ ಭಾಗವಹಿಸಬೇಕು. ಎರಡು ಜನರಿಗೆ ರೂ. ೫೦೦ ಪ್ರವೇಶ ಶುಲ್ಕದೊಂದಿಗೆ ಸಂಸ್ಥೆಯ ಹೆಸರು, ವಿಳಾಸ, ಪ್ರಧಾನ ಕಾರ್ಯನಿರ್ವಾಹಕರಿಂದ ಅನುಮತಿ ಪತ್ರ, ಅನುಭವ, ಸಂಸ್ಥೆ ನಡೆಸಿದ ಈ ಸಾಲಿನ ಕಾರ್ಯಕ್ರಮಗಳ ವಿವರಗಳೊಂದಿಗೆ ದಿನಾಂಕ ೧೫ ಮೇ ೧೯೯೮ರೊಳಗೆ ಪ್ರವೇಶ ಪತ್ರವನ್ನು ಕಳಿಸಬೇಕು.

ಶಿಬಿರದಲ್ಲಿ ವಿಜ್ಞಾನ, ಪರಿಸರ, ಆರೋಗ್ಯ, ಕೃಷಿಗಳ ಬಗ್ಗೆ ಜನಸಾಮಾನ್ಯರಲ್ಲಿ ಬೊಂಬೆಯಾಟದ ಮುಖಾಂತರ ಪ್ರಚಾರಪಡಿಸಲು ಬೊಂಬೆಗಳ ತಯಾರಿ, ಸಾಹಿತ್ಯ ರಚನೆ, ನಿರೂಪಣೆ, ಪ್ರದರ್ಶನ ಉಪನ್ಯಾಸ, ಸ್ಲೈಡ್ ಮತ್ತು ವಿಡಿಯೋ ಪ್ರದರ್ಶನವಿರುತ್ತದೆ. ದೇಶದ ಹೆಸರಾಂತ ಬೊಂಬೆ ತಯಾರಿಕಾ ಅನುಭವಿಗಳು ವಿಜ್ಞಾನ, ಪರಿಸರ ಕೃಷಿ ಕಾರ್ಯಾಗಾರದಲ್ಲಿ ಭಾಗವಹಿಸಿ ನಡೆಸಿ ಕೊಡುತ್ತಾರೆ.

ಆಯ್ಕೆಯಾದ ೨೦ ಸ್ವಯಂ ಸೇವಾ ಸಂಸ್ಥೆಗಳಿಗೆ (ಎರಡು ಶಿಬಿರಾರ್ಥಿಗಳಿಗೆ) ಊಟ, ವಸತಿ, ಸಾಹಿತ್ಯ, ಕೈಬೊಂಬೆಯನ್ನು ಉಚಿತವಾಗಿ ಒದಗಿಸಲಾಗುವುದು. ನಂತರ ತಮ್ಮ ಸಂಸ್ಥೆಗಳು ಕಾರ್ಯಕ್ರಮಗಳಲ್ಲಿ ಈ ಬೊಂಬೆಯಾಟ ಪ್ರದರ್ಶನ ಏರ್ಪಡಿಸಿ, ಜನಸಾಮಾನ್ಯರಿಗೆ ತಿಳುವಳಿಕೆ ನೀಡಲು ಸಹಕಾರಿಯಾಗುತ್ತದೆ.

ಆಯ್ಕೆಯಾದವರನ್ನು ಪತ್ರಮುಖೇನ ಸಂಪರ್ಕಿಸಲಾಗುವುದು.

ಸಂಪರ್ಕ ವಿಳಾಸ : ಗ್ರಾಮಾಂತರ ಸಮುದಾಯ ವಿಜ್ಞಾನ ಕೇಂದ್ರ


ಶೆಡ್ತೀಕೆರೆ, ಅಂಚೆ : ವರದಾಮೂಲ-೫೭೭ ೪೧೭ ಸಾಗರ-ಶಿವಮೊಗ್ಗ-ಕರ್ನಾಟಕ

ಉಚಿತ ಹೊಲಿಗೆ ತರಬೇತಿ

ಮಹಿಳೆಯರಿಗಾಗಿ ಉಚಿತ ಹೊಲಿಗೆ ತರಬೇತಿಯನ್ನು ನಗರದ ಶ್ರೀಕಾರ್ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ಏರ್ಪಡಿಸಿದೆ. ತರಬೇತಿಗೆ ಸೇರಲು ಬಯಸುವವರು ಸಂಘದ ಕಚೇರಿ, ನಂ.೧೨, ೮ನೇ ಮುಖ್ಯ ರಸ್ತೆ, ಗಣೇಶ ಬ್ಲಾಕ್, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು-೫೬೦ ೦೮೬. ದೂರವಾಣಿ - ೩೪೯೧೯೩ ಇಲ್ಲಿಗೆ ಸಂಪರ್ಕಿಸಬಹುದು.

ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ ಬೆಂಗಳೂರು

ಕನ್ನಡ ಪತ್ರಿಕೋದ್ಯಮ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನ



ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕಾ ಸಮೂಹಕ್ಕೆ ಸೇರಿದ ಪ್ರತಿಷ್ಠಿತ ಬಿ.ಡಿ.ಗೋಯೆಂಕಾ ಪ್ರತಿಷ್ಠಾನ ಏಷ್ಯನ್ ಕಾಲೇಜ್ ಆಫ್ ಜರ್ನಲಿಸಮ್‌ನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದೆ. ಪತ್ರಿಕೋದ್ಯಮ ಶಿಕ್ಷಣ ಮತ್ತು ತರಬೇತಿ ಗುಣಮಟ್ಟ ಹೆಚ್ಚಿಸುವುದು ಮುಖ್ಯ ಉದ್ದೇಶ.

ಕಾಲೇಜ್

ಕಾರ್ಯನಿರತ ಪತ್ರಕರ್ತರ ದೈನಂದಿನ ಪರಿಣತಿ ಮತ್ತು ವೃತ್ತಿ ಅಗತ್ಯಗಳನ್ನು ಪೂರೈಸಲು ಕಾಲೇಜಿನ ಪಠ್ಯಕ್ರಮ ಮತ್ತು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಬೋಧನೆಗಿಂತ ಪ್ರಾಯೋಗಿಕ ಕಲಿಕೆ ಮತ್ತು ಪರಿಣತಿಗೆ ಪ್ರಾಧಾನ್ಯ. ಕ್ಲಾಸ್‌ರೂಮ್ ಬೋಧನೆ ಜತೆಗೆ ವಿದ್ಯಾರ್ಥಿಗಳು ಪತ್ರಿಕೆ ಪರಿಸರದಲ್ಲಿ ನಾಲ್ಕು ಪುಟಗಳ ಪ್ರಾಯೋಗಿಕ ಪತ್ರಿಕೆಯನ್ನು ನಿಯಮಿತವಾಗಿ ಹೊರತರಬೇಕಾಗುವುದು. ಕೋರ್ಸಿನ ಕೊನೆಯಲ್ಲಿ ವಿದ್ಯಾರ್ಥಿಗಳು ದೈನಿಕ ಪ್ರಾಯೋಗಿಕ ಪತ್ರಿಕೆ ನಿರ್ವಹಣೆಯಲ್ಲಿ ತೊಡಗುವುದು ವೈಶಿಷ್ಟ್ಯ.

ಕಾಲೇಜಿನಲ್ಲಿ ನೀಡಲಾಗುವ ತರಬೇತಿ ಇಂದಿನ ಪತ್ರಿಕೆಗಳ ಅಗತ್ಯಕ್ಕೆ ಪ್ರಸ್ತುತವಾಗಿರಬೇಕೆಂಬ ದೃಷ್ಟಿಯಿಂದ ವರದಿಗಾರಿಕೆ, ಸಂಪಾದಕನ ಕಲೆ (ಎಡಿಟಿಂಗ್) ಹಾಗೂ ಪುಟ ವಿನ್ಯಾಸವನ್ನು ಕಂಪ್ಯೂಟರ್ ಮೂಲಕ ಕಲಿಸಲಾಗುವುದು.

ವಿದ್ಯಾರ್ಥಿಗಳಿಗೆ ವೃತ್ತಿ ಪತ್ರಿಕೋದ್ಯಮದ ಎಲ್ಲ ಆಯಾಮಗಳನ್ನು ಪರಿಚಯಿಸುವುದು ಕೋರ್ಸಿನ ಮುಖ್ಯ ಗುರಿ.

ಬೋಧಕ ವರ್ಗ

ಕಾಲೇಜಿನ ಪೂರ್ಣಾವಧಿ ಬೋಧಕ ವರ್ಗ ಕ್ರಿಯಾಶೀಲ ಕಾರ್ಯನಿರತ ಪತ್ರಕರ್ತರನ್ನು ಒಳಗೊಂಡಿದೆ. ಅನುಭವಿ ಪತ್ರಕರ್ತರು ಮತ್ತು ಸಂದರ್ಶಕ ಉಪನ್ಯಾಸಕರು ಕಾಲೇಜಿನ ಬೋಧಕ ವರ್ಗಕ್ಕೆ ನೆರವಾಗುತ್ತಾರೆ.

ಪಠ್ಯಕ್ರಮ

ವರದಿಗಾರಿಕೆ, ಸಂಪಾದನ ಕಲೆ, ಛಾಯಾಚಿತ್ರ ಪತ್ರಿಕೋದ್ಯಮ ಹಾಗೂ ಪುಟ ವಿನ್ಯಾಸ ಅಧ್ಯಯನ ವಿಷಯಗಳು.

ಇದರ ಜತೆಗೆ ಪತ್ರಿಕೋದ್ಯಮದ ವಿಶೇಷ ಕ್ಷೇತ್ರಗಳು, ಇತಿಹಾಸ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ, ರಾಜಕೀಯಶಾಸ್ತ್ರ ಮತ್ತು ಪ್ರಚಲಿತ ವಿಷಯಗಳಲ್ಲಿ ಫೌಂಡೇಶನ್ ಕೋರ್ಸ್ ಉಪನ್ಯಾಸ ಮಾಲಿಕೆಗಳನ್ನು ಏರ್ಪಡಿಸಲಾಗುವುದು. ಪತ್ರಿಕಾಧರ್ಮ, ನೀತಿ ಸಂಹಿತೆ ಹಾಗೂ ಕಾನೂನಿನ ಬಗ್ಗೆ ಆಳವಾದ ತಿಳಿವಳಿಕೆ ನೀಡಲಾಗುವುದು.

ಅವಧಿ

ಕೋರ್ಸ್ ೧೯೯೮ರ ಆಗಸ್ಟ್ ೪ರಂದು ಆರಂಭವಾಗಿ ೧೯೯೯ರ ಏಪ್ರಿಲ್‌ನಲ್ಲಿ ಮುಗಿಯುವುದು.

ಪ್ರವೇಶ ಶುಲ್ಕ

ಮೂರು ಸಮ ಕಂತುಗಳಲ್ಲಿ ರೂ. ೧೫ ಸಾವಿರ.

ಉದ್ಯೋಗ

ತರಬೇತಿ ಬಳಿಕ ವಿದ್ಯಾರ್ಥಿಗಳಿಗೆ ಪತ್ರಿಕೆಗಳಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳುವಲ್ಲಿ ನೆರವಾಗಲು ಕ್ಯಾಂಪಸ್ ಸಂದರ್ಶನ ಏರ್ಪಡಿಸಲಾಗುವುದು. ಆದರೆ ಕಾಲೇಜ್ ಉದ್ಯೋಗ ಭರವಸೆ ನೀಡುವುದಿಲ್ಲ.

ಹಾಸ್ಟೆಲ್

ಪರಸ್ಥಳಗಳಿಂದ ಬರುವ ವಿದ್ಯಾರ್ಥಿಗಳಿಗೆ ಖರ್ಚು-ಹಂಚಿಕೆ ಆಧಾರದ ಹಾಸ್ಟೆಲ್ ಸೌಲಭ್ಯ ಲಭ್ಯ.

ಅರ್ಹತೆ

ಕೋರ್ಸ್ ಸೇರಲು ಬೇಕಾದ ಕನಿಷ್ಠ ವಿದ್ಯಾರ್ಹತೆ ಯಾವುದೇ ವಿಷಯದಲ್ಲಿ ಪದವಿ. ಅಭ್ಯರ್ಥಿಗಳ ವಯೋಮಿತಿ ೨೦ ರಿಂದ ೨೭ ವರ್ಷಗಳಿರಬೇಕು. ೧೯೯೮ರ ಜುಲೈ ೩೧ಕ್ಕೆ ೨೭ ವರ್ಷ ಮೀರಬಾರದು.

ಪ್ರವೇಶ ಪರೀಕ್ಷೆ

೧೯೯೮ರ ಜೂನ್ ೧೪ರಂದು ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಪ್ರವೇಶ ಪರೀಕ್ಷೆ. ಕನ್ನಡ ಮತ್ತು ಸಾಮಾನ್ಯಜ್ಞಾನ ಲಿಖಿತ ಪರೀಕ್ಷೆ ವಿಷಯಗಳು.

ಅರ್ಜಿ ಸಲ್ಲಿಕೆ ವಿಧಾನ

ಎರಡು ರೂ. ಸ್ಟಾಂಪ್ ಲಗತ್ತಿಸಿದ ೧೨x೮ ಇಂಚ್ ಸ್ವವಿಳಾಸ ಬರೆದ ಲಕೋಟೆಯೊಂದಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅರ್ಜಿ ಪಡೆಯಬಹುದು.

ವಿಳಾಸ

ದಿ ಡೀನ್, ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ,

ಎಕ್ಸ್‌ಪ್ರೆಸ್ ಬಿಲ್ಡಿಂಗ್, ೧ ಕ್ವೀನ್ಸ್ ರಸ್ತೆ, ಬೆಂಗಳೂರು-೫೬೦ ೦೦೧

ಅರ್ಜಿ ಪಡೆಯಲು ಕೊನೆ ದಿನ ಮೇ ೨೩, ೧೯೯೮. ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಕೊನೆ ದಿನ ಜೂನ್ ೨, ೧೯೯೮. ●

ಅರ್ಜಿ ಆಹ್ವಾನ

ಬೆಂಗಳೂರು ನಗರ ಜಿಲ್ಲೆಯ ಆಡಕಮಾರನಹಳ್ಳಿ ಸರ್ಕಾರಿ ಗ್ರಾಮೀಣ ಪ್ರತಿಭಾವಂತ ಹಿಂದುಳಿದ ವರ್ಗದ ಬಾಲಕರ ವಸತಿ ಶಾಲೆಗೆ ೧೯೯೮-೯೯ನೇ ಸಾಲಿಗೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ೫ ರಿಂದ ೧೦ನೇ ತರಗತಿಗಳಿಗೆ, ಸ್ಪರ್ಧಾತ್ಮಕ ಮತ್ತು ಮೌಖಿಕ ಪರೀಕ್ಷೆ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೋಲಾರ, ತುಮಕೂರು, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬೇಕು.

ನಿಗದಿತ ಅರ್ಜಿ ನಮೂನೆಗಳನ್ನು ಜಿಲ್ಲಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಿಂದ ಪಡೆದು, ಈಗ ಕಲಿಯುತ್ತಿರುವ ಶಾಲೆಗಳ ಮುಖ್ಯಸ್ಥರ ಮೂಲಕ, ಮೇ ೧೦ರ ಒಳಗೆ ತುಂಬಬೇಕು. ಭರ್ತಿ ಮಾಡಿದ ಅರ್ಜಿಗಳನ್ನು ಪ್ರಾಚಾರ್ಯರು, ಸರ್ಕಾರಿ ಹಿಂದುಳಿದ ವರ್ಗಗಳ ನವೋದಯ ಮಾದರಿ ವಸತಿ ಶಾಲೆ, ಆಡಕಮಾರನಹಳ್ಳಿ, ಮಾಕಳಿ ಅಂಚೆ, ಬೆಂಗಳೂರು ಉತ್ತರ, ಬೆಂಗಳೂರು-೨೩. ಇವರಿಗೆ ಸಲ್ಲಿಸಬೇಕು.

ನೀವೂ ಇಂಗ್ಲಿಷ್ ಕಲಿಯಿರಿ | ಭಾಗ-೫

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

(ಹಿಂದಿನ ಸಂಚಿಕೆಯಿಂದ)

ಜಾನಕಿ : ಜಾನ್, ನಿನ್ನ ಅಲಂಕಾರಗಳು ಮುಗಿದವೊ?

ಜಾನ್ : ನೀನು ಕಲಿತಿರುವ ಅಲಂಕಾರಗಳೆಷ್ಟು? ಯಾವವು? ಹೆಳ್ತಿಯಾ

ಜಾನಕಿ : ಏನ್ ಐತಿ ಅದರಲ್ಲಿ, ನಾನು ಕಲಿತದ್ದು, ಅಂದರ ನೀನು ಹೇಳಿದ್ದು, ಕಾಳಿದಾಸನ ಹೆಸರಲ್ಲೆ ಎರಡೇ ಎರಡು ಅಲಂಕಾರಗಳನ್ನ. **ಉಪಮಾ ಅಲಂಕಾರ** ಒಂದು, **ರೂಪಕ ಅಲಂಕಾರ** ಇನ್ನೊಂದು. ಬೇರೆ ಬೇರೆ ವರ್ಗದವುಗಳನ್ನು ಹೋಲಿಸಿ ಹೇಳುವಾಗ "Like" "as..........as" ಪದ ಉಪಯೋಗಿಸಿದಲ್ಲಿ ಅದು ಉಪಮಾ ಅಲಂಕಾರ ಮತ್ತು ಅವುಗಳನ್ನು ಉಪಯೋಗಿಸದೆ ಹೋಲಿಸಿ ಹೇಳಿದಾಗ ಅಧ ರೂಪಕ ಅಲಂಕಾರ

1. He is as strong as Elephant....Simile
2. He is tiger....Metaphor

ಜಾನ್ : Very good, ಹಂಗ್ ಆಗಲಿ ಇನ್ನೊಂದೆರಡು ಹೇಳ್ತೀನಿ ಕೇಳು... ಕಲಿಬೇಕು.

ಜಾನಕಿ : ನನಗೇನು Interest ಇಲ್ಲ ಅಂತಿಯಾ.

ಜಾನ್ : ಐತಿ. ನಿನಗೆ ಅಭಿರುಚಿನೂ ಅದ. ಮತ್ತ ಬಡ್ಡಿ (interest)ನೂ ಬರ್ತದ.

ಜಾನಕಿ : ನೀನು English ಹೇಳ್ತಿಯೋ

ಜಾನ್ : ಇನ್ನೊಂದು ಅಲಂಕಾರ ಅಂದರ

Personification

ಇದರಲ್ಲಿ ನಿರ್ಜೀವ ವಸ್ತುಗಳು, ಅಮೂರ್ತ ವಿಚಾರಗಳು ಸಜೀವಿಗಳಂತೆ ಉಪಯೋಗಿಸಲಾಗುವದು.

I went to Hampi and every stone told the story of brave Kannadigas.

ಇಲ್ಲಿ ನೋಡಮ್ಮ ಜಾನಕಿ, ಕಲ್ಲು ಮಾತಾಡುವುದಿಲ್ಲ, ನಿಜ. ಆದರೆ ಹಂಪಿಯೊಳಗ ಆ ಭಾವನಾ ಬರ್ತದ. ಅದಕ್ಕ ಇದು ಅಲಂಕಾರ Personification. ಕಲ್ಲು ವ್ಯಕ್ತಿಯಂತೆ ಮಾತಾಡ್ತದ. ಇನ್ನೊಂದು ಉದಾಹರಣೆ

Death lays his icy hand on kings as well as beggars.

ಇಲ್ಲಿ ಸಾವು ತನ್ನ ತಣ್ಣನೆ ಹಸ್ತವನ್ನು ಚಾಚಿತು. (ಸಾವು ಬಂತು ಅಂತ ಅರ್ಥ).

ಜಾನಕಿ : ಇಷ್ಟ ಬಿಡಿಸಿ ಹೇಳಿದರ, ನಮ್ಮ ಮನ್ಯಾಗಿನ ಕೂಸಿಗೂ ಅರ್ಥ ಆಗ್ತದ ಬಿಡೋ

ಜಾನ್ : ಇನ್ನೊಂದು ಕೇಳು. ಆ ಮೇಲೆ ಉಪಪದ (Articles) ಮುಗಿಸಿ ಬಿಡೋಣ.

Apostrophe

ಈ ಅಲಂಕಾರದಲ್ಲಿ ಸತ್ತವರಿಗೆ, ಅಥವಾ ಅಲ್ಲಿ ಸ್ಥಳದಲ್ಲಿಲ್ಲದವರಿಗೆ ಅಥವಾ ವಸ್ತು-ವಿಚಾರಗಳಿಗೆ ಇದ್ದವರಿಗೆ ಸಂಬೋಧಿಸಿ ಹೇಳುವಂತೆ ಹೇಳುವದು. ಉದಾ.

ಅಯ್ಯೊ! ಬಾಪೂಜಿ ಈಗ ನೀ ಇರಬೇಕಾಗಿತ್ತು.

1. Oh, Bapuji! You should be living at this hour.
2, Oh, Death! Where is thy sting?

ಇಷ್ಟು ಸಾಕು. ಈಗ ಉಳಿದ ಎಲ್ಲ

ಉಪಪದಗಳನ್ನು Articles ಕಲಿಯೋಣ

ಜಾನಕಿ : ನಾನೇ ಹೇಳ್ತೇನೆ. ಉಪಪದ ಎಲ್ಲಿ ಉಪಯೋಗ ಮಾಡಬಾರದು, ಅಲ್ಲಿಗೆ ನೀನು ಪಾಠವನ್ನು ನಿಲ್ಲಿಸಿ....

ಜಾನ್ : Right, Right

ನಿಯಮ III

೧. ವಸ್ತುಗಳ ಹೆಸರಿನ ಹಿಂದೆ Articles ಬೇಡ. ಆ ವರ್ಗದ ವಸ್ತು ಅದೊಂದೆ ಇರುವದು ಮತ್ತು ಭಾಷೆಗಳಿಗೂ Articles ಅವಶ್ಯವಾಗಿಲ್ಲ. ಆದರ ಅಲ್ಲಿ "the" ಉಪಯೋಗಿಸಿದರ ಅದು ಭಾಷೆ ಬದಲಾಗಿ ಆ ಜನರನ್ನು ಸೂಚಿಸುವದು.

I. i. Today <u>Iron</u> is precious metal
   ii. <u>Cotton</u> grows more in South India.

II. i. I am teaching <u>English</u>
   ii. You want to learn <u>Kannada.</u>

"The English won the battele"

ಈಗ ಇಂಗ್ಲಿಷರನ್ನು ಸೂಚಿಸುವದು-

ಜಾನಕಿ : ಇವು Easy ಅದಾವು ಮತ್ತು ಬಳಕೆಯಲ್ಲಿಯೂ ಅದಾವ.

ಜಾನ್ : ಆದರೂ ನಿನ್ನ ತಲೆಯೊಳಗ ಅವು ಹೋಗುವದಿಲ್ಲ!

ಜಾನಕಿ : ಏನೊ?

ಜಾನ್ : Sorry

ನಿಯಮ IV

ಅಮೂರ್ತ ನಾಮಪದಗಳನ್ನು ಸಾಮಾನ್ಯೀಕರಣ ರೀತಿ ಯಿಂದಾಗಿ ಹೇಳುವಾಗಲೂ Article ಬೇಡಾ. ಆದರ ಅವುಗಳನ್ನು ವಿಶೇಷಣ ರೂಪದಲ್ಲಿ ಹೇಳುವಾಗ "The" Article ಬೇಕು. ಉದಾ.

I. <u>Honesty</u> is the best policy
   Virtue is its own reward.

II. <u>The Honesty</u> of Harischandra is well known.

ನಿಯಮ V

ಕೆಲವು ಸಂಸ್ಥೆಗಳಿಗೆ, ಅವುಗಳ ಮೂಲ ಉದ್ದೇಶಕ್ಕಾಗಿ,

ನಾವು-ಹೋದವು ಅಥವಾ ಉಪಯೋಗಿಸಿದಲ್ಲಿ "Article" ಅವಶ್ಯವಿಲ್ಲ, ಉದಾ:

I go to <u>college</u> to learn

We go to temple every Saturday

ಆದರೆ ನಿರ್ದಿಷ್ಟವಾದ ಕಾಲೇಜ-ಮಂದಿರ ಹೇಳುವಾಗ Article "The" ಬೇಕೇ ಬೇಕು.

The College is not far away from our house.

We discussed in the temple.

ನಿಯಮ VI

ಹೇಳ್ತೇನಿ ಕೇಳು.

ಸಂಬಂಧಗಳನ್ನು ಸೂಚಿಸುವ ನಾಮಪದಗಳಿಗೂ "Article" ಉಪಯೋಗಿಸಬಾರದು Father, Mother, Son, Daughter.

1. Father is the head of family here.
2. Mother is the queen of our home.
3. Doughter is supposed to be Laxmi
4. Son is supposed to be light of family

ನಿಯಮ VII

ನಾಮಪದದ ಹಿಂದೆ ಸಕರ್ಮಕ ಕ್ರಿಯಾಪದ ಬಂದು, ಆಕ್ರಿಯಾಪದದ ಕರ್ಮಪದವು ಅದೇ (ನಾಮಪದ) ಆಗಿದ್ದರೆ ಅಲ್ಲಿಯೂ ಸಹ ಯಾವ Atricle ಅವಶ್ಯವಿಲ್ಲ, ಉದಾ :

- To send word, to bring vegetable, to pass examination, ಇನ್ನೊಂದ ಹೇಳಲಾ

- To see girl.

ಜಾನಕಿ : ಇಲ್ಲೆ ಆದೇನಿ, ಮತ್ತೇನಿ ನೋಡ್ತಿಯೊ

ಜಾನ್ : ಇಲ್ಲಿ Article ಬೇಡಾ. ಅಲ್ವಾ?

ನಿಯಮ VIII

ನಾಮಪದದ ಹಿಂದೆ ಉಪಸರ್ಗಾವ್ಯ (Preposition) ಇದ್ದು ಆ ಉಪ-ಸರ್ಗಾವ್ಯದ ಕರ್ಮಪದ ಅದೇ ಆಗಿದ್ದಲ್ಲಿ ಅಲ್ಲಿಯೂ ಸಹ Article ಬೇಡವೆ ಬೇಡಾ, ಊದಾ, at dinner, on demand, by hand, by river, underground.....


ತರಬೇತಿಗೆ ಅರ್ಜಿ ಆಹ್ವಾನ

ಕೋಲಾರ ಜಿಲ್ಲೆಯ ಬೇತಮಂಗಲದ ಒಳನಾಡು ಮೀನುಗಾರಿಕೆ ತರಬೇತಿ ಕೇಂದ್ರದಲ್ಲಿ ಜೂನ್ ೧ ರಿಂದ ಪ್ರಾರಂಭವಾಗಲಿರುವ ಮೂರು ತಿಂಗಳ ಮೀನುಗಾರಿಕಾ ತರಬೇತಿಗಾಗಿ ರಾಜ್ಯ ಮೀನುಗಾರಿಕಾ ಇಲಾಖೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಬೆಂಗಳೂರು, ತುಮಕೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಮೀನುಗಾರಿಕೆಯಲ್ಲಿ ಆಸಕ್ತಿ ಹೊಂದಿರುವ ಕನ್ನಡ ಓದು ಬರೆಯಬಲ್ಲ ೧೮ ರಿಂದ ೪೦ ವರ್ಷದೊಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ತರಬೇತಿಗೆ ಆಯ್ಕೆಯಾದವರಿಗೆ ೪೫೦ ರೂ. ಶಿಷ್ಯವೇತನವನ್ನು ಇಲಾಖೆ ನೀಡಲಿದೆ.

ಆಸಕ್ತರು, ಸಹಾಯಕ ನಿರ್ದೇಶಕರು, ಮೀನುಗಾರಿಕೆ ತರಬೇತಿ ಕೇಂದ್ರ, ಬೇತಮಂಗಲ ೫೬೩೧೧೬ ಇಲ್ಲಿಗೆ ಮೇ.೧೫ರೊಳಗೆ ಅರ್ಜಿಗಳನ್ನು ಸಲ್ಲಿಸುವಂತೆ ಕೋರಲಾಗಿದೆ.



ಕೊನೆ ಹನಿ

ಜಾನ್ : ಈಗ ಅಲಂಕಾರ ಕೊಡ್ತೇನಿ, ಏನು ಮಾಡ್ತಿ.

ಜಾನಕಿ : ನಾನೇನು ಅಲಂಕಾರ ಮಾಡಿಕೊಳ್ಳುವುದಿಲ್ಲ. ಅವುಗಳ ಹೆಸರು ಹೇಳ್ತೇನಿ.

ನೀನು ಹೇಳುವ ಅಲಂಕಾರಗಳು ಭಾಷೆಗೆ ಅಲಂಕಾರ.

ಜಾನ್ : Very good.

1. Words are like leaves.
2. Life is as tedious as a twice told tale.
3. Life is a dream
4. Pride goes on horse-back and comes back on fool.
5. O, Solitude! Where are the Charms?
6. O, Grave! Where is they Victory?

ಜಾನಕಿ : ಭಾಳ easy ಅದಾವು.

೧ ಮತ್ತು ೨ Simile

೩ Metaphor

೪ Personification

೫ ಮತ್ತು ೬ Apostrophe

ಮುಂದಿನ ಸಲ ಲಿಂಗಗಳನ್ನು (Gender) ಕುರಿತು ಪಾಠ.

ಮಹಿಳೆಯರಿಗೆ ಉದ್ಯಮಶೀಲತಾ ತರಬೇತಿ

ನಿರುದ್ಯೋಗಿ ಯುವಕ ಯುವತಿಯರಿಗೆ ಸ್ವ-ಉದ್ಯೋಗ ಕಲಿಸಿಕೊಡಲು ನೆಲಮಂಗಲ ಸಮೀಪದ ಅರಿಶಿನಕುಂಟೆ ಗ್ರಾಮದಲ್ಲಿ ಸ್ಥಾಪಿತವಾಗಿರುವ ಗ್ರಾಮಾಭಿವೃದ್ಧಿ ಹಾಗೂ ಸ್ವ-ಉದ್ಯೋಗ ತರಬೇತಿ ಸಂಸ್ಥೆಯು ಬರುವ ತಿಂಗಳುಗಳಲ್ಲಿ ಮಹಿಳೆಯರಿಗಾಗಿ ಉದ್ಯಮಶೀಲತಾ ತರಬೇತಿ, ಸಿದ್ಧ ಉಡುಪುಗಳ ತಯಾರಿಕೆ, ಬ್ಯೂಟಿ ಪಾರ್ಲರ್ ತರಬೇತಿಯನ್ನು ನಡೆಸಲಿದೆ. ಇದಲ್ಲದೆ ಯುವಕ ಯುವತಿಯರಿಗಾಗಿ ಫೋಟೋಗ್ರಫಿ-ವೀಡಿಯೋಗ್ರಫಿ, ಸ್ಕ್ರೀನ್ ಪ್ರಿಂಟಿಂಗ್, ದ್ವಿಚಕ್ರವಾಹನಗಳ ದುರಸ್ತಿ, ಪಂಪ್‌ಸೆಟ್ ರಿಪೇರಿ ಮತ್ತು ಮೋಟಾರ್ ರಿವೈಂಡಿಂಗ್, ರೇಡಿಯೊ ಮತ್ತು ಟಿ.ವಿ. ರಿಪೇರಿ, ಹೈನುಗಾರಿಕೆ ಮತ್ತು ಕೃಷಿ ಕ್ಷೇತ್ರದಲ್ಲಿ ತರಬೇತಿಯನ್ನು ನೀಡಲಿದೆ.

ಆಸಕ್ತ ಅಭ್ಯರ್ಥಿಗಳು ೧೮ ರಿಂದ ೩೫ ವರ್ಷ ವಯೋಮಿತಿಯೊಳಗಿನವರಾಗಿದ್ದು, ಕನ್ನಡ ಓದಲು ಮತ್ತು ಬರೆಯಲು ತಿಳಿದವರಾಗಿದ್ದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಗೆ ಸೇರಿದವರಾಗಿರಬೇಕು.

ತರಬೇತಿಯು ಸಂಪೂರ್ಣ ಉಚಿತವಾಗಿದ್ದು ಉಚಿತ ವಸತಿ ಹಾಗೂ ಊಟದ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ. ಆಸಕ್ತರು ನಿರ್ದೇಶಕರು, ಗ್ರಾಮಾಭಿವೃದ್ಧಿ ಹಾಗೂ ಸ್ವ ಉದ್ಯೋಗ ತರಬೇತಿ ಸಂಸ್ಥೆ, ಚೆಕ್‌ಪೋಸ್ಟ್ ಹಿಂಭಾಗ, ಅರಿಶಿನಕುಂಟೆ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಅರ್ಜಿ ಸಲ್ಲಿಸಬಹುದು. (ದೂರವಾಣಿ ಸಂಖ್ಯೆ: ೦೮೧೧೮-೨೩೧೬೬)

ಧನಂಜಯ ಹೊಯ್ಸಳ, ಹಾಸನ

ನಾನು ಈಗ ಆಟೊಮೊಬೈಲ್ ವಿಷಯ ಆರಿಸಿಕೊಂಡು ಮೊದಲ ವರ್ಷದ ಡಿಪ್ಲೊಮಾ ಓದುತ್ತಿರುವೆ. ಮುಂದೆ ಕೆಲಸ ಮಾಡಿಕೊಂಡು ಸಂಜೆ ಕಾಲೇಜಿನಲ್ಲಿ ಓದುವ ಆಸೆ. ಬೆಂಗಳೂರಿನ ಅನುದಾನಿತ ಹಾಗೂ ಸರ್ಕಾರಿ ಕಾಲೇಜುಗಳ ವಿಳಾಸ ಮತ್ತು ಸಂಜೆ ಕಾಲೇಜು ಓದಿ ತೆಗೆದುಕೊಂಡ ಪದವಿಗೆ ಬೆಲೆ ಇದೆಯೋ ದಯವಿಟ್ಟು ಸಲಹೆ ಕೊಡಿ.

ನೀವು ಆಟೋಮೊಬೈಲ್ ಡಿಪ್ಲೊಮಾ ಮುಗಿಸಿ, ಮುಂದೆ ಕೆಲಸ ಮಾಡಿಕೊಂಡು ಸಂಜೆ ಕಾಲೇಜಿಗೆ ಸೇರಿ ಪದವಿ ಪಡೆಯಬಹುದು. ಈ ಪದವಿಗೆ ಮಾನ್ಯತೆ ಇರುತ್ತದೆ.ಬೆಂಗಳೂರಿನಲ್ಲಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ.

ಬಿ.ಎಂ.ಎಸ್. ಕಾಲೇಜ್, ಬುಲ್‌ಟೆಂಪಲ್‌ರೋಡ್, ಬಸವನಗುಡಿ, ಬೆಂಗಳೂರು.

ಆರ್.ವೇಣುಗೋಪಾಲ್, ಆನೇಕಲ್

ನನಗೊಂದು ಸಂದೇಹ ಕಾಡುತ್ತಿದೆ. ನಾನು ಎಡಗೈ ಅರ್ಧ ಹೆಬ್ಬೆರಳಿಲ್ಲದ ಅಂಗವಿಕಲ. ನನಗೆ ಅದು ಅಂಗವೈಕಲ್ಯವಾಗಿ ತೋರುತ್ತಿಲ್ಲ. ನನಗೆ ಸಬ್ ಇನ್ಸ್‌ಪೆಕ್ಟರ್ ಆಗಬೇಕೆಂಬ ಬಯಕೆ. ನಾನು ಸಬ್ ಇನ್ಸ್‌ಪೆಕ್ಟರ್ ಆಗಬಹುದೇ. ಅರ್ಧ ಹೆಬ್ಬೆರಳಿಗೆ (ಸತ್ತವರ, ದಾನಿಗಳ) ಬೆರಳನ್ನು ಜೋಡಿಸಬಹುದೆ? ನಿಮ್ಮ ಉತ್ತರಕ್ಕಾಗಿ ಕಾಯುತ್ತೇನೆ.

ನಿಮಗೆ ದೈಹಿಕ ಹಾಗು ವಿದ್ಯಾರ್ಹತೆ ಇದ್ದಲ್ಲಿ ನೀವು ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಅರ್ಹರಾಗುತ್ತೀರಿ. ನಿಮ್ಮ ಎಡಗೈ ಹೆಬ್ಬೆರಳಿನ ತೊಂದರೆ ನಿಮ್ಮ ಅಭಿಲಾಷೆಗೆ ತೊಂದರೆಯಾಗುವುದಿಲ್ಲ.

ಹನುಮಂತ. ಸಿ.ಸಿ., ಕವಲಗಿ

ನಾನು ಬಿ.ಎ.ಯಲ್ಲಿ ಶೇಕಡ ೬೧ ಅಂಕಗಳನ್ನು ಪಡೆದಿರುತ್ತೇನೆ. ನಾನು ಪರಿಶಿಷ್ಟ ಜಾತಿಗೆ ಸೇರಿದ್ದು ಆರ್ಥಿಕವಾಗಿ ದುರ್ಬಲನಾಗಿದ್ದೇನೆ. ಆದರೆ ತುಂಬಾ ಓದುವ ಆಸೆ. ಆ ಓದು ನನ್ನ ಆರ್ಥಿಕ ಭದ್ರತೆಗೆ ಪೂರಕವಾಗಿರಬೇಕು. ನಾನು ಯಾವುದಾದರೂ ಒಂದು'ಉದ್ಯೋಗ'ವನ್ನು ಹಿಡಿಯಲು ಯಾವ ಕೋರ್ಸ್‌ನ್ನು ಮಾಡಬೇಕು? ನನಗೆ ರಾಜ್ಯಶಾಸ್ತ್ರದಲ್ಲಿ ಎಲ್ಲಿಲ್ಲದ ಆಸಕ್ತಿ ಇದೆ. ನನ್ನ ಆರ್ಥಿಕ ಅನುಕೂಲವಾಗುವ ಮುಂದಿನ ಓದಿನ ದಾರಿ ತೋರಿಸಿ.

ನೀವು ಬಿ.ಎ.ಯಲ್ಲಿ ಉತ್ತಮ ಅಂಕ ಪಡೆದಿರುವುದು ತುಂಬಾ ಸಂತೋಷ. ನಿಮಗೆ ಆರ್ಥಿಕ ತೊಂದರೆ ನೀಗಿಸಲು ಮತ್ತು ಬೇಗ ಉದ್ಯೋಗ ದೊರೆಯಲು ನೀವು ಬಿ.ಇಡಿ.ಯನ್ನು ಹೆಚ್ಚಿನ ಅಂಕಗಳೊಂದಿಗೆ ಪಾಸ್ ಮಾಡಿದರೆ ಶಿಕ್ಷಕರ ಹುದ್ದೆಯು ಸುಲಭವಾಗಿ ದೊರೆಯಬಹುದು.

ಹೆಸರಿಲ್ಲ, ರಾಯಚೂರು

ಸರ್, ನಾನು ವಯಸ್ಸಿನ ಆಧಾರದ ಮೂಲಕ ನೇರವಾಗಿ ಸ್ನಾತಕೋತ್ತರ ಎಂ.ಎ ಪದವಿಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಮೂಲಕ ಮಾಡಿದ್ದೇನೆ. ನನಗೆ ಹಿಂದಿನ ಯಾವ ವಿದ್ಯಾರ್ಹತೆಯು ಇಲ್ಲ ನಾನು ಎಂ.ಬಿ.ಎ ಕೋರ್ಸ್ ಮಾಡಲು ಅರ್ಹತೆ ಬರುವುದೆ? ಅಥವಾ ಅದಕ್ಕೆ ಸಮನಾದ Post Graduation Diploma in Business Management ಕೋರ್ಸ್ ಮಾಡಲು ನಾನು ಪಡೆದ ಸ್ನಾತಕೋತ್ತರ ಪದವಿಯಿಂದ ಸಾಧ್ಯವೆ? ದಯವಿಟ್ಟು ತಿಳಿಸಿರಿ.

ನೀವು ಎಂ.ಎ. ಪದವಿಯನ್ನು ಪಡೆದಿರುವುದರಿಂದ ಎಂ.ಬಿ.ಎ. ಮಾಡಬಹುದು. ಅಥವಾ ಅದಕ್ಕೆ ಸಮನಾದ Post Graduation Diploma in Business Management ಕೋರ್ಸ್‌ನ್ನು ನೀವು ಪಡೆದ ಪದವಿಯ ಆಧಾರದ ಮೇಲೆ ಪಡೆಯಲು ಸಾಧ್ಯ.

ಹೆಸರು ಬೇಡ, ಬಸಾಪಟ್ಟಣ

ನಾನು ಪ್ರಥಮ ಪಿ.ಯು.ಸಿ. ಯವರೆಗೂ ಓದಿದ್ದು ಮುಂದೆ ಅನಿವಾರ್ಯ ಕಾರಣಗಳಿಂದ ಓದಲಾಗಲಿಲ್ಲ. ೨೧ ವರ್ಷದ ನಾನು ಕರ್ನಾಟಕ ರಾಜ್ಯದ ಮುಕ್ತ ವಿಶ್ವವಿದ್ಯಾಲಯದ ಮೂಲಕ ಪದವಿ ಎಂ.ಎ ಪಡೆದು ಮುಂದೆ ಉಪನ್ಯಾಸಕನಾಗಬೇಕೆಂಬ ಆಸೆ. ಸರ್ಕಾರಿ ಕಾಲೇಜುಗಳಲ್ಲಿ ಯಾವ ಅರ್ಹತೆ ಇರಬೇಕು. ಇದಕ್ಕಾಗಿ ಎಂ.ಎಡ್. ಮಾಡಲು ಯಾವ ವಿಶ್ವವಿದ್ಯಾಲಯವನ್ನು ಸಂಪರ್ಕಿಸಬೇಕು? ಅಲ್ಲದೇ State eligibility test ಮತ್ತು National eligibility test ಇವುಗಳನ್ನು ಬರೆಯಬೇಕೆ? ಇವುಗಳನ್ನು ಪಾಸು ಮಾಡಿದರೆ ಮಾತ್ರ ಸರ್ಕಾರಿ ಕಾಲೇಜುಗಳಲ್ಲಿ ಉಪನ್ಯಾಸಕ ಹುದ್ದೆ ದೊರೆಯುವುದೆ? ತಿಳಿಸಿರಿ.

ಸರ್ಕಾರಿ ಕಾಲೇಜ್‌ಗಳಲ್ಲಿ ಉಪನ್ಯಾಸಕರಾಗಲು ಮಾಸ್ಟರ್ ಡಿಗ್ರಿ ಅವಶ್ಯಕ. ಇದರ ಜೊತೆಗೆ ಕರ್ನಾಟಕ ಸರ್ಕಾರ ನಡೆಸುವ State Eligibility test ಮತ್ತು UGC ಯವರು ನಡೆಸುವ National Eligibility Test ನ್ನು ಸಹ ಪಾಸ್ ಮಾಡಿದರೆ ಕಾಲೇಜ್‌ಗಳಲ್ಲಿ ಉಪನ್ಯಾಸಕರಾಗಬಹುದು.



ಮಾರ್ಗದರ್ಶಿ

○ ಡಾ. ಎಸ್.ಸಿ. ಶರ್ಮಾ

ಪ್ರಾಧ್ಯಾಪಕರು

ಆರ್.ವಿ. ಇಂಜಿನಿಯರಿಂಗ್ ಕಾಲೇಜು,

ಮೈಸೂರು ರಸ್ತೆ, ಬೆಂಗಳೂರು - ೫೬೦ ೦೫೯

ವಿ. ನಾರಾಯಣ ಸ್ವಾಮಿ, ರಾಂಪುರ

ನಾನು ಚಿಕ್ಕಂದಿನಲ್ಲೇ ತಾಯಿ-ತಂದೆಯರನ್ನು ಕಳೆದುಕೊಂಡಿದ್ದು ತಮ್ಮಂಥವರ ಸಹಾಯದಿಂದ ದ್ವಿತೀಯ ಪಿ.ಯು.ಸಿ (ಮನಃಶಾಸ್ತ್ರ) ಶೇ. ೪೫ ಅಂಕಗಳೊಂದಿಗೆ ಉತ್ತೀರ್ಣನಾಗಿದ್ದೇನೆ. ಅನಿವಾರ್ಯ ಕಾರಣಗಳಿಂದ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಈಗ ನನಗೆ ೨೨ ವರ್ಷ. ನಾನು ನೇರವಾಗಿ ಎಂ.ಎ. ಮಾಡಬಹುದೇ ಮತ್ತು ಯಾವುದಾದರೂ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದೆ? ಇದರಿಂದ ಉದ್ಯೋಗ ಲಭಿಸುವುದೆ? ಎಂ.ಎ. ಮಾಡಬಹುದಾದ ವಿಶ್ವವಿದ್ಯಾಲಯ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಪರಿಚಯವನ್ನು ನೀಡಿ.

ನೀವು ನೇರವಾಗಿ ಎಂ.ಎ. ಮಾಡಬಹುದು. ಇದಕ್ಕಾಗಿ ಮೈಸೂರು ವಿಶ್ವವಿದ್ಯಾಲಯ ಅಥವಾ ಬೆಂಗಳೂರು ವಿಶ್ವವಿದ್ಯಾಲಯಗಳನ್ನು ಸಂಪರ್ಕಿಸಿ.

ಆರ್. ಸಿ. ಕುಲಕರ್ಣಿ, ಕಾಕತಿ.

ಡಿಪ್ಲೊಮಾದ ಗಣಕ ವಿಭಾಗದ ತೃತೀಯ ವರ್ಷದ ವಿದ್ಯಾರ್ಥಿ. ಈ ಕೋರ್ಸ್ ಮುಗಿದ ನಂತರ AMIE ಅಥವಾ B.Tech.ಇವುಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಲಿ. B.Tech ಮಾಡಲು ಡಿಪ್ಲೊಮಾದಲ್ಲಿ ಹೆಚ್ಚಿನ ಅಂಕಗಳಿಸಿ ಪಾಸಾಗಬೇಕೆ? ಆ ಕೋರ್ಸಿಗಾಗಿ ಪ್ರವೇಶ ಪರೀಕ್ಷೆಗಳನ್ನು ಎದುರಿಸಬೇಕೆ? ಈ ಕೋರ್ಸಿನ ಅವಧಿ ಎಷ್ಟು? ಮತ್ತು ಇದನ್ನು ಕರ್ನಾಟಕದಲ್ಲಿ ಎಲ್ಲಿ ಮಾಡಬಹುದು. ಇದರ ಬಗ್ಗೆ ಪ್ರಕಟಣೆ ಯಾವಾಗ ಹೊರಬೀಳುತ್ತದೆ. ಇದರ ಜೊತೆಗೆ AMIE ಬಗ್ಗೆಯೂ ತಿಳಿಸಿರಿ.

ಡಿಪ್ಲೊಮಾದ ಗಣಕ ವಿಭಾಗ ಮುಗಿದ ನಂತರ, ತಮಗೆ ಆರ್ಥಿಕ ತೊಂದರೆ ಇದ್ದಲ್ಲಿ ಕೆಲಸಕ್ಕೆ ಸೇರಿಕೊಂಡು ಎ.ಎಂ.ಐ.ಇ. ಮಾಡುವುದು ಒಳ್ಳೆಯದು. ಆರ್ಥಿಕ ತೊಂದರೆ ಇಲ್ಲದಿದ್ದಲ್ಲಿ ಬಿ.ಟೆಕ್. ಮಾಡಬಹುದು. ಬಿ.ಟೆಕ್.ಗೆ ಸೀಟ್ ಪಡೆಯಲು ಡಿಪ್ಲೊಮಾ ಕೋರ್ಸ್‌ನಲ್ಲಿ ಹೆಚ್ಚು ಅಂಕ ಗಳಿಸಬೇಕು. ಕರ್ನಾಟಕ ಸರ್ಕಾರ ಬಿ.ಟೆಕ್. ಸೀಟ್ ಹಂಚಿಕೆಯಲ್ಲಿ ಶೇ.೫ರಷ್ಟು ಸೀಟ್‌ನ್ನು ಡಿಪ್ಲೊಮಾ ಪಾಸ್ ಮಾಡಿದವರಿಗಾಗಿ ನಿಗದಿಪಡಿಸಿದ್ದಾರೆ. ಅದರಡಿಯಲ್ಲಿ ತಾವು ಸೀಟ್ ಪಡೆಯಬಹುದು. ಡಿಪ್ಲೊಮಾ ನಂತರ ಬಿ.ಟೆಕ್. (ಬಿ.ಇ.) ಕೋರ್ಸ್ ಅವಧಿ ಮೂರು ವರ್ಷದಾಗಿರುತ್ತದೆ. ಇದನ್ನು ಕರ್ನಾಟಕದಲ್ಲಿ ಯಾವುದೇ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಮಾಡಬಹುದು. ಎ.ಎಂ.ಐ.ಇ. ಬಗ್ಗೆ ಹೆಚ್ಚಿನ ವಿಷಯಕ್ಕೆ ಈ ವಿಳಾಸವನ್ನು ಸಂಪರ್ಕಿಸಿ.

ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್
ಅಂಬೇಡ್ಕರ್ ವೀದಿ, ಬೆಂಗಳೂರು.

ಜಿ.ಕೆ.ಮೋಹನ್‌ರಾವ್, ಗುಂಡೂರು

ಸರ್, ನಾನು ಹಿಂದಿನ ಯಾವ ವಿದ್ಯಾರ್ಹತೆಯೂ ಇಲ್ಲದೇ ವಯಸ್ಸಿನ ಆಧಾರದ ಮೇಲೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮಾನಸ ಗಂಗೋತ್ರಿ, ಮೈಸೂರಿನ ಮೂಲಕ ಎಂ.ಎ. ಸ್ನಾತಕೋತ್ತರ ಪದವಿಯನ್ನು ಪಡೆಯಲು ಇಚ್ಛಿಸಿದ್ದೇನೆ. ಈ ಕೋರ್ಸಿನ ಆಧಾರದ ಮೇಲೆ ನಾನು ಮುಂದೆ ಎಂ.ಎಡ್ (ಹಿಂದಿ)ಅಥವಾ ಎಂ.ಎಡ್(ಜನರಲ್) ಮಾಡಲು ಬರುವುದೇ ದಯವಿಟ್ಟು ತಿಳಿಸಿರಿ. ಈ ಎರಡು ಕೋರ್ಸುಗಳನ್ನು ರೆಗ್ಯುಲರ್ ಆಗಿ ಮಾಡಲು ಸಾಧ್ಯವೇ? ಯಾರನ್ನು ಸಂಪರ್ಕಿಸಬೇಕು? ಅಥವಾ ಅಂಚೆ ತೆರಪಿನ ಮೂಲಕ ಮಾಡಬೇಕಾದಲ್ಲಿ ಯಾವ ವಿಶ್ವವಿದ್ಯಾಲಯದಿಂದ ಮಾಡಬಹುದು? ದಯವಿಟ್ಟು ಸವಿವರವಾಗಿ ತಿಳಿಸುವಿರೆಂದು ನಂಬಿರುವೆ.

ಎಂ.ಎಡ್. (ಹಿಂದಿ) ಅಥವಾ ಎಂ.ಎಡ್. (ಜನರಲ್)ಮಾಡಲು ಕನಿಷ್ಠ ಪದವಿ ವಿದ್ಯಾರ್ಹತೆ ಹೊಂದಿರಬೇಕು. ನಂತರ ಬಿ.ಇಡಿ. ಮಾಡಿದ ಮೇಲೆ ಎಂ.ಇಡಿ.ಗೆ ಅರ್ಹರಾಗುತ್ತೀರಿ. ನೇರವಾಗಿ ಎಂ.ಇಡಿ. ಮಾಡಲು ಸಾಧ್ಯವಿಲ್ಲ. ಎಂ.ಇಡಿ.ಯನ್ನು ರೆಗ್ಯುಲರ್ ಆಗಿ ಮಾಡಲು ಬಿ.ಇಡ್.ನಲ್ಲಿ ಹೆಚ್ಚು ಅಂಕಗಳನ್ನು ಗಳಿಸಿರಬೇಕು. ಹೆಚ್ಚಿನ ವಿವರಗಳಿಗಾಗಿ ಹತ್ತಿರದ ವಿಶ್ವವಿದ್ಯಾಲಯವನ್ನು ಸಂಪರ್ಕಿಸಿ.

ಕೆ. ಸುರೇಂದ್ರ. ಬೆಂಗಳೂರು

೨೪ ವರ್ಷದ ಎಂಟನೆ ಕ್ಲಾಸು ಮುಗಿಸಿದ ಮೂಲತಃ ಮಂಗಳೂರಿನವನಾದ ನಾನು ಈಗ ಬೆಂಗಳೂರಿನ ಕಛೇರಿಯೊಂದರಲ್ಲಿ ಕೆಲಸ ಮಾಡುತ್ತಿರುವೆ, ಮುಂದೆ ಓದಬೇಕೆಂಬ ಆಸೆ. ನಾನು ನೇರವಾಗಿ ಬಿ.ಎ. ಮಾಡಬಹುದೆ? ಅಥವಾ ಬೇರೆ ಕೋರ್ಸ್‌ಗಳು ಇದ್ದಾವೆ. ದಯಮಾಡಿ ತಿಳಿಸಿ.

ವಿಶೇಷ ಉಚಿತ ಪುರವಣಿ

ವಿವಿಧ ವಿದ್ಯಾವಕಾಶಗಳ ಬಗ್ಗೆ ಮಾಹಿತಿ ಕೋರಿ 'ಮಾರ್ಗದರ್ಶಿ' ವಿಭಾಗಕ್ಕೆ ಬಂದಿರುವ ಪ್ರಶ್ನೆಗಳ ಸಂಖ್ಯೆ ಎಷ್ಟಿದೆಯೆಂದರೆ ಇನ್ನೂ ಹತ್ತು ವರ್ಷ ಕಳೆದರೂ ಈ ಕಡತ ಕರಗಲಾರದು. ಈ ಮಧ್ಯೆ ಸಕಾಲಕ್ಕೆ ಸರಿಯಾದ ಮಾಹಿತಿ ಸಿಗದ ಅನೇಕ ಓದುಗರು ನಿರಾಶರಾಗುವ, ದಾರಿ ತಪ್ಪುವ ಸಂಭವವಿದೆ. ಹಾಗಾಗಿ ಈ ಸಮಸ್ಯೆಯ ನಿವಾರಣೆಗೋಸ್ಕರವೇ ಬರುವ ಜುಲೈ ಸಂಚಿಕೆಯೊಂದಿಗೆ ಮಾರ್ಗದರ್ಶಿ ವಿಭಾಗದ ವಿಶೇಷ ಪ್ರತ್ಯೇಕ ಪುಸ್ತಕವನ್ನು ಉಚಿತವಾಗಿ ನೀಡಿ ಬಾಕಿ ಉಳಿದಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಒದಗಿಸಲು 'ಬದುಕು' ಮುಂದಾಗಿದೆ.

- ಸಂಪಾದಕ

ಜುಲೈ ಸಂಚಿಕೆ ಕಾಯ್ದಿರಿಸಲು ಮರೆಯಬೇಡಿ!

ನೀವು ಅಗತ್ಯವಾಗಿ ವಯಸ್ಸಿನ ಆಧಾರದ ಮೇಲೆ ನೇರವಾಗಿ ಬಿ.ಎ. ಕೋರ್ಸ್‌ನ್ನು ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮಾನಸ ಗಂಗೋತ್ರಿ, ಮೈಸೂರು - ೫೭೦ ೦೦೬. ಅಥವಾ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯ ಬೆಂಗಳೂರು-೫೬೦ ೦೦೧ ಇವರನ್ನು ಸಂಪರ್ಕಿಸಿ.

ರೇಷ್ಮಾ ಬಷೀರ್, ಬೆಂಗಳೂರು

ನಾನು ದ್ವಿತೀಯ ಪಿ.ಯು.ಸಿ. ಯನ್ನು ೧೯೯೭ರಲ್ಲಿ ಫೇಲಾಗಿರುವೆ. ನನಗೆ ೧೯ ವರ್ಷ ತುಂಬಿದೆ. ಮನೆಯಲ್ಲಿ ತೊಂದರೆ ಇರುವುದರಿಂದ ನಾನು ಮುಂದೆ ಓದಲು ಕಷ್ಟವಾಗಿದೆ. ಆದರೆ ನಾನು IGNOU ಅಥವಾ ಅಣ್ಣಾಮಲೈ ಮುಕ್ತ ವಿಶ್ವವಿದ್ಯಾಲಯದಲ್ಲಿ B.B.A. ಮಾಡಬೇಕೆಂಬ ಆಸೆಯಿದೆ. ಇದು ಸಾಧ್ಯವೆ? ಇದರ ಅರ್ಹತೆಗಳೇನು?

ನೀವು ಅಗತ್ಯವಾಗಿ ಬಿ.ಬಿ.ಎ. ಕೋರ್ಸ್ ಮಾಡಬಹುದು. ಆದರೆ ಇದಕ್ಕೆ ಪಿ.ಯು.ಸಿ. ಪಾಸ್ ಆಗಿರಬೇಕು. ಹೆಚ್ಚಿನ ವಿವರಗಳಿಗಾಗಿ Director, Directorate of Distance Education, Annamalai University, Annamalai Nagar-608 002.

ರಾಘವೇಂದ್ರ ಶರ್ಮಾ ಗುರುಮಠಕಲ್

ಬಿ.ಎ. ಪದವಿಯ ನಂತರ ಬಾಹ್ಯ ಅಭ್ಯರ್ಥಿಯಾಗಿ ಸ್ನಾತಕೋತ್ತರ ಪತ್ರಿಕೋದ್ಯಮ ವ್ಯಾಸಂಗವನ್ನು ಮುಕ್ತ ವಿಶ್ವವಿದ್ಯಾಲಯದಲ್ಲಿ (ಅಂಚೆ ಮುಖಾಂತರ ಶಿಕ್ಷಣ ಪಡೆಯಲು) ಕರ್ನಾಟಕದಲ್ಲಿ ಇರುವ ಏಳು ವಿಶ್ವವಿದ್ಯಾಲಯಗಳ ಪೈಕಿ ಈ ಸೌಲಭ್ಯ ಇದೆ ಅನ್ನುವುದರ ಬಗ್ಗೆ ದಯವಿಟ್ಟು ವಿವರವಾದ ಮಾಹಿತಿ ನೀಡಲು ಕೋರಿಕೆ.

ನೀವು ಅಗತ್ಯವಾಗಿ ಮೈಸೂರು ವಿಶ್ವವಿದ್ಯಾಲಯದಿಂದ ಬಾಹ್ಯ ಅಭ್ಯರ್ಥಿಯಾಗಿ ಪತ್ರಿಕೋದ್ಯಮ ವ್ಯಾಸಂಗವನ್ನು ಮುಂದುವರೆಸಬಹುದು. ಇದಕ್ಕೆ ಅರ್ಹತೆ ಎಂದರೆ ಪಿ.ಯು.ಸಿ. ಅಥವಾ ಸರ್ಟಿಫಿಕೇಟ್ ಇನ್ ಜರ್ನಲಿಸಂ ಹೆಚ್ಚಿನ ಮಾಹಿತಿಗಾಗಿ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ
ಮಾನಸ ಗಂಗೋತ್ರಿ, ಮೈಸೂರು - ೫೭೦ ೦೦೬.

ಬೆಂಗಳೂರಿನಲ್ಲಿ ಹೊಟೇಲ್ ಮ್ಯಾನೇಜ್‌ಮೆಂಟ್ ಕೋರ್ಸುಗಳು

ಪಂಚತಾರಾ ಹೊಟೇಲ್‌ಗಳಲ್ಲಿ ಎಲ್ಲವೂ ಸುಂದರ, ಒಪ್ಪ ಓರಣ. ಹಾಗಾಗಿ ಸುಂದರವಾದದ್ದನ್ನೆಲ್ಲಾ ಅದು ಬಯಸುತ್ತದೆ. ನೀವು ಸುಂದರವಾಗಿದ್ದರೆ, ನಿಮ್ಮದು ಹ್ಯಾಂಡ್‌ಸಂ ಪರ್ಸನಾಲಿಟಿ ಆಗಿದ್ದರೆ, ನಿಮ್ಮ ಭಾಷೆಯೂ ಸುಂದರವಾಗಿದ್ದರೆ, ನಿಮಗೆ ಹಲವಾರು ಭಾಷೆ ಬರುತ್ತಿದ್ದರೆ ಖಂಡಿತವಾಗಿಯೂ ನಿಮಗೆ ಪಂಚತಾರಾ ಹೊಟೇಲ್‌ಗಳಲ್ಲಿ ಕೆಲಸ ಮಾಡುವ ಯೋಗವೂ ಇರುತ್ತದೆ. ಹಾಗಾಗಿ ನೀವು ಹೊಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗಳನ್ನು ಮಾಡಬಹುದು.

ಹೊಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಮಾಡಲು ಬೆಂಗಳೂರಿನಲ್ಲಿಯೇ ಸಾಕಷ್ಟು ಅವಕಾಶಗಳಿವೆ. ರಾಷ್ಟ್ರೀಯ, ಅಂತರರಾಷ್ಟ್ರೀಯ ಖ್ಯಾತ ಕಾಲೇಜುಗಳಿವೆ. ಅವುಗಳಲ್ಲಿ ಮುಖ್ಯವಾದವುಗಳ ಮಾಹಿತಿಗಳಿಲ್ಲಿವೆ.

ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮತ್ತು ಮ್ಯಾನೇಜ್‌ಮೆಂಟ್

ಪೀಣ್ಯ ಕೈಗಾರಿಕಾ ವಲಯದಲ್ಲಿರುವ ಈ ಸಂಸ್ಥೆ ೧೯೯೪ರಲ್ಲಿ ಹೊಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಆರಂಭಿಸಿತು. ಪ್ರತಿ ವರ್ಷ ೩೦ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಪ್ರವೇಶ ಪರೀಕ್ಷೆ ಇಲ್ಲ. ಸಂದರ್ಶನ ಆಧಾರದಲ್ಲಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಶಿಕ್ಷಣ ಶುಲ್ಕ ೧೩,೫೦೦ ಮತ್ತು ಲ್ಯಾಬ್ ಶುಲ್ಕ ೪ ಸಾವಿರ ರೂಪಾಯಿಗಳನ್ನು ಪ್ರತಿವರ್ಷ ಪಡೆಯಲಾಗುತ್ತದೆ. ಹಾಸ್ಟೆಲ್ ಸೌಲಭ್ಯವಿದೆ. ರೂಂ ಬಾಡಿಗೆ ವರ್ಷಕ್ಕೆ ೮ ಸಾವಿರ, ಮೆಸ್ ಬಿಲ್ ತಿಂಗಳಿಗೆ ೮೦೦ ರೂ.



ಆಲ್-ಅಮೀನ್ ಕಾಲೇಜ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್

೧೯೯೨ರಲ್ಲಿ ಆರಂಭವಾದ ಈ ಕಾಲೇಜ್ ಬೆಂಗಳೂರಿನ ಲಾಲ್‌ಬಾಗ್ ಮುಖ್ಯ ದ್ವಾರದ ಮುಂಭಾಗದಲ್ಲಿದೆ. ಉತ್ತಮ ಶಿಕ್ಷಕರು ಮತ್ತು ಮೂಲಭೂತ ಸೌಲಭ್ಯಗಳನ್ನು ಹೊಂದಿದೆ. ಮೊದಲ ವರ್ಷದಲ್ಲಿ ೪೦ ಸಾವಿರ ರೂಪಾಯಿ ತರಬೇತಿ ಶುಲ್ಕ ಮತ್ತು ೫ ಸಾವಿರ ರೂಪಾಯಿ ಸಮವಸ್ತ್ರ ಶುಲ್ಕಗಳನ್ನು ಪಡೆಯಲಾಗುತ್ತದೆ. ಎರಡನೇ ಮತ್ತು ಮೂರನೇ ವರ್ಷ ೨೫ ಸಾವಿರ ರೂಪಾಯಿ ಶುಲ್ಕ ಪಡೆಯಲಾಗುತ್ತದೆ.

ಡಾ. ಅಂಬೇಡ್ಕರ್ ಕಾಲೇಜ್

ದಿವಂಗತ ಡಿ. ಭಾಸ್ಕರನ್ ಅವರು ೧೯೭೮ರಲ್ಲಿ ಆರಂಭಿಸಿದ ಈ ಕಾಲೇಜಿನಲ್ಲಿ ಹೊಟೇಲ್ ಮ್ಯಾನೇಜ್‌ಮೆಂಟ್ ತರಗತಿಯನ್ನು ೧೯೯೪ರಲ್ಲಿ ಆರಂಭಿಸಲಾಯಿತು. ಪ್ರತಿ ವರ್ಷ ೨೫ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಪ್ರವೇಶ ಪರೀಕ್ಷೆ ಇಲ್ಲ. ಹಾಸ್ಟೆಲ್ ಸೌಲಭ್ಯವೂ ಇಲ್ಲ.

ಎಎಂಸಿ ಕಾಲೇಜ್

ಡಾ. ಪರಮಹಂಸ ಅವರು ೧೯೮೩ರಲ್ಲಿ ಆರಂಭಿಸಿದ ಈ ಕಾಲೇಜ್‌ನಲ್ಲಿ ೧೯೯೨ರಿಂದ ಹೊಟೇಲ್ ಮ್ಯಾನೇಜ್‌ಮೆಂಟ್ ತರಗತಿ ಆರಂಭಿಸಲಾಯಿತು. ಬನ್ನೇರುಘಟ್ಟದಲ್ಲಿ ಕಾಲೇಜ್ ಇದೆ. ಕಾಲೇಜಿನ ಕಚೇರಿ ಜಯನಗರ ನಾಲ್ಕನೇ ಬ್ಲಾಕ್‌ನಲ್ಲಿದೆ. ಕಾಲೇಜಿಗೆ ಪ್ರತಿ ವರ್ಷ ೬೦ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ರಾಷ್ಟ್ರಮಟ್ಟದ ಪ್ರವೇಶ ಪರೀಕ್ಷೆ ನಡೆಸಲಾಗುವುದು. ಪ್ರತಿ ವರ್ಷದ ಶಿಕ್ಷಣ ಶುಲ್ಕ ೨೫ ಸಾವಿರ ರೂಪಾಯಿಗಳು. ಹಾಸ್ಟೆಲ್ ಸೌಲಭ್ಯವಿದ್ದು ಶುಲ್ಕ ತಿಂಗಳಿಗೆ ಸುಮಾರು ೨ ಸಾವಿರ ರೂಪಾಯಿಗಳು. ಕಾಲೇಜ್ ಆವರಣದಲ್ಲಿಯೇ ತ್ರಿತಾರಾ ಹೊಟೇಲೊಂದನ್ನು ಸ್ಥಾಪಿಸುವ ಯೋಜನೆಯೂ ಕಾಲೇಜ್ ಆಡಳಿತ ಮಂಡಳಿಗೆ ಇದೆ.

೧೯೯೬-೯೭ರಲ್ಲಿ ನಡೆದ ಅಂತರ ಕಾಲೇಜ್ ಛೆಫ್ ಸ್ಪರ್ಧೆಯಲ್ಲಿ ಈ ಕಾಲೇಜ್ ಎರಡನೇ ಬಹುಮಾನ ಗಳಿಸಿದೆ. ವುಡ್‌ಲ್ಯಾಂಡ್ಸ್ ಹೊಟೇಲ್ ನಡೆಸಿದ ಹೊಟೇಲ್ ಮ್ಯಾನೇಜ್‌ಮೆಂಟ್ ಕುರಿತ ಕ್ವಿಜ್ ಸ್ಪರ್ಧೆಯಲ್ಲಿ ಈ ಕಾಲೇಜಿಗೆ ಮೊದಲ ಬಹುಮಾನ ಬಂದಿದೆ.

ಕ್ರೈಸ್ಟ್ ಕಾಲೇಜ್

೧೯೬೯ರಲ್ಲಿ ಆರಂಭವಾದ ಈ ಕಾಲೇಜಿನಲ್ಲಿ ಹೊಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಆರಂಭವಾದದ್ದು ೧೯೯೧ರಲ್ಲಿ. ಬೆಂಗಳೂರಿನಲ್ಲಿ ಹೊಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್

ಆರಂಭಿಸಿದ ಮೊದಲ ಕಾಲೇಜ್ ಇದು. ಹೊಸೂರು ರಸ್ತೆಯಲ್ಲಿರುವ ಈ ಕಾಲೇಜಿನಲ್ಲಿ ಅಗತ್ಯ ಎಲ್ಲ ಸೌಲಭ್ಯಗಳಿವೆ.

ನಿಗದಿತ ಪಠ್ಯಗಳ ಜೊತೆಗೆ ವಿದ್ಯಾರ್ಥಿಗಳನ್ನು ಪಂಚತಾರಾ ಹೊಟೇಲ್‌ಗಳು ಮತ್ತು ಕೈಗಾರಿಕೆಗಳಿಗೆ ಕರೆದುಕೊಂಡು ಹೋಗಿ ಅಲ್ಲಿನ ಮಾಹಿತಿ ತಿಳಿಸುವ ಸೌಲಭ್ಯವೂ ಇದೆ.

ಗಾರ್ಡನ್ ಸಿಟಿ ಕಾಲೇಜ್ ಆಫ್ ಕಾಮರ್ಸ್, ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್

ಹಳೆ ಮದ್ರಾಸ್ ರಸ್ತೆಯಲ್ಲಿರುವ ಈ ಕಾಲೇಜಿನಲ್ಲಿ ಹೊಟೇಲ್ ಮ್ಯಾನೇಜ್‌ಮೆಂಟ್ ಕೋರ್ಸನ್ನು ೧೯೯೪ರಲ್ಲಿ ಆರಂಭಿಸಲಾಯಿತು. ಪ್ರವೇಶ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಪ್ರವೇಶ ಪರೀಕ್ಷೆ ನಂತರ ಗ್ರೂಪ್ ಡಿಸ್ಕಷನ್ ಮತ್ತು ಸಂದರ್ಶನಗಳಿರುತ್ತವೆ. ಮೊದಲ ೬ ತಿಂಗಳಿಗೆ ಶಿಕ್ಷಣ ಶುಲ್ಕ ೭೦ ಸಾವಿರ ರೂಪಾಯಿ. ಎರಡನೇ ೬ ತಿಂಗಳ ಅವಧಿಗೆ ಶುಲ್ಕ ೩೦ ಸಾವಿರ ರೂಪಾಯಿ, ಮುಂದಿನ ಎಲ್ಲ ಟರ್ಮ್‌ಗಳಿಗೆ ೧೫ ಸಾವಿರ ರೂಪಾಯಿಗಳು. ಹಾಸ್ಟೆಲ್ ಸೌಲಭ್ಯವಿದೆ ಮತ್ತು ಅದರ ಶುಲ್ಕ ಪ್ರತಿ ತಿಂಗಳಿಗೆ ಸುಮಾರು ೧,೬೦೦ ರೂಪಾಯಿ.

ಹಿಂದೂಸ್ತಾನ ಅಕಾಡೆಮಿ ಆಫ್ ಇಂಜಿನಿಯರಿಂಗ್ ಅಂಡ್ ಅಪ್ಲೈಡ್ ಸೈನ್ಸ್ ಅಕಾಡೆಮಿ


ಇದು ಬೆಂಗಳೂರು ಹೊರವಲಯದ ಮಾರತಳ್ಳಿಯಲ್ಲಿದೆ. ಅಕಾಡೆಮಿಯ ಕಚೇರಿ ಅಲಸೂರಿನ ಕೇಂಬ್ರಿಡ್ಜ್ ರಸ್ತೆಯಲ್ಲಿದೆ. ೧೯೯೨ರಲ್ಲಿ ಹೊಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಆರಂಭಿಸಲಾಯಿತು. ಪ್ರತಿ ವರ್ಷ ೩೦ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಅಭ್ಯರ್ಥಿಗಳ ಆಯ್ಕೆಗೆ ಪ್ರವೇಶ ಪರೀಕ್ಷೆ ಇಲ್ಲ. ಅಭ್ಯರ್ಥಿಗಳೊಂದಿಗೆ ಚರ್ಚೆ ನಡೆಸಿದ ನಂತರ ಆಯ್ಕೆ ಮಾಡಲಾಗುತ್ತದೆ. ಹಾಸ್ಟೆಲ್ ಸೌಲಭ್ಯವಿದೆ. ಅದರ ಶುಲ್ಕ ಪ್ರತಿ ತಿಂಗಳಿಗೆ ೭ ಸಾವಿರ ಮತ್ತು ಊಟದ ವೆಚ್ಚ ಪ್ರತಿ ತಿಂಗಳು ಸುಮಾರು ೬೦೦ ರೂಪಾಯಿಗಳಾಗಬಹುದು. ಸುಮಾರು ೨೦ ವರ್ಷ ಈ ಕ್ಷೇತ್ರದಲ್ಲಿ ಅನುಭವವಿರುವ ಅಧ್ಯಾಪಕರಿಂದ ಶಿಕ್ಷಣ, ಅಧ್ಯಯನಕ್ಕೆ ಅತಿಥಿ ಗೃಹ, ಉಪಹಾರ ಗೃಹ, ಅಡಿಗೆ ಮನೆ ಮತ್ತು ಬಾರ್ ಸೌಲಭ್ಯಗಳಿವೆ.

ಎಸ್. ನಿಜಲಿಂಗಪ್ಪ ಕಾಲೇಜ್

ಕೆಎಲ್‌ಇ ಸೊಸೈಟಿ ಅವರು ನಡೆಸುವ ಈ ಕಾಲೇಜಿನಲ್ಲಿ ೧೯೯೧ರಿಂದ ಹೊಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್ ನಡೆಸಲಾಗುತ್ತಿದೆ. ರಾಜಾಜಿನಗರದಲ್ಲಿರುವ ಕಾಲೇಜಿನಲ್ಲಿ ಉತ್ತಮ ಶಿಕ್ಷಕರಿದ್ದಾರೆ. ಕರ್ನಾಟಕದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ವರ್ಷಕ್ಕೆ ೧೨ ಸಾವಿರ ರೂಪಾಯಿಗಳು. ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ೧೮ ಸಾವಿರ ರೂಪಾಯಿಗಳು. ಹಾಸ್ಟೆಲ್ ಸೌಲಭ್ಯವಿದೆ. ಈ ಸೌಲಭ್ಯ ಪಡೆಯಲು ೭ ಸಾವಿರ ರೂಪಾಯಿ ಡಿಪಾಸಿಟ್ ಇಡಬೇಕಾಗುತ್ತದೆ. ನಂತರ ಪ್ರತಿ ವರ್ಷ ಹಾಸ್ಟೆಲ್ ಶುಲ್ಕ ೭,೫೦೦ ರೂಪಾಯಿ ನೀಡಬೇಕಾಗುತ್ತದೆ. ಮೆಸ್ ಬಿಲ್ ಪ್ರತಿ ತಿಂಗಳು ಸುಮಾರು ೮೦೦ ರೂಪಾಯಿಗಳಾಗಬಹುದು. ಕಾಲೇಜಿನಲ್ಲಿ ಬಸ್ ಸೌಲಭ್ಯ ಕೂಡ ಇದೆ. ಪ್ರತಿ ವರ್ಷ ೪೦ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಮೌರ್ಯ ಇನ್‌ಸ್ಟಿಟ್ಯೂಟ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್

ಫ್ರೇಜರ್‌ಟೌನ್‌ನಲ್ಲಿರುವ ಈ ಸಂಸ್ಥೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಯಾವುದೇ ರೀತಿಯ ಪ್ರವೇಶ ಪರೀಕ್ಷೆ ಮಾಡುವುದಿಲ್ಲ. ಅಭ್ಯರ್ಥಿಗಳ ಶೈಕ್ಷಣಿಕ ಗುಣಮಟ್ಟ ಮತ್ತು ಸಂದರ್ಶನ ಆಧಾರದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಬೋಧನಾ ಶುಲ್ಕ ಪ್ರತಿ ವರ್ಷ ಸುಮಾರು ೨೦ ಸಾವಿರ ರೂಪಾಯಿಗಳು.



ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್

ಹೊಸ ಬಿಇಎಲ್ ರಸ್ತೆಯ ಎಂಎಸ್‌ಆರ್ ನಗರದಲ್ಲಿ ಈ ಕಾಲೇಜ್ ೧೯೯೪ರಲ್ಲಿ ಆರಂಭವಾಯಿತು. ೧೯೯೬-೯೭ರಲ್ಲಿ ಈ ಕಾಲೇಜ್‌ನ್ನು ಅತ್ಯುತ್ತಮ ಕಾಲೇಜ್ ಎಂದು ಎಐಸಿಟಿಇ ಪ್ರಮಾಣೀಕರಿಸಿದೆ. ಕಾಲೇಜಿನಲ್ಲಿ ನಾಲ್ಕು ಅಡಿಗೆ ಮನೆಗಳು, ಬೇಕರಿ ಮತ್ತು ಉಪಹಾರಗೃಹವಿದೆ. ಕಾಲೇಜ್ ಆವರಣದಲ್ಲಿಯೇ ಪಂಚತಾರಾ ಹೊಟೇಲ್ ನಿರ್ಮಾಣವೂ ನಡೆದಿದೆ.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕಾಲೇಜ್ ಪ್ರಯೋಗ ಪರೀಕ್ಷೆಗಳನ್ನು ನಡೆಸುತ್ತದೆ. ಕಾಲೇಜಿಗೆ ಸೇರಿಸಿಕೊಳ್ಳಲು ಪ್ರವೇಶ ಪರೀಕ್ಷೆ ಇಲ್ಲ. ಅಭ್ಯರ್ಥಿಗಳೊಂದಿಗೆ ಅಧ್ಯಾಪಕ ವರ್ಗ

ವುಡ್‌ಲ್ಯಾಂಡ್ಸ್ ಕಾಲೇಜ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್

ಬೆಂಗಳೂರಿನ ರಾಜಾರಾಮ ಮೋಹನ್‌ರಾಯ್ ರಸ್ತೆಯಲ್ಲಿರುವ ವುಡ್‌ಲ್ಯಾಂಡ್ಸ್ ಹೊಟೇಲ್ ಆವರಣದಲ್ಲಿರುವ ಕದಂಡಲೆ ಕೃಷ್ಣರಾವ್ ಸ್ಮಾರಕ ಕಾಲೇಜ್ ರಾಷ್ಟ್ರಮಟ್ಟದ ಖ್ಯಾತಿ ಗಳಿಸಿದೆ. ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ೧೯೩ರಲ್ಲಿ ಆರಂಭವಾದ ಈ ಕಾಲೇಜಿನಲ್ಲಿ ಹೊಟೇಲ್ ಮ್ಯಾನೇಜ್‌ಮೆಂಟ್‌ನ ೩. ವರ್ಷದ ಕೋರ್ಸ್ ಇದೆ. ಪ್ಯಾರಿಸ್‌ನ ಅಂತರರಾಷ್ಟ್ರೀಯ ಹೊಟೇಲ್ ಸಂಘ ಮತ್ತು ಭಾರತೀಯ ಹೊಟೇಲ್ ಮತ್ತು ಉಪಹಾರ ಗೃಹಗಳ ಸಂಘಗಳ ಒಕ್ಕೂಟದ ಸದಸ್ಯತ್ವವನ್ನು ಈ ಕಾಲೇಜ್ ಹೊಂದಿದೆ.

ಇಲ್ಲಿ ಮೂರು ವರ್ಷದ ಪದವಿ ತರಗತಿ ಇದೆ. ಪ್ರತಿ ವರ್ಷವನ್ನು ಎರಡು ಸೆಮಿಸ್ಟರ್‌ಗಳನ್ನಾಗಿ ವಿಂಗಡಿಸಲಾಗಿದೆ. ಮೊದಲ ವರ್ಷಕ್ಕೆ ಶಿಕ್ಷಣ ಶುಲ್ಕ ಸುಮಾರು ೬೦ ಸಾವಿರ ರೂಪಾಯಿಗಳು. ಎರಡನೇ ಮತ್ತು ಮೂರನೇ ವರ್ಷದ ಶುಲ್ಕ ಸುಮಾರು ೭೦ ಸಾವಿರ ರೂಪಾಯಿಗಳು. ಹಾಸ್ಟೆಲ್ ಸೌಲಭ್ಯವೂ ಇದೆ. ವಸತಿ ಮತ್ತು ಊಟದ ಶುಲ್ಕ ಪ್ರತಿವರ್ಷ ೨೦ ಸಾವಿರ ರೂಪಾಯಿಗಳು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಶುಲ್ಕವೂ ಲಭ್ಯವಾಗುತ್ತದೆ.

ಮೊದಲ ಮತ್ತು ಎರಡನೇ ವರ್ಷದ ಅಂತ್ಯದಲ್ಲಿ ಮೂರು ತಿಂಗಳು ವೃತ್ತಿ ತರಬೇತಿ ನೀಡಲಾಗುತ್ತದೆ. ಆ ಸಮಯದಲ್ಲಿ ಸಾವಿರ ರೂಪಾಯಿ ಪ್ರೋತ್ಸಾಹ ಧನ ನೀಡಲಾಗುತ್ತದೆ. ಈ ತರಗತಿಗೆ ಪ್ರವೇಶ ಪಡೆಯಲು ಯಾವುದೇ ಪದವಿಯಲ್ಲಿ ಶೇ. ೫೦ರಷ್ಟು ಅಂಕ ಪಡೆಯಬೇಕು. ೨೫ ವರ್ಷಕ್ಕಿಂತ ಕಡಿಮೆ ಇರಬೇಕು. ಸ್ಪರ್ಧಾ ಪರೀಕ್ಷೆ ಮತ್ತು ದೆಹಲಿ ಹಾಗೂ ಬೆಂಗಳೂರಿನಲ್ಲಿ ಸಂದರ್ಶನ ನಡೆಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ದವರು ಸಂದರ್ಶನ ನಡೆಸಿದ ನಂತರವೇ ಆಯ್ಕೆ ನಡೆಸಲಾಗುತ್ತದೆ.

ಬೋಧನಾ ಶುಲ್ಕ ಸುಮಾರು ೨೭ ಸಾವಿರ ರೂಪಾಯಿಗಳು. ಪ್ರತಿಯೊಬ್ಬ ವಿದ್ಯಾರ್ಥಿಗೆ ಪ್ರತ್ಯೇಕ ಕೋಣೆಯನ್ನು ಹೊಂದಿರುವ ಹಾಸ್ಟೆಲ್ ಸೌಲಭ್ಯವಿದೆ.

ಪ್ರೆಸಿಡೆನ್ಸಿ ಕಾಲೇಜ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್

ದೊಮ್ಮಲೂರಿನಲ್ಲಿರುವ ಈ ಕಾಲೇಜ್ ೧೯೯೩ರಲ್ಲಿ ಆರಂಭವಾಯಿತು. ಬೋಧನಾ ಶುಲ್ಕ ಸುಮಾರು ೫೦,೫೦೦ ರೂಪಾಯಿಗಳು.

ಒಬೆರಾಯ್ ಸ್ಕೂಲ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್

ಎಂಟು ದೇಶಗಳಲ್ಲಿ ೩೦ ಪಂಚತಾರಾ ಹೊಟೇಲ್‌ಗಳನ್ನು ಹೊಂದಿರುವ ಒಬೆರಾಯ್ ಹೊಟೇಲ್ ಗುಂಪಿನವರು ೧೯೬೬ರಲ್ಲಿ ಹೊಟೇಲ್ ಮ್ಯಾನೇಜ್‌ಮೆಂಟ್ ತರಗತಿ ಆರಂಭಿಸಿದ್ದಾರೆ. ಸುಮಾರು ೩೦ ವರ್ಷಗಳಿಂದ ಮ್ಯಾನೇಜ್‌ಮೆಂಟ್ ಕೋರ್ಸ್‌ನ್ನು ನಡೆಸಲಾಗುತ್ತಿದ್ದರೂ ಇದು ಹೊಟೇಲ್ ಸಿಬ್ಬಂದಿಗೆ ಮಾತ್ರ ಇದೆ ಅಥವಾ ಈ ತರಬೇತಿಗೆ ಆಯ್ಕೆಯಾದವರಿಗೆಲ್ಲ ಒಬೆರಾಯ್ ಹೊಟೇಲ್‌ನಲ್ಲಿ ಕೆಲಸ ನೀಡಲಾಗುತ್ತದೆ. ದಿ ಒಬೆರಾಯ್ ಸ್ಕೂಲ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್‌ಗೆ ಪ್ಯಾರಿಸ್‌ನ ಅಂತರರಾಷ್ಟ್ರೀಯ ಹೊಟೇಲ್ ಸಂಘದ ಮಾನ್ಯತೆ ಇದೆ.

ಈ ಸ್ಕೂಲಿನಲ್ಲಿ ತರಬೇತಿ ಪಡೆಯಬೇಕಾದರೆ ನೀವು ಒಬೆರಾಯ್ ಹೊಟೇಲ್‌ನಲ್ಲಿ ನೌಕರಿ ಪಡೆಯುವುದು ಅನಿವಾರ್ಯ. ಒಬೆರಾಯ್‌ನಲ್ಲಿ ಕೆಲಸ ಸಿಕ್ಕರೆ ನಿಮಗೆ ಪ್ರತಿ ತಿಂಗಳು ೭,೫೦೦ ರೂಪಾಯಿ ಸಹಾಯಧನ ನೀಡಿ ನಿಮಗೆ ಹೊಟೇಲ್ ಮ್ಯಾನೇಜ್‌ಮೆಂಟ್‌ನಲ್ಲಿ ತರಬೇತಿ ನೀಡಲಾಗುತ್ತದೆ.

ಹೊಟೇಲಿನ ಅಗತ್ಯಗಳಿಗೆ ಅನುಗುಣವಾಗಿ ಬೇರೆ ಬೇರೆ ವಿಷಯದಲ್ಲಿ ತರಬೇತಿ ನೀಡಲಾಗುತ್ತದೆ. ಅವುಗಳಲ್ಲಿ ಮುಖ್ಯವಾದವುಗಳು ಮೂರು: ಮೊದಲನೆಯದಾಗಿ ಮ್ಯಾನೇಜ್‌ಮೆಂಟ್ ಟ್ರೈನಿಂಗ್ ಪ್ರೋಗ್ರಾಮ್. ಇದು ಮೂರು ವರ್ಷ ಕೋರ್ಸ್. ಎರಡು ವರ್ಷ ಸ್ಕೂಲ್‌ನಲ್ಲಿ ಶಿಕ್ಷಣ ನೀಡಲಾಗುತ್ತದೆ. ನಂತರದ ಒಂದು ವರ್ಷ ಭಾರತದಲ್ಲಿರುವ ಮತ್ತು ವಿದೇಶದಲ್ಲಿರುವ ಯಾವುದಾದರೂ ಒಬೆರಾಯ್ ಹೊಟೇಲ್‌ನಲ್ಲಿ ತರಬೇತಿ ಪಡೆಯಬೇಕಾಗುತ್ತದೆ.

ಎರಡನೆಯದಾಗಿ ಹೌಸ್ ಕೀಪಿಂಗ್ ಟ್ರೈನಿಂಗ್ ಪ್ರೋಗ್ರಾಂ. ಇದು ಎರಡು ವರ್ಷ ಅವಧಿಯ ಕೋರ್ಸ್. ಮೊದಲ ವರ್ಷ ಸ್ಕೂಲ್‌ನಲ್ಲಿ ಶಿಕ್ಷಣ ಮತ್ತು ಇನ್ನೊಂದು ವರ್ಷ ಯಾವುದಾದರೂ ಒಬೆರಾಯ್ ಹೊಟೇಲ್‌ನಲ್ಲಿ ವೃತ್ತಿ ತರಬೇತಿ.

ಮೂರನೆಯದಾಗಿ ಸೀನಿಯರ್ ಕಿಚನ್ ಟ್ರೈನಿಂಗ್ ಪ್ರೋಗ್ರಾಂ. ಇದೂ ಕೂಡಾ ಎರಡು ವರ್ಷ ಅವಧಿಯ ಕೋರ್ಸ್. ಇದರಲ್ಲಿಯೂ ಮೊದಲ ವರ್ಷ ಸ್ಕೂಲ್‌ನಲ್ಲಿ ಶಿಕ್ಷಣ ಮತ್ತು ಇನ್ನೊಂದು ವರ್ಷ ವೃತ್ತಿ ತರಬೇತಿ ಇರುತ್ತದೆ.

ಮೊದಲ ಹಾಗೂ ಎರಡನೇ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಯಾವುದಾದರೂ ಅಧಿಕೃತ ಹೊಟೇಲ್ ಮ್ಯಾನೇಜ್‌ಮಂಟ್ ಕಾಲೇಜ್‌ಗಳಿಂದ ಪದವಿ ಅಥವಾ ಡಿಪ್ಲೊಮಾ ಪಡೆದಿರಬೇಕು. ಪದವಿ ಅಂತಿಮ ವರ್ಷದ ಫಲಿತಾಂಶಕ್ಕೆ ಕಾಯುತ್ತಿರುವವರು ಸಹ ಅರ್ಜಿ ಸಲ್ಲಿಸಬಹುದು. ಮೂರನೇ ಕೋರ್ಸಿಗೆ ಹೋಟೆಲ್ ಮ್ಯಾನೇಜ್‌ಮೆಂಟಿನಲ್ಲಿ ಡಿಪ್ಲೊಮಾ ಪಡೆದವರು ಮಾತ್ರ ಅರ್ಜಿ ಸಲ್ಲಿಸಬೇಕು. ಹೊಟೇಲ್ ಮ್ಯಾನೇಜ್‌ಮೆಂಟ್ ಪದವಿ ತರಗತಿಯಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆಯಾದವರಿಗೆ ಆದ್ಯತೆ ಇರುತ್ತದೆ. ಉತ್ತಮ ಭಾಷಾ ಜ್ಞಾನ ಮತ್ತು ವಿದೇಶಿ ಭಾಷೆ ಬಲ್ಲವರಿಗೆ ಹೆಚ್ಚಿನ ಆದ್ಯತೆ. ಪ್ರತಿ ವರ್ಷ ೨೫ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಆದರೆ, ಪ್ರತಿಭಾವಂತ ವಿದ್ಯಾರ್ಥಿಗಳು ಬರದಿದ್ದರೆ ಈ ಸಂಖ್ಯೆಯನ್ನು ಕಡಿತಗೊಳಿಸುವ ಸಾಧ್ಯತೆಯೂ ಇದೆ. ೧೯೯೬ರಲ್ಲಿ ಕೇವಲ ೭ ಜನರನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿತ್ತು.

ಭಾರತದ ವಿದ್ಯಾರ್ಥಿಗಳಲ್ಲದೆ ಶ್ರೀಲಂಕಾ, ನೇಪಾಳ, ಈಜಿಪ್ಟ್, ಇಂಡೋನೇಷ್ಯ, ಸೌದಿ ಅರೇಬಿಯ ಮತ್ತು ವಿಯಟ್ನಾಂಗಳ ವಿದ್ಯಾರ್ಥಿಗಳು ಸಹ ಇಲ್ಲಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಪರಿಶೀಲಿಸಿದ ನಂತರ ಹತ್ತಿರದ ಯಾವುದಾದರೂ ಒಂದು ಒಬೆರಾಯ್ ಹೊಟೇಲ್‌ನಲ್ಲಿ ಸಂದರ್ಶನ ನಡೆಸಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಆದರೆ ಪ್ರವೇಶ ಅರ್ಜಿಗಳನ್ನು ಮಾತ್ರ ಡೈರೆಕ್ಟರ್, ದಿ ಒಬೆರಾಯ್ ಸ್ಕೂಲ್ ಆಫ್ ಹೊಟೇಲ್ ಮ್ಯಾನೇಜ್‌ಮೆಂಟ್, ೭ ಶಾಮ್‌ನಾಥ್ ಮಾರ್ಗ, ನವದೆಹಲಿ-೧೧೦ ೦೫೪ ಇಲ್ಲಿಗೆ ಕಳಿಸಿಕೊಡಬೇಕು.

ಅಮೆರಿಕನ್ ಹೊಟೇಲ್ ಮತ್ತು ಮೊಟೇಲ್ ಸಂಘ ಪದವಿ ನೀಡುವ ಹೊಟೇಲ್ ಮ್ಯಾನೇಜ್‌ಮೆಂಟ್‌ನಲ್ಲಿ ಡಿಪ್ಲೊಮಾ ತರಗತಿಯನ್ನು ಈ ಕಾಲೇಜ್ ನಡೆಸುತ್ತದೆ.

ಅಲ್ಲದೆ ಇಲ್ಲಿ ಮೂರು ವರ್ಷದ ಪದವಿ ತರಗತಿಯೂ ಇದೆ. ಬೋಧನಾ ಶುಲ್ಕ ಪ್ರತಿ ವರ್ಷ ೨೫ ಸಾವಿರ ರೂಪಾಯಿಗಳಾಗುತ್ತದೆ. ಹಾಸ್ಟೆಲ್ ಸೌಲಭ್ಯವೂ ಇದೆ. ಅದರ ಶುಲ್ಕ ಸುಮಾರು ೨೨ ಸಾವಿರ ರೂಪಾಯಿಗಳು. ಅಲ್ಲದೆ ೫ ಸಾವಿರ ರೂಪಾಯಿ ಡಿಪಾಸಿಟ್ ಕೂಡ ಸಂಗ್ರಹಿಸಲಾಗುತ್ತದೆ. ನಂತರ ಈ ಹಣವನ್ನು ವಾಪಾಸು ಮಾಡಲಾಗುವುದು.

ಟಾಹ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್

ಎಚ್.ಸಿದ್ದಯ್ಯ ರಸ್ತೆಯಲ್ಲಿರುವ ಈ ಸಂಸ್ಥೆ ೧೯೮೫ರಲ್ಲಿ ಆರಂಭವಾಗಿದ್ದು ಹೊಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ್ನು ೧೯೯೫ರಲ್ಲಿ ಆರಂಭಿಸಿತು. ಅಭ್ಯರ್ಥಿಗಳ ಆಯ್ಕೆಗೆ ಪ್ರವೇಶ ಪರೀಕ್ಷೆ ಇಲ್ಲ. ಸಂದರ್ಶನದ ಆಧಾರದಲ್ಲಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಬೋಧನಾ ಶುಲ್ಕ ಪ್ರತಿ ವರ್ಷಕ್ಕೆ ೫ ಸಾವಿರ ರೂಪಾಯಿಗಳು. ಅದಲ್ಲದೆ ಲ್ಯಾಬ್ ಶುಲ್ಕವೆಂದು ೨,೫೦೦ ರೂಪಾಯಿಗಳನ್ನು ತೆಗೆದು ಕೊಳ್ಳಲಾಗುತ್ತದೆ. ಹಾಸ್ಟೆಲ್ ಸೌಲಭ್ಯವಿದೆ. ರೂಂ ಬಾಡಿಗೆ ಪ್ರತಿ ತಿಂಗಳಿಗೆ ೩೦೦ ರೂಪಾಯಿ. ಅಲ್ಲದೆ ಊಟದ ಶುಲ್ಕ ಸುಮಾರು ೧೦೦೦ ರೂಪಾಯಿಗಳಾಗಬಹುದು. ಅಲ್ಲದೆ ೩ ಸಾವಿರ ರೂಪಾಯಿ ಡೆಪಾಸಿಟ್ ಪಡೆಯಲಾಗುತ್ತದೆ. ನಂತರ ಅದನ್ನು ವಾಪಾಸು ಮಾಡಲಾಗುವುದು. ಪ್ರತಿ ವರ್ಷ ೩೦ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಎನ್‌ಆರ್‌ಐ ಇನ್‌ಸ್ಟಿಟ್ಯೂಷನ್

ನಾಗರಬಾವಿಯಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಹತ್ತಿರದಲ್ಲಿರುವ ವಸತಿ ಕಾಲೇಜ್ ಇದು. ಬೋಧನಾ ಶುಲ್ಕವೆಂದು ಪ್ರತಿ ವರ್ಷ ೨೦ ಸಾವಿರ ರೂಪಾಯಿಗಳನ್ನು ತೆಗೆದು ಕೊಳ್ಳಲಾಗುತ್ತದೆ. ಅಲ್ಲದೆ ೧೦ ಸಾವಿರ ರೂಪಾಯಿ ಡೆಪಾಸಿಟ್ ಇಡಲೇಬೇಕು. ನಂತರ ಇದನ್ನು ವಾಪಸು ಮಾಡಲಾಗುವುದು. ರೂಂ ಬಾಡಿಗೆ ಮತ್ತು ಮೆಸ್ ಬಿಲ್ ಪ್ರತಿ ತಿಂಗಳು ಸುಮಾರು ೨ ಸಾವಿರ ರೂಪಾಯಿ ಬರುತ್ತದೆ. ಮೂರು ವಿದ್ಯಾರ್ಥಿಗಳಿಗೆ ಒಂದು ರೂಂನಲ್ಲಿ ಅವಕಾಶವಿರುವುದು.

ತಾಜ್ ಗ್ರೂಪ್ ಆಫ್ ಹೊಟೇಲ್

ತಾಜ್ ಗ್ರೂಪ್ ಆಫ್ ಹೊಟೇಲ್‌ನವರು

ಹೊಟೇಲ್ ಮ್ಯಾನೇಜ್‌ಮೆಂಟ್‌ಗೆ ಸಂಬಂಧಿಸಿದಂತೆ ಎರಡು ಕೋರ್ಸ್‌ಗಳನ್ನು ನಡೆಸುತ್ತಾರೆ. ಅದರಲ್ಲಿ ಮೊದಲನೆಯದು ಗ್ರಾಜುಯೇಟ್ ಮ್ಯಾನೇಜ್‌ಮೆಂಟ್ ಟ್ರೈನಿಂಗ್ ಪ್ರೋಗ್ರಾಂ. ದೆಹಲಿಯಲ್ಲಿರುವ ಇದು ಎರಡು ವರ್ಷದ ಕೋರ್ಸ್. ಯಾವುದೇ ಪದವಿ ಪಡೆದ ವಿದ್ಯಾರ್ಥಿಗಳು ಈ ಕೋರ್ಸಿಗೆ ಅರ್ಜಿ ಸಲ್ಲಿಸಬಹುದು. ಆದರೆ ಯುವಕರಿಗಾದರೆ ಕನಿಷ್ಠ ೧೭೦ ಸೆ.ಮೀ. ಮತ್ತು ಯುವತಿಯರಿಗಾದರೆ ಕನಿಷ್ಠ ೧೬೦ ಸೆಂ.ಮೀ. ಎತ್ತರ ಇರುವುದು ಕಡ್ಡಾಯ. ತರಬೇತಿ ಅವಧಿಯಲ್ಲಿ ೭ ಸಾವಿರ ರೂಪಾಯಿ ಪ್ರೋತ್ಸಾಹ ಧನ ನೀಡಲಾಗುವುದು. ತರಬೇತಿ ನಂತರ ಪ್ರತಿಭಾವಂತರನ್ನು ತಾಜ್ ಹೊಟೇಲ್‌ಗಳಲ್ಲಿಯೇ ಮ್ಯಾನೇಜರ್ ಹುದ್ದೆಗೆ ನೇಮಕ ಮಾಡಿಕೊಳ್ಳುವ ಸಾಧ್ಯತೆಯೂ ಇದೆ.

ಎರಡನೆಯದಾಗಿ ಕೇವಲ ಮಹಿಳೆಯರಿಗಾಗಿ ಮಾತ್ರ ನಡೆಸಲಾಗುವ 'ಫ್ರಂಟ್ ಆಫೀಸ್ ಎಕ್ಸಿಕ್ಯೂಟಿವ್ ಪ್ರೋಗ್ರಾಂ ಫಾರ್ ವುಮೆನ್' ತರಗತಿಯೂ ಇದೆ. ಎರಡು ವರ್ಷದ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ತರಬೇತಿ ನೀಡಲಾಗುತ್ತದೆ. ಈ ತರಬೇತಿಯೂ ದೆಹಲಿಯಲ್ಲಿಯೇ ನಡೆಯುತ್ತದೆ. ತರಬೇತಿ ಅವಧಿಯಲ್ಲಿ ಮೊದಲ ವರ್ಷ ೪,೫೦೦ ರೂಪಾಯಿ ಪ್ರೋತ್ಸಾಹ ಧನ ನೀಡಲಾಗುವುದು. ಎರಡನೇ ವರ್ಷ ಇದು ೫,೫೦೦ ರೂಪಾಯಿಗಳಿಗೆ ಏರುತ್ತದೆ. ತರಬೇತಿಯ ನಂತರ ಹೊಟೇಲ್‌ಗಳಲ್ಲಿ ನೇಮಕಾತಿ ಮಾಡಿಕೊಳ್ಳುವ ಸಾಧ್ಯತೆಯೂ ಇದೆ.

ಪಿ.ಇ.ಎಸ್. ಕಾಲೇಜು

ಪ್ರೊ. ಎಂ.ಆರ್.ದೊರೆಸ್ವಾಮಿ ಅವರು ಸ್ಥಾಪಿಸಿದ ಪ್ಯೂಪಿಲ್ ಎಜುಕೇಷನ್ ಸೊಸೈಟಿಯವರದೂ ಒಂದು ಹೊಟೇಲ್ ಮ್ಯಾನೇಜ್‌ಮೆಂಟ್ ಕಾಲೇಜು ಬೆಂಗಳೂರಲ್ಲಿ ಇದೆ. ಇಲ್ಲಿನ ಕೋರ್ಸ್ ಅವಧಿ ೪ ವರ್ಷಗಳು ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆ ಪಾಸಾದವರಿಗೆ ಪ್ರವೇಶಾವಕಾಶವಿದೆ. ವಿಳಾಸ : ೫೦ ಅಡಿ ರಸ್ತೆ, ಬನಶಂಕರಿ ೧ನೇ ಸ್ಟೇಜ್, ಬೆಂಗಳೂರು - ೫೬೦ ೦೫೦.

ವೆಲ್‌ಕಂ ಗ್ರೂಪ್


ಹೊಟೇಲ್ ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಪಡೆದು ವೆಲ್‌ಕಂ ಗ್ರೂಪಿನ ಹೊಟೇಲ್‌ಗಳಲ್ಲಿ ನೇಮಕಾತಿ ಹೊಂದಿದವರಿಗೆ ವೆಲ್‌ಕಂ ಗ್ರೂಪ್‌ನವರು ಮೂರು ವಿವಿಧ ವಿಷಯಗಳಲ್ಲಿ ತರಬೇತಿ ಕೋರ್ಸ್‌ಗಳನ್ನು ನಡೆಸುತ್ತಾರೆ. ದೆಹಲಿ ಬಳಿಯ ಗುರಗಾಂವ್‌ನಲ್ಲಿ ತರಬೇತಿ ಕಾಲೇಜ್ ಇದೆ.

ಮೊದಲನೆಯದಾಗಿ ಒಂದೂವರೆ ವರ್ಷ ಅವಧಿಯ ಹೌಸ್ ಕೀಪಿಂಗ್ ಟ್ರೈನಿಂಗ್ ಪ್ರೊಗ್ರಾಂ. ಎರಡನೆಯದಾಗಿ ಒಂದೂವರೆ ವರ್ಷ ಅವಧಿಯ ಮಾರ್ಕೆಟಿಂಗ್ ಟ್ರೈನಿಂಗ್ ಪ್ರೋಗ್ರಾಂ. ಮೂರನೆಯದಾಗಿ 'ಎರಡು ವರ್ಷ ಅವಧಿಯ ಆಪರೇಷನ್ ಟ್ರೈನಿಂಗ್' ಪ್ರೋಗ್ರಾಂ. ಈ ತರಬೇತಿಗೆ ಪ್ರವೇಶ ಪಡೆಯಲು ಕನಿಷ್ಠ ಯಾವುದಾದರೂ ಹೊಟೇಲ್ ಮ್ಯಾನೇಜ್‌ಮೆಂಟ್ ಕಾಲೇಜುಗಳಿಂದ ಡಿಪ್ಲೊಮಾ ಪಡೆದಿರಬೇಕು. ವಸತಿ ಮತ್ತು ವಾಹನ ಸೌಕರ್ಯದ ಜೊತೆಗೆ ಪ್ರತಿ ತಿಂಗಳು ಪ್ರೋತ್ಸಾಹ ಧನ ೫ ಸಾವಿರ ರೂಪಾಯಿ ನೀಡಲಾಗುವುದು.

ಕಾಫಿ ಕಥೆ

ಇಥಿಯೋಪಿಯಾದೊಳಗಿನ 'ಕಫಾ' ಪ್ರಾಂತ್ಯದಲ್ಲಿ ಒಬ್ಬ ಕುರುಬನು ಒಂದು ದಿನ ತನ್ನ ಮಂದೆಯೊಳಗಿನ ಕೆಲವು ಮೇಕೆಗಳು ಒಂದು ಗಿಡದ ಕೆಲವು ಹಣ್ಣುಗಳನ್ನು ತಿಂದ ಸ್ವಲ್ಪ ಹೊತ್ತಿನಲ್ಲಿ ಹಾರಿ ಕುಣಿಯುತ್ತಿರುವುದನ್ನು ಗಮನಿಸಿದನು. ಆ ಹಣ್ಣಿನ ವಿಶೇಷತೆ ಏನಿರಬಹುದೆಂದು ಅವನು ಕೂಡ ಕೆಲವು ಹಣ್ಣುಗಳನ್ನು ಕೊಯ್ದು ತಿಂದನು. ಸ್ವಲ್ಪ ಹೊತ್ತಿಗೆ ತನಗೆ ಹೊಸ ಉತ್ಸಾಹ ಬಂದಂತೆನಿಸಿತು. ಕೂಡಲೇ ಅವನು ಕೆಲವು ಹಣ್ಣುಗಳನ್ನು ಕೊಯ್ದುಕೊಂಡು ತನ್ನ ಗುರುಗಳಿಗೆ ಕೊಟ್ಟನು. ಅವರು ಅದರಿಂದ ಒಂದು ಪಾನೀಯ ತಯಾರಿಸಿದರು. ಆ ಪಾನೀಯ ಕುಡಿದರೆ ಬಹುಹೊತ್ತಿನವರೆಗೆ ನಿದ್ರೆ ಮಾಡದೆ ಇರಬಹುದೆಂದು ಕಂಡು ಹಿಡಿದರು. ಆ ಹಣ್ಣುಗಳು 'ಕಫಾ' ದಿಂದ ಲಭಿಸಿದ್ದರಿಂದ ಆ ಪಾನೀಯಕ್ಕೆ 'ಕಾಫಿ' ಎಂದು ಹೆಸರಿಟ್ಟರು.

-ಸಂಗ್ರಹ : **ಶಂಕರಗೌಡ ವೈ. ಪಾಟೀಲ**, ಬಾದಾಮಿ



ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಿರಿ


೧. ಭಾರತದ ರಾಷ್ಟ್ರಾಧ್ಯಕ್ಷರು ಎಷ್ಟು ಸದಸ್ಯರನ್ನು ರಾಜ್ಯಸಭೆಗೆ ಆಯ್ಕೆ ಮಾಡುತ್ತಾರೆ?
೨. 'ಮೇ' ಒಂದನೇ ತಾರೀಖನ್ನು ಕಾರ್ಮಿಕರ ದಿನಾಚರಣೆಯೆಂದು ಮೊದಲು ಘೋಷಿಸಿದ ರಾಷ್ಟ್ರ ಯಾವುದು?
೩. 'ಗ್ರ್ಯಾಂಡ್ ಓಲ್ಡ್ ಮ್ಯಾನ್ ಆಫ್ ಇಂಡಿಯಾ' ಎಂದು ಯಾರನ್ನು ಕರೆಯುತ್ತಾರೆ?
೪. ಅರ್ಜುನ ಪ್ರಶಸ್ತಿಯನ್ನು ಯಾವ ಕ್ಷೇತ್ರಕ್ಕಾಗಿ ಭಾರತ ಸರ್ಕಾರ ನೀಡುವರು?
೫. Defence Service Staff college ಎಲ್ಲಿದೆ?
೬. ಯಾವ ಜೀವಸತ್ವದ ಕೊರತೆಯಿಂದ ಇರುಳುಗಣ್ಣು (Night Blindness) ಉಂಟಾಗುವದು?
೭. ಮಿಝೋರಾಮದ ರಾಜಧಾನಿ ಯಾವುದು?
೮. ಕ್ಯುಸೆಕ್ (Cusec) ಏನನ್ನು ಅಳೆಯಲು ಬಳಸುವರು?
೯. ಯಾವ ಪ್ರಾಣಿ ಅತೀ ಉದ್ದ ಜಿಗಿಯ ಬಲ್ಲದು?
೧೦. ಯಾವ ಸಾಗರಕ್ಕೆ ವಿಸ್ತಾರವಾದ ಕ್ಷೇತ್ರವುಂಟು?
೧೧. ಭಾರತದ ರಾಜಧಾನಿಯನ್ನು ಕಲ್ಕತ್ತದಿಂತ ದೆಹಲಿಗೆ ಎಂದು ವರ್ಗಾಯಿಸಲಾಯ್ತು?
೧೨. ಬಾಕ್ಸರ್ ಮೊಹಮ್ಮದ್ ಅಲಿಯವರ ನಿಜನಾಮವೇನು?
೧೩. ಪ್ರಪಂಚದಲ್ಲೇ ಅತೀ ದೊಡ್ಡ ಗ್ರಂಥ ಯಾವುದು?
೧೪. 'Agenda' ಅಂದರೇನು?
೧೫. ೧೯೯೬ರ ಸಾಲಿನ ಜ್ಞಾನ ಪೀಠ ಪ್ರಶಸ್ತಿ ಗಳಿಸಿದ ಬಂಗಾಳಿ ಲೇಖಕಿ ಯಾರು?
೧೬. 'ಶ್ರೀಲಂಕಾದ ಗಾಂಧಿ' ಎಂದು ಯಾರನ್ನು ಕರೆಯುವರು?
೧೭. ಲೈಟ್ ಆಫ್ ಏಷಿಯಾ ಎಂದು ಯಾರನ್ನು ಕರೆಯಲಾಗುವುದು?
೧೮. ಭಾರತದ ರಾಷ್ಟ್ರಗೀತೆಯನ್ನು ಎಷ್ಟು ಸೆಕೆಂಡುಗಳಲ್ಲಿ ಹಾಡಬೇಕು?
೧೯. AK-47 ರೈಫಲ್ ಒಂದು ನಿಮಿಷದಲ್ಲಿ ಎಷ್ಟು ಸುತ್ತು ಗುಂಡುಗಳನ್ನು ಹಾರಿಸಬಲ್ಲುದು?
೨೦. NASA (ನಾಸಾ)ದ ವಿಸ್ತೃತ ರೂಪವೇನು?
೨೧. National Defence Academy ಎಲ್ಲಿದೆ ಮತ್ತು ಯಾವ ರಾಜ್ಯದಲ್ಲಿದೆ?
೨೨. ಭಾರತದಲ್ಲಿ ಅತೀ ಹೆಚ್ಚು ಜನ ಓದುವ ಪತ್ರಿಕೆ ಯಾವುದು?
೨೩. ತಮ್ಮ ತಿಂಗಳದ ಸಂಬಳದಲ್ಲಿ (೧೦,೦೦೦) ಶೇಕಡಾ ೭೫% ರಷ್ಟನ್ನು ಸರಕಾರಕ್ಕೆ ಮರಳಿಸುತ್ತಿದ್ದ ರಾಷ್ಟ್ರಪತಿ ಯಾರು?
೨೪. ಶಿವಾಜಿ ಮಹಾರಾಜ ಮರಣ ಹೊಂದಿದ್ದು ಎಂದು?
೨೫. Fiat ಕಾರು ನಿಮಗೆ ಗೊತ್ತು ಆದರೆ, Fiat ಎಂದರೇನು?
೨೬. ಮಂಗಳ ಗ್ರಹದ ಸುತ್ತಳತೆ ಎಷ್ಟು?
೨೭. ಭಾರತದಲ್ಲಿ ಸುಮಾರು ಎಷ್ಟು ಭಾಷೆಗಳಿವೆ?
೨೮. 'ಹ್ಯಾಂಡ್‌ಕರ್‌ಚೀಫ್'ನ್ನು ಪರಿಚಯಿಸಿದವರು ಯಾರು?
೨೯. ಸುಪ್ರಸಿದ್ಧ ಫುಟ್ಬಾಲ್ ಪ್ಲೇಯರ್ ಪೀಲೀ ಯಾವ ದೇಶದವರು?
೩೦. ಪ್ರಥಮ ಹಿಂದೂ ದೇವಾಲಯ ಎಲ್ಲಿದೆ?
೩೧. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆದದ್ದು ಎಂದು?
೩೨. FERA ಇದರ ವಿಸ್ತೃತ ರೂಪವೇನು?
೩೩. ಈಜಿಪ್ಟಿಯನ್ನರ ಆಡುಭಾಷೆ ಯಾವುದು?
೩೪. ಶಬ್ದದ ವೇಗ ಒಂದು ಸೆಕೆಂಡಿಗೆ ಎಷ್ಟು?
೩೫. ಇಥಿಯೋಪಿಯಾದ ರಾಜಧಾನಿ ಯಾವುದು?
೩೬. ಕಾಶ್ಮೀರದ ಅಕ್ಬರ್ ಎಂದು ಯಾರನ್ನು ಕರೆಯುತ್ತಾರೆ?
೩೭. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸಾ.ಶಿ. ಮರುಳಯ್ಯನವರು ಎಷ್ಟನೆಯವರು?
೩೮. ಮನುಷ್ಯನ ದೇಹದ ಸಾಮಾನ್ಯ ಉಷ್ಣತೆ ಎಷ್ಟು?
೩೯. ರೆನಿನ್ ಏನು ಜೀರ್ಣವಾಗಲು ಸಹಕರಿಸುತ್ತದೆ?
೪೦. ಚೀನಾದೇಶದ ಮಹಾಗೋಡೆ ಎಂದು ನಿರ್ಮಾಣವಾಯ್ತು?
೪೧. ಮದರ್ ತೆರೇಸಾರ ನಿಜ ಹೆಸರೇನು?
೪೨. ವಿನ್‌ಸ್ಟನ್ ಚರ್ಚಿಲರು ಯಾವ ದೇಶದ ಪ್ರಧಾನಿಯಾಗಿದ್ದರು?
೪೩. ಭಾರತ ರಾಷ್ಟ್ರದ ವಿಸ್ತೀರ್ಣ ವೆಷ್ಟು?
೪೪. 'ಎ ಫೇರ್‌ವೆಲ್ ಟು ಆರ್ಮ್ಸ್' ಗ್ರಂಥದ ಲೇಖಕರು ಯಾರು?
೪೫. ಎಲೆಯಲ್ಲಿನ ನೀರಿನ ಅಂಗಾಂಶವೆಷ್ಟು?
೪೬. ಟ್ಯೂಬ್ ಕಂಟೇನರ್(Tube Container) ಯಾರು ಸಂಶೋಧಿಸಿದರು?
೪೭. 'Knight' ಪ್ರಶಸ್ತಿಯನ್ನು ಮರಳಿಸಿದ ಖ್ಯಾತ ಭಾರತೀಯ ಕವಿ ಯಾರು?
೪೮. ಲಾರ್ಡ್ ಲೂಯಿಸ್ ಮೌಂಟ್ ಬ್ಯಾಟನ್ ಯಾರು?
೪೯. ಆಮ್ಲಜನಕವಿಲ್ಲದೇ ಮೌಂಟ್ ಎವರೆಸ್ಟನ್ನು ಹತ್ತಿದ ಮೊದಲ ಭಾರತೀಯನಾರು?
೫೦. ಖ್ಯಾತ ಕ್ರಿಕೆಟಿಗ ರೀಚರ್ಡ್ ಹ್ಯಾಡ್ಲೀ ಯಾವ ದೇಶಕ್ಕೆ ಸೇರಿದವರು?

ಉತ್ತರಗಳು

೧. ೧೨ ಜನ ಸದಸ್ಯರನ್ನು ಆಯ್ಕೆ ಮಾಡುವರು, ೨. ಯು.ಎಸ್.ಎ. (USA) ೩. ದಾದಾಭಾಯಿ ನವರೋಜಿ, ೪. ಆಟ (Sports), ೫. ತಮಿಳುನಾಡಿನ ವೆಲ್ಲಿಂಗ್‌ಟನ್, ೬. 'ಎ' ಜೀವ ಸತ್ವ ೭. ಐಝ್ವಾವ್(Aizawal), ೮. ನೀರನ್ನು ಅಳೆಯುವ ಮಾನ, ೯. ಚಿರತೆ, ೧೦. ಫೆಸಿಫಿಕ್ ಸಾಗರ (Pacific Ocean), ೧೧. ೧೯೧೧ರಲ್ಲಿ, ೧೨. ಕಾಸಿಯಸ್ ಕ್ಲೇ (Cassius Clay), ೧೩. ಮಹಾಭಾರತ, ೧೪. ಸಭೆಯ ಮುಂದಿಡಲು ತರುವ ವಿವರ ಪಟ್ಟಿ. (ವ್ಯವಹಾರಕ್ಕೆ ಸಂಬಂಧಿಸಿದಂತೆ), ೧೫. ಮಹಾಶ್ವೇತಾದೇವಿ, ೧೬. ಎ.ಟಿ. ಆರಿಯರತ್ನೆ, ೧೭. ಬುದ್ಧ, ೧೮. ೫೨ ಸೆಕೆಂಡುಗಳಲ್ಲಿ, ೧೯. ೬೦೦ ಸುತ್ತು, ೨೦. National Aeronautics and Space Administration of (USA), ೨೧. ಮಹಾರಾಷ್ಟ್ರದ ಕಡಕ್ ವಾಸ್ಲಾ, ೨೨. ಮಲೆಯಾಳಂ ಮನೋರಮ, ೨೩. ಡಾ. ಎಸ್. ರಾಧಾಕೃಷ್ಣನ್, ೨೪. ೧೬೮೦, ೨೫. Fabrico Italina Automobile Torino, ೨೬. ೬,೭೫೦ ಕಿ.ಮೀ, ೨೭. ಸುಮಾರು ೫೦೦೦, ೨೮. ಎರಡನೇ ರಿಚರ್ಡ್ (ಬ್ರಿಟನ್), ೨೯. ಬ್ರಿಜಿಲ್, ೩೦. ಮಧ್ಯಪ್ರದೇಶದ ಸಾಂಚಿಯಲ್ಲಿ, ೩೧. ೧೯೧೯ರಲ್ಲಿ, ೩೨. Foreign Exchange Regulation Act., ೩೩. ಅರಬಿಕ್, ೩೪. ಸೆಕೆಂಡಿಗೆ ೩೩೦೦೦ ಕಿ.ಮೀ, ೩೫. ಆಡಿಸ್ ಅಬಾಬಾ, ೩೬. ಶಮ್‌ಸುದ್ದೀನ ಶಹಾ, ೩೭. ಹತ್ತೊಂಭತ್ತನೆಯವರು, ೩೮. ೩೬.೯ ಡಿಗ್ರಿ ಸೆ., ೩೯. ಹಾಲು ಜೀರ್ಣವಾಗಲು, ೪೦. ಕ್ರಿ.ಪೂ.೨೧೪ರಲ್ಲಿ, ೪೧. ಯಜ್ಞೆಸ್ ಗೋನ್ಸಾ ಬೋಜಾಕ್ಷಿಯು, ೪೨. ಬ್ರಿಟನ್, ೪೩. ಭಾರತದ ವಿಸ್ತೀರ್ಣ ೧೨,೬೧,೮೧೦ ಚ.ಕಿ.ಮೀ., ೪೪. ಅರ್ನೆಸ್ಟ್ ಹೆಮಿಂಗ್‌ವೇ, ೪೫. ಶೇಕಡಾ ೯೦ರಷ್ಟು, ೪೬. ಜಾನ್ ಗೊಫೆ ರ್‍ಯಾಂಡ್, ೪೭. ರವೀಂದ್ರನಾಥ ಟಾಗೋರ್, ೪೮. ಭಾರತದ ವೈಸ್‌ರಾಯ್ ಹಾಗೂ ಗವರ್ನರ್ ಜನರಲ್, ೪೯. ಫ್ಲೋ ದೋರ್ಜೆ (ಮೇ. ೯, ೧೯೮೪), ೫೦. ನ್ಯೂಜಿಲ್ಯಾಂಡ್

○ ಶಿ.ಕಾ. ಬಡಿಗೇರ

ವಿದ್ಯೆಯ ಬಾಗಿಲು :
ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯ



ಗುರುವಿನ ಕೈಂಕರ್ಯಮಾಡಿ, ವಿದ್ಯೆ ಕಲಿತು ಬದುಕಿಗೆ ಮರಳುತ್ತಿದ್ದ ಗುರು ಶಿಷ್ಯ ಪರಂಪರೆ ಈಗುಳಿದಿರುವುದು ಸಂಗೀತ ಕ್ಷೇತ್ರದಲ್ಲಿ ಮಾತ್ರ. ಇಂದಿನ ವೇಗದ ಜಗತ್ತಿನಲ್ಲಿ, ಬದುಕಿನ ಒತ್ತಡಗಳಲ್ಲಿ ವಿರಾಮವಾಗಿ ಕುಳಿತು ವಿದ್ಯೆ ಕಲಿಯಲು ಯಾರಿಗಿದೆ ಸಮಯ ಹೇಳಿ? ಜಾಗತೀಕರಣಕ್ಕೆ ತನ್ನನ್ನು ಒಡ್ಡಿಕೊಂಡಿರುವ ಭಾರತದಲ್ಲಿ, ಸ್ವಾತಂತ್ರ್ಯಾ ನಂತರ ಸಾಕ್ಷರತೆಯ ಪ್ರಮಾಣ ಹೆಚ್ಚಿದ್ದರೂ, ಬಡತನದ ಅನಿವಾರ್ಯತೆಯಿಂದಲೋ, ಪರಿಸ್ಥಿತಿಯ ಶಾಪದಿಂದಲೋ ಓದಲಾಗದ ಬದುಕಿನ ಗಾಡಿಗೆ ಕೈಗೂಡಿಸಬೇಕಾಗಿ ಬಂದ ಅಸಂಖ್ಯಾತ ಮಂದಿ ಈ ದೇಶದಲ್ಲಿದ್ದಾರೆ. ಹೆಚ್ಚು ಓದಲಾಗದೆ ಕೆಲಸಕ್ಕೆ ಸೇರಿ ಉನ್ನತ ಶಿಕ್ಷಣದಿಂದ ವಂಚಿತರಾದವರಿಗೆ ಮತ್ತು ಉನ್ನತ ಶಿಕ್ಷಣದ ವೆಚ್ಚವನ್ನು ಭರಿಸಲಾಗದೆ ಓದಲಾಗದವರಿಗೆ, ಮುಕ್ತ ವಿಶ್ವವಿದ್ಯಾನಿಲಯಗಳು ಹೊಸ ದಿಗಂತವನ್ನೇ ತೆರೆದಿವೆ. ಇಂತಹ ಮುಕ್ತ ವಿ.ವಿ.ಗಳಲ್ಲಿ ದೊಡ್ಡ ಹೆಸರು ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿ.ವಿ.

೧೯೮೫ರಲ್ಲಿ ಪ್ರಾರಂಭವಾದ ಇಗ್ನೋ (IGNOU) ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಗೆ ಪರ್ಯಾಯವಾದ ವ್ಯವಸ್ಥೆಯಾಗಿದ್ದು, ತನ್ನದೇ ಆದ ವಿಶಿಷ್ಟ ಛಾಪನ್ನು ಹೊಂದಿರುವ ಶಿಕ್ಷಣ ವ್ಯವಸ್ಥೆ. ಮುದ್ರಿತ ಶಿಕ್ಷಣ ವಸ್ತುವನ್ನು ಪೂರೈಸುವ, ದೃಶ್ಯ ಮತ್ತು ಶ್ರವಣ ಮಾಧ್ಯಮದ ಮೂಲಕ ಮತ್ತು ವಿದ್ಯಾರ್ಥಿಗೆ ಸಹಾಯದ ಅಗತ್ಯವಿದೆ ಎನ್ನಿಸಿದಾಗ ಶಿಕ್ಷಕ ಸಿದ್ಧನಾಗಿರುವ ವ್ಯವಸ್ಥೆ ಇದು. ವೃತ್ತಿ ನಿರತ, ಅನುಭವೀ ಶಿಕ್ಷಕರು ಸಿದ್ಧಪಡಿಸಿದ ಓದುವ ವಸ್ತು ವಿದ್ಯಾರ್ಥಿಗೆ ನೇರವಾಗಿ ತಲುಪುತ್ತದೆ. ಪ್ರತೀ ಹಂತದಲ್ಲೂ ಶಿಕ್ಷಕ ಮತ್ತು ಶಿಕ್ಷಣಾರ್ಥಿ ನಡುವೆ ಮುಖಾಮುಖಿ ಇರುವಂತೆ ಪ್ರತೀ ಪಠ್ಯ ವಿಷಯವನ್ನು ಸಿದ್ಧಪಡಿಸಲಾಗಿದೆ. ಇದರಿಂದಾಗಿ ಪ್ರತೀ ಹಂತದಲ್ಲೂ ವಿದ್ಯಾರ್ಥಿಗೆ ತಾನೇನು ಕಲಿಯುತ್ತಿದ್ದೇನೆ ಎನ್ನುವುದರ ಅರಿವಿರುತ್ತದೆ. ಪ್ರತೀ ಘಟಕ, ಅಧ್ಯಾಯ, ವಿಭಾಗ ಮುಗಿದ ನಂತರ ವಿದ್ಯಾರ್ಥಿ ತಾನು ಕಲಿತದ್ದನ್ನು ಮನನ ಮಾಡಿಕೊಳ್ಳಲು, ಪ್ರಶ್ನಿಸಿಕೊಳ್ಳಲು ಮತ್ತು ಉತ್ತರ ಶೋಧಿಸಲು ಅವಕಾಶವಿದೆ. ಪರಸ್ಪರ ಸಂವಾದದಂತಿರುವ ಈ ಕ್ರಮವು ಉರುಹಚ್ಚುವುದನ್ನು ತಪ್ಪಿಸುತ್ತದೆ.

ಮಾಹಿತಿ ನೀಡುವುದು ಮಾತ್ರ 'ಇಗ್ನೋ'ದ ಗುರಿಯಲ್ಲ, ಬದಲಿಗೆ ಸಿಕ್ಕ ಮಾಹಿತಿಯನ್ನು ಸೂಕ್ತವಾಗಿ ಹಂಚುವ ಮತ್ತು ಅದನ್ನು ಬಳಸುವುದನ್ನು ಕಲಿಸುವ ಶಿಕ್ಷಣ ವಿಧಾನ 'ಇಗ್ನೋ'ದು. ಪ್ರತಿಯೊಬ್ಬ ವಿದ್ಯಾರ್ಥಿಗೂ ಅಧ್ಯಯನ ಕೇಂದ್ರದಲ್ಲಿ ಪುಸ್ತಕ, ದೃಶ್ಯ-ಶ್ರಾವ್ಯ ಮಾಧ್ಯಮ ಮತ್ತು ಶಿಕ್ಷಕನ ಮುಖಾಮುಖಿಯ ಸೌಲಭ್ಯವಿದೆ.

'ಇಗ್ನೋ' ಕಲಿಯುವಾತನನ್ನು ಕೇಂದ್ರವಾಗುಳ್ಳ ಶಿಕ್ಷಣ ಸಂಸ್ಥೆ. ಇಲ್ಲಿ ಕಲಿಯುವಾತ ತನಗೆ ಬೇಕಾದ ವಿಷಯವನ್ನು ಆಯ್ದುಕೊಳ್ಳುತ್ತಾನೆ, ತನಗೊದಗಿಸಿದ ವಸ್ತುವನ್ನು ವಿಶ್ಲೇಷಿಸುತ್ತಾನೆ. ತನ್ನ ವಿದ್ಯಾಭ್ಯಾಸದ ವೇಗವನ್ನು ನಿರ್ಧರಿಸುತ್ತಾನೆ. ಸರ್ಟಿಫಿಕೇಟ್, ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ಹಂತದಲ್ಲಿ ೪೦ ವಿವಿಧ ಕಲಿಕಾ ಕಾರ್ಯಕ್ರಮಗಳನ್ನುಳ್ಳ 'ಇಗ್ನೋ' ಸುಮಾರು ೭೦೦ ದೃಶ್ಯ/ಶ್ರಾವ್ಯ ಸುರುಳಿಗಳನ್ನು ತಯಾರಿಸಿದೆ. ದೆಹಲಿಯಲ್ಲಿರುವ ತಜ್ಞ ಶಿಕ್ಷಕನೊಬ್ಬ ಪ್ರಾದೇಶಿಕ ಕೇಂದ್ರವೊಂದರ ವಿದ್ಯಾರ್ಥಿಯೊಬ್ಬನೊಡನೆ ಉಪಗ್ರಹದ ಮೂಲಕ ನೇರವಾಗಿ ಸಂಪರ್ಕ ಸಾಧ್ಯವಾಗಿಸುವ 'ಟೆಲಿಕಾನ್ಫರೆನ್ಸ್' ವ್ಯವಸ್ಥೆಯಿದೆ, ಕಲಿಯಬೇಕೆನಿಸಿದವರಿಗೆ ಕಂಪ್ಯೂಟರ್ ಲಭ್ಯವಿದೆ.

ಅಪಾರ ವಿಸ್ತಾರದ, ವಿದ್ಯಾರ್ಥಿ ಮತ್ತು ಶಿಕ್ಷಕನ ನಡುವೆ ಅಪಾರವಾದ ಕಂದಕವಿರುವ ಭಾರತದಂತಹ ದೇಶದಲ್ಲಿ, ಅವರಿಬ್ಬರ ನಡುವೆ ಸಾಮೀಪ್ಯ ಕಲ್ಪಿಸುವುದು 'ದೂರ ಕಲಿಕಾ ಕ್ರಮ'ದ ಮುಖ್ಯ ಉದ್ದೇಶ. ಕೆಲಸ ಮಾಡಬೇಕಾಗಿ ಬಂದು ಸಾಂಪ್ರದಾಯಿಕ ಶಿಕ್ಷಣದಿಂದ ವಂಚಿತರಾದವರಿಗೆ, ಈಗಾಗಲೇ ಕೆಲಸದಲ್ಲಿದ್ದು ತಮ್ಮ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಲು ಇಲ್ಲವೇ ಕೆಲಸದಲ್ಲಿ ಬಡ್ತಿ ಪಡೆಯಲು ಪ್ರಯತ್ನಿಸುತ್ತಿರುವವರಿಗೆ, ಕೆಲವೊಂದು ಕಾರಣಗಳಿಂದಾಗಿ ಓದಲಾಗದೆ ಕೆಲಕಾಲಾನಂತರ ಓದಲು ಇಚ್ಛಿಸಿದವರಿಗೆ, ಗೃಹಿಣಿಯರು ಮತ್ತು ಸ್ವಯಂ ಉದ್ಯೋಗ ಮಾಡಲು ಇಚ್ಛಿಸುವವರಿಗೆ 'ಇಗ್ನೋ' ಕಠಿಣವಾದ ವಿದ್ಯಾರ್ಹತೆಯ ನಿಯಮವನ್ನಾಗಲೀ ಕಾಲದ ಮಿತಿಯನ್ನಾಗಲೀ ಹೇರುವುದಿಲ್ಲ. ೩ ವರ್ಷದ ಪದವಿಯನ್ನು ೮ ವರ್ಷದಲ್ಲಿ ಮುಗಿಸಬಹುದು. ಇದರಿಂದಾಗಿ ಕೆಲಸದಲ್ಲಿರುವವರು ತಮ್ಮ ಬಿಡುವಿನ ಸಮಯದಲ್ಲೇ ವಿದ್ಯಾಭ್ಯಾಸ ಮಾಡುವ ಅವಕಾಶ ಸಿಕ್ಕುತ್ತದೆ. ಯಾವುದೇ ವಯಸ್ಸಿನ ಮಿತಿಯಿಲ್ಲದ್ದರಿಂದ ಕಲಿಯಲಿಚ್ಛಿಸುವ ವ್ಯಕ್ತಿ ಎಂದಾದರೂ ಕಲಿಯುವ ಅವಕಾಶ ಸಿಕ್ಕುತ್ತದೆ.

'ಇಗ್ನೋ' ಕಲಿಕೆಗಾಗಿ ವಿಧಿಸುವ ಶುಲ್ಕ ತೀರಾ ಕಡಿಮೆ. ಇದರಿಂದಾಗಿ ಇಗ್ನೋ ಸೇರುತ್ತಿರುವವರ ಸಂಖ್ಯೆ ಹೆಚ್ಚು. ಇಗ್ನೋದ ಉಪಕುಲಪತಿ ಪ್ರಕಾರ ಇಂದು ದಾಖಲಾಗಿರುವವರ ಸಂಖ್ಯೆ ೩,೯೪,೩೮೮. ಅತ್ಯಾಧುನಿಕ ತಂತ್ರಜ್ಞಾನದ ಬಳಕೆಯಿಂದಾಗಿ ರಾಷ್ಟ್ರೀಯ ಕಾರ್ಯಜಾಲ ಸೃಷ್ಟಿಸುವಲ್ಲಿ ಇಗ್ನೋ ಯಶಸ್ವಿಯಾಗಿದೆ. ತೀರಾ ಸನಿಹದಲ್ಲಿ ಪ್ರಾದೇಶಿಕ ಕೇಂದ್ರಗಳಲ್ಲಿ ಇಂಟರ್‌ನೆಟ್ ಸೌಲಭ್ಯ ಸಿಗುವ ಸಾಧ್ಯತೆಗಳಿವೆ. ಇದಕ್ಕೆ ವಿದೇಶೀ ವಿ.ವಿ.ಗಳಲ್ಲಿ ತಗಲುವ ವೆಚ್ಚ ತೀರಾ ಹೆಚ್ಚು. ಸಾಂಪ್ರದಾಯಿಕ ಶಿಕ್ಷಣ ಕೇಂದ್ರಗಳಿಗೆ ಮತ್ತು ವಿದೇಶೀ ವಿ.ವಿ.ಗಳಿಗೆ ಮುಂಬರುವ ದಿನಗಳಲ್ಲಿ ಸೇರುವವರ ಸಂಖ್ಯೆ ಇದೆಲ್ಲದರಿಂದಾಗಿ ಕಡಿಮೆಯಾಗುವ ಸಾಧ್ಯತೆ ಇದೆ.

'ವಿದ್ಯೆ' ಎನ್ನುವುದು ಜ್ಞಾನದ ಬಾಗಿಲು. ವ್ಯಕ್ತಿಯೊಬ್ಬನಿಗೆ ಉತ್ತೇಜನವಿಲ್ಲದಿದ್ದಲ್ಲಿ ಮತ್ತು ತಾನು ಎಲ್ಲರಂತಿರಬೇಕು ಎನ್ನುವ ಛಲವಿಲ್ಲದಿದ್ದಲ್ಲಿ ಆತನ ಬದುಕು ಬೆಳಕು ಕಾಣದು.

ಕಠಿಣ ಶ್ರಮದಿಂದಷ್ಟೇ ಪ್ರತಿಫಲ ಸಾಧ್ಯ. ಶಬ್ದಕೋಶದಲ್ಲಿ ಮಾತ್ರ ಕೆಸಲಕ್ಕೆ (Work) ಮೊದಲು ವಿಜಯ (Success) ಬರುತ್ತದೆ. ಬದುಕಿನಲ್ಲಿ ಅದು ಸಾಧ್ಯವಿಲ್ಲ.

○ ಮಾಧವ ಐತಾಳ್

KAS ಅಭ್ಯರ್ಥಿಗಳಿಗಾಗಿ ಬಹು ಆಯ್ಕೆ ಪ್ರಶ್ನೆಗಳು

ಸಾಮಾನ್ಯ ಅಧ್ಯಯನ

1. ಪ್ರಾಚೀನ ಭಾರತದ ಸಮಾಜವನ್ನು ದೃಷ್ಟಿಯಲ್ಲಿರಿಸಿಕೊಂಡಾಗ, ಮೂರರ ಗುಂಪಿಗೆ ಸೇರದ ಮತ್ತೊಂದು
   ಅ. ಕುಲ. ಬ. ವಂಶ. ಕ. ಕೋಶ. ಡ. ಗೋತ್ರ.
2. ಕೆಳಗಿನ ಹೇಳಿಕೆಯಲ್ಲಿ ಯಾವುದು ಸರಿ
   ಎ. ಸಮಭಾಜಕ ವೃತ್ತದ ಸಮೀಪದ ಪ್ರದೇಶಗಳಲ್ಲಿ ವರ್ಷವಿಡೀ ಮಳೆ ಸುರಿಯುತ್ತದೆ.
   ಬಿ. ಹೆಚ್ಚಿನ ಉಷ್ಣತೆ ಮತ್ತು ಆರ್ದ್ರತೆಯೇ ಸಮಭಾಜಕ ವೃತ್ತದ ಬಳಿ ಮಳೆಗೆ ಕಾರಣ.
   ಅ. ಎ ಮತ್ತು ಬಿ ಎರಡೂ ಸರಿ 'ಬಿ'ಯು 'ಎ'ಯ ಸರಿಯಾದ ಉತ್ತರ.
   ಬ. ಎ ಮತ್ತು ಬಿ ಎರಡೂ ಸರಿ ಆದರೆ 'ಬಿ'ಯು 'ಎ' ಯ ಸರಿಯಾದ ವಿವರಣೆಯಲ್ಲ.
   ಕ. 'ಎ' ನಿಜ, 'ಬಿ' ಸುಳ್ಳು.
   ಡ 'ಎ' ಸುಳ್ಳು, 'ಬಿ' ಸರಿ.
3. ಬದುಕಿಗೆ ಅಗತ್ಯದ 27 ಮೂಲ ವಸ್ತುಗಳಲ್ಲಿ 15 ಲೋಹಗಳು, ಇವುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೇಕಾದವು.
   ಅ. ಪೊಟಾಸಿಯಂ, ಮ್ಯಾಂಗನೀಸ್, ಮಾಲಿಬ್ಡಿನಂ ಮತ್ತು ಕ್ಯಾಲ್ಸಿಯಂ.
   ಬ. ಪೊಟಾಸಿಯಂ, ಮಾಲಿಬ್ಡಿನಂ, ತಾಮ್ರ ಮತ್ತು ಕ್ಯಾಲ್ಸಿಯಂ.
   ಕ. ಸೋಡಿಯಂ, ಮೆಗ್ನೀಷಿಯಂ ಮತ್ತು ಮ್ಯಾಂಗನೀಸ್.
   ಡ. ಪೊಟಾಸಿಯಂ, ಮೆಗ್ನೀಷಿಯಂ ಸೋಡಿಯಂ ಮತ್ತು ಕ್ಯಾಲ್ಸಿಯಂ.
4. ವ್ಯಕ್ತಿಯೊಬ್ಬನನ್ನು ರಾಷ್ಟ್ರಗೀತೆಯನ್ನು ಹಾಡಲೇಬೇಕೆಂದು ಒತ್ತಾಯಿಸಬಾರದು. ಕಾರಣ
   ಅ. ರಾಷ್ಟ್ರಗೀತೆಯನ್ನು ಹಾಡಲೇಬೇಕೆಂದು ಯಾವುದೇ ಕಾನೂನಿಲ್ಲ.
   ಬ. ಅದು ಆತನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಲ್ಲಂಘಿಸುತ್ತದೆ.
   ಡ. ಅದು ಆತನ ಧರ್ಮದ ಪಾಲನೆಯ ಮತ್ತು ಪ್ರಜೆಯ ಸ್ವಾತಂತ್ರ್ಯದ ಹಕ್ಕನ್ನು ಉಲ್ಲಂಘಿಸುತ್ತದೆ. ಇವುಗಳಲ್ಲಿ
   ಎ. ಅ ಮತ್ತು ಬ ಸರಿ   ಬಿ. ಬ ಮತ್ತು ಡ ಸರಿ
   ಸಿ. ಅ, ಬ ಮತ್ತು ಡ ಸರಿ   ಡಿ. ಯಾವುದೂ ಸರಿಯಲ್ಲ
5. ಭಾರತದಲ್ಲಿ ನಗರಗಳಲ್ಲಿನ ಆದಾಯಕ್ಕಿಂತ ಹಳ್ಳಿಗಳಲ್ಲಿ ಆದಾಯ ಕಡಿಮೆ. ಇದಕ್ಕೆ ಕಾರಣ.
   ಅ. ಹಳ್ಳಿಯ ಜನ ಅನಕ್ಷರಸ್ಥರು, ಅವರಿಗೆ ವೈಜ್ಞಾನಿಕ ಕೃಷಿ ಬಗ್ಗೆ ಅರಿವಿಲ್ಲ.
   ಬ. ಉತ್ಪನ್ನದ ಬೆಲೆ ಹೆಚ್ಚು ಆದರೆ ಕಚ್ಚಾ ವಸ್ತುವಿನ ಬೆಲೆ ಕಡಿಮೆ
   ಡ. ಕೈಗಾರಿಕೆಗೆ ಹೋಲಿಸಿದರೆ ಕೃಷಿಗೆ ಹೂಡುವ ಬಂಡವಾಳ ಕಡಿಮೆ. ಇವುಗಳಲ್ಲಿ
   ಎ. ಅ, ಬ ಮತ್ತು ಡ ಸರಿ.   ಬಿ. ಅ ಮತ್ತು ಬ ಸರಿ.
   ಸಿ. ಅ ಮತ್ತು ಡ ಸರಿ.   ಡಿ. ಬ ಮತ್ತು ಡ ಸರಿ.
6. ಗೋಧಿ ಬೆಳೆಗೆ ಸೂಕ್ತವಾದ ವಾತಾವರಣ ಯಾವುದು
   ಅ. ಮಧ್ಯಮ ಉಷ್ಣತೆ ಮತ್ತು ಮಳೆ.
   ಬ. ಹೆಚ್ಚು ಉಷ್ಣತೆ ಮತ್ತು ಭಾರಿ ಮಳೆ.
   ಕ. ಕಡಿಮೆ ಉಷ್ಣತೆ ಮತ್ತು ಮಳೆ.
   ಡ. ಹೆಚ್ಚಿನ ಉಷ್ಣತೆ ಮತ್ತು ಮಧ್ಯಮ ಮಳೆ.
7. ಭಾರತದ ಸಂವಿಧಾನದ ರಚನೆಗಾಗಿ ಮೊದಲಬಾರಿಗೆ ಸಭೆಯೊಂದರ ರಚನೆಯನ್ನು ಯೋಚಿಸಿದ ಪಕ್ಷ
   ಅ. ಸ್ವರಾಜ್ಯ ಪಕ್ಷ 1934 ರಲ್ಲಿ.
   ಬ. 1936 ರಲ್ಲಿ ಕಾಂಗ್ರೆಸ್ ಪಕ್ಷ.
   ಕ. 1946ರ ಎಲ್ಲಾ ಪಕ್ಷಗಳ ಸಮಾವೇಶ.
   ಡ. 1942 ರಲ್ಲಿ ಮುಸ್ಲಿಂ ಲೀಗ್.
8. ನಸ್ತಾಲಿಕ್ ಎಂಬುದು
   ಅ. ಮಧ್ಯಯುಗದ ಭಾರತದಲ್ಲಿ ಬಳಸಲ್ಪಡುತ್ತಿದ್ದ ಪರ್ಷಿಯನ್ ಲಿಪಿ.
   ಬ. ತಾನ್‌ಸೇನ್ ಸೃಷ್ಟಿಸಿದ ಒಂದು ಅಂಗ.
   ಡ. ಮುಗಲ್ ರಾಜರು ವಿಧಿಸಿದ ಸುಂಕ.
   ಕ. ಉಲೇಮಾಗಳಿಗಾಗಿ ರಚನೆಯಾದ ಸಂಹಿತೆ.
9. ಭಾರತದ ಉಪಖಂಡದಲ್ಲಿ ಬೇಸಿಗೆ ಕಾಲದಲ್ಲಿ ಹೆಚ್ಚಿನ ಉಷ್ಣತೆ ಮತ್ತು ಕಡಿಮೆ ಒತ್ತಡದಿಂದಾಗಿ ಸಾಗರದಿಂದ ಬೀಸುವ ಗಾಳಿಯು ಚದುರಿಸುವ ಮಳೆ ಮೋಡಗಳು
   ಅ. ಆಗ್ನೇಯ ಮಾರುತಗಳು.   ಬ. ನೈಋತ್ಯ ಮಾರುತಗಳು.
   ಕ. ಈಶಾನ್ಯ ಮಾರುತಗಳು.   ಡ. ವಾಣಿಜ್ಯ ಮಾರುತಗಳು.
10. ಕೆಳಗಿನ ಹೇಳಿಕೆಗಳಲ್ಲಿ ಒಂದು ಹೇಳಿಕೆ ಮತ್ತು ಅದರ ಕಾರಣ, ಇವುಗಳಲ್ಲಿ ಯಾವುದು ಸರಿ
    ಅ. ಸ್ವತಂತ್ರ ಭಾರತದಲ್ಲೂ ಬ್ರಿಟಿಷರ ಸಾರ್ವಭೌಮತ್ವ ಮುಂದುವರಿದಿದೆ.
    ಬ. ಸ್ವತಂತ್ರ ಭಾರತದ ಕೊನೆಯ ಗವರ್ನರ್ ಜನರಲ್ ಅನ್ನು ನೇಮಿಸಿದ್ದು ಬ್ರಿಟಿಷ್ ಸಾರ್ವಭೌಮ.
    ಎ. 'ಅ' ಮತ್ತು 'ಬ' ಸರಿ. 'ಬ' ವು 'ಅ'ದ ಸರಿಯಾದ ವಿವರಣೆ.
    ಬಿ. 'ಅ' ಮತ್ತು 'ಬ' ಎರಡೂ ಸರಿ, ಆದರೆ 'ಬ'ವು 'ಅ'ದ ಸರಿಯಾದ ವಿವರಣೆಯಲ್ಲ.
    ಸಿ. 'ಅ' ಮತ್ತು 'ಬ' ತಪ್ಪು.
    ಡಿ. 'ಅ' ತಪ್ಪು ಮತ್ತು 'ಬ' ಸರಿ.
11. ನೀರಿನ ಮೂಲದಲ್ಲಿ ನೀರಿನ ಭೌತ-ರಾಸಾಯನಿಕ ಗುಣಗಳು ಬದಲಾಗಲು ಕಾರಣ
    ಅ. ನೀರಿನಲ್ಲಿರುವ ಮೈಕ್ರೋಫೈಟ್‌ಗಳು.
    ಬ. ನೀರಿನಲ್ಲಿರುವ ಶಿಲೀಂಧ್ರ.
    ಕ. ಭಾಷ್ಪೀಕರಣ.
    ಡ. ಮಲಿನ ಕಾರಣಗಳು.
12. ಭಾರತದ ರಾಷ್ಟ್ರಾಧ್ಯಕ್ಷರನ್ನು ವಜಾ ಮಾಡುವಲ್ಲಿ ಯಾವ ಅಂಗ ಭಾಗವಹಿಸುವಂತಿಲ್ಲ
    ಅ. ಲೋಕ ಸಭೆ.   ಬ. ರಾಜ್ಯ ಸಭೆ.
    ಕ. ರಾಜ್ಯ ವಿಧಾನ ಪರಿಷತ್ತು.   ಡ. ರಾಜ್ಯ ವಿಧಾನ ಸಭೆ.

13. ಪ್ರಾಚೀನ ಭಾರತದಲ್ಲಿ ಯಾವುದು ಶೈವ ಪಂಥಕ್ಕೆ ಸೇರಿದ್ದು
ಅ. ಆಜೀವಿಕ. ಬ. ಮತ್ತ ಮಯೂರ.
ಡ. ಮಾಯಾ ಮಾತ್ರ. ಕ. ಈಶನ ಶಿವಗುರು ದೇವ ಪದ್ಧತಿ.

14. ಕಲ್ಲಿದ್ದಿಲಿನ ಸ್ಥಳೀಯ ಸರಬರಾಜು ಸಾಧ್ಯವಿಲ್ಲದ ಉಕ್ಕಿನ ಕಾರ್ಖಾನೆ
ಅ. ಜಮ್ಷೆಡ್‌ಪುರದ ಟಿಸ್ಕೊ.
ಬ. ಭದ್ರಾವತಿಯ ವಿ.ಐ.ಎಸ್.ಎಲ್.
ಕ. ಬಿಲ್ವಾನ ಎಚ್.ಎಸ್.ಎಲ್.
ಡ. ದುರ್ಗಾಪುರದ ಎಚ್.ಎಸ್.ಎಲ್.

15. ಬೆಳಕಿನ ಸಂಪೂರ್ಣ ಅಂತರ್ ಪ್ರತಿಫಲನವು ಸಾಧ್ಯವಾಗುವುದು, ಅದು
ಅ. ವಜ್ರದಿಂದ ಗಾಳಿಗೆ ಹಾಯುವಾಗ.
ಬ. ನೀರಿನಿಂದ ಗಾಳಿಗೆ ಹಾಯುವಾಗ.
ಡ. ಗಾಳಿಯಿಂದ ನೀರಿಗೆ ಹಾಯುವಾಗ .
ಕ. ಗಾಳಿಯಿಂದ ಗಾಳಿಗೆ ಚಲಿಸಿದಾಗ.

16. ಗುಪ್ತರ ಕಾಲದಲ್ಲಿ ವೈದ್ಯಕೀಯ ಸಂಶೋಧನೆಗಳಿಗಾಗಿ ಹೆಸರಾಗಿದ್ದವ.
ಅ. ಸೌಮಿಳ. ಬ. ಶೂದ್ರಕ. ಡ. ಶಾಣುಕ. ಕ. ಸುಶ್ರೂತ.

17. 'ದೇವರನ್ನು ತಲುಪಲು ಸಂಗೀತ ಸುಲಭ ಸಾಧನ' ಎಂದ ಸೂಫಿ ಸಂತ!
ಅ. ಮೊಯೀನ್ ಉದ್‌ದಿನ್ ಚಿಸ್ತಿ.
ಬ. ಬಾಬಾ ಫರೀದ್.
ಕ. ಷಾ ಅಲಂಬುಕಾರಿ.
ಡ. ಸೈಯ್ಯದ್ ಮೊಹಮ್ಮದ್ ಗೆಸುದರಾಜ್.


18. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಎತ್ತರವಾದ ಶಿಖರ 'ಸ್ಯಾಡಲ್ ಶಿಖರ' ಇರುವುದು
ಅ. ಗ್ರೇಟ್ ನಿಕೋಬಾರ್‌ನಲ್ಲಿ. ಬ. ಮಧ್ಯ ಅಂಡಮಾನ್‌ನಲ್ಲಿ.
ಕ. ಉತ್ತರ ಅಂಡಮಾನ್‌ನಲ್ಲಿ. ಡ. ಸಣ್ಣ ಅಂಡಮಾನ್‌ನಲ್ಲಿ.

19. ಕೆಳಗೆ ಕೊಟ್ಟಿರುವ ಹೇಳಿಕೆಗಳಲ್ಲಿ ಯಾವುದು ಸರಿ
ಎ. ಮ್ಯಾಂಗ್ರೋವ್ ಎನ್ನುವುದು ಸಮುದ್ರ ಕಿನಾರೆಯಲ್ಲಿ ಬೆಳೆಯುವ ವಿಶಿಷ್ಟ ಪರಿಸರ ವ್ಯವಸ್ಥೆ
ಬಿ. ಇದು ಸಮುದ್ರ ಕೊರೆತವನ್ನು ತಡೆಯುತ್ತದೆ ಮತ್ತು ಸಮುದ್ರ ಕಿನಾರೆಯನ್ನು ಭದ್ರಗೊಳಿಸುತ್ತದೆ.
ಅ. 'ಎ' ಮತ್ತು 'ಬಿ' ಎರಡೂ ಸರಿ, ಬಿ 'ಎ'ಯ ಸರಿಯಾದ ವಿವರಣೆ.
ಬ. 'ಎ' ಮತ್ತು 'ಬಿ' ಎರಡೂ ಸರಿ, ಆದರೆ 'ಬಿ' 'ಎ'ಯ ಸರಿಯಾದ ವಿವರಣೆಯಲ್ಲ.
ಕ. 'ಎ' ತಪ್ಪು, 'ಬಿ' ಸರಿ.
ಡ. 'ಎ' ಸರಿ, ಆದರೆ 'ಬಿ' ತಪ್ಪು.

20. ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಬ್ಬರು ಆಡಳಿತ ಸಾಮರ್ಥ್ಯ ಗಳಿಸಿಕೊಂಡಾಗ ಅವರನ್ನು ನಿಯಂತ್ರಿಸುವುದು.
ಅ. ಅದೇ ನ್ಯಾಯಾಲಯದ ಯಾವುದೇ ನ್ಯಾಯಾಧೀಶರ ಅಧಿಕಾರ ಕಕ್ಷೆ.
ಬ. ಭಾರತದ ಮುಖ್ಯ ನ್ಯಾಯಾಧೀಶರ ವಿಶೇಷ ಅಧಿಕಾರ.
ಕ. ರಾಜ್ಯದ ಮುಖ್ಯಮಂತ್ರಿಯ ವಿಶೇಷಾಧಿಕಾರ.
ಡ. ರಾಜ್ಯದ ಗವರ್ನರ್ ಅವರ ವಿಶೇಷಾಧಿಕಾರ.

21. ಸಂಪೂರ್ಣ ಸಾಕ್ಷರತೆಯನ್ನು ಸಾಧಿಸಿದ ಕರ್ನಾಟಕದ ಮೊದಲ ಜಿಲ್ಲೆ
ಅ. ಬಿಜಾಪುರ. ಬ. ದಕ್ಷಿಣ ಕನ್ನಡ. ಕ. ಹಾಸನ. ಡ. ಬೆಂಗಳೂರು.

22. 'ಹವಾಲಾ' ಎಂಬುದು
ಅ. ವಿದೇಶಿ ಹಣದ ಬದಲು ರೂಪಾಯಿಗಳಲ್ಲಿ ಮತ್ತು ರೂಪಾಯಿಯ ಬದಲು ವಿದೇಶಿ ಹಣದ ರೂಪದಲ್ಲಿ ಕಾನೂನು ಬಾಹಿರ ಚಾಲನೆ
ಬ. ಸ್ಟಾಕ್ ವಿನಿಮಯ ಕೇಂದ್ರದ ಮೂಲಕ ಮಾರಾಟವಾಗುವ/ಹಸ್ತಾಂತರವಾಗುವ ಶೇರ್‌ಗಾಗಿ ಪಡೆದ ಹಣ.
ಕ. ಚುನಾವಣಾ ವೆಚ್ಚಕ್ಕಾಗಿ ನೀಡಿದ ಹಣ.
ಡ. ಅನಿವಾಸಿ ಬಂಡವಾಳ ಹೂಡಿಗರು/ಮಾರಾಟಗಾರರು ನೀಡಿದ ಸೇವಾ ಶುಲ್ಕ



23. ಕೆಳಗಿನ ಯಾವ ಶಿಲ್ಪ ಕಲಾ ಪ್ರಕಾರ ತೊಗಟೆಯನ್ನು (green schist) ಮಾಧ್ಯಮವನ್ನಾಗಿ ಬಳಸಿಕೊಂಡಿದೆ.
ಅ. ಮೌರ್ಯ ವಿಗ್ರಹಗಳು ಬ. ಮಥುರಾ ಶಿಲ್ಪಕಲೆ
ಕ. ಬಾರೂತ್ ಶಿಲ್ಪಕಲೆ ಡ. ಗಾಂಧರ್ವ ಶಿಲ್ಪಕಲೆ

24. ಭಾರತದ ಸಂವಿಧಾನದ ಪ್ರಕಾರ 'ಜಿಲ್ಲಾ ನ್ಯಾಯಾಧೀಶ' ಎನ್ನುವ ಪದ ಇವರನ್ನು ಒಳಗೊಂಡಿಲ್ಲ.
ಅ. ಮುಖ್ಯ ಪ್ರೆಸಿಡೆನ್ಸಿ ನ್ಯಾಯಾಧೀಶ.
ಬ. ಸೆಷನ್ಸ್ ನ್ಯಾಯಾಧೀಶ.
ಕ. ಸಣ್ಣ ವಿವಾದಗಳ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ.
ಡ. ನ್ಯಾಯಾಧಿಕರಣದ ನ್ಯಾಯಾಧೀಶ.

25. 8ನೇ ಪಂಚವಾರ್ಷಿಕ ಯೋಜನೆ ಬೇರೆ ಯೋಜನೆಗಳಿಗೆ ಹೋಲಿಸಿದರೆ, ವಿಶಿಷ್ಟವಾಗಿರಲು ಕಾರಣ
ಅ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಒತ್ತು.
ಬ. ಕೈಗಾರಿಕಾ ನೋಂದಣಿಯ ವಜಾ.
ಕ. ಹಿಂದಿನ ಯೋಜನೆಗಳಿಗೆ ಹೋಲಿಸಿದರೆ ಹೆಚ್ಚು ಪ್ರಮಾಣದ ಆರ್ಥಿಕ ರೂಪರೇಷೆ.
ಡ. ಮೂಲಭೂತ ಸೌಲಭ್ಯಗಳ ಬೆಳವಣಿಗೆಗೆ ಹೆಚ್ಚಿನ ಪ್ರಾಶಸ್ತ್ಯ

26. ಕೆಳಗಿನ ಹೇಳಿಕೆ 'ಅ'. ಉತ್ತರವಾದರೆ 'ಬ'. ಅದರ ಕಾರಣ. ಇವೆರಡರಲ್ಲಿ ಯಾವುದು ಸರಿ?
ಅ. ವೋಲ್ಟೇಜ್‌ನ್ನು ಹೆಚ್ಚಿಸಲು ಮತ್ತು ತಗ್ಗಿಸಲು ಟ್ರಾನ್ಸ್‌ಫಾರ್ಮರ್ ಬಳಸುತ್ತಾರೆ.
ಬ. ನೇರ ವಿದ್ಯುತ್ ಪ್ರವಹಿಸುವ ಸರ್ಕ್ಯೂಟ್‌ಗಳಲ್ಲಿ ಟ್ರಾನ್ಸ್‌ಫಾರ್ಮರ್ ಬಳಸುತ್ತಾರೆ.
i. 'ಅ' ಮತ್ತು 'ಬ' ಎರಡೂ ಸರಿ. 'ಬ' ವು 'ಅ'ದ ಸರಿಯಾದ ವಿವರಣೆ.
ii. 'ಅ' ಮತ್ತು 'ಬ' ಎರಡೂ ಸರಿ, ಆದರೆ 'ಬ'ವು 'ಅ'ದ ಸರಿಯಾದ ವಿವರಣೆಯಲ್ಲ.
iii. 'ಅ' ಸರಿಯಾದದ್ದು 'ಬ' ತಪ್ಪು.
iv. 'ಅ' ತಪ್ಪು 'ಬ' ಸರಿ.

ಉತ್ತರಗಳು

1. ಡ	2. ಅ	3. ಡ	4. ಡಿ	5. ಎ	6. ಅ
7. ಬ	8. ಅ	9. ಬ	10. ಡಿ	11. ಅ	12. ಕ
13. ಬ	14. ಬ	15. ಅ	16. ಕ	17. ಅ	18. ಅ
19. ಬ	20. ಅ	21. ಬ	22. ಅ	23. ಕ	24. ಡ
25. ಡ	26. 3				

ನಿಯತ್ತು

○ ಡಾ. ಹೆಚ್.ಎಸ್.ವೆಂಕಟೇಶ
ಹಾರೋಹಳ್ಳಿ



'ನಾಯಿ ಒಂದು ನಿಯತ್ತಿನ ಪ್ರಾಣಿ' ಚೋಟು ಓದುತ್ತಿದ್ದ. ಅಡುಗೆ ಮನೆಯಲ್ಲಿದ್ದ ಜಯ ಕಿಸಕ್ಕನೆ ನಕ್ಕಳು.

ನನಗೋ ಮೈ ಪರಚಿಕೊಳ್ಳುವಂತಾಯ್ತು. ಅದು ನನ್ನನ್ನೇ ಕುರಿತದ್ದೆ ಎನಿಸಿತು. ಅದರ ಹಿಂದಿನ ದಿನ ತಾನೆ ದಾಸಿ ಓಡಿ ಹೋಗಿತ್ತು.

'ಪಪ್ಪಾ, ನಿಯತ್ತೂಂದ್ರೇನು? ಅದು ನಾಯಿಗೆ ಮಾತ್ರಾ ಏಕಿರುತ್ತೆ?'

'ನಿನ್ನ ಅಮ್ಮನನ್ನೇ ಕೇಳು' ಸಿಡುಕಿದೆ.

'ಲೇ, ಚೋಟು, ನಿಯತ್ತೂಂದ್ರೆ- ಅದು ನಿಂಗೆ ಅರ್ಥವಾಗಲ್ಲ.

ಅದೂ ಅಲ್ದೆ ಅದು ಯಾವ ಪ್ರಾಣೀಗೂ ಇರಲ್ಲ' ಜಯ ನಗುತ್ತಾ ಛೇಡಿಸಿದಳು.

ನನ್ನ ದಾಸಿಯ ನಿಯತ್ತನ್ನೇ ಬದಲಿಸಿದ ರಾಕ್ಷಸಿ ಎನಿಸಿದರೂ ಬಾಯಿ ಮುಚ್ಚಿಕೊಂಡಿದ್ದೆ.

ಈ 'ದಾಸಿ'ಯ ನಡವಳಿಕೆಯಿಂದ್ಲೇ 'ನಿಯತ್ತು' ಶಬ್ದ ಅರ್ಥ ಕಳೆದುಕೊಂಡಿತ್ತು. ದಾಸಿ-ನಾನು ಸಾಕಿದ ನಾಯಿ, ಸುಮಾರು ಎರಡು ವರ್ಷ ನಿಯತ್ತಿನಿಂದ ಇದ್ದದ್ದು.

ನನ್ನ ಫ್ರೆಂಡು ಪರಮನ ನಾಯಿ 'ಜಾನಿ' ಮರಿಹಾಕಿತ್ತು. ಚೋಟು ಗಲಾಟೆಗೆ ಒಂದು ಮರಿ ತಂದೆ, ಅದು ಕೃತಜ್ಞತೆಯಿಂದಲೇ ಇತ್ತು.

'ಪಪ್ಪಾ, ಇದಕ್ಕೆ ಒಂದು ಹೆಸರಿಡು'

ನೂರಾರು ಹೆಸರಿಟ್ಟರೂ ಯಾವುದೂ ಸರಿಯೆನಿಸಲಿಲ್ಲ. ಚೋಟೂಗೆ ಹೆಸರಿಟ್ಟಾಗಲೂ ಇಷ್ಟು ಒದ್ದಾಡಿರಲಿಲ್ಲ.

'ಲಿಲಿಪುಟ್ ತರಾಯಿದೆ, ಚೋಟೂದ್ದ, ಈಗ್ಲೇ ಅದೆಲ್ಲಾ ಯಾಕೆ? ಅರ್ಜೆಂಟಾಗಿ ಬೇಕಂದ್ರೆ ಚೋಟೂಂತ ಕರಿ' ಎಂದಿದ್ದೆ, ಇವನು ಸೈಂಧವನಂತೆ ಬೆಳೆಯುತ್ತಿದ್ದರೂ ಚೋಟುವೇ ಆಗಿದ್ದ.

'ಅದೆಂಥದ್ದು? ನಾಯಿ ನರಿಗೆಲ್ಲಾ ಹೆಸರಿಡೋದು?' ಜಯ ಮೂತಿ ತಿವಿದಿದ್ದಳು.

'ಪಪ್ಪಾ, ಬೆಳಿಗ್ಗೆ ಬಂದಿದ್ನಲ್ಲಾ, ಜಾಗಟೆ ಹೊಡ್ಕೊಂಡು ಒಬ್ಬ'

'ಯಾರು? ದಾಸಯ್ಯನೆ?'

'ಹೌದು ಪಪ್ಪಾ, ಅವನ್ಹಾಗೇ ಇದಕ್ಕೂ ನಾಮ ಇದೆ ನೋಡು'

ಕಪ್ಪಾದ ತಲೆಯಲ್ಲಿ ಮೂಗಿನಿಂದ ತಲೇವರ್ಗೂ ಬಿಳೀ ಬಣ್ಣ - ನಾಮದಂತೆ.

'ಹಾಗಾದ್ರೆ ಇದ್ಕೆ ದಾಸಯ್ಯ ಅಂತ ಹೆಸರಿಟ್ರೆ?'

'ಪಾಪ, ಹಾಗೆಲ್ಲಾ ಮಾಡ್ಬಾರ್ದು, ಬೇಕಾದರೆ ದಾಸ್, ಇಲ್ಲ ದಾಸೂಂತ ಕರಿ'

ಅಂದಿನಿಂದ ಜಾನಿಯ ಮಗ ದಾಸುವಾದ, ಜಯಳಿಗೆ ಕೋಪ ಬಂದಾಗಲೆಲ್ಲಾ ದಾಸು ಹೋಗಿ 'ದಾಸಿ' ಆಗಿ, ಕೊನೆಗೆ ದಾಸಿಯೆಂದೇ ಕರೆಯಬೇಕಾಯ್ತು.

ಈ ಎರಡು ವರ್ಷಗಳ ದಾಸೀ ಪುರಾಣ ಬರೆದರೆ ಅದು ಒಂದು ಕಾದಂಬರಿಯೇ ಆದೀತು. ಆದರೆ ಕಳೆದ ಆರು ತಿಂಗಳಿಂದ ನಡೆದದ್ದು ದಾಸಿ ಏಕಾಏಕಿ 'ನಾಯಿ ನಿಯತ್ತಿನ' ಪ್ರಾಣಿಯೆಂಬ ಶಬ್ದವನ್ನೇ ಗುಡಿಸಿ ಹಾಕಿತ್ತು.

'ಪಾಪಿ ಮುಂಡೇದು, ಒಂದು ತಟ್ಟೆ ತಿನ್ನತ್ತೆ' ಜಯ ರೇಗುತ್ತಿದ್ದಳು.

ದಿನೇ ದಿನೇ ದಾಸಿ ಭೂತಾಕಾರವಾಗಿ ತಿನ್ನುತ್ತಿದ್ದ, ಬೆಳೆಯುತ್ತಿದ್ದ.

ಮಾವ ಬಂದು ಹೋದ ಮೇಲೆ ದಾಸಿಗೆ ಕಿರುಕುಳ ಹೆಚ್ಚಾಯ್ತು. ಅವರನ್ನು ಬೊಗಳಿ, ಮೇಲೆ ಬೀಳಲು ಹೋದದ್ದೇ ದಾಸಿಯ ತಪ್ಪು.

'ಅದಕ್ಕೆ ಪೂರ್ವಜನ್ಮದ ಸ್ಮಗ್ಲರ್‌ನ ಹಿಡಿಯೋ ವಾಸನೆ ಹೋಗಿಲ್ಲ' ನಾನು ರೇಗಿಸಿದ್ದೆ. ಅಂತೂ, ಇಂತೂ ಬಿಸಿ ಬಿಸಿಯಾಗಿ ಬೀಳುತ್ತಿದ್ದ ಊಟ, ತಂಗಳಾಯ್ತು, ಬರು ಬರುತ್ತಾ ತಂಗಳು ಪೆಟ್ಟಿಗೆಯ, ಹಳೆಯ, ಉಳಿದ ತಿಂಡಿಗಳೇ ದಾಸಿಗೆ ಗತಿ.

ಅಂದಿನಿಂದ ದಾಸಿ ಊಟ, ತಿಂಡಿ ಕಡಿಮೆ ಮಾಡಿತ್ತು.

'ಬೇಕಾದ್ರೆ ತಿನ್ನು, ಬೇಡದಿದ್ರೆ ಬಿಡು' ಒಂದು ದಿನ ಜಯ ತಂಗಳು ಅನ್ನ ಹಾಕುತ್ತಾ ಹೇಳಿದ್ದಳು. ದಾಸಿ ನನ್ನ ಮುಖ ನೋಡಿತ್ತು.

' ನಿನಗಂತೂ ಕರ್ಮ, ನಾನ್ಯಾಕೆ ಇದ್ನತಿನ್ನಲಿ? ಇಂತಾ ಸಾಮ್ರಾಜ್ಯಕ್ಕೆ ನನ್ನ ಯಾಕೆ ಸಾಕಿದೆ? ಕಣ್ಣಲ್ಲೇ ಕೇಳಿತ್ತು.

'ಒಳ್ಳೇ ಕಾಲ ಬರಬಹುದು, ಸುಮ್ಮನಿರು' ತಲೆ ನೇವರಿಸಿದೆ.

' ಈ ಮನೇಲಿ, ನಮ್ಮಿಬ್ರಿಗೂ ಒಳ್ಳೇ ಕಾಲ! ಕನಸು' ದಾಸಿ ಬಾಯಿ ಬಿಟ್ಟು ಹೇಳಲಿಲ್ಲ ಅಷ್ಟೆ.

ಅಂದಿನಿಂದ ದಾಸಿ ತೀರ್ಮಾನಕ್ಕೆ ಬಂದಂತ್ತಿತ್ತು. ಮೊದಲು ಹೊಟ್ಟೆ ಬದುಕಬೇಕು ಆನಂತರ ನಿಯತ್ತು. ಪ್ರತೀದಿನ ನಾನು ಬರುವವರೆಗೂ ಅನ್ನ ಮುಟ್ಟುತ್ತಿರಲಿಲ್ಲ. ನಾನು ತಿನ್ನುವುದನ್ನೇ ಅದಕ್ಕೂ ಹಾಕುತ್ತಿದ್ದೆ.

''ಅವ್ರೇ ಬಾಯಿ ಮುಚ್ಚಿ ತಿನ್ನುವಾಗ, ನಿಂಗೆಷ್ಟು ಕೊಬ್ಬು?'' ಒಂದು ದಿನ ನಾನು ತಿಂದ ತಿಂಡಿಯನ್ನೇ ದಾಸಿ ಮುಟ್ಟದೆ ಕೂತಾಗ ಜಯ ಎಗರಿದಳು. ದಾಸಿ ನನ್ನನ್ನೇ ನೋಡಿತ್ತು.

''ಕ್ಷಮಿಸು, ಇನ್ನು ನನ್ನ ದಾರಿ ನನಗೆ'' ಎನ್ನುವಂತಿತ್ತು.

ಅಂದಿನಿಂದ ದಾಸಿ ತನ್ನ ಹಾದಿ ಹಿಡಿಯಲು ಪ್ರಾರಂಭಿಸಿದ. ವಾರದಲ್ಲಿ ನಾಲ್ಕೈದು ದಿನ ಕಟ್ಟಿದ್ದ ಬೆಲ್ಟನ್ನು ಕಿತ್ತುಕೊಂಡು ಹೋಗಲು ಪ್ರಾರಂಭ. ವಾರಕ್ಕೆ ಮೂರ್‍ನಾಕು ಬೆಲ್ಟುಗಳು ಚಿಂದಿ, ನಾನು ಆಫೀಸಿನಿಂದ ಬರುವ ವೇಳೆಗೇ ಮನೆಗೆ ಬರುತ್ತಿತ್ತು. ನನ್ನೊಬ್ಬನ್ನ ಬಿಟ್ಟು ಯಾರ ಕೈಗೂ ಸಿಗುತ್ತಿರಲಿಲ್ಲ.

ತನ್ನ ಈ ಗತಿಗೆ ಕಾರಣವಾದ ಮಾವನನ್ನು ನಾನಿಲ್ಲದಾಗ ಒಳಕ್ಕೇ ಬಿಡದೆ ಒಂದು ದಿನ ಆಟಕಾಯಿಸಿದ್ದ - ದಾಸಿ.

''ಎಂತಾ ನಾಯೀನ ಸಾಕಿದ್ಯಪ್ಪ? ನಾವು ಬರುವುದು ಇಷ್ಟವಿಲ್ದಿದ್ರೆ ಬಾಯ್ಬಿಟ್ಟು ಹೇಳ್ಬಿಡು'' ಮಾವ ಗೊಣಗಿದ್ದರು.

''ಆ ದರಿದ್ರಕ್ಕೆ ಒಂದು ದಾರಿ ಕಾಣ್ಸಿ, ಇಲ್ದಿದ್ರೆ ವಿಷ ಹಾಕಿ ಬಿಡ್ತೀನಿ'' ಜಯ ಎಗರಾಡಿದ್ದಳು. ಅಂದಿನಿಂದ ನಾನು ಒಂದೆರಡು ತುತ್ತು ತಿಂದ ಮೇಲೆ ನನಗೇನೂ ಆಗಿಲ್ಲವೆಂದು ಖಾತ್ರಿ ಮಾಡಿಕೊಂಡೇ ದಾಸಿ - ಅನ್ನಕ್ಕೆ ನನ್ನ ಬಳಿ ಬರಹತ್ತಿತು. ಎಷ್ಟೆಂದರೂ ನಿಯತ್ತಿನ ಪ್ರಾಣಿ! ನಾನು ಇದ್ದಾಗ, ಅದರ ಜೀವಕ್ಕೆ ಸಂಪೂರ್ಣ ಭರವಸೆಯಿತ್ತು. ಅಂದಿನಿಂದ ಜಯ ಮೈಗೆಲ್ಲಾ ಇರುವೆ ಹತ್ತಿದಂತಾಡಹತ್ತಿದಳು.

ಸಾಧ್ಯವಾದಷ್ಟು ದಪ್ಪ ದಪ್ಪನಾದ ಬೆಲ್ಟು, ಚೈನನ್ನೇ ತಂದು ಕಟ್ಟಿದೆ. ಪ್ರತಿ ಬಾರಿ ''ನಂಗೆ ಇದ್ಯಾವ ಲೆಕ್ಕ?'' ಎಂಬಂತೆ ನಗುತ್ತಿರುವಂತೆ ಭಾಸವಾಗುತ್ತಿತ್ತು. ಸಾಯಂಕಾಲದ ಹೊತ್ತಿಗೆ ಅದು ಚಿಂದಿ, ದೇವರು ದಾಸಿಗೆ ಎಂತಹ ಬಲವಾದ ಹಲ್ಲು, ಮೆದುಳು ಕೊಟ್ಟಿದ್ದನೋ? ಗೊತ್ತಾಗಲಿಲ್ಲ.

ಕೊನೆ, ಕೊನೆಗೆ ನಾನೂ ರೋಸಿ ಹೋದೆ, ನನ್ನ ಪರಿಚಯದ ಎಲೆಕ್ಟ್ರಿಕಲ್ ಕಂಟ್ರಾಕ್ಟರನಿಂದ ಗ್ರೌಂಡಿಂಗ್ ತಂತಿಯನ್ನೇ ತಂದು ದಾಸಿಗೆ ಬಿಗಿದೆ. ಸಾಯಂಕಾಲ, ಮಾಮೂಲಿ ಚಿಂದಿಯಾದ ತಂತಿ, ಮನೆಯ ಸುತ್ತಾ ದಾಸಿಯ ಎಗರಾಟ, ನಾನು ಬಂದಾಗ ಮಾತ್ರಾ ನಿಯತ್ತಿನ ಮುದ್ದೆ.

ಒಂದು ದಿನ ನಮ್ಮ ರೈತ ಬಂದ


''ಸಾಮಿ, ತೋಟ ಕಾಯಕ್ಕೆ ಒಂದು ನಾಯಿ ಕೊಡ್ಸಿ''

''ಮರೀನ ಕೊಡ್ಸಿದ್ರೆ ಅದು ಇನ್ನೊಂದು ವರ್ಷ ಬೇಕು - ಕಾಯಕ್ಕೆ ನಂದಾಸೀನೇ ಕರ್‍ಕೊಂಡು ಹೋಗು, ಹೇಗೊ ದೊಡ್ಡದು'' ಜಯ ಮೆಲ್ಲಗೆ ಹೇಳಿದಳು.

''ಮೊದ್ಲು ನನ್ನ ಕಳಿಸ್ಬಿಡು'' ಎಂಬಂತೆ ದಾಸಿ ನೋಡಿತ್ತು.

''ಅಯ್ಯಪ್ಪಾ! ಅಷ್ಟು ದೊಡ್ಡದು, ನಂಗೆ ಹೇಗಪ್ಪಾ ಹೊಂದ್ಕೊಳ್ಳತ್ತೆ?'' ಹೆದರಿದ್ದ,

''ಹೋಗು, ಮೊದ್ಲು ಒಂದು ಪಾಕೀಟು



ಬಿಸ್ಕೇಟ್ ತೊಂಗೊಂಡು ಬಾ'' ನಾನೆಂದೆ.

ಅವನು ತಂದದ್ದನ್ನು ಅವನಿಂದ್ಲೇ ದಾಸಿಗೆ ಹಾಕಿಸಿದ್ದೆ. ಮುಗಿಯುವ ವೇಳೆಗೆ ದಾಸಿ ಅವನ ಹಿಂಬಾಲಕನಾದ. ಒಂದು ಹೊಸ ಚೈನನ್ನು ಹಾಕಿ ಹಿಡಿದುಕೊಟ್ಟೆ. ಗೇಟಿನವರೆಗೂ ಹೋದ ದಾಸಿ ಹಿಂತಿರುಗಿ ನೋಡಿತು.

''ಸ್ಸಾರಿ, ನಿನ್ನೊಬ್ಬನ್ನೇ ಬಿಟ್ಟು ಹೋಗ್ತೇನೆ, ಗುಡ್‌ಬೈ'' ಎಂದು ಹೇಳಿದಂತಿತ್ತು. ಅಲ್ಲಿಂದ, ಮತ್ತೆಲ್ಲಿ ನಾನು ಮನಸ್ಸು ಬದಲಾಯಿಸುವೆನೋ? ಎಂದು ನನ್ನ ರೈತನನ್ನೂ ಎಳೆದುಕೊಂಡೇ ಬೇಗ ಓಟ ಕಿತ್ತಿತ್ತು. ನಿಯತ್ತೆಂಬ ಶಬ್ದವನ್ನು ಗುಡಿಸಿ ಹಾಕಿತ್ತು.

ಕಾಸು ಖರ್ಚಿಲ್ಲದೆ ಪ್ರಾಣಿಯ ಅನುವಂಶೀಯ ಗುಣವನ್ನೇ ಬದಲಿಸಿದ ಜಯ ಯಾವ ವಿಜ್ಞಾನಿಗೇನು ಕಮ್ಮಿ? ಒಂದು ವೇಳೆ ಇವಳು ನಿಜವಾದ ವಿಜ್ಞಾನಿಯೇ ಆದರೆ ಮಾಡಬಹುದಾದ ಅನಾಹುತ ನೆನೆದು ಮೈ ನಡುಗಿತು.

ಅಂದು ರಾತ್ರಿ ರುಚಿಯಾದ ಅಡುಗೆ ಕಿಲಕಿಲ ನಗುತ್ತಾ ಜಯ ಬಡಿಸಿದಾಗ, ಆರು ತಿಂಗಳಿಂದ ಜಿಡ್ಡುಗಟ್ಟಿದ್ದ ನಾಲಗೆ ಚಿಗುರಿತು.

''ಅದು ಮನೆ ಬಿಟ್ಟು ಹೋಗ್ಲೀಂತ್ಲೆ ಕೆಟ್ಟದಾಗಿ ಅಡುಗೆ ಮಾಡ್ತಿದ್ದೆ, ಸ್ಸಾರೀ, ರ್‍ರೀ'' ಅಂದ್ರೆ ನಾನು, ದಾಸಿ ಅನುಭವಿಸಿದ್ದನ್ನು ಲೆಕ್ಕಹಾಕಿ, ದಾಸಿಯಂತೂ ಬಚಾವಾಗಿದ್ದ.

ಮಲಗುವಾಗ ಹೇಳಿದೆ.

''ಇನ್ಮೇಲಾದ್ರೂ ರುಚಿಯಾಗಿ ಅಡುಗೆ ಮಾಡೆ''

''ಎಂತಾ ಮಾತೂರಿ? ನಿಂ ಮೇಲೆ ಪ್ರೀತಿ ಇಲ್ವಾ? ಆದ್ರೂ ನೋಡ್ರಿ, ಎಂತಾ ಕಂತ್ರಿ ಅದು. ಇಷ್ಟು ದಿನ ಇದ್ದದ್ದು ಹೇಗೆ ಓಡಿ ಹೋಯ್ತು. ಅದ್ಕೆ ಹೇಳೋದು ನಿಯತ್ತಿಲ್ಲದ ನಾಯೀಂತ'' ತನ್ನದೇನೂ ತಪ್ಪಿಲ್ಲದಂತೆ ವಾದ.

''ಅಲ್ವೇ, ಈ ಆರು ತಿಂಗ್ಳು ನನ್ನತಿ ಏನಾಯ್ತೆ?''


''ಅಯ್ಯೋ, ನಿಮಗಿರೋವಷ್ಟು ನಿಯತ್ತು, ಆ ದಾಸಿಗೆ ಎಲ್ರಿ? ಅದ್ಕೆ ಅಲ್ವೆ ನಾನು ನಿಮ್ಮನ್ನ ಹಟ ಮಾಡಿ ಮದ್ವೆ ಮಾಡಿಕೊಂಡಿದ್ದು''.

ಏಕಾಏಕಿ ನನ್ನನ್ನು ದಾಸಿಗಿಂತ ಕಡೆ ಮಾಡಿದ್ದಳು.

''ಈಗ, ಅರ್ಥವಾಯ್ತು, ಅಪ್ಪನ ತರಾ ಇರೋದನ್ನೇ ನಿಯತ್ತೂಂತ ಹೇಳ್ತಾರೆ'' ಹೊದ್ದಿಕೆ ಒಳಗಿಂದ ಚೋಟು ಹೇಳಿದ.

ನನಗೋ ಮೈ ಉರಿಯಿತು. ಆದರೆ ನಾನೇನು ಮಾಡ್ಲಿ? ಜಯ ಹೇಳಿದಂತೆ ''ನಿಯತ್ತಿನ ಪ್ರಾಣಿ'' ಯಲ್ಲವೆ? ನಾನು. ●

ವೃದ್ಧಾಪ್ಯ: ಎದುರಿಸಬೇಕೋ? ಆದರಿಸಬೇಕೋ?



○ ವಿಮಲಾ ರಾ. ಕುಲಕರ್ಣಿ

ಮನುಷ್ಯನ ಜೀವನ ಬಾಲ್ಯ, ಯೌವ್ವನ, ಮುಪ್ಪುಗಳನ್ನು ಎದುರಿಸಿ, ಆಯಾ ಸಂದರ್ಭದ ಅರ್ಥಪೂರ್ಣತೆಗೆ ಹೋರಾಡುವುದು ವಾಸ್ತವಿಕವಾದ ತಿಳುವಳಿಯಾಗಿದೆ. ಬಾಲ್ಯದ ಮುಗ್ಧತೆ, ಯೌವ್ವನದ ಸೃಜನಶೀಲಶಕ್ತಿ, ಮುಪ್ಪಿನ ಆತಂಕ ಬದುಕನ್ನು ವಿಸ್ಮಯವಾಗಿ ಮಾಡಿದೆ.

'ಜೀವಂತು ಶರದಾಂ ಶತಂ' ಹೀಗೆಂದು ಹಿರಿಯರು ಕಿರಿಯರಿಗೆ ಹರಸುವ ಪರಿ ನಮ್ಮ ಭಾರತೀಯ ಸಂಸ್ಕೃತಿಯ ಲಕ್ಷಣವೇ ಆಗಿದೆ. ಈ ಹರಕೆಯ ಆಶಯ ಏನೇ ಇರಲಿ ವಾಸ್ತವಿಕವಾದ ಮನುಷ್ಯನ ವಯೋಮಿತಿಯನ್ನು ನೋಡುವುದಾದರೆ, ಸ್ವತಂತ್ರ ಪೂರ್ವದಲ್ಲಿಯ ಮನುಷ್ಯನ ವಯೋಮಿತಿಗಿಂತ ಸ್ವತಂತ್ರೋತ್ತರ ಭಾರತೀಯ ವಯೋಮಾನ ಹೆಚ್ಚಿದೆ ಎಂದು ಅಂಕಿ ಅಂಶಗಳು ಹೇಳುತ್ತವೆ. ವೈದ್ಯ ವಿಜ್ಞಾನದ ಹೊಸ ಆವಿಷ್ಕಾರಗಳು ಅನೇಕ ರೋಗಗಳನ್ನು ನಿಯಂತ್ರಿಸಿದ್ದೆ ಇದಕ್ಕೆ ಕಾರಣವಾಗಿದೆ. ಕ್ಷಕಿರಣ, ಶಸ್ತ್ರಚಿಕಿತ್ಸೆಗಳ ಆಧುನಿಕ ಚಿಕಿತ್ಸಾ ಪದ್ಧತಿಗಳ ತೀವ್ರ ಪರಿಣಾಮದಿಂದ ಹೊಸ ಹೊಸ ಔಷಧಿಗಳ ತಯಾರಿಕೆಯಿಂದ ಮನುಷ್ಯನ ಆರೋಗ್ಯ ಹೆಚ್ಚಿಸಿ ವಯೋಮಿತಿಯ ಸರಾಸರಿ ವೃದ್ಧಿಸಿಕೊಳ್ಳುವ ನಿರೀಕ್ಷೆಗಳು ನಮ್ಮ ಮುಂದೆ ಇವೆ. ಭಾರತೀಯರ ವಯೋಮಾನ ಈಗ ಶೇಕಡಾ ಅರವತ್ತರಷ್ಟಿದೆ.

ಸಾಮಾನ್ಯವಾಗಿ ಮನುಷ್ಯನ ದೇಹದಲ್ಲಿ ನಲವತ್ತು, ನಲವತ್ತೈದು ವರ್ಷಗಳಲ್ಲಿ ಮುಪ್ಪು ಹರಡಿಕೊಳ್ಳುವುದು ಶುರುವಾಗುತ್ತದೆ. ದೇಹದ ರಸದೂತಗಳು (Hormones) ಈ ರೀತಿಯ ಬದಲಾವಣೆಗೆ ಕಾರಣವಾಗುತ್ತ ಹೋಗುತ್ತವೆ. ದೃಷ್ಟಿದೋಷ, ಹಲ್ಲುಗಳ ಸಡಿಲಿಕೆ, ಕೂದಲು ನೆರೆಯುವುದು ಮೊದಲಾದ ಲಕ್ಷಣಗಳು ಕಾಣುತ್ತವೆ.

ಸ್ತ್ರೀಯರಲ್ಲಿ ಮುಟ್ಟು ನಿಲ್ಲುವುದರ ಪೂರ್ವ ಸೂಚನೆಯಾಗಿ (Estrogen) ರಸದೂತಗಳು

ಕಡಿಮೆಯಾಗುವುದರಿಂದ ಅವರ ಮುಖದಲ್ಲಿ ಬದಲಾವಣೆ ಕಾಣುತ್ತವೆ.

ವೃದ್ಧಾಪ್ಯವು ಯಾರಿಗೂ ಬೇಕೆನಿಸುವುದಿಲ್ಲ. ಆದರೆ ಎಲ್ಲರೂ ಎದುರಿಸಬೇಕಾಗುತ್ತದೆ ಕಾಲದ ನಿಯಮದಂತೆ. ಸಮಸ್ಯೆಯಿರುವುದು ಮುಪ್ಪನ್ನು ಸ್ವೀಕರಿಸಿ ಎದುರಿಸುವುದು ಹೇಗೆ ಎನ್ನುವುದರಲ್ಲಿ ಬಾಲ್ಯದಿಂದಲೇ ನಿಯಮಿತ ಆಹಾರ, ದುಡಿಮೆ, ವಿಶ್ರಾಂತಿ, ಯೋಗಾಸನ, ಕಸರತ್ತು ಇವುಗಳ ಕಡೆ ಸರಿಯಾಗಿ ಗಮನ ಹರಿಸಿದರೆ ಮುಪ್ಪು ಬಹಳ ಬೇಗ ಬರದಂತೆ ನೋಡಿಕೊಳ್ಳಬಹುದು. ಇದಕ್ಕೆ ವಿರುದ್ಧವಾಗಿ ಅನಿಯಮಿತ ಆಹಾರ, ನಿದ್ರೆ, ಧೂಮಪಾನ, ಮದ್ಯಪಾನ ಮೊದಲಾದ ದುಶ್ಚಟಗಳಿಂದ ಆರೋಗ್ಯವನ್ನು ಹದಗೆಡಿಸಿ ಕೊಂಡರೆ ವೃದ್ಧಾಪ್ಯ ಹತ್ತಿರ ಹತ್ತಿರ ಬರುತ್ತದೆ.

ವೃದ್ಧಾಪ್ಯ ಕಳೆಯುವ ವಿಧಾನಗಳು ಅವರವರ ಮನೋಭಾವಕ್ಕೆ, ಅವರವರ ಅನುಭವಗಳಿಗೆ ಅನುಸಾರವಾಗಿ ಬೇರೆ ಬೇರೆಯಾಗಿರುತ್ತವೆ. ಒಬ್ಬ ವ್ಯಕ್ತಿಯು ಯಾವುದೇ ವೃತ್ತಿಯಿಂದ ನಿವೃತ್ತನಾಗಿರ ಬಹುದು. ಜೀವನದಿಂದ ನಿವೃತ್ತನಾಗಿರುವುದಿಲ್ಲ. ಇಲ್ಲಿಯವರೆಗೆ ವೃತ್ತಿ, ಮನೆ, ಹೆಂಡತಿ/ಗಂಡ, ಮಕ್ಕಳು ಮೊದಲಾದ ಆಪ್ತ ಸಂಗತಿಗಳ ಯಶಸ್ಸಿಗೆ ಪ್ರಯತ್ನಿಸಿ ಈಗ ವಿರಾಮದ ಕ್ಷಣಗಳನ್ನು ಹುಡುಕುವುದು ಸಹಜ.

ಮನುಷ್ಯ ಯಾವಾಗಲೂ ದುಡಿಮೆಯಲ್ಲಿ ಹೇಗೆ ಇರಲು ಇಷ್ಟಪಡುವುದಿಲ್ಲವೊ ಹಾಗೇ ಸದಾ ವಿರಾಮದಲ್ಲಿರಲು ಬಯಸುವುದಿಲ್ಲ. ಅನೇಕರು ಮುಪ್ಪಿನ ತಮ್ಮ ಅವಧಿಯಲ್ಲಿ ಅವರವರ ಜೀವನಾನುಭವದ ಆಧಾರದ ಮೇಲೆ ಶಾಲೆ-ಕಾಲೇಜುಗಳಲ್ಲಿ ಗೌರವ ಶಿಕ್ಷಕರಾಗಿ, ಉಪನ್ಯಾಸಕರಾಗಿ; ಗ್ರಂಥಾಲಯಗಳಲ್ಲಿ, ಅನಾಥಾಶ್ರಮ, ವೃದ್ಧಾಶ್ರಮ, ಅಂಧಮಕ್ಕಳ ಶಾಲೆಗಳಲ್ಲಿ ಅಲ್ಪಾವಧಿ ಸೇವೆ ಸಲ್ಲಿಸುವ ಮೂಲಕ ಅರ್ಥಪೂರ್ಣ ಸಾಮಾಜಿಕ ಸೇವೆಯಲ್ಲಿ, ಚಟುವಟಿಕೆಗಳಲ್ಲಿ ತೊಡಗಬಹುದು. ಅಲ್ಲದೆ ಬೇರೆ ಬೇರೆ ಕೆಲಸಗಳಿಗಾಗಿ ಹೋಗುವ ಮನೆಯ ಮಗ/ಸೊಸೆಯಂದಿರಿಗೆ ಸಣ್ಣ ಪುಟ್ಟ ಕೆಲಸಗಳಲ್ಲಿ ಸಹಕರಿಸಿದರೆ ಅಥವಾ ತಮ್ಮ ತಮ್ಮ ಮೊಮ್ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವುದಾದರೆ ಕಿರಿಯರು ತಮ್ಮ ಕೆಲಸದಲ್ಲಿ ಕ್ರಿಯಾಶೀಲರಾಗಲು ಮತ್ತು ಅವರ ಪ್ರೀತಿಗಳಿಸಿಕೊಳ್ಳಲು ಸಾಧ್ಯವಾಗುತ್ತದೆ. ವೃದ್ಧಾಪ್ಯದ ಅವಧಿಯಲ್ಲೇ ತಮ್ಮ ಜೀವನಾನುಭವಗಳನ್ನು ಸೂಕ್ತವಾಗಿ ಬಳಸಿಕೊಂಡು ಸಾರ್ಥಕತೆಯನ್ನು ಸಾಧಿಸಿದ ದೊಡ್ಡ ವಿಜ್ಞಾನಿಗಳು, ಹೆಸರಾಂತ ಸಾಹಿತಿ/ಕಲಾವಿದರು, ಉದ್ಯಮಿಗಳು ಅಪಾರ ಸಂಖ್ಯೆಯಲ್ಲಿ ಸಿಗುತ್ತಾರೆ. ಅಂಥವರಿಗೆ ಸಮಾಜ, ರಾಷ್ಟ್ರ ಯೋಗ್ಯ ಗೌರವ ತೋರಿಸುತ್ತಾ ಬಂದಿದೆ.


ಪಾಶ್ಚಿಮಾತ್ಯ ಸಂಸ್ಕೃತಿಗೂ ಭಾರತೀಯ ಸಂಸ್ಕೃತಿಗೂ ಮುಪ್ಪನ್ನು ಗೌರವಿಸುವ ರೀತಿಯಲ್ಲಿ ಭಿನ್ನತೆಯಿದೆ. ಅಲ್ಲಿಯ ಮಕ್ಕಳು "Earn and Learn" ಮೊದಲಾದ ವಿಚಾರಗಳಿಂದ ಪ್ರಚೋದಿತರಾಗಿ ಬಾಲ್ಯದಿಂದಲೇ ಸ್ವತಂತ್ರ ಜೀವನ ಸಾಗಿಸುವ ಪ್ರವೃತ್ತಿ ಬೆಳೆಸಿಕೊಂಡಿರುತ್ತಾರೆ. "Mother's Day"ಗೆ ಮಾತ್ರ ತಮ್ಮ ಹೆತ್ತವರನ್ನು ಭೇಟಿಯಾಗುತ್ತಾರೆ. ಭಾರತೀಯರ ಬದುಕಿನ ಸಂದರ್ಭದಲ್ಲಿ ಹಾಗಲ್ಲ. ನಮ್ಮದು 'ಮಾತೃದೇವೋಭವ ಪಿತೃದೇವೋಭವ' ಎಂಬ ಹಿರಿಯ ತಿಳಿವಳಿಕೆಯನ್ನು ಪಡೆದ ಜೀವನ ಪದ್ಧತಿ. ಹಾಗಿದ್ದರೂ ಇತ್ತೀಚಿನ ಆಧುನಿಕ ಒತ್ತಡಗಳು ನಮ್ಮ ತಂದೆ-ತಾಯಿಂದಿರು ವೃದ್ಧಾಶ್ರಮಗಳಲ್ಲಿ ಇರಬೇಕಾದ ಸಂದರ್ಭ ಸೃಷ್ಟಿಸುತ್ತಿವೆ. ತಮ್ಮ ಜೀವನದ ಯಶಸ್ಸಿಗೆ ಶ್ರಮಿಸಿದ, ಪ್ರೀತಿಸಿದ ತಂದೆ ತಾಯಂದಿರಿಗೆ ಅವರ ಮುಪ್ಪಿನ ಕಾಲದಲ್ಲಿ ಅಷ್ಟೇ ಪ್ರೀತಿಯಿಂದ, ಶ್ರದ್ಧೆಯಿಂದ, ಗೌರವದಿಂದ ನೋಡಿಕೊಳ್ಳುವುದು ಕಿರಿಯರ ಕರ್ತವ್ಯ. ಹಾಗೆ ಕಿರಿಯರ ಅಭಿರುಚಿಗಳನ್ನು ಮೆಚ್ಚುವ, ಸೂಕ್ತ ಸಂದರ್ಭದಲ್ಲಿ ನಯವಾಗಿ ತಿದ್ದುವ ಕೆಲಸ ಮಾಡಿದರೆ ಮನೆಯಲ್ಲಿ ಸೌಹಾರ್ದ, ನೆಮ್ಮದಿ ಜೀವನ ಸಾಗಿಸಬಹುದು.

ಭೋಗ ಜೀವನದ ಪ್ರಭಾವಕ್ಕೊ ಒಳಗಾಗಿ ಅದರ ಪರಿಣಾಮವಾಗಿ ಕೌಟುಂಬಿಕ ಬಿರುಕುಗಳು ಹುಟ್ಟಿ ವೃದ್ಧಾಶ್ರಮಗಳ ಅವಶ್ಯಕತೆಗಳು ಹೆಚ್ಚಾಗಿ ಕಂಡುಬರುತ್ತಿದೆ. ಪ್ರಾಚೀನ ಜೀವನ ಕ್ರಮದಲ್ಲಿ ಹಿರಿಯರು ತಮ್ಮ ಮುಪ್ಪನ್ನು ಕಳೆಯಲು ಮಕ್ಕಳಿಗೆ ಎಲ್ಲ ಜವಾಬ್ದಾರಿಗಳನ್ನು ವಹಿಸಿಕೊಟ್ಟು 'ವಾನಪ್ರಸ್ಥಾಶ್ರಮ' ವೆಂದು ಅರಣ್ಯಗಳಿಗೆ ಹೋಗುತ್ತಿದ್ದರೆಂದು ಪುರಾಣ ಇತಿಹಾಸಗಳಿಂದ ತಿಳಿಯುತ್ತದೆ. ಈಗ ಹಾಗೆ ಮಾಡಲು ಸಾಧ್ಯವಿಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ವೃದ್ಧಾಶ್ರಮಗಳಲ್ಲಿ ಪ್ರವೇಶ ಪಡೆಯಬೇಕಾಗುತ್ತದೆ. ಅಂಥವರಿಗೆ ವೃದ್ಧಾಶ್ರಮದಲ್ಲಿ ಯೋಗ್ಯ ವಸತಿ, ಆಹಾರ, ಬಟ್ಟೆ-ಬರೆ, ಔಷಧೋಪಚಾರಗಳನ್ನು ಉಚಿತ ಅಥವಾ ಯೋಗ್ಯದರದಲ್ಲಿ ಸಿಗುವಂತೆ ಸರಕಾರಗಳು, ಆಸಕ್ತ ಅನುದಾನಿತ/ಸಮಾಜಸೇವಾ ನಿರತ ಸಂಸ್ಥೆಗಳು ನೋಡಿಕೊಳ್ಳಬೇಕು. ಹೀಗಾದಾಗ ಬದುಕು ಸಹ್ಯವಾಗುತ್ತದೆ.

ಮುಪ್ಪಿನ ಆತಂಕಕ್ಕೆ ಮಗುವಿನ ಅಭದ್ರತೆ ಇರುತ್ತದೆ. ಮನೆಯವರ ಪ್ರೀತಿ ವೃದ್ಧಾಪ್ಯವನ್ನು ಸುಖಕರವಾಗಿ ಕಳೆಯಲು ಸಹಕಾರವಾಗಬೇಕು. ಹಾಗೆ ಎಳೆಯರ ಜೊತೆಗಿನ ಹೊಂದಾಣಿಕೆ ಹಿರಿಯರದಾಗಬೇಕು. ಇದು ಅನ್ಯೋನ್ಯ ಬದುಕಿನ ಮಾದರಿ. ಚಂಪಾರ ಸಾಲುಗಳನ್ನು ನೆನಪಿಸಿ ಕೊಂಡು ಮುಗಿಸುವುದಾದರೆ-

ಹೋಗಿ ಬರ್ತೇನಜ್ಜಾ
ನಿನ್ನ ಪಾದದ ಧೂಳು ನನ್ನ ಹಣೆ ಮೇಲಿರಲಿ
ಅದು ನನ್ನ ಕಣ್ಣೊಳಗೆ ಬೀಳದಿರಲಿ. ●

ಈ ಶತಮಾನದಲ್ಲಿ ಮುಗಿದೀತೆ ದೂಧಗಂಗಾ ಯೋಜನೆ?



ತಂದೆ ತಾಯಿಯರನ್ನು ಒಂದು ಮಾಡುವುದು ಹೇಗೆ?

ನಾನು ಪಿ. ಯು. ಸಿ. ಓದಿದ ೨೪ ವರ್ಷದ ಯುವಕ. ನನ್ನ ತಂದೆ ತಾಯಿ ಒಬ್ಬರನ್ನೊಬ್ಬರು ಮಾತನಾಡಿಸಿ ಸುಮಾರು ೪-೫ ವರ್ಷಗಳು ಕಳೆದಿವೆ. ಇವರನ್ನು ಒಂದು ಮಾಡಲು ನಮ್ಮ ಬಂಧುಗಳು, ಸ್ನೇಹಿತರು, ಹಿರಿಯರು ಬಹಳ ಶ್ರಮಪಟ್ಟರು. ಆದರೆ ಅವರ ಶ್ರಮ ಸಾಗರದಲ್ಲಿ ಹೋಮ ಮಾಡಿದಂತೆ ವ್ಯರ್ಥವಾಯಿತು. ನನಗೆ ಬಹಳಷ್ಟು ನೋವುಂಟಾಗುತ್ತಿದೆ. ಏಕೆಂದರೆ ತಾಯಿ ಹೇಳಿದ ಕೆಲಸ ಮಾಡಿದರೆ ತಂದೆ ಬಯ್ಯುವುದು, ತಂದೆ ಹೇಳಿದ ಕೆಲಸ ಮಾಡಿದರೆ ತಾಯಿ ಬಯ್ಯುವುದು. ಇದೆಲ್ಲಕ್ಕಿಂತ ಮಿಗಿಲಾಗಿ ಸ್ನೇಹಿತರ ಮತ್ತು ಊರಿನವರ ಅಸಹ್ಯ ಚುಚ್ಚು ನುಡಿಗಳಿಂದ ಮನನೊಂದ ನಾನು ಈಗ್ಗೆ ಒಂದು ವರ್ಷದ ಹಿಂದೆ ಬೆಂಗಳೂರಿಗೆ ಬಂದೆ. ಆದರೆ ಈಗ ತಂದೆ ತಾಯಿಯವರು ಬೇರೆ ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಆದರೆ ತಂದೆಯಲ್ಲಾಗಲಿ ಅಥವಾ ತಾಯಿಯಲ್ಲಾಗಲಿ ಅನೈತಿಕ ಸಂಬಂಧ ಕಂಡುಬರುವುದಿಲ್ಲ. ಈ ಬಗ್ಗೆ ಊರಿನವರ ಬಾಯಿಂದಲೂ ಕೇಳಿಲ್ಲ. ಇಬ್ಬರು ಈ ವಿಷಯದಲ್ಲಿ ಅಪ್ಪಟ ಚಿನ್ನ. ಹೀಗಿರುವಾಗ ಇವರ ಮಧ್ಯೆ ವಿರಸಕ್ಕೆ ಕಾರಣ ಗೊತ್ತಾಗಲಿಲ್ಲ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ನಾನಿದ್ದೇನೆ. ತಂದೆ ತಾಯಿಯನ್ನು ಹೇಗೆ ಒಂದು ಮಾಡುವುದು?

- ನೊಂದ ಯುವಕ, ಊರು ಬೇಡ.

ಸಲಹೆ

ನಿಮ್ಮ ಸಮಸ್ಯೆಯನ್ನು ಬಗೆಹರಿಸಲು ಮೂರನೆಯವರಿಂದ ಸಾಧ್ಯ ಇಲ್ಲ. ನಿಮ್ಮ ತಂದೆ-ತಾಯಿಯ ವಿರಸ ಯಾವಾಗ ಪ್ರಾರಂಭವಾಯಿತು, ಹೇಗೆ ಮತ್ತು ಯಾಕೆ ಪ್ರಾರಂಭವಾಯಿತು ನೀವು ತಿಳಿಸಿಲ್ಲ. ದಾಂಪತ್ಯದಲ್ಲಿ ಒಡಕುಂಟಾದರೆ ಮಕ್ಕಳು ಬಹಳ ತೊಂದರೆಗೊಳಗಾಗುತ್ತಾರೆ. ಮಾನಸಿಕ ಒತ್ತಡ, ವ್ಯಕ್ತಿ ವಿಕಾಸದಲ್ಲಿ ತೊಂದರೆ, ಏಕಾಂಗಿತನ ಇಲ್ಲವೇ ಆಕ್ರೋಶ, ಕ್ರೋಧ, ರೋಷ, ಹಿಂಸೆ ಇವುಗಳು ಮಕ್ಕಳಲ್ಲಿ ಮನೆ ಮಾಡುತ್ತದೆ. ನೀವು ಈಗ ಎದುರಿಸಬೇಕಾಗಿರುವ ಸಮಸ್ಯೆ ಕ್ಲಿಷ್ಟವಾದರೂ ಧೈರ್ಯಗುಂದದೇ ನೀವು ನಿಮ್ಮ ವ್ಯಕ್ತಿತ್ವ ಬೆಳೆಸಿಕೊಳ್ಳಿ. ಎಷ್ಟೋ ಸಂಕೀರ್ಣ ಕಾರಣಗಳು ಗಂಡ ಹೆಂಡತಿಯ ಮಧ್ಯೆ ದೊಡ್ಡ ಕಂದರವನ್ನು ಸೃಷ್ಟಿಸುತ್ತದೆ. ನಿಮ್ಮ ತಂದೆ, ತಾಯಿಯನ್ನು ಒಂದುಗೂಡಿಸುವ ಯೋಚನೆ ಬಿಟ್ಟು ನೀವು ಭವಿಷ್ಯ ರೂಪಿಸಿಕೊಂಡು, ನಿಮಗನುಗುಣವಾದ ಹೆಣ್ಣನ್ನು ಕೈ ಹಿಡಿದು ಅನ್ಯೋನ್ಯ ದಾಂಪತ್ಯ ಜೀವನ ನಡೆಸಿ. ನಿಮ್ಮ ದಾಂಪತ್ಯ ನೋಡಿ ನಿಮ್ಮ ತಂದೆ, ತಾಯಿ ಒಂದಾದಾರು. ಮೊಮ್ಮಕ್ಕಳು ಹುಟ್ಟಿದ್ದಲ್ಲಿ ಹಿರಿಯರು ತಮ್ಮ ಮನಸ್ತಾಪ, ಕಹಿಯನ್ನು ಮರೆಯುತ್ತಾರೆ. ಇದು ಮಾನವ ಜೀವನದಲ್ಲಿ ಒಂದು ಸತ್ಯ. ನಿಮ್ಮಂತಹವರು ನಮ್ಮ ನಾಡಿನಲ್ಲಿ, ದೇಶದಲ್ಲಿ ಪ್ರಪಂಚದಾದ್ಯಂತ ಇದ್ದಾರೆ. ಅದೂ ಪಾಶ್ಚಿಮಾತ್ಯ ದೇಶಗಳಲ್ಲಿ ಬಹಳ ಕಂಡು ಬರುತ್ತದೆ. ಇದಕ್ಕಾಗಿ ನೀವು ವ್ಯಥೆ ಪಡಬೇಕಾಗಿಲ್ಲ. ನಿಮ್ಮ ತಂದೆಯಾಗಲೀ, ತಾಯಿಯಾಗಲೀ ಯಾವ ಅನೈತಿಕ ಸಂಬಂಧವಿಟ್ಟುಕೊಳ್ಳದಿರುವುದೂ, ಬೇರೆ ಬೇರೆಯಾಗಿ ಜೀವಿಸುತ್ತಿದ್ದರೂ ವಿಚ್ಛೇದನಕ್ಕಾಗಲೀ, ಮರು ಮದುವೆಗಾಗಲೀ ಪ್ರಯತ್ನಿಸದಿರುವುದೂ ಒಂದಲ್ಲ ಒಂದು ದಿನ ಅವರಿಬ್ಬರೂ ಒಂದಾಗಬಹುದೆಂಬ ಆಶಾಕಿರಣ ಮೂಡಿಸುತ್ತದೆ. ಸಂಸಾರ ಸಾಗರ ಮಂಥನದಲ್ಲಿ ಮೊದಲು ಹಾಲಹಲ ಉಕ್ಕಿಬಂದರೂ ಕೊನೆಯಲ್ಲಿ ಅಮೃತ ಸಿಗುತ್ತದೆ. ನಿರಾಶಾವಾದಿಗಳಾಗದೇ ಆಶಾವಾದಿಗಳಾಗಿ.

ಸ್ತನಗಳಲ್ಲಿ ವ್ಯತ್ಯಾಸ

ನನ್ನ ವಯಸ್ಸು ೧೬. ನನ್ನ ಎರಡೂ ಸ್ತನಗಳಲ್ಲಿ ಎದ್ದು ಕಾಣುವಷ್ಟು ವ್ಯತ್ಯಾಸವಿದೆ. ಅಂದರೆ ಒಂದು ದೊಡ್ಡದು, ಇನ್ನೊಂದು ಚಿಕ್ಕದು. ಇದರಿಂದ ನನಗೆ ತುಂಬಾ ಮುಜುಗರವಾಗುತ್ತಿದೆ. ಎರಡೂ ಸ್ತನಗಳು ಸಮವಾಗಿ ಕಾಣಲು ಏನು ಮಾಡಬೇಕು? ಸಲಹೆ ನೀಡಬೇಕೆಂದು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

- ನಿಮ್ಮ ಅಭಿಮಾನಿ, ಊರು ಬೇಡ.



○ ಉಷಾ ನವರತ್ನರಾಮ್

ಸಲಹೆ

ನೀವು ವಿನಾಕಾರಣ ತಲೆಕೆಡಿಸಿಕೊಳ್ಳುತ್ತಿದ್ದೀರಿ. ದೇವರ ಸೃಷ್ಟಿಯಲ್ಲಿ ಇಂತಹ ವ್ಯತ್ಯಾಸ ಅತ್ಯಂತ ಸಹಜ. ಕೆಲವರಿಗೆ ಬಲಭಾಗ ಶಕ್ತಿಯುತವಾಗಿರುತ್ತದೆ. ಕೆಲವರಿಗೆ ಎಡಭಾಗ. ಕಾಲುಗಳಲ್ಲಿ ಬಲಗಾಲು ಪ್ರತಿಯೊಬ್ಬರಲ್ಲೂ (ನೂರಕ್ಕೆ ಎಂಭತ್ತು ಮಂದಿ) ಸ್ವಲ್ಪ ಉದ್ದವಾಗಿರುತ್ತದೆ. ಹಾಗೇ ಸ್ತನಗಳಲ್ಲಿ ಒಂದು ಚಿಕ್ಕದು ಮತ್ತೊಂದು ದೊಡ್ಡದು ಹೆಚ್ಚು ಕಡಿಮೆ ಎಲ್ಲಾ ಸ್ತ್ರೀಯರಲ್ಲೂ ಸಾಮಾನ್ಯ. ಬಲಗಡೆಯದು ಹೆಚ್ಚಾಗಿ ದೊಡ್ಡದಾಗಿರುತ್ತದೆ. ನಿಮ್ಮ ವಯಸ್ಸು ತಿಳಿದಿಲ್ಲ. ತಾಯ್ತನದ ನಂತರ ವ್ಯತ್ಯಾಸ ಇದ್ದರೂ ಅಷ್ಟಾಗಿ ಕಾಣುವುದಿಲ್ಲ. ದೇಹದ ಒಳಗಿನ ಅಂಗಾಂಗಳ ಸಮತೋಲನಕ್ಕಾಗಿ ಹೊರಗಿನ ಅಂಗಾಂಗಳಲ್ಲಿ ವ್ಯತ್ಯಾಸವಿದ್ದು ಅಲ್ಲೂ ಸಮತೋಲನ ಬೇಕಾಗುತ್ತದೆ. ಸೃಷ್ಟಿಕರ್ತ ಬಹಳ ಬುದ್ಧಿವಂತ.

ಅಪಾರ ಅಂತರದ ಪ್ರೀತಿ

ನಾನು ೧೭ ವರ್ಷದ ಯುವಕ. ನಮ್ಮ ಮನೆಯಲ್ಲಿ ೬೮ ವರ್ಷದ ಒಬ್ಬ ಹೆಂಗಸಿದೆ. ನಾನು ಅವಳನ್ನು ತುಂಬಾ ಪ್ರೀತಿಸುತ್ತೇನೆ. ನನಗೆ ಅವಳ ಮೇಲೆ ಪ್ರೀತಿ ಉಕ್ಕಿ ಹರಿಯುತ್ತಿದೆ. ಈ ಬಗ್ಗೆ ನಿಮ್ಮ ಸಲಹೆ ಏನು?

- ಹೆಸರು, ಊರು ಬೇಡ.

ಸಲಹೆ

ಪ್ರೀತಿಯೆಂದರೆ ದೇಹದ ಕಾಮನೆಯಲ್ಲ. ದೇಹದ ಬಯಕೆಯಾದರೆ ನೀವು ಯಾವುದಾದರೂ ಮನಃಶಾಸ್ತ್ರ ತಜ್ಞರನ್ನು ಸಂಪರ್ಕಿಸಿ. ಅರವತ್ತೆಂಟರ ಹೆಣ್ಣನ್ನು ತುಂಬಾ ಪ್ರೀತಿಸುತ್ತೇನೆ ಎಂದ ಮೇಲೆ ಅವಳನ್ನು ಅಜ್ಜಿಯಾಗಿಯೋ, ತಾಯಿಯಾಗಿಯೋ, ಅಕ್ಕನಾಗಿಯೋ ಪ್ರೀತಿಸುವುದರಲ್ಲಿ ತಪ್ಪಿಲ್ಲ. ಈಡಿಪಸ್ ಕಾಂಪ್ಲೆಕ್ಸ್ ಎಂಬ ಮನೋವಿಕಾರದಲ್ಲಿ ತಾಯಿಯನ್ನೇ ಕಾಮುಕ ದೃಷ್ಟಿಯಿಂದ ನೋಡಿ ಪ್ರೀತಿಸುವುದು ಸಾಮಾನ್ಯ. ಇದನ್ನು ನೀವೇ ನಿಮ್ಮ ಮನಸ್ಥೈರ್ಯದಿಂದ ವಿಕಾರವನ್ನು ಸರಿಪಡಿಸಿಕೊಳ್ಳಬಹುದು.

ರಾಖಿಗೆ ಪರಿಹಾರವೇನು?

ನಾನು ೨ ವರ್ಷದಿಂದ ಒಬ್ಬ ಹುಡುಗಿಯನ್ನು ಪ್ರೀತಿಸುತ್ತಿರುವೆ. ಆಕೆಯು ನನ್ನನ್ನು ಪ್ರೀತಿಸುತ್ತಿದ್ದಾಳೆ. ಈ ವಿಷಯ ತಿಳಿದ ಹುಡುಗಿಯ ತಂದೆ ನನ್ನನ್ನು ಮನೆಗೆ ಕರೆಯಿಸಿ ಬಲವಂತದಿಂದ ಹುಡುಗಿಗೆ ರಾಖಿ ಕಟ್ಟಿಸಿದ್ದಾರೆ. ಇದು ನಮ್ಮಿಬ್ಬರಿಗೂ ಇಷ್ಟವಿಲ್ಲ. ರಾಖಿಯನ್ನು ಹೆಂಗಸಿಗೆ ಗಂಡಸು ಕಟ್ಟುವ ಸಂಪ್ರದಾಯವಿಲ್ಲವೆಂಬುದನ್ನು ಅರಿತು ನಾವು ಪ್ರೀತಿ ಮುಂದುವರಿಸಲು, ಮದುವೆಯಾಗಲು ನಿರ್ಧರಿಸಿದ್ದೇವೆ. ಆದಾಗ್ಯೂ ಒಳಗೊಳಗೇ ಪರಿತಪಿಸುವಂತಾಗಿದೆ. ನಿಮ್ಮ ಸಲಹೆಗಾಗಿ ಕಾದಿದ್ದೇವೆ.

- ಅನಾಮಿಕ, ನಿಮ್ಮೂರು.

ಸಲಹೆ

ರಾಖಿ ಕಟ್ಟುವುದು ಉತ್ತರದ ಸಂಪ್ರದಾಯ, ರಾಖಿ ಕಟ್ಟಿದಾಕ್ಷಣ ಅವಳು ತಂಗಿ, ನೀವು ಅಣ್ಣನಾಗುವುದಿಲ್ಲ. ಮಾನಸಿಕವಾಗಿ ನೀವು ಆ ನಿಲುವನ್ನು ಪಡೆಯಲು ಒತ್ತಾಯಿಸಿದಂತಾಯಿತು. ನಿಮ್ಮ ನಿರ್ಧಾರ ಸರಿಯೆನಿಸಿದರೆ ಧೈರ್ಯದಿಂದ ಹೆಜ್ಜೆ ಮುಂದಿಡಿ. ಕಾಲಕಳೆದಂತೆ ಆ 'ಗಿಲ್ಟಿ ಫೀಲಿಂಗ್' ಕಡಿಮೆಯಾಗುತ್ತಾ ಹೋಗುತ್ತದೆ.


ಅಕ್ಕನ ಮಗಳೊಂದಿಗೆ ಮದುವೆ

ನಾನು ನನ್ನ ಅಕ್ಕನ ಮಗಳನ್ನು ಮದುವೆಯಾಗಿದ್ದೇನೆ. ಹೀಗೆ ರಕ್ತ ಸಂಬಂಧದಲ್ಲಿ ಮದುವೆಯಾಗುವುದರಿಂದ ಮುಂದೆ ಜನಿಸುವ ಮಕ್ಕಳಿಗೆ ಏನಾದರೂ ತೊಂದರೆ ಇದೆಯೇ? ಅಕ್ಕನ ಮಕ್ಕಳನ್ನು ಮದುವೆಯಾದರೆ ಅಂಗವಿಕಲ ಮಕ್ಕಳು ಹುಟ್ಟುವರೆಂದು ನನ್ನ ಶಿಕ್ಷಕರೊಬ್ಬರು ಹೇಳುತ್ತಿದ್ದರು. ಇದು ನಿಜವೇ?

- ವೀರೇಶ ರೋಣದ, ಜಕ್ಕಲಿ.

ಸಲಹೆ

ಬಹಳ ಹತ್ತಿರದ ರಕ್ತ ಸಂಬಂಧ ಬೆಳೆಸುವುದು ಅಥವಾ ಇದು ಆರೋಗ್ಯದ ದೃಷ್ಟಿಯಿಂದಲೂ, ಮುಂದಿನ ಪೀಳಿಗೆಗೂ ಒಳ್ಳೆಯದಲ್ಲ ಅನುವಂಶಿಕ ಕಾಯಿಲೆಗಳು ಕಾಡಬಹುದು. ಆದಷ್ಟು ಹತ್ತಿರದ ರಕ್ತ ಸಂಬಂಧಿಗಳನ್ನು ಮದುವೆಯಾಗುವುದು ಆರೋಗ್ಯಕರವಲ್ಲ. ಹಾಗೆಂದು ಆಗಲೇ ಬಾರದೆಂದಲ್ಲ. ಎಷ್ಟೋ ಜನ ಸೋದರ ಮಾವ, ಅಕ್ಕನ ಮಗಳು ಎಂದು ಮದುವೆಯಾಗಿಯು ಆರೋಗ್ಯವಂತರಾದ ಮಕ್ಕಳನ್ನು ಪಡೆದಿದ್ದಾರೆ. ನೀವು ಯೋಚಿಸಿ ನಿರ್ಧಾರ ಕೈಗೊಳ್ಳಿ, ಸಂಪ್ರದಾಯದಲ್ಲಿ ಸಗೋತ್ರ ಮದುವೆಗಳು ಆಗುತ್ತಿರಲಿಲ್ಲ. ಕೆಲವು ಇತರ ಸಂಪ್ರದಾಯದಲ್ಲಿ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳೂ ಮದುವೆಯಾಗುತ್ತಾರೆ. ಈಜಿಪ್ಟ್ ಸಂಸ್ಕೃತಿಯಲ್ಲಿ ಅಣ್ಣ ತಂಗಿಯರ ವಿವಾಹವಾಗುತಿತ್ತು. ಇಗೆಲ್ಲಾ ಏನೇ ಸಂಪ್ರದಾಯವಿರಲಿ ಮೆಡಿಕಲ್ ಸೈನ್ಸ್ ತುಂಬಾ ಮುಂದುವರೆದಿದೆ. ತಜ್ಞರು ಹತ್ತಿರದ ರಕ್ತ ಸಂಬಂಧಿಗಳ ವಿವಾಹ ವೈಜ್ಞಾನಿಕವಾಗಿ ಮುಂದಿನ ಪೀಳಿಗೆಯ ದೈಹಿಕ, ಮಾನಸಿಕ ಬೆಳವಣಿಗೆಗೆ ಕುಂದುಟಾಗುವುದೆಂದೂ, ಅನುವಂಶಿಕ ಕಾಯಿಲೆಗಳು ಹೆಚ್ಚುವುದೆಂದೂ ಹೇಳುತ್ತಾರೆ. ಕೆಲವರಿಗೆ ಇವರ ಕಾರಣಗಳೂ ಸೇರಿ ಸಿಕಲ್‌ಸೆಲ್ ಎನಿಮಯಾ ಕೂಡ ಕಂಡು ಬರುವುದುಂಟು. ಆದ್ದರಿಂದ ಎಲ್ಲ ವಿಧದಲ್ಲೂ ಎಚ್ಚರಿಕೆ ವಹಿಸುವುದು ಸೂಕ್ತ.



ಅದುಮಿಟ್ಟ ಆಕಾಂಕ್ಷೆ

ನಾನು ಒಬ್ಬ ಹುಡುಗಿ. ನನ್ನ ಒಬ್ಬ ಗೆಳತಿಯನ್ನು ಬಹಳ ದಿನ ಮನದಲ್ಲೇ ಪ್ರೀತಿಸಿದೆ. ನನ್ನ ಆಕಾಂಕ್ಷೆಯನ್ನು ಆಕೆಗೆ ಹೇಳಲಾಗಲಿಲ್ಲ. ಈಗ ಅವಳ ಮದುವೆ ಆಗಿದೆ. ಅವಳು ಮಾತ್ರ ನನ್ನ ಮನಸ್ಸಿನಿಂದ ದೂರವಾಗುತ್ತಿಲ್ಲ. ಯಾವುದೇ ಕಾರ್ಯದಲ್ಲಿ ತೊಡಗಿದರೂ ಅವಳು ನನ್ನ ಜೊತೆಯಲ್ಲೇ ಇದ್ದಂತೆ ಭಾಸವಾಗುತ್ತದೆ. ಅವಳ ಮದುವೆಯಾದಾಗಿನಿಂದ ನನಗೆ ಊಟ ನಿದ್ರೆ ಯಾವುದೂ ಸೇರದೆ ನೆಮ್ಮದಿ ಹಾಳಾಗಿದೆ. ಮಾನಸಿಕ ಆರೋಗ್ಯ ಚಿಂತಾಜನಕ ಸ್ಥಿತಿ ತಲುಪಿದೆ. ಇದಕ್ಕೆ ಪರಿಹಾರ ತಿಳಿಸಿ.

- ಹೆಸರು ಬೇಡ, ಊರು ಬೇಡ.

ಸಲಹೆ

ಸಲಿಂಗ ರತಿ ಶತಶತಮಾನಗಳಿಂದ ಇದ್ದರೂ ಇದು ಧರ್ಮಕ್ಕೆ ವಿರುದ್ಧ ಎಂದು ಹಲವರ ನಿಲುವು. ಈಚೀಚೆಗಂತೂ ಪಾಶ್ಚಿಮಾತ್ಯ ದೇಶಗಳಲ್ಲಿ ಅವರದೇ ಆದ ಗುಂಪೇ ಇದೆ. ತಾವು 'ಗೇ' (Gay)ಎಂದು ಹೇಳಿಕೊಳ್ಳುವುದರಲ್ಲಿ ಸಂಕೋಚಪಡುವುದಿಲ್ಲ. ನಮ್ಮ ದೇಶದಲ್ಲೂ ಸಾಕಷ್ಟು ಕಂಡುಬಂದರೂ ಅವನ್ನು ನಾವು ಮನಃಪೂರ್ವಕವಾಗಿ, ಕಾನೂನು ಬದ್ಧವಾಗಿ ಸ್ವೀಕರಿಸಿಲ್ಲ. ಇದೊಂದು ಮನೋ ವೈಪರೀಕತೆಯೆನ್ನಬಹುದು. ಎರಡು ಹೆಣ್ಣುಗಳು, ಎರಡು ಗಂಡುಗಳು ಒಬ್ಬರನ್ನೊಬ್ಬರು ಪ್ರೀತಿಸಿ, ಪರಸ್ಪರ ಲೈಂಗಿಕ ತೃಪ್ತಿಪಡುವುದೂ ಉಂಟು. ವಾತ್ಸಾಯನನ ಕಾಮಶಾಸ್ತ್ರದಲ್ಲೂ ಇದರ ಉಲ್ಲೇಖವಿದೆ. ಆದರೆ ನೀವು ಮನದಲ್ಲೇ ಪ್ರೀತಿಸುತ್ತಿರುವುದರಿಂದ, ನಿಮ್ಮ ಗೆಳತಿಗೆ ಇದರ ಅರಿವೇ ಇಲ್ಲದಿರುವುದರಿಂದ ನಿಮ್ಮ ಈ ಮನೋವಿಕಾರ ಬಹಳ ಬೇಗ ಕಡಿಮೆಯಾಗಬಹುದು. ಅನುರೂಪ ಹುಡಗನನ್ನು ಕೈಹಿಡಿದು ಸಹಜ ದಾಂಪತ್ಯ ಜೀವನ ನಡೆಸಲು ಯತ್ನಿಸಿ.

ಮದುವೆ ಒಲ್ಲೆ ಎನ್ನುವ ಗೆಳತಿ

ನನ್ನ ಗೆಳತಿ ಬಿ.ಎ. ಪದವೀಧರೆ. ಆಕೆಯ ಕುಟುಂಬದ ಆರ್ಥಿಕ ಸ್ಥಿತಿ ಗಂಭೀರವಾಗಿದೆ. ಆದ್ದರಿಂದ ಮುಂದಿನ ವಿದ್ಯಾಭ್ಯಾಸಕ್ಕೆ ಶರಣು ಹೊಡೆದು ತನ್ನೂರಲ್ಲೇ ಒಂದು ಆಫೀಸಿನಲ್ಲಿ ೫೦೦ರೂಪಾಯಿ ಸಂಬಳದ ಕೆಲಸ ಸೇರಿದ್ದಾಳೆ. ಒಬ್ಬ ಸಂಬಂಧಿಕನ ಜೊತೆಗೆ ಆಕೆಯ ನಿಶ್ಚಯ ಆಗಿತ್ತು. ಆತ ಆಕೆಗೆ ಎಲ್ಲ ತರಹ ಮೋಸ ಮಾಡಿ ದೂರಾಗಿದ್ದಾನೆ. ಕಚೇರಿಯ ಅಧಿಕಾರಿಯೊಬ್ಬ ಆಕೆ ಕೆಲಸಕ್ಕೆ ಸೇರಿದಾಗಿನಿಂದ ಆಕೆಯ ಮೇಲೆ ಮನಸ್ಸಿಟ್ಟಿದ್ದಾನೆ. ಮೊದಲೇ ಮದುವೆಯಾಗಿ ಇಬ್ಬರು ಮಕ್ಕಳನ್ನು ಹೊಂದಿರುವ ಆತನನ್ನು ನನ್ನ ಗೆಳತಿ ತಿರಸ್ಕರಿಸಿದ್ದಾಳೆ. ಆಕೆಗೆ ಮದುವೆ ಮಾಡಿಸಲು ಎಲ್ಲರೂ ಸಿದ್ಧರಾಗಿದ್ದಾರೆ. ಆದರೆ ಆಕೆ ತನಗೆ ಮದುವೆಯೇ ಬೇಡ ಬಲವಂತದಿಂದ ಮದುವೆ ಮಾಡಿಸಿದರೆ ನನ್ನ ಸಾವಿಗೆ ನೀವೇ ಕಾರಣರಾಗುತ್ತೀರಿ ಎಂದು ಹೆದರಿಸುತ್ತಿದ್ದಾಳೆ. ದಯವಿಟ್ಟು ಈ ಗೆಳತಿಗೆ ಸೂಕ್ತ ಸಲಹೆ ನೀಡಿ ಅವಳ ಬದುಕು ಬೆಳಗಿಸಿ.

- ಹೆಸರು ಬೇಡ, ಊರು ಬೇಡ.

ಸಲಹೆ

ಹೆಣ್ಣಿಗೆ ಮದುವೆಯೇ ಅವಳ ಬದುಕಿನ ಗುರಿಯಲ್ಲ. ಆರ್ಥಿಕವಾಗಿ ಸ್ವಾವಲಂಬಿಯಾದ ಹೆಣ್ಣಿಗೆ ಬದುಕಿನಲ್ಲಿ ಭರವಸೆ, ಧೈರ್ಯಮೂಡಿ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಭವಿಷ್ಯ ರೂಪಿಸಿಕೊಳ್ಳಬಹುದು. ನಿಮ್ಮ ಗೆಳತಿಯ ನಿಲುವು ಶ್ಲಾಘನೀಯ. ಯಾವೊನೋ ನಂಬಿಸಿ ಮೋಸ ಮಾಡಿದನೆಂದು ಮನೆಯ ಮೂಲೆ ಸೇರಿ ಪರಿತಪಿಸುವ ಬದಲು ಧೈರ್ಯದ, ಕೆಚ್ಚೆದೆಯ ನಿಲುವನ್ನು ತಳೆದಿದ್ದಾಳೆ. ಅವಳಿಗೆ ನಿಮ್ಮ ಸಹಕಾರ ನೀಡಿ ಬದುಕಿನಲ್ಲಿ ಮುಂದೆ ಬರಲು ಅವಕಾಶ ಕೊಡಿ. ಮುಂದೆ ಎಂದಾದರೂ ಜೀವನ ಸಂಗಾತಿ ಬೇಕೆನಿಸಿದರೆ ಅವಳೇ ಹುಡುಕಿಕೊಳ್ಳಲಿ, ಅವಳ ಧೈರ್ಯ, ದಿಟ್ಟ ನಿಲುವು ಕಂಡು ಅನೇಕ ಹೆಣ್ಣು ಮಕ್ಕಳು ಅವಳಿಂದ ಪಾಠ ಕಲಿಯಬೇಕಾಗಿದೆ. ಇಂತಹ ಹೆಣ್ಣು ಮಕ್ಕಳು ನಮ್ಮ ದೇಶದಲ್ಲಿ ಹೆಚ್ಚಾಗಬೇಕು.

ಆರೋಗ್ಯ ವರ್ಧನೆಗಾಗಿ

ನಿತ್ಯ ಸ್ನಾನ

ನೈರ್ಮಲ್ಯಂ ಭಾವಶುದ್ಧಿಶ್ಚ ವಿನಾ ಸ್ನಾನಂ ನ ಯುಜ್ಯತೇ!
ತಸ್ಮಾತ್ಕಾರ್ಯವಿಶುದ್ಧಿಶ್ಚ ಸ್ನಾನಮಾದೌ ವಿಧೀಯತೇ॥

ಶರೀರ ಮತ್ತು ಮನಸ್ಸುಗಳ ನಿರ್ಮಲತೆ ಮತ್ತು ಭಾವಶುದ್ಧಿಗಳು ಸ್ನಾನವಿಲ್ಲದೇ ಸಂಭವಿಸುವುದಿಲ್ಲ. ಆದ್ದರಿಂದ ಶರೀರ ಸಂಬಂಧವಾದ ಹಾಗೂ ಮನಸ್ಸಂಬಂಧವಾದ ಕಾರ್ಯಗಳ ಶುದ್ಧಿಗಾಗಿ ಸ್ನಾನವನ್ನು ಹೇಳಲಾಗಿದೆ. ಶ್ರುತಿ, ಸ್ಮೃತ್ಯಾದುಕ್ತವಾದ ಮನುಷ್ಯರ ಎಲ್ಲ ಕ್ರಿಯೆಗಳಿಗೂ ಸ್ನಾನವೇ ಮೂಲ

ನಮ್ಮ ಪೂರ್ವಜರು ಆರೋಗ್ಯವರ್ಧಕವಾದ ಸ್ನಾನಕ್ಕೆ ಎಷ್ಟೊಂದು ಕಾಳಜಿ ಹಾಗೂ ಮಹತ್ವ ಇತ್ತಿದ್ದರು ಎಂಬುದು ಮೇಲಿನ ಸುಂದರ ಶ್ಲೋಕದಿಂದ ತಿಳಿಯಲ್ಪಡುತ್ತದೆ. ಸಂಕ್ರಾಂತಿ ಹಬ್ಬ ಭಾನುವಾರ, ಸಪ್ತಮಿ, ತಿಥಿ, ರಾಹುದರ್ಶನ (ಸೂರ್ಯಗ್ರಹಣ) ಆದಾಗ ಆರೋಗ್ಯ-ಪುತ್ರ-ಮಿತ್ರರನ್ನು ಬಯಸುವವರು, ಉಷ್ಣ (ಬಿಸಿ) ನೀರಿನಿಂದ ಸ್ನಾನಮಾಡಬಾರದು. ಅಂದರೆ ಈ ದಿನಗಳಲ್ಲಿ ನದಿ ಮುಂತಾದವುಗಳಲ್ಲಿ ತಣ್ಣೀರಿನ ಸ್ನಾನಮಾಡಿ ರೂಢಿಸಿಕೊಳ್ಳಲಿ ಎಂಬ ಸ್ವಾಸ್ಥ್ಯ ರಕ್ಷಣೆಯ ಸದುದ್ದೇಶ ವ್ಯಕ್ತಪಡಿಸಿದ್ದಾರೆ. ಮಾನವನ ಬಾಹ್ಯ, ಆಭ್ಯಂತರ ಶೌಚಗಳೊಂದಿಗೆ ಹಾಸು ಹೊಕ್ಕಾಗಿರುವ ಮಹತ್ವದ ಸ್ಥಾನ ಪಡೆದಿರುವ ಸ್ನಾನದಿಂದ ಎಲ್ಲರೂ ಶುಚಿಯಾಗಿರುವುದು ಅತ್ಯಂತ ಅವಶ್ಯವಾಗಿದೆ.

ಆಪೋಹಿಷ್ಠಾದಿ ಮಂತ್ರಗಳನ್ನು ಹೇಳಿಕೊಂಡು ಮಾಡುವುದು ಮಂತ್ರ ಸ್ನಾನ, ಮಣ್ಣಿನ ಲೇಪನದಿಂದಾದುದು ಭೌಮಸ್ನಾನ, ಭಸ್ಮದ ಸ್ನಾನವೇ ಆಗ್ನೇಯ ಸ್ನಾನ, ಹಸುವಿನ ಪಾದಧೂಳಿಯ ಸ್ನಾನ, ವಾಯುವ್ಯ ಸ್ನಾನ, ಮಳೆ ಬಿಸಿಲುಗಳೆರಡನ್ನೂ ಏಕಕಾಲದಲ್ಲಿ ಆಶ್ರಯಿಸಿದುದು ದಿವ್ಯಸ್ನಾನ, (ತಣ್ಣೀರಿನಲ್ಲಿ) ನೀರಿನಲ್ಲಿ ಮುಳುಗೇಳುವುದು ವಾರುಣ ಸ್ನಾನ ಮತ್ತು ಆತ್ಮಚಿಂತನೆ ಮಾಡುವುದು ಮಾನಸ ಸ್ನಾನ. ಹೀಗೆ ಸ್ನಾನವು ಏಳು ವಿಧವಾಗಿವೆ. ಎಲ್ಲ ಪ್ರಕಾರದ ಸ್ನಾನಗಳಲ್ಲಿ ವಾರುಣ ಸ್ನಾನವು ಶ್ರೇಷ್ಠವಾಗಿದೆ. ಪವಿತ್ರ ತೀರ್ಥ, ನದಿ,ಕೆರೆ, ಸರೋವರ, ಝರಿಗಳಲ್ಲಿ ಅಥವಾ ಬಾವಿಯ ನೀರು ಸೇರಿಕೊಂಡು, ಈಗಿನ ದಿನಗಳಲ್ಲಿಯು ನಳದ ನೀರಾದರೂ ಸರಿ, ನಿತ್ಯವೂ ಸ್ನಾನ ಮಾಡಬೇಕು. ಶೀತಾದಿ ಸಹಿಷ್ಣುತಾ ಶಕ್ತಿ, ಆರೋಗ್ಯ ರಕ್ಷಣೆ ಸ್ನಾನದಿಂದ ಆಗುತ್ತದೆ. ವಾರುಣ ಸ್ನಾನ ಮಾಡಲು ಅಶಕ್ತನಾದರೆ ಆಗ್ನೇಯಾದಿ ಇತರ ಸ್ನಾನಗಳನ್ನು ಕಾಲ-ಶಕ್ತಿಗನುಗುಣವಾಗಿ ಮಾಡಬಹುದು.

ಸ್ನಾನವನ್ನು ಕೇವಲ ಪದ್ಧತಿಗಾಗಿ ಹೇಳಲಾಗಲಿಲ್ಲ. ಬೆವರು ಕೊಳೆಯನ್ನು ತೆಗೆಯುವುದು ಮಾತ್ರ ಸ್ನಾನದ ಉಪಯೋಗವಲ್ಲ. ಬಹು ಉಪಯೋಗಿ ಸ್ನಾನದ ವರ್ಣನೆ ಕೆಳಗಿನಂತಿದೆ.

ಗುಣಾದಶ ಸ್ನಾನಶೀಲಂ ಭಜಂತೆ
ಸ್ಪರ್ಶಶ್ಚ ಗಂಧಶ್ಚ ವಿಶುದ್ಧತಾ ಚ
ಬಲರೂಪಂ ಸ್ವರವರ್ಣಪ್ರಶುದ್ಧಿಃ!
ಶ್ರೀಃ ಸೌಕುಮಾರ್ಯ ಪ್ರವರಾಶ್ಚ ನಾರ್ಯಃ॥

ನಿತ್ಯವೂ ಸ್ನಾನಮಾಡ ತಕ್ಕವನನ್ನು ಬಲ-ರೂಪ, ಸ್ವರಶುದ್ಧಿ, ವರ್ಣಶುದ್ಧಿ, ಸುಖಸ್ಪರ್ಶ, ಗಂಧ ಪರಿಶುದ್ಧತೆ, ತೇಜಸ್ಸು, ಸುಕುಮಾರತೆ ಮತ್ತು ಸುಂದರ ಯುವತಿಯರ ಪ್ರಾಪ್ತಿ ಎಂಬ ಈ ಹತ್ತು ಒಳ್ಳೆಯ ಗುಣಗಳು (ತಾನೇತಾನಾಗಿ) ಸೇರುತ್ತವೆ.

ಸ್ನಾನಂ ನಾಮ ಮನಃ ಪ್ರಸಾದಜನನಂ
ಶೌಚಸ್ಯಾಯತನಂ ಮಲಾಪವರಣಂ
ರೂಪದೋತಕರಂ ರಿಪುಪ್ರಮಥನಂ
ನಾರೀಣಂ ಚ ಮನೋವರಂ ಶ್ರಮವರಂ
ದುಃಸ್ವಪ್ನವಿಧ್ವಂಸನಂ
ಸಂವರ್ಧನಂ ತೇಜನಃ।
ಕಾಮಾಗ್ನಿಸಂದೀಪನಂ
ಸ್ನಾನೇ ದಶೈತೇ ಗುಣಾಃ॥

ಸ್ನಾನವು ಮನಸ್ಸಿಗೆ ಪ್ರಸನ್ನತೆಯನ್ನುಂಟು ಮಾಡುತ್ತದೆ. (ಬೆಳಿಗ್ಗೆದ್ದು ಮಾಡುವುದರಿಂದ ಕೆಟ್ಟ ಸ್ವಪ್ನವನ್ನು ಹೋಗಲಾಡಿಸುತ್ತದೆ. ಶುಚಿತ್ವಕ್ಕೆ ಮನೆ (ಆವಾಸಸ್ಥಾನ); ಕೊಳೆ(ಮಲ)ವನ್ನು ಹೋಗಲಾಡಿಸುತ್ತದೆ. ತೇಜಸ್ಸನ್ನು ಹೆಚ್ಚಿಸುತ್ತದೆ. ಸ್ತ್ರೀಯರಿಗೆ ಪುರುಷರ, ಪುರುಷರಿಗೆ ಸ್ತ್ರೀಯರ ಮನಸ್ಸನ್ನು ಅಪಹರಿಸುವಂತೆ ಮಾಡುತ್ತದೆ ಮತ್ತು ಶ್ರಮವನ್ನು ಹೋಗಲಾಡಿಸುತ್ತದೆ. ಹೀಗೆ ಸ್ನಾನದಲ್ಲಿ ಒಳ್ಳೆಯ ಹತ್ತು ಗುಣಗಳಿರುತ್ತವೆ. ಆಯುರ್ವೇದಗ್ರಂಥಗಳಲ್ಲಿ ಸ್ನಾನದ ಉಪಯೋಗಗಳನ್ನು ಕೆಳಗಿನಂತೆ ತಿಳಿಸಲಾಗಿದೆ.

ದೀಪನಂ ವೃಷ್ಯಮಾಯುಷ್ಯಂ
ಕಣ್ಡೂಮಲಶ್ರಮಸ್ವೇಧ
ಸ್ನಾನಮೂರ್ಚಾ ಬಲಪ್ರದಮ್।
ತನ್ಮಾತೃಡ್ದಾಹಪಾಪ್ಮಜಿತ್॥

ಸ್ನಾನದಿಂದ ಜಠರಾಗ್ನಿ ದೀಪ್ತಿಯೂ, ವೃಷತ್ವವೂ (ಸ್ನಾನದಿಂದ ವರ್ಷ, ವರ್ಷದಿಂದ ವೃಷತ್ವ ಶುಕ್ರವೃದ್ಧಿಯಾಗಿ ಪುತ್ರೋತ್ಪಾದಕ ಶಕ್ತಿ), ಆಯುವೃದ್ಧಿಯೂ, ಉತ್ಸಾಹವೂ, ಬಲವೂ, ಉಂಟಾಗುತ್ತದೆ. ಶರೀರದ ತುರಿಕೆಯೂ (ನವೆ, ಕಂಡೂ), ಧೂಳು ಇತ್ಯಾದಿ ಕೊಳೆಯೂ, ಆಯಾಸವೂ, ಬೆವರು, ತೂಕಡಿಕೆಯೂ, ಉರಿಯೂ, ಪಾಪವೂ ಅಲಕ್ಷ್ಮಿಯೂ, ನಿವಾರಣೆಯಾಗುತ್ತದೆ. ಸ್ನಾನದೊಂದಿಗೆ ತೊಳೆದ ಶುಭ್ರಬಟ್ಟೆಗಳ ಬಳಕೆಯೂ ಅತ್ಯಗತ್ಯ.

ಶರೀರದ ಮೇಲೆ ಬಿಸಿನೀರಿನಿಂದ ಸ್ನಾನ ಮಾಡಿದರೆ ಬಲಕರವು. ತಲೆಗೆ ಬಿಸಿನೀರಿನಿಂದ ಸ್ನಾನಮಾಡಿದರೆ ಕೂದಲಿನ ಮತ್ತು ಕಣ್ಣುಗಳ ಶಕ್ತಿಯು ಕಡಿಮೆಯಾಗುವುದರಿಂದ ತಲೆಯಿಂದ ಬಿಸಿನೀರಿನ ಸ್ನಾನಮಾಡಿದರೆ ಹಿತಕಾರಿಯಲ್ಲ. ಆರ್ದ್ರಿತವಾದ ನೇತ್ರ, ಮತ್ತು ಕಿವಿಯ ರೋಗಗಳಿಂದಲೂ, ಅತಿಸಾರ, ಆಧ್ಮಾನ ಪೀನಸ (ನೆಗಡಿ), ಅಜೀರ್ಣರೋಗಗಳಿಂದಲೂ ಪೀಡಿತರಾದವರೂ, ಭೋಜನ ಮಾಡಿದ ನಂತರದಲ್ಲೂ, ಜ್ವರಾದಿರೋಗಪೀಡಿತರೂ ಸ್ನಾನ ಮಾಡುವುದು ಹಿತವಲ್ಲ. ಸ್ವಲ್ಪ ಅಶಕ್ತರಾದವರು ತಲೆಯಿಂದ ಸ್ನಾನಮಾಡದೇ ಉಳಿದ ದೇಹಕ್ಕಷ್ಟೇ ಮಾಡಬಹುದು. ರೋಗದಿಂದ ಅಶಕ್ತರಾದವರು ಒದ್ದೆಬಟ್ಟೆಯಿಂದ ಮೈ ಒರೆಸಿಕೊಳ್ಳಬೇಕಾಗುತ್ತದೆ. (ಸ್ಪಾಂಜ್ ಬಾಥ್). ಇದಕ್ಕೂ ನಿಷಿದ್ಧರಾದವರು ಮಾಂತ್ರಸ್ನಾನ ಭಸ್ಮ ಸ್ನಾನ, ಮಾನಸ ಸ್ನಾನಗಳಿಂದಲೇ ಮಾನಸಿಕ ನೆಮ್ಮದಿ ಪಡೆಯುವುದು ಸಾಂದರ್ಭಿಕವಾಗಿ ಅನಿವಾರ್ಯವಾಗುತ್ತದೆ.

ಬಿಸಿನೀರಿನ ಸ್ನಾನ ಕೂಡಲೇ ಸ್ಫೂರ್ತಿದಾಯಕವಾಗಿದೆ. ಆದರೆ ತಣ್ಣೀರಿನ ಸ್ನಾನವು ಶೀತಾದಿ ಸಹಿಷ್ಣುತಾ ಶಕ್ತಿ. ಆರೋಗ್ಯ ರಕ್ಷಣೆಗೆ ಪೂರಕವಾಗುತ್ತದೆ. ಸ್ನಾನಮಾಡದವನು ದುರ್ಗಂಧದಿಂದ ಕೂಡಿರುತ್ತಾನೆ. ಅಸ್ವಚ್ಛತೆ ಅವನಲ್ಲಿ ಕಂಡುಬರುತ್ತದೆ. ಸ್ನಾನವಿಲ್ಲ- ಬಟ್ಟೆಯನ್ನು ತೊಳೆದು ಶುಭ್ರಗೊಳಿಸಲೂ ಇಲ್ಲ ಅಂತಹ ಗಲೀಜು ಮನುಷ್ಯರು ಸುಖಸ್ಪರ್ಶಕ್ಕೆ ಅಯೋಗ್ಯರಾಗುತ್ತಾರೆ. ಅಸ್ಪೃಶ್ಯರಾಗುವ ಸಾಧ್ಯತೆಯಿದೆ. ಆದ್ದರಿಂದ ಸ್ಪರ್ಶಯೋಗ್ಯ ಶುಭ್ರತೆಗಾಗಿ, ಆರೋಗ್ಯಕ್ಕಾಗಿ, ಚರ್ಮರೋಗಗಳು ಬರದಂತೆ ತಡೆಯಲು, ಮೇಲ್ಕಂಡ ಹತ್ತು ಗುಣಗಳನ್ನು ಸಂಪಾದಿಸಲು, ಶರೀರದ ಬಾಹ್ಯ ಸ್ವಚ್ಛತೆಗಾಗಿ ಧಾರ್ಮಿಕ ಮೆರಗನ್ನು ಹಾಸುಹೊಕ್ಕಾಗಿ ಪಡೆದಿರುವ, ಬಹುಮಹತ್ವದ ಉತ್ತಮಾಂಶಗಳನ್ನು ಹೊಂದಿದ, ಸ್ನಾನವನ್ನು ನಿತ್ಯವೂ ಮಾಡಬೇಕು. ಪರರಿಗೆ ಜಿಗುಪ್ಸೆಯನ್ನು ಉಂಟುಮಾಡುವಂತೆ, ಅಸ್ಪೃಶ್ಯತಾ ಮಟ್ಟದ ಗಲೀಜನ್ನು ತೊರೆದು, ಸ್ನಾನದಿಂದ ಪ್ರತಿಯೊಬ್ಬರೂ ತೇಜಸ್ಸನ್ನು ಹೆಚ್ಚಿಸಿಕೊಳ್ಳಬೇಕಾದದ್ದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ನಿತ್ಯ ಸ್ನಾನವು ಆರೋಗ್ಯವರ್ಧಕವಾಗಿದೆ.

○ ಚಂದ್ರಕಾಂತ ಎಸ್. ಭಟ್

ಅನಾರೋಗ್ಯಕ್ಕೆ ಮೂಲ ಆಲಸ್ಯ

ಅನೇಕ ಮಂದಿ ತಮ್ಮ ದೈನಂದಿನ ಕಾರ್ಯಕ್ರಮಗಳಲ್ಲಿ ಅನಾವಶ್ಯಕವಾಗಿ ಒತ್ತಡಗಳಿಗೆ ಬಲಿಯಾಗುತ್ತಾರೆ. ಇವುಗಳಿಗೆಲ್ಲಾ ಮೂಲ ಕಾರಣ ಆಲಸ್ಯದ ಹಲವಾರು ರೂಪಗಳು.

○ ಮಿ. ವ್ಯಾಸ್, ಉತ್ತನೂರು.

ಆಲಸ್ಯವೆಂಬುದು ರಾಸಾಯನಿಕ ಕ್ರಿಯೆಯಷ್ಟೇ ಅಲ್ಲ, ಜೈವಿಕ ಕ್ರಿಯೆಯೂ ಹೌದು. ಇದನ್ನು ರಕ್ಷಣ ಕ್ರಿಯೆಯೆಂದೂ ಕರೆಯಬಹುದು. ಏಕೆಂದರೆ ದೇಹಕ್ಕೇ ವಿಶ್ರಾಂತಿಯ ಅವಶ್ಯಕತೆ ಇಧೆಯೆಂಬುದನ್ನು ಸೂಚಿಸುವುದೇ ಆಲಸ್ಯ. ಈ ಆಲಸ್ಯಕ್ಕೆ ಮೂಲ ಶರೀರ ಶ್ರಮ.

ಶಾರೀರಿಕವಾಗಿ ಕಷ್ಟವಾಗೊ ಕೆಲಸವೇನಾದರೂ ಮಾಡಿದ್ದೇ ಆದರೆ ಆಲಸ್ಯ ಎದ್ದು ಕಾಣುತ್ತದೆ. ಆಲಸ್ಯ ಮಾನಸಿಕ ಕಾರಣಗಳಿಂದಲೂ ಬರುವುದಲ್ಲದೆ, ಭಾವೋದ್ರೇಕಗಳ ವೈಖರಿಯೂ ಆಲಸ್ಯವಾಗಿರುತ್ತದೆ.


ಆಲಸ್ಯದಲ್ಲಿ ಎರಡು ಅವತಾರಗಳನ್ನು ಕಾಣಬಹುದು. ಮೊದಲನೆಯದು 'ಶಾಶ್ವತ ಆಲಸ್ಯ'ವಾದರೆ ಮತ್ತೊಂದು ತಾತ್ಕಾಲಿಕ ಆಲಸ್ಯ.

ಶಾಶ್ವತ ಆಲಸ್ಯಕ್ಕೆ ಎಷ್ಟೋ ಕಾರಣಗಳಿರಬಹುದು. ಆರೋಗ್ಯ ಪರಿಸ್ಥಿತಿ ಸರಿಯಿಲ್ಲದಿರುವಾಗ, ಮನೆ ಸಂಸಾರದಲ್ಲಿ ಏರು-ಪೇರುಗಳಾದಾಗ ನಮಗೆ ಅತಿ ಶೀಘ್ರವಾಗಿ ಆಲಸ್ಯವಾಗುತ್ತದೆ. ಯಾಕೆ ಹೀಗಾಯಿತೆಂದು ನಮ್ಮಷ್ಟಕ್ಕೆ ನಾವೇ ಚರ್ಚಿಸಿ, ಸೂಕ್ತ ಮಾರ್ಗ ರೂಪಿಸಿಕೊಂಡು ಈ ಆಲಸ್ಯವನ್ನು ದೂರ ಮಾಡಬಹುದು.

ತಾತ್ಕಾಲಿಕ ಆಲಸ್ಯಕ್ಕೇ ರೂಪಗಳು ಹಲವಾರಾದರೂ ಅವುಗಳ ಶಮನಕ್ಕೆ ಸ್ವಲ್ಪ ವಿಶ್ರಾಂತಿಯೇ ಸಾಕು. ಕೆಲಸದ ಒತ್ತಡ ಅಧಿಕವಾದಾಗ, ವಿಶ್ರಾಂತಿಯಿಲ್ಲದೆ ಕೆಲಸದಲ್ಲಿ ಮಗ್ನರಾದಾಗ ಈ ಆಲಸ್ಯಕ್ಕೆ ದಾರಿಯಾಗುತ್ತದೆ. ಯಾವುದೇ ಸಮಸ್ಯೆ ಉದ್ಭವಿಸಿದಾಗ, ಅದನ್ನು ಪರಿಹರಿಸಿಕೊಳ್ಳುವ ಶಕ್ತಿ ಹಾಗೂ ತಾಳ್ಮೆ ಇದ್ದರೂ ಮಾನಸಿಕವಾಗಿ ಆಲಸ್ಯಕ್ಕೆ ಒಳಗಾಗುತ್ತಾರೆ. ಆಲೋಚನೆ ಹೆಚ್ಚಾದಾಗಲೂ ನಾವು ಆಲಸ್ಯಕ್ಕೆ ಒಳಗಾಗುತ್ತೇವೆ.

ಇಷ್ಟವಿಲ್ಲದ ಹೆಂಡತಿಯೊಡನೆ ಯಾವುದೇ ಕೆಲಸ ಮಾಡಿದರೂ ಆಲಸ್ಯ ಅತಿ ಶೀಘ್ರವಾಗಿ ಪರಿಣಾಮ ಬೀರುತ್ತದೆ. ಅದೇ ಒಬ್ಬರಿಗೊಬ್ಬರು ಇಷ್ಟವಿರುವುದಾದರೆ ಶಕ್ತಿ, ಉತ್ಸಾಹ ಅಧಿಕವಾಗಿ, ಗಂಟೆಗಟ್ಟಲೆ ಶ್ರಮಿಸಿದಾಗಲೂ ಆಲಸ್ಯಕ್ಕೆ ದಾರಿಯಿಲ್ಲದಾಗುತ್ತದೆ. ಕೆಲವರು ಬಸ್ಸು ಹತ್ತುವ ಮುಂಚೆಯೇ ಸೀಟು ಸಿಗುತ್ತೋ ಇಲ್ಲವೋ ಎಂಬ ಅವಸರದಲ್ಲಿ, ಒಂದೇ ಉಸಿರಿನಲ್ಲಿ ಓಡೋಡಿ ಬಸ್ ಹತ್ತಿ ಮಾನಸಿಕವಾಗಿ ಆಲಸ್ಯಕ್ಕೆ ಬಲಿಯಾಗುತ್ತಾರೆ, ಬಸ್ಸಿಳಿಯುವಷ್ಟರಲ್ಲಿ ಹಲವು ವರ್ಷಗಳ ರೋಗಿಯಂತೆ ಮಾರ್ಪಡುತ್ತಾರೆ.

ಹೀಗೆಯೇ ಅಧಿಕ ಒತ್ತಡ, ಶಾರೀರಿಕ ಶ್ರಮ, ಆಲೋಚನೆ, ವ್ಯಾಕುಲತೆಗಳಿಂದ ಮನಸ್ಸು ಚಿಂತೆಗೊಳಗಾಗಿ ಮೆದುಳು ಅಧಿಕವಾಗಿ ಶ್ರಮಿಸಬೇಕಾಗುತ್ತದೆ. ಆದ್ದರಿಂದ ನಾವು ಶಾರೀರಕವಾಗಿಯೂ, ಮಾನಸಿಕವಾಗಿಯೂ ಆಲಸ್ಯಕ್ಕೆ ಒಳಪಡುತ್ತೇವೆ.



ಡಾ. ಜೋಸೆಫ್ ಬಾರ್ಮಕ್‌ರವರು ಆಲಸ್ಯದ ವಿಷಯವಾಗಿ ಮಾಡಿದ ಅನೇಕ ಪ್ರಯೋಗಗಳ ಆಧಾರದ ಮೇಲೆ, ಈ ನಿರ್ಧಾರಕ್ಕೆ ಬರಲಾಯಿತು.

ನಮ್ಮಲ್ಲಿ ಹಟ ಜಾಸ್ತಿಯಾಗಿ, ಕಾರ್ಯವನ್ನು ಅತಿ ಶೀಘ್ರವಾಗಿ ಮುಗಿಸಬೇಕೆಂಬ ಆತುರತೆ ಹೆಚ್ಚಾದಾಗ ರಕ್ತಪರಿಚಲನೆ ಮಾಮೂಲಿಗಿಂತಲೂ ಕೆಳಮಟ್ಟಕ್ಕಿಳಿಯುವುದರಿಂದ ಆಕ್ಸಿಜನ್ ವಿನಿಯೋಗದ ಅಂಶ ಕಡಿಮೆಯಾಗಿ, ನಮ್ಮ ರಕ್ತ ನಾಳಗಳಿಗೆ ಬೇಕಾದಷ್ಟು ಆಕ್ಸೀಜನ್ ಪಡೆಯಲಾಗದು. ಆದ್ದರಿಂದ ಅದಷ್ಟು ಬೇಗ ಆಲಸ್ಯಕ್ಕೆ ಒಳಗಾಗುತ್ತೇವೆ. ಈ ಸಂದರ್ಭದಲ್ಲಿ ದೇಹದಲ್ಲಿರುವ ಗ್ಲೆಕೋಜಿನ್ ಲಾಕ್ಟಿಕ್ ಆಮ್ಲವಾಗಿ ಮಾರ್ಪಾಡಾಗಿ, ರಕ್ತನಾಳಗಳು ಮಾಡುವ ಕ್ರಿಯೆಯನ್ನು ಕುಂಟಿತಗೊಳಿಸುತ್ತದೆ. ದೇಹಕ್ಕೆ ಒದಗುವ ಈ ಸ್ಥಿತಿಯನ್ನು 'ಆಲಸ್ಯ' ಎನ್ನುವರು.

ಈ ಆಮ್ಲವು ನಾಳಗಳ ಮೇಲೆ ಬೀರುವ ಪರಿಣಾಮವನ್ನು ತಪ್ಪಿಸಬೇಕಾದರೆ, ರಕ್ತಖಂಡಗಳು ಯಥಾಸ್ಥಿತಿಗೆ ಬರಬೇಕಾದರೆ ಲಾಕ್ಟಿಕ್ ಆಮ್ಲವನ್ನು ಬಹಿಷ್ಕರಿಸಬೇಕಾಗುತ್ತದೆ. ಉಸಿರಾಟದಿಂದ ಬೇಕಾದಷ್ಟು ಆಕ್ಸಿಜನ್ ಶರೀರಕ್ಕೊದಗಿದಾಗ ಲಾಕ್ಟಿಕ್ ಆಮ್ಲವು ಗ್ಲೈಕೋಜಿನ್ ಆಗಿ ಮಾರ್ಪಡುತ್ತದೆ. ಆದ್ದರಿಂದ ದೇಹವು ಆಲಸ್ಯ ಕ್ಕೊಳಪಟ್ಟಾಗ, ಗ್ಲೈಕೋಜಿನ್ನನ್ನು ಗ್ಲುಕೋಸ್ ಆಗಿ ಮಾರ್ಪಡಿಸಿದರೆ, ರಕ್ತಖಂಡಗಳು ಮಾಮೂಲಿನಂತೆ ದೃಢಕಾಯವಾಗುವವು.

ಮಾನಸಿಕ ಆಲಸ್ಯವು ತಳವೂರುವುದರಿಂದ ವ್ಯಾಧಿಗಳಿಗೆ ಮೂಲಮಾರ್ಗ ಸುಗಮವಾಗುವುದು ಮಾನಸಿಕ ಆಲಸ್ಯದಿಂದ ಅಸ್ಥಿರತೆ ಉಂಟಾಗಿ, ವ್ಯಾಧಿ ನಿರೋಧಕ ಶಕ್ತಿ ಕಡಿಮೆಯಾಗುತ್ತಾ ಹೋಗುತ್ತದೆ.

ಕೆಲವರಲ್ಲಿ ಈ ಆಲಸ್ಯವೆಂಬ ಜಿಡ್ಡು ತಾಂಡವ ವಾಡುತ್ತಿರುತ್ತದೆ. ಅದರಿಂದ ಅಜೀರ್ಣತೆ, ಹೃದಯಾಪಘಾತ, ಅಧಿಕ ರಕ್ತದ ಒತ್ತಡ ಹೆಚ್ಚಾಗಿ, ಪ್ರಾಣಾಪಾಯದ ಹಂತಕ್ಕೆ ತಲುಪುತ್ತಾರೆ. ಈ ಆಲಸ್ಯದಿಂದ ನಮ್ಮಲ್ಲಿ ಏಕಾಗ್ರತೆ ಕ್ಷೀಣಿಸುತ್ತದೆಯಲ್ಲದೆ, ಜ್ಞಾಪಕ ಶಕ್ತಿ ಕುಂಠಿತಗೊಳ್ಳುತ್ತದೆ. ಹೀಗೆ ದೇಹವು ಹತೋಟಿ ತಪ್ಪಿ, ವ್ಯಾಧಿಗೆ ತಾಣವಾಗಿ ಪರಿಣಮಿಸುತ್ತದೆ.

ಆಲಸ್ಯ ದೂರವಾಗುವುದು ಅದರ ರೂಪು-ರೇಷೆಗಳ ಮೇಲೆ ಆಧಾರಪಟ್ಟಿರುತ್ತದೆ. ಶರೀರದ ಜೀವ ಕಣಗಳಿಗೆ ವಿಶ್ರಾಂತಿ ನೀಡುವುದರಿಂದ ಆಲಸ್ಯವನ್ನು ಕಳೆದುಕೊಳ್ಳಬಹುದು. ಇದಕ್ಕೆ ಸರಿಯಾದ ಔಷಧಿ ನಿದ್ರೆ. ಮಾನಸಿಕ ಆಲಸ್ಯಕ್ಕೆ ಮದ್ದು ತೃಪ್ತಿ ಸಿಗುವಷ್ಟು ವಿಶ್ರಾಂತಿ.

ಮಾನಸಿಕ ಒತ್ತಡ ಕಡಿಮೆಯಾದಷ್ಟೂ ಮಾನಸಿಕ ಆಲಸ್ಯವೂ ಕಡಿಮೆಯಾಗುತ್ತದೆ. ಪ್ರತಿದಿನ ಸ್ವಲ್ಪ ಸಮಯವನ್ನು ವ್ಯಾಯಾಮಕ್ಕಾಗಿ ಮೀಸಲಿಡುವುದರಿಂದ ದೇಹವು ಸಮತೋಲನ ಸ್ಥಿತಿಯಲ್ಲಿರುವುದಲ್ಲದೆ, ಮಾನಸಿಕ ಸ್ಥಿತಿಯೂ ಹತೋಟಿಯಲ್ಲಿರುವುದರೊಂದಿಗೆ ವಿಶ್ರಾಂತಿಯೂ ಲಭಿಸುತ್ತದೆ. ಯೋಗಾಸನಗಳು, ಯೋಗ ಪ್ರಕ್ರಿಯೆಗಳು ಏಕಾಗ್ರತೆಯನ್ನು ಮೂಡಿಸುವುದರೊಂದಿಗೆ ಮನಸ್ಸನ್ನು ಸಮತೋಲನದಲ್ಲಿಟ್ಟು, ವಿಶ್ರಾಂತಿ ನೀಡಲು ಸಹಕರಿಸುತ್ತವೆ.

ಆಲಸ್ಯದಿಂದ ದೂರವಿರಲು ಸೇವಿಸುವ ಆಹಾರದಲ್ಲಿ ಗಮನವಿಡಬೇಕು. ಪ್ರೋಟೀನ್ ಅಂಶ ಜಾಸ್ತಿಯಿರುವ ಪದಾರ್ಥಗಳನ್ನು ಸೇವಿಸುವುದಲ್ಲದೆ, ಕಾಲಕ್ಕನುಗುಣವಾಗಿ ಸಿಗುವ ಹಣ್ಣು-ಹಂಪಲುಗಳನ್ನು ಸೇವಿಸಬೇಕು. ಎಣ್ಣೆ-ಸಕ್ಕರೆ-ಪದಾರ್ಥಗಳನ್ನು ಅವಶ್ಯಕತೆಗನುಗುಣವಾಗಿ ಉಪಯೋಗಿಸಿದಾಗಲೇ ಆರೋಗ್ಯ ನಮ್ಮ ಅಧೀನದಲ್ಲಿರುತ್ತದೆ.

ಆಲಸ್ಯಕ್ಕೆ ಒಳಗಾಗಿ ತತ್ತರಿಸಿದ ನಂತರ ವಿಶ್ರಾಂತಿ ತೆಗೆದುಕೊಳ್ಳುವುದಕ್ಕಿಂತ ಅದರ ಬಲೆಗೆ ಬೀಳುವ ಮುಂಚೆಯೇ ಎಚ್ಚರ ವಹಿಸಿ ವಿಶ್ರಾಂತಿಯ ಕಡೆ ಗಮನಹರಿಸಿದರೆ ಒಳ್ಳೆಯದೆಂದು ನಿಮಗೆ ಹೇಳಬೇಕಿಲ್ಲವಲ್ಲ. ●

ಕೋಲ್ಮಿಂಚಿನ ದಾರಿಯಲ್ಲಿ....

(ತ್ರಿಪದಿಗಳು)

ಲೇ : **ಡಾ. ದ್ವಾರಕಾನಾಥ್ ಹೆಚ್. ಕಬಾಡಿ**
ಪ್ರ : ಶ್ರೀಚರಣ ಪ್ರಕಾಶನ, ನಂ. ೮೦, ೫ನೇ ಕ್ರಾಸ್, ೧ನೇ ಮೈನ್, ೮ನೇ ಬ್ಲಾಕ್, ರಾಜಮಹಲ್ ವಿಲಾಸ್ ಎರಡನೇ ಹಂತ, ಬೆಂಗಳೂರು - ೫೬೦ ೦೯೪. ಮುದ್ರಣ: ೧೯೯೬ ಪುಟ: ೧೦೮ ಬೆಲೆ: ರೂ. ೬೦/-

ಇದೀಗ ೫೪ ತ್ರಿಪದಿಗಳಿರುವ ''ಕೋಲ್ಮಿಂಚಿನ ದಾರಿಯಲ್ಲಿ'' ಕವನ ಸಂಕಲನವನ್ನು ಕನ್ನಡ ಬಾಂಧವರ ಮಡಿಲಿಗೆ ಅರ್ಪಿಸುತ್ತಲಿದ್ದೇನೆ. ಬಾಳಿನಲ್ಲಿ ಕಂಡು ಅನುಭವಿಸಿದ ನೋವು ನಲಿವುಗಳನ್ನು ಮತ್ತು ಸಮಾಜದ ವಿವಿಧ ಮುಖಗಳನ್ನು ಕುರಿತು ಪ್ರತಿಕ್ರಿಯೆಯ ರೂಪದಲ್ಲಿ ನನಗೆ ಸರಿ ತೋರಿದ ಶೈಲಿಯಲ್ಲಿ ಆ ಭಾವ ಭಾವನೆಗಳನ್ನು ದಾಖಲಿಸುತ್ತ ಬಂದಾಗ ಅವು ಈ ವಿಶಿಷ್ಟ ರೀತಿಯ ತ್ರಿಪದಿಗಳ ರೂಪತಳೆದವು.

ಹನಿಹನಿ

(ಹನಿಗವನ ಸಂಕಲನ)

ಸಂ: **ಕಮಲಾ ಹೆಮ್ಮಿಗೆ**
ಪ್ರ : ಸಂಕ್ರಮಣ ಪ್ರಕಾಶನ ೧೮೯೪/೧, ೩೧ನೇ ಕ್ರಾಸ್, ಬನಶಂಕರಿ ಎರಡನೇ ಹಂತ, ಬೆಂಗಳೂರು-೫೬೦ ೦೭೦ ಮುದ್ರಣ : ೧೯೯೭ ಪುಟ: ೧೫೨ ಬೆಲೆ: ರೂ. ೬೦/-

ಕನ್ನಡ ಕಾವ್ಯದ ಕಣದಲ್ಲಿ ಹನಿಗವನಗಳ ಕಾಳುಗಳು ರಾಶಿ ರಾಶಿಯಾಗಿ ಕೂಡಿ ಬೀಳುತ್ತಿರುವ ಇಂದಿನ ಸನ್ನಿವೇಶದಲ್ಲಿ ಹೊರತರಲಾದ ಈ ಹನಿ ಹನಿ ಸಂಕಲನ, ಧ್ವನಿಪೂರ್ಣವಾದ ಕಾವ್ಯ ಪ್ರಕಾರವೊಂದರ ಅನೇಕ ಸಾಧ್ಯತೆಗಳನ್ನು ತೆರೆದು ತೋರಿಸುವಂತಿದೆ.

ಬದುಕಿನ ಅನೇಕ ಮಗ್ಗಲುಗಳನ್ನು ಪ್ರೀತಿ ಹಾಗೂ ವ್ಯಂಗ್ಯದ ನೆಲೆಗಳಲ್ಲಿ ಕನ್ನಡದ ನಲವತ್ತು ಕವಿಗಳು ನಲವತ್ತು ದಿಕ್ಕುಗಳಿಂದ ಶೋಧಿಸುವ ಪರಿ ಇಲ್ಲಿದೆ. ಮುತ್ತಿನ ಹಾರದಂಥ, ಸ್ಫಟಿಕದ ಶಲಾಕೆಯಂಥ ಶಬ್ದಗಳು ಈ ಹನಿಗಳಲ್ಲಿ ಅನುಭವದ ಆಳಗಳನ್ನು ಸ್ಫೋಟಿಸುತ್ತವೆ.

ಕಾರಭಾರಿ ಚನ್ನಬಸವಯ್ಯ ಫ. ಹೇಮಗಿರಿಮಠ

(ಅವರ ದಿನಚರಿ)

ಸಂ: **ಪ್ರೊ. ಸಿ.ಪಿ. ಹೇಮಗಿರಿಮಠ**
ಪ್ರ : ಗುರುದೇವ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ. ಮುದ್ರಣ:೧೯೯೭ ಪುಟ:೪೯೨ ಬೆಲೆ:ರೂ.೧೦೦.

ಚೆನ್ನಬಸವಯ್ಯನವರ ದಕ್ಷತೆಯ ಕುರುಹೆಂದರೆ ಶಿಸ್ತು, ಅಚ್ಚುಕಟ್ಟುತನ, ಪೂರ್ವಭಾವಿ ಸಮಾಲೋಚನೆ ಮಾಡುವುದು. ತಾವು ದಿನನಿತ್ಯ ಮಾಡಬೇಕಾದ ಹಾಗೂ ಹಿಂದಿನ ದಿನ ಮಾಡಿದ ಕಾರ್ಯ, ಕಲಾಪಗಳನ್ನು ವಿವರಿಸುವ ದಿನಚರಿಗಳನ್ನು ಬರೆದಿಡುತ್ತಿದ್ದರು. ಅದಕ್ಕನುಗುಣವಾಗಿ ಕಾರ್ಯ ಮಾಡುತ್ತಿದ್ದರು. ವಿಸ್ತಾರವಾದ ಕ್ಷೇತ್ರದಲ್ಲಿ ವಿವಿಧ ಮುಖ್ಯವಾದ ಕಾರ್ಯಗಳನ್ನು ನೆರವೇರಿಸಬೇಕಾದಲ್ಲಿ ಇಂತಹ ವ್ಯವಸ್ಥೆ ಅನಿವಾರ್ಯ; ಅವಶ್ಯ, ಎನಿಸುತ್ತದೆ.

ಆಡಳಿತ ಶಾಸ್ತ್ರವನ್ನು ಕಲಿಸುವಾಗ ಇದನ್ನು ಮೊಟ್ಟಮೊದಲು ಬೋಧಿಸುತ್ತಾರೆ. ಇಂತಹ ಯಾವ ಕಾಲೇಜಿಗೂ ಹೋಗದೆ ಚನ್ನಬಸವಯ್ಯನವರು ತಮ್ಮ ದಿನಚರಿಯನ್ನು ಬರೆದಿಡುತ್ತಿದ್ದರು. ಇದು ಒಂದು ವೈಶಿಷ್ಟ್ಯ. ನಮ್ಮಲ್ಲಿ ಪೂರ್ವಜರ ಗ್ರಂಥಗಳನ್ನು ಜತನವಾಗಿ ಕಾಯ್ದಿರಿಸಿಕೊಂಡು ಬರುವುದೂ ವಿರಳ. ಆದರೆ ಚನ್ನಬಸವಯ್ಯನವರ ಚಿರಂಜೀವರಾದ ಪ.ಚ. ಹೇಮಗಿರಿಮಠ ಅವರು ಇವುಗಳನ್ನು ಜತನವಾಗಿ ಕಾಯ್ದಿಟ್ಟು ನಮ್ಮ ಪ್ರೊ.ಹೇಮಗಿರಿಮಠ ಅವರಿಗೆ ಬಳುವಳಿಯಾಗಿ ಕೊಟ್ಟು ಹೋಗಿರುವರು



ಮುನ್ನುಡಿಯಿಂದ


ನೆನಪು ನಂದಾದೀಪ


(ದಿ. ಶ್ರೀ ಜೆ.ಬಿ.ವಾಲೀಕಾರ್‌ರ ಕಿರುಪರಿಚಯ)


ಲೇ: **ರಾಮಚಂದ್ರ ಜೆ.ವಾಲೀಕರ್**
ಪ್ರ : ಭಾಗ್ಯಶ್ರೀ ಪ್ರಕಾಶನ, ಬೆಂಗಳೂರು. ಮುದ್ರಣ: ೧೯೯೪ ಪುಟ: ೭೩ ಬೆಲೆ: ಖಾಸಗಿ ಪ್ರಸಾರಕ್ಕಾಗಿ.

ನಮ್ಮ ತಂದೆ ನಮ್ಮ ವಂಶದಲ್ಲಿಯೇ ಮೊದಲ ವಿದ್ಯಾವಂತ ವ್ಯಕ್ತಿ ಹಾಗೂ ಸರ್ಕಾರಿ ಸೇವೆಗೆ ಸೇರಿದ ಮೊದಲ ವ್ಯಕ್ತಿ ಕೂಡ. ಅವರ ದೂರದರ್ಶಿತ್ವ, ಉನ್ನತ ಧ್ಯೇಯ, ಉಚ್ಚ ವಿಚಾರಗಳ ಫಲವಾಗಿ ನಾನು ಇಂದು ಸರ್ಕಾರದ ಉನ್ನತವಾದ ಹುದ್ದೆಗಳಲ್ಲೊಂದನ್ನು ಅಲಂಕರಿಸಲು ಸಾಧ್ಯವಾಯಿತು. ನಮ್ಮ ತಂದೆಯವರ ಮುಂದಾಲೋಚನೆ, ತ್ಯಾಗ, ಹೋರಾಟ, ಧೈರ್ಯ, ಸಾಹಸ ಪ್ರವೃತ್ತಿ, ಛಲ ಇವುಗಳ ಪರಿಚಯ ನಮ್ಮ ವಂಶದ









ಇಂದಿನ ಹಾಗೂ ಮುಂದಿನ ಪೀಳಿಗೆಗೆ ಆಗಲಿ ಎಂಬ ಆಶಯದಿಂದ ಈ ಪರಿಚಯಾತ್ಮಕವಾದ ಹೊತ್ತಿಗೆಯನ್ನು ಹೊರತರುತ್ತಿರುವೆ.

ನವಿಲೇ ನವಿಲೇ....

(ಮಕ್ಕಳ ಕವಿತೆಗಳು)

ಲೇ: **ಭು.ಮ. ಪ್ರಭುದೇವ**

ಪ್ರ: ಅಭಿರುಚಿ ಪುಸ್ತಕ ಪರಿವಾರ, ಮಸ್ಕಿ - ೫೮೪ ೧೨೪ ರಾಯಚೂರು ಜಿಲ್ಲೆ. ಮುದ್ರಣ: ೧೯೯೭ ಪುಟ:೪೦ ಬೆಲೆ:ರೂ. ೨೫/-

ಹಾರುವ ಗುಬ್ಬಿ, ನಲಿಯುವ ನವಿಲು, ಬಾನಿನ ಚಂದ್ರ, ಹಾಡುವ ಕೋಗಿಲೆ, ಝೇಂಕರಿಸುವ ದುಂಬಿ, ಮಂಗನ ಮರ್ಕಟತನ, ಇಲಿ, ಬೆಕ್ಕು, ಮೊಲ, ನಾಯಿಗಳ ಪ್ರಸಂಗಗಳನ್ನು ಎತ್ತಿಕೊಂಡು ಅದರ ಸುತ್ತ ರಮ್ಯವಾದ ಕುತೂಹಲಕಾರಿ ಕತೆಗಳನ್ನು ಹೆಣೆದು ಶ್ರೀ ಪ್ರಭುದೇವ ಅವರು ಇದೊಂದು ಅತ್ಯುತ್ತಮ ಶಿಶು ಸಾಹಿತ್ಯ ಸಂಕಲನವನ್ನು ಸೃಷ್ಟಿಸಿದ್ದಾರೆ. ಹೀಗೆ ಕುತೂಹಲ ಹುಟ್ಟಿಸುತ್ತಾ ಚಿತ್ರ ವಿಚಿತ್ರವಾಗಿ ಹೊಮ್ಮುವ ಪದ್ಯಗಳು ಸುಲಭವಾಗಿ, ಸರಾಗವಾಗಿ ಓದಿಸಿಕೊಂಡು ಹೋಗುತ್ತವೆ. ಓದುತ್ತಿದ್ದಂತೆ ಕಂಠಪಾಠ ಮಾಡಬೇಕೆಂದು ಮಕ್ಕಳಲ್ಲಿ ಆಸಕ್ತಿಯನ್ನು ಹುಟ್ಟಿಸುವ ಅಪೂರ್ವ ಆಕರ್ಷಣೆಯನ್ನು ಇವು ಹೊಂದಿವೆ. ಪ್ರಭುದೇವ ಅವರ ನವಿರಾದ ಕವಿತಾ ಪರಿಪಾಠ ಹದನಾದುದು ಎಂದು ಮತ್ತೆ ಹೇಳಬೇಕಾಗಿಲ್ಲ.

- ಇ.ಆರ್. ಸೇತೂರಾಂ

ರಕ್ತಹೀರುವ ರಕ್ಕಸರು

(ಕವನ ಸಂಕಲನ)

ಲೇ: **ಜಿ.ಬಿ. ಪೂಜಾರಿ(ವಡಿಗೇರಾ)**

ಪ್ರ: ಸುದ್ದಿಸಾರ ಪ್ರಕಾಶನ, ಹಳಿಪೇಠ, ಶಹಾಪೂರ-೫೮೫ ೨೨೩ ಜಿ. ಗುಲಬರ್ಗಾ. ಮುದ್ರಣ: ೧೯೯೭ ಪುಟ: ೪೦ ಬೆಲೆ: ರೂ. ೨೦/-

"ರಕ್ತ ಹೀರುವ ರಕ್ಕಸರು" ಕವನ ಸಂಕಲನ ಹೆಸರೇ ಸೂಚಿಸುವಂತೆ ಇಂದಿನ ಕಾಲದಲ್ಲಿ ಶೋಷಣೆ, ದಬ್ಬಾಳಿಕೆ, ವಂಚನೆ, ಭ್ರಷ್ಟತೆ, ಅಮಾನವೀಯತೆ, ಅಸತ್ಯ, ಅನೀತಿಯ ಗೊಂದಲದಲ್ಲಿ ಸಾವಿರ ಸಮಸ್ಯೆಗಳನ್ನು ಸೃಷ್ಟಿಮಾಡಿ ಮಾನವ, ತನ್ನ ಸ್ವಾರ್ಥಕ್ಕೆ ರಕ್ಕಸ ಗುಣ ತಾಳಿದ್ದಾನೆ. ಅದಕ್ಕಾಗಿ ಬುದ್ಧಿ ಜೀವಿಗಳು, ಹೃದಯವುಳ್ಳವರು, ಮಾನವೀಯ ಗುಣಗಳನ್ನು ಉಳಿಸಿ, ಬೆಳೆಸಬೇಕು ಎಂಬುವದು ಕವಿಯ ಹಂಬಲವಾಗಿದೆ.

ಕವನ ಸಂಕಲನದಲ್ಲಿ, ಹೃದಯ ಸ್ಪಂದಿಸುವ ಕವನಗಳೆಂದರೆ 'ನಾನೊಬ್ಬ ಸಾಹಿತಿ', 'ಸ್ನೇಹ', 'ಬಡತನದ ಬಾಳು', 'ಯಾವುದು ನೈಜ'? ಸ್ವಾರ್ಥಕ್ಕೆ ಗುರಿಯಾದೆ, ಈ ಕವನಗಳಲ್ಲಿ ಕವಿಯ ಆಶಯ, ಸಾರ್ವತ್ರಿಕ ನೋವು-ನಲಿವಿನ ಸ್ಪಂದನೆ ಇದೆ.

- ಅಬ್ದುಲ್ ಕರೀಮ್

ನಿರಂತರ

(ಕವನ ಸಂಕಲನ)

ಲೇ: **ಎನ್.ಎಂ. ಕೊಟ್ರೇಶ್**

ಪ್ರ: ವಿದ್ಯಾ ಪ್ರಕಾಶನ, ಪ್ರವಾಸಿ ಮಂದಿರದ ಹತ್ತಿರ, ಬಳ್ಳಾರಿ. ಮುದ್ರಣ: ೧೯೯೭ ಪುಟ: ೪೮ ಬೆಲೆ: ರೂ. ೨೦/-

ಬರೆದಿರುವುದನ್ನು ಪತ್ರಿಕೆಗಳಿಗೆ ಕಳಿಸಲು ಹಿಂಜರಿಯುವ ಸಂಕೋಚ ಸ್ವಭಾವದ ಕೊಟ್ರೇಶ್ ಅವರು ಕಾವ್ಯದ ಬಗೆಗಿನ ಪ್ರೀತಿ ಶ್ಲಾಘನೀಯವಾದುದು. ಸಮಾಜದಲ್ಲಿ ತಾಂಡವವಾಡುತ್ತಿರುವ ದುಷ್ಟ ವ್ಯಕ್ತಿಗಳ ವಿರುದ್ಧ ಪ್ರತಿಭಟಿಸುವ ಕೆಚ್ಚು ಇದೆ. ಇವೆಲ್ಲಾ ಪರಿಕರಗಳೊಂದಿಗೆ ಕಾವ್ಯ ಮತ್ತು ಭಾಷೆಯ ಸೂಕ್ಷ್ಮಗಳನ್ನು ಕರಗತ ಮಾಡಿಕೊಂಡಿದ್ದಾರೆ, ಕನ್ನಡ ಕಾವ್ಯ ಲೋಕಕ್ಕೆ ಇವರು ಉತ್ತಮ ಕೊಡುಗೆ ನೀಡಬಲ್ಲರು, ನೀಡುವಂತಾಗಲಿ.

-ಕುಂ.ವೀ.

ಅರಿವಿನ ಕುರುಹು


(ಸ್ಮರಣೆ)

ಲೇ: **ಜಿ.ಬಿ. ಮಾಸಣಗಿ**


ಪ್ರ: ಧಾರವಾಡ ಜಿಲ್ಲಾ ದಕ್ಷಿಣ ಭಾಗದ ಶಿಕ್ಷಕ ಶಿಕ್ಷಕಿಯರ ಸಾಹಿತ್ಯ ಮತ್ತು ಕಲಾ ವೇದಿಕೆ, ರಾಣೆಬೆನ್ನೂರು. ಮುದ್ರಣ ೧೯೯೬, ಪುಟ: ೪೦, ಬೆಲೆ: ರೂ. ೧೫


ಈ ಕೃತಿಯಲ್ಲಿ ಆರು ಕಿರಣಗಳು ಅಂದರೆ ಅಧ್ಯಾಯಗಳು ಇವೆ, ಚರಿತ್ರೆಯ ನಿರೂಪಣೆ ಕ್ರಮಬದ್ಧವಾಗಿಯೇ ಇದೆ. ೧೯೩೬ ಮಾರ್ಚ್ ೨೫ರಂದು ಜನಿಸಿದ ಶ್ರೀ ಮಠದವರು ೯ನೆಯ ವರ್ಷದಲ್ಲಿ ತಾಯಿಯನ್ನು ಕಳೆದುಕೊಂಡು ಅಣ್ಣಂದಿರ ಪೋಷಣೆಯಲ್ಲಿ ಬೆಳೆದು, ಕಷ್ಟದಿಂದಲೇ ಎಸ್.ಎಸ್.ಎಲ್.ಸಿ.ವರೆಗೆ ಓದಿ, ಮೊದಲು ರಾಣೆಬೆನ್ನೂರು ಕಾಟನ್ ಸೇಲ್ ಸೊಸೈಟಿಯಲ್ಲಿ ಗುಮಾಸ್ತರಾಗಿ, ನಂತರ ಶಿಕ್ಷಣ ಸೇವೆಯಲ್ಲಿ ಅವಕಾಶ ಪಡೆದುಕೊಂಡವರು. ೧೯೫೭ರಲ್ಲಿ ಶಿಕ್ಷಕರಾದ ಅವರು ೧೯೯೪ರ ವರೆಗೆ ಆ ವೃತ್ತಿಯನ್ನು ಅತ್ಯಂತ ನಿಷ್ಠೆಯಿಂದ ನಿರ್ವಹಿಸಿದವರು. ಶಾಲಾ ಕಟ್ಟಡದ ನಿರ್ಮಾಣದಲ್ಲಿ ಮಧ್ಯಾಹ್ನ ಊಟದ ವ್ಯವಸ್ಥೆಯಲ್ಲಿ, ಪಾಠೋಪಕರಣಗಳ ಸಂಗ್ರಹಣೆಯಲ್ಲಿ ಸಾಹಿತ್ಯ-ಸಂಗೀತ ಮೊದಲಾದ ಕಾರ್ಯ ಚಟುವಟಿಕೆಗಳಲ್ಲಿ ಅವರು ಬಿಡುವಿಲ್ಲದೆ ದುಡಿದಿರುವುದನ್ನು ಕಾಣಬಹುದು.

- ಗುರುಲಿಂಗ ಕಾಪಸೆ









ಶಾಂತಕ್ಕ ಮಠದ ಅವರ ನನಸಾದ ಕನಸು

ಕಿತ್ತೂರರಾಣಿ ಚೆನ್ನಮ್ಮ ಮಹಿಳಾ ಪಟ್ಟಣ ಸಹಕಾರಿ ಬ್ಯಾಂಕ್

ಹುಬ್ಬಳ್ಳಿಯಲ್ಲಿ ದಿನಾಂಕ ೨೯-೯-೧೯೯೫ರಂದು ಪ್ರಾರಂಭಗೊಂಡ 'ಕಿತ್ತೂರ ರಾಣಿ ಚೆನ್ನಮ್ಮ ಮಹಿಳಾ ಪಟ್ಟಣ ಸಹಕಾರಿ ಬ್ಯಾಂಕ್' ಈ ಭಾಗದ ಮಹಿಳಾ ವರ್ಗಕ್ಕೊಂದು ಮಾದರಿ ಹಾಗೂ ಮಾರ್ಗದರ್ಶಿ ಬ್ಯಾಂಕೆನಿಸಿದೆ. ಸಮಾಜ ಸೇವಾ ಕೈಂಕರ್ಯ ತೊಟ್ಟ ಶಾಂತಕ್ಕ ಮಠದರ ಪ್ರಾಮಾಣಿಕತೆ, ಪರಿಶ್ರಮ, ದೂರಗಾಮೀ ನಿಲುವು ಹಾಗೂ ಸಂಘಟನಾ ಚಾತುರ್ಯದ ಫಲಶೃತಿ. ಇಲ್ಲಿ ಘನೀಕರಿಸಿದೆ ಮಹಿಳಾ ಜಾಗೃತಿ.

ಪತಿ ಪೊಲೀಸ್ ಅಧಿಕಾರಿಯಾಗಿದ್ದೂ, ಮನೆಯಲ್ಲಿ ಕಳ್ಳತನ ನಡೆದಾಗ, ಕೊರಗಿದ ಶಾಂತಕ್ಕ ಮಠದ ಬ್ಯಾಂಕ್ ಖಾತೆಯ ಹಾಗೂ ಸುರಕ್ಷತೆಯ ಅಗತ್ಯತೆಯನ್ನು ಮನಗಂಡರು. ಒಂದೆರಡು ಕಡೆ ನಿರೀಕ್ಷಿತ ಸೇವಾ ಸೌಲಭ್ಯ ದೊರೆಯದೇ ಹೋದಾಗ-ಮಹಿಳೆಯರಿಗಾಗಿಯೇ ತಾನೊಂದು ಬ್ಯಾಂಕನ್ನು ಯಾಕೆ ತೆರೆಯಬಾರದು? ಬಡ, ಶ್ರಮಿಕ ಮಹಿಳೆಯರಿಗೆ ಸಾಲ ಸೌಲಭ್ಯ ಯಾಕೆ ಒದಗಿಸಬಾರದು? ಸೋದರಿಯಲ್ಲಿ ಉಳಿತಾಯ ಪ್ರವೃತ್ತಿಯನ್ನು ಉದ್ದೀಪನಗೊಳಿಸಿ, ಸಹಕಾರಿ ತತ್ವದ ಮೇಲೆ ಸಮೃದ್ಧ ಸಮಾಜ ಯಾಕೆ ನಿರ್ಮಿಸಬಾರದು?.... ಎಂದೆಲ್ಲಾ ಯೋಚಿಸ ತೊಡಗಿದರು. ಯೋಚಿಸಿದರು ಕೂಡ.

ಶ್ರೀಗುರುಸಿದ್ಧೇಶ್ವರ ಸಹಕಾರಿ ಬ್ಯಾಂಕಿನ ನಿರ್ದೇಶಕಿಯಾಗಿ ಗಳಿಸಿದ ಅನುಭವ; ಸಂಯುಕ್ತ ಉಪನಿಬಂಧಕ ಎಸ್.ಆರ್. ನಾಯಕರ ಸಲಹೆ; ಜಿಲ್ಲಾ ವ್ಯಾಪ್ತಿಯ ಸಹಕಾರಿ ಬ್ಯಾಂಕ್ ಕಟ್ಟಲು ನೆರವಾದ ಹದಿನೈದು ಮಂದಿ ಮಹಿಳಾ ನಿರ್ದೇಶಕರು ನೀಡಿದ ಅಭಯ; ಶೇರು ಸಂಗ್ರಹಿಸಲು ಭಗಿನಿಯರ ಸಹಾಯ.... ಶೇರು ಬಂಡವಾಳ ೨೩ ಲಕ್ಷ ರೂ. ಮೀರಿತು. ೧೯-೬-೯೫ರಂದು ಲೈಸೆನ್ಸ್ ದೊರಕಿ ೧೯೮೭ರಿಂದ ನಡೆಸಿದ ಪ್ರಯತ್ನ ಫಲಿಸಿತು.



ಕರ್ನಾಟಕದಲ್ಲಿ ಈ ಮಹಿಳಾ ಬ್ಯಾಂಕ್ ಹನ್ನೊಂದನೆಯದು. ಉತ್ತರ ಕರ್ನಾಟಕದ ಕೇಂದ್ರ ಹುಬ್ಬಳ್ಳಿಯಲ್ಲಿ, ಮಹಿಳೆಯರು ಆರ್ಥಿಕ ಶಕ್ತಿ ಸಂಪಾದಿಸಿ, ಸ್ವಾವಲಂಬನೆ ಸಾಧಿಸುವ ದಿಸೆಯಲ್ಲಿ ಇದು ಮಹತ್ವಧ ಪಾತ್ರ ವಹಿಸುತ್ತದೆ. ಸಂಸ್ಥಾಪಕ ಅಧ್ಯಕ್ಷೆ ಶಾಂತಕ್ಕ ಮಠದ, ಅವರ ಅಂಗವಿಕಲ ಪ್ರತಿಭಾನ್ವಿತ ಮಗಳು ಗಾಯತ್ರಿ, ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಎಚ್.ಕೆ.ಪಾಟೀಲ್, ಗೋವಿಂದ ರಾವ್ ಕುರಡೇಕರ, ಧಾರವಾಡದ ಅಂದಿನ ಡೆಪ್ಯೂಟಿ ರಿಜಿಸ್ಟಾರ್ ಅಜಿತ ಸಾಸನೂರ.... ಮುಂತಾದವರ ಸಕಾಲಿಕ ನೆರವು ಮಹಿಳಾ ಬ್ಯಾಂಕಿನ ಶ್ರೀಕಾರಕ್ಕೆ ಕಾರಣವಾಯಿತು.

ಶ್ರೀಮೂರು ಸಾವಿರ ಮಠದ ಜಗದ್ಗುರು ಡಾ. ಗಂಗಾಧರ ರಾಜ ಯೋಗೀಂದ್ರ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ದಿನಾಂಕ ೨೯-೯-೯೫ರಂದು ಪ್ರಾರಂಭ. ಶ್ರೀಮಠದ ಸನಿಹದಲ್ಲೇ ಬ್ಯಾಂಕ್ ಕಛೇರಿ. ೧೫ ಮಂದಿ ನಿರ್ದೇಶಕರು. ಅಂದಿನ ಉಪಾಧ್ಯಕ್ಷೆ ಡಾ. ಸುಲೋಚನಾ ಯಳಮಲಿ ಇದೀಗ ಅಧ್ಯಕ್ಷೆ. ಇದೀಗ ಅನಸೂಯ ಚೌಶೆಟ್ಟಿ ಉಪಾಧ್ಯಕ್ಷೆ. ಮಂಗಳಾ ಪಾಟೀಲ್ ಬ್ಯಾಂಕಿನ ವ್ಯವಸ್ಥಾಪಕಿ. ಏಳು ಮಂದಿ ಮಹಿಳಾ ಉದ್ಯೋಗಿಗಳು. ಒಬ್ಬ ಗುಮಾಸ್ತ ಹಾಗೂ ಸಿಪಾಯಿ ಇದ್ದಾರೆ. ಪಿಗ್ಮಿ ಏಜೆಂಟ್ ೨೦ ಮಂದಿ ಇದ್ದಾರೆ. ಅರುಣಾ ಸಾಲಿಮಠ ಎಂಬ ಮಹಿಳಾ ಪಿಗ್ಮಿ ಏಜೆಂಟ್ ವ್ಯವಹಾರದಲ್ಲಿ ಬಲು ನಿಪುಣೆ.

ಕಳೆದ ಎರಡೂವರೆ ವರ್ಷಗಳಲ್ಲಿ ಈ ಮಹಿಳಾ ಬ್ಯಾಂಕು ಸಾಧನೆಯ ಪಥದಲ್ಲಿ ಗಟ್ಟಿ ಹೆಜ್ಜೆಗಳನ್ನು ಊರುತ್ತಾ ಮುನ್ನಡೆಯಲು ಮುಖ್ಯ ಕಾರಣ ಶಾಂತಕ್ಕ ಮಠದರ ಸಹೃದಯತೆ ಹಾಗೂ ಸಂಘಟನಾ ಕೌಶಲ್ಯತೆ. ವಯಸ್ಸು ಅರುವತ್ತು ದಾಟಿದರೂ ಸಮಾಜ ಸೇವೆಯಲ್ಲಿ ಇಡಿಯಾಗಿ ತೊಡಗಿರುವ ಇವರು ಜನತೆಯ ನಾಡಿ-ಮಿಡಿತ ಬಲ್ಲರು. ಕವಯತ್ರಿ; ಉತ್ತಮ ವಾಗ್ಮಿ; ಅನ್ಯಾಯಗಳ ವಿರುದ್ಧ ಸಿಡಿದೇಳುವ ಸ್ವಭಾವ; ಹುಟ್ಟು ಹೋರಾಟಗಾರ್ತಿ; ಮಹಾಜನ ವರದಿ, ಗೋಕಾಕ ವರದಿ ಜಾರಿಗಾಗಿ ಹೋರಾಡಿದ ದಿಟ್ಟೆ; ರೆಡ್‌ಕ್ರಾಸ್ ಸಂಸ್ಥೆ, ಅಕ್ಕನ ಬಳಗ, ಭಗಿನಿ ಮಂಡಳ, ಗಜಾನನ ಮಹಾ ಮಂಡಳ... ಹೀಗೆ ಹಲವಾರು ಸಂಘ-ಸಂಸ್ಥೆಗಳ ಮುಂಚೂಣಿ.

ಸುಮಾರು ಎಂಟು ವರ್ಷಗಳ ಕಾಲ ನಿರಂತರ ಶ್ರಮಿಸಿ, ತಮ್ಮ ಕನಸಿನ ಮಹಿಳಾ ಸಹಕಾರಿ ಬ್ಯಾಂಕನ್ನು ಕಟ್ಟಿ ಬೆಳೆಸಿರುವ ಶಾಂತಕ್ಕಮಠದರ ಬಡ ಮಹಿಳೆಯರ ಕಣ್ಣುಗಳಲ್ಲಿ ಭರವಸೆ ಹಾಗೂ ಭದ್ರತೆಯ ಮಿಂಚನ್ನು ತುಂಬಿದ್ದಾರೆ. ಠೇವಣಿ ವೃದ್ಧಿ, ಶೇರು ಬಂಡವಾಳದ ಹೆಚ್ಚಳ, ಶೇರಿನ ಬೆಲೆ ಹೆಚ್ಚಳ, ಸಾಲ ನೀಡುವ ಶಕ್ತಿಯ ವೃದ್ಧಿ... ಇದನ್ನೆಲ್ಲಾ ಬೆರಗಿನಿಂದಲೇ ಗಮನಿಸಬಹುದಾಗಿದೆ.

ವೀರರಾಣಿ ಕಿತ್ತೂರ ಚೆನ್ನಮ್ಮನ ಹೆಸರು ಹೊತ್ತ ಈ ಜಿಲ್ಲಾ ವ್ಯಾಪ್ತಿಯ ಸಹಕಾರಿ ಬ್ಯಾಂಕು-ಮಹಿಳೆಯರ ಬದುಕನ್ನು ಅರಳಿಸುವ ದಿಸೆಯಲ್ಲಿ ಕಾರ್ಯತತ್ಪರವಾಗಿದೆ ಎಂಬ ಸಂಗತಿ, ಮಿಕ್ಕೆಲ್ಲಾ ಲಾಭ-ನಷ್ಟದ ಅಂಕಿ ಅಂಶಗಳಿಗಿಂತ ಮುಖ್ಯವಾದುದು.

○ **ಆರೂರು ಲಕ್ಷ್ಮಣ್ ಶೇಟ್**

ಕ್ವಿಜ್-೧೦ ಬಹುಮಾನ ವಿಜೇತರು

ಪ್ರಥಮ ಬಹುಮಾನ
ರೂ. ೫೦೦-೦೦



ಸತ್ಯನಾರಾಯಣ ಎಸ್.ಕೆ.
S/o ಕೃಷ್ಣಮೂರ್ತಿ ಎಸ್.ವಿ.
ಶ್ರೀರಾಮ ಬ್ಲಾಕ್
ಕೆ.ಆರ್. ನಗರ - ೫೭೧ ೬೦೨
ಮೈಸೂರು ಜಿಲ್ಲೆ

ದ್ವಿತಿಯ ಬಹುಮಾನ
ರೂ. ೨೦೦-೦೦



ನಾಗನಗೌಡ ಪಾಟೀಲ
S/o ಪ್ರಹ್ಲಾದಗೌಡ ಪಾಟೀಲ
ಅಂಚೆ: ಹಲುವಾಗಲು - ೫೮೩ ೨೧೩
ತಾ. ಹರಪನಹಳ್ಳಿ ದಾವಣಗೆರೆ ಜಿಲ್ಲೆ

ಸಮಾಧಾನಕರ ಬಹುಮಾನ
ತಲಾ ರೂ. ೧೦೦/-

ಎಚ್. ಗಿರೀಶ
ನಂ. ೬೩/೨, ರಾಮಕೃಷ್ಣ ಮಠ ಬಡಾವಣೆ
ಕೆಂಪೇಗೌಡ ನಗರ
ಬೆಂಗಳೂರು - ೫೬೦ ೦೧೯

ಕೆಂ.ಕ. ಕುಮಾರ
೧೦೬, ೩ನೇ ಮುಖ್ಯ ರಸ್ತೆ,
ಮುನೇಶ್ವರ ಬ್ಲಾಕ್, ಮಹಾಲಕ್ಷ್ಮಿಪುರ
ಬೆಂಗಳೂರು - ೫೬೦ ೦೮೬

ಎಂ. ಮಂಜುಳ
D/o ಲಕ್ಷ್ಮಿನಾರಾಯಣ
ನಂ. ೨೦೧/೨, ದಿವಾನ್ಸ್ ರಸ್ತೆ
ಮೈಸೂರು - ೫೭೦ ೦೨೪

ಕ್ವಿಜ್ - ೧೦ರ ಸರಿಯುತ್ತರ

೧. ಶ್ರೀಮತಿ ಭುವನೇಶ್ವರಿ ಹೆಗಡೆ
೨. ವೆಂಕಯ್ಯನಾಯ್ಡು
೩. ಕೃಷ್ಣಾ ನದಿ
೪. ಕೊಡಗು ಜಿಲ್ಲೆ
೫. ಮಾರ್ಕ್‌ಟೇಲರ್/ ಸ್ಟೀವ್ ವಾ

ಕ್ವಿಜ್ ೧೧ರಲ್ಲಿ ಭಾಗವಹಿಸುವಿರಾ?

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಪ್ರಥಮ-ದ್ವಿತಿಯ ಬಹುಮಾನ ಪಡೆದವರ ಭಾವಚಿತ್ರ ಪ್ರಕಟಿಸಲಾಗುವುದು. ಕೂಪನ್ ಜೊತೆಗೆ ಭಾವಚಿತ್ರ ಕಳಿಸಬೇಡಿ. ಬಹುಮಾನಿತರನ್ನು ಸಂಪರ್ಕಿಸಿ ಭಾವಚಿತ್ರ ತರಿಸಿಕೊಳ್ಳಲಾಗುವುದು.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ **೧೫-೫-೧೯೯೮**

ಕ್ವಿಜ್ - ೧೧

೧. ಹಂಪಿ ಕನ್ನಡ ವಿಶ್ವವಿದ್ಯಾಲಯದ ನೂತನ ಕುಲಪತಿ ಹೆಸರೇನು?

....

೨. ಕೆ.ಪಿ.ಎಸ್.ಸಿ.ಯ ವಿಸ್ತೃತ ರೂಪ (Longform) ಏನು?

....

೩. 'ತುತ್ತಾ ಮುತ್ತಾ' ಸಿನಿಮಾದ ಹೀರೋ ಹೆಸರೇನು?

....

೪. ಕೇಂದ್ರ ಸಚಿವ ಬೂಟಾಸಿಂಗ್ ರಾಜೀನಾಮೆ ನೀಡಲು ಕಾರಣಳಾದ ಮಹಿಳೆ ಯಾರು?

....

೫. ಪೇಡೆಗೆ ಪ್ರಸಿದ್ಧವಾದ ಕರ್ನಾಟಕದ ಜಿಲ್ಲಾ ಕೇಂದ್ರ ಯಾವುದು?

....

ಹೆಸರು..
ವಿಳಾಸ..
....
....
ಪಿನ್ ಕೋಡ್.............................. ದೂರವಾಣಿ..............................
ಪ್ರವೇಶ ಪತ್ರಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, ಬಿಸಿಲ ಬದುಕು, ಅಂಚೆ ಪೆಟ್ಟಿಗೆ ೭೯೫೧, ಬಸವೇಶ್ವರ ನಗರ, ಬೆಂಗಳೂರು-೭೯.



ಅಕ್ಕಿ ಸಂಡಿಗೆ

ಬೇಕಾಗುವ ಸಾಮಗ್ರಿಗಳು

ಒಂದು ಕೆ.ಜಿ. ಅಕ್ಕಿ, ಚಿಟಿಕೆ ಇಂಗು, ರುಚಿಗೆ ತಕ್ಕಷ್ಟು ಉಪ್ಪು, ನೀರು.

ಮಾಡುವ ವಿಧಾನ

ಅಕ್ಕಿಯನ್ನು ಎರಡು ದಿನ ನೆನೆಹಾಕಿ, ನಂತರ ಅಕ್ಕಿ ಬಸಿದು ಒಣಗಿದ ನಂತರ ಗಿರಣಿಗೆ ಹಾಕಿಸಿ ಹಿಟ್ಟು ತಯಾರಿಸಿಕೊಳ್ಳಬೇಕು. ಹಿಟ್ಟಿನ ಅಳತೆಗೆ ೫ ಪಟ್ಟು ನೀರು ಹಾಕಿ ಚೆನ್ನಾಗಿ ಕಲಿಸಿ. ಅದಕ್ಕೆ ತಕ್ಕಷ್ಟು ಉಪ್ಪು, ಇಂಗು ಹಾಕಿ ಒಲೆಮೇಲೆ ಇಟ್ಟು ಚೆನ್ನಾಗಿ ಕಲಿಸುತ್ತಿರಬೇಕು. ಹದಕ್ಕೆ ಬಂದ ನಂತರ ಇಳಿಗಿ ತಗಡು ಅಥವಾ ಪ್ಲಾಸ್ಟಿಕ್ಕಿಗೆ ಎಣ್ಣೆ ಸವರಿ ಸ್ವಲ್ಪ ಸಮಯದ ನಂತರ ಅದನ್ನು ನಾವು ಬೆರಳಿಂದ ಚೂಪಾಗಿಡಬಹುದು. ಅದನ್ನು ಬೊಟ್ಟು ಸಂಡಿಗೆ ಅಥವಾ ಚಕ್ಕಲಿ ಒರಳಿನಲ್ಲಿ ನಮಗೆ ಯಾವ ಬಿಲ್ಲೆ ಬೇಕೋ ಅದನ್ನು ಹಾಕಿ ಅದರಲ್ಲಿ ಹಿಟ್ಟನ್ನು ತುಂಬಿ ಹಿಂಡಬಹುದು. ೨ ದಿನಗಳಲ್ಲಿ ಅವು ಒಣಗುತ್ತವೆ. ಅದನ್ನು ಡಬ್ಬಿಯಲ್ಲಿ ತೆಗೆದಿಟ್ಟುಕೊಂಡು ಬೇಕೆನಿಸಿದಾಗ ಕರಿಯಬಹುದು. ತಿಂಡಿಯ ಜೊತೆ ತಿನ್ನಲು ಬಲು ರುಚಿಯಾಗಿರುತ್ತದೆ.

ಸಬ್ಬಕ್ಕಿಯ ಸಂಡಿಗೆ

ಬೇಕಾಗುವ ಸಾಮಗ್ರಿಗಳು

ಕಾಲು ಕೆ.ಜಿ. ಸಬ್ಬಕ್ಕಿ, ರುಚಿಗೆ ತಕ್ಕಷ್ಟು ಉಪ್ಪು, ಇಂಗು, ನೀರು.

ಮಾಡುವ ವಿಧಾನ

ಕಾಲು ಕೆ.ಜಿ. ಸಬ್ಬಕ್ಕಿಯನ್ನು ನಾವು ತಯಾರಿಸುವ ಹಿಂದಿನ ದಿನ ರಾತ್ರಿ ಅದನ್ನು ನೀರಿನಲ್ಲಿ ತೊಳೆದು ಹಾಗೆ ಇಡಬೇಕು. ಬೆಳಗ್ಗೆ ಅದರ ೨ ರಷ್ಟು ನೀರನ್ನು ಹಾಕಿ ಅದಕ್ಕೆ ತಕ್ಕಷ್ಟು ಉಪ್ಪು, ಇಂಗು ಸೇರಿಸಿ ಗ್ಯಾಸನ್ನು ಹಚ್ಚಿ ಅವನ್ನು ಇಟ್ಟು ಕಲಿಸುತ್ತಿರಬೇಕು. ಒಂದು ಹದಕ್ಕೆ ಬಂದ ನಂತರ ಇಳಿಸಿ ತಗಡು ಅಥವಾ ಪ್ಲೆಸ್ಟಿಕ್ ಮೇಲೆ ಎಣ್ಣೆ ಸವರಿ ಚಮಚವನ್ನು ತೆಗೆದುಕೊಂಡು ಒಂದೊಂದು ಚಮಚ ಹಾಕಬೇಕು ಎರಡು ದಿನಗಳಲ್ಲಿ ಅವು ಒಣಗುತ್ತವೆ. ನಂತರ ಯಾವಾಗ ಬೇಕಾದರೂ ಅದನ್ನು ಎಣ್ಣೆಯಲ್ಲಿ ಕರೆದು ತಿನ್ನಬಹುದು.

ಅರಳಿನ ಸಂಡಿಗೆ


ಬೇಕಾಗುವ ಸಾಮಗ್ರಿಗಳು

೧೦ ಸೇರು ಭತ್ತದ ಅರಳು ರುಚಿಗೆ ತಕ್ಕಷ್ಟು ಉಪ್ಪು, ಇಂಗು, ಕೊತ್ತಂಬರಿಸೊಪ್ಪು, ಬುಜಕುಂಬಳಕಾಯಿ, ೪ ನಿಂಬೆಹಣ್ಣು, ಹಸಿಮೆಣಸಿನಕಾಯಿ, ೨ ಚಮಚ ಎಣ್ಣೆ, ನೀರು, ಇಂಗು.

ಮಾಡುವ ವಿಧಾನ

ಅರಳನ್ನು ಆರಿಸಿ ಇಟ್ಟುಕೊಳ್ಳಿ, ನಂತರ ಕೊತ್ತಂಬರಿ ಸೊಪ್ಪು ಹಸಿಮೆಣಸಿನಕಾಯಿಯನ್ನು ಬಿಡಿಸಿ ಮಿಕ್ಸಿಗೆ ಹಾಕಿ ಚಟ್ನಿಯ ಹಾಗೆ ಮಾಡಿಕೊಳ್ಳಿ, ಕುಂಬಳಕಾಯಿಯನ್ನು ಸಣ್ಣದಾಗಿ ಹೆಚ್ಚಿಟ್ಟುಕೊಳ್ಳಿ, ನಿಂಬೆಹಣ್ಣನ್ನು ಹೆಚ್ಚಿ ರಸವನ್ನು ಹಿಂಡಿಟ್ಟುಕೊಳ್ಳಬೇಕು. ಅರಳನ್ನು ನೀರಿನಲ್ಲಿ ತೊಯಿಸಿ ಹಿಂಡಿ ಒಂದು ಪಾತ್ರೆಯಲ್ಲಿ ಹಾಕಿಕೊಳ್ಳಿ ನಂತರ ಚಟ್ನಿಯನ್ನು ಕುಂಬಳಕಾಯಿ ಹೋಳನ್ನು ರುಚಿಗೆ ತಕ್ಕಷ್ಟು ಉಪ್ಪು ಇಂಗು ಮತ್ತು ನಿಂಬೆಹಣ್ಣಿನ ರಸವನ್ನು ಹಾಕಿ ಚೆನ್ನಾಗಿ ಎಲ್ಲವನ್ನು ಕಲಿಸಬೇಕು. ನಂತರ ಪ್ಲಾಸ್ಟಿಕ್ ಅಥವಾ ತಗಡಿಗೆ ಎಣ್ಣೆಯನ್ನು ಸವರಿ ಕೈಯಿಂದ ಸ್ವಲ್ಪ ಸ್ವಲ್ಪ ತೆಗೆದುಕೊಂಡು ತಗಡಿನ ಮೇಲೆ ಒತ್ತಿ ಇಡಬೇಕು. ಎರಡು ದಿನಗಳ ಕಾಲ ಅದನ್ನು ಬಿಸಿಲಿನಲ್ಲಿ ಒಣಗಿಸಿ ನಂತರ ಅವುಗಳನ್ನು ಡಬ್ಬಿಯಲ್ಲಿ ತುಂಬಿ ಯಾವಾಗ ಬೇಕಾದರೂ ಎಣ್ಣೆಯಲ್ಲಿ ಕರಿದು ತಿನ್ನಲು ಅನುಕೂಲ.

- ಸತ್ಯವತಿ ಸುವರ್ಣ
ಧಾರವಾಡ



ಬಿಂಬಲದ ಉಪ್ಪಿನಕಾಯಿ

ಬೇಕಾಗುವ ಸಾಮಗ್ರಿಗಳು

೨೫ ಬಿಂಬಲಕಾಯಿ, ೮ ಹಸಿಮೆಣಸು, ಮೆಂತ್ಯ, ಜೀರಿಗೆ, ಸಾಸಿವೆ, ಹಿಂಗು ಎಣ್ಣೆ.



ಮಾಡುವ ವಿಧಾನ

ಮೊದಲು ಬಿಂಬಲ ಕಾಯಿಗಳನ್ನು ತೊಳೆದು ಹೆಚ್ಚಿಕೊಳ್ಳಬೇಕು. ಅದನ್ನು ಒಂದು ಬಣಲಿಯಲ್ಲಿ ಹಿಂಗಿನ ಒಗ್ಗರಣೆಯಲ್ಲಿ (ಹಸಿ ಮೆಣಸಿನ ಸಣ್ಣ ಸಣ್ಣ ತುಂಡು) ಹಸಿಮೆಣಸನ್ನು, ಅದರಲ್ಲಿ ಬಿಂಬಲದ ಹೋಳುಗಳನ್ನು ಹಾಕಿ ಬೇಯಿಸಬೇಕು. ಸಾಕಷ್ಟು ಉಪ್ಪನ್ನು ಸೇರಿಸಬೇಕು. (೩ ಟೀ ಸ್ಪೂನ್).

ಬಿಂಬಲದ ರಸ ಆರಿದ ಮೇಲೆ ಬಣಾಲಿಯಲ್ಲಿ ಸೌಟನ್ನಿಟ್ಟು ತಿರುವುತ್ತಾ ಇಳಿಸಬೇಕು. ನಂತರ ಮೆಂತ್ಯ ಜೀರಿಗೆ ಹುರಿದು ಪುಡಿ ಮಾಡಿ ಬಣಾಲಿಯಲ್ಲಿ ಹಾಕಿ ತಿರುವಬೇಕು.

ಹೀಗೆಯೇ ಕರಂಬಳ, ನೆಲ್ಲಿ ಉಪ್ಪಿನಕಾಯಿ ಗಳನ್ನು ಮಾಡಬಹುದು. ಇದನ್ನು ಸುಮಾರು ಎಂಟು ದಿನಗಳವರೆಗೆ ಸೇವಿಸಬಹುದು.

- ಜಯಲಕ್ಷ್ಮಿ ಭಟ್ ಪೊಟೋಲಿ
ಪ್ರಧಾನಿ, (ಉ.ಕ. ಜಿಲ್ಲೆ)

ಟೊಮೆಟೊ ಹಣ್ಣಿನ ಚಟ್ನಿ

ಬೇಕಾಗುವ ಸಾಮಗ್ರಿಗಳು

ಪಾವ ಕೆ.ಜಿ. ಟೊಮೆಟೋ ಹಣ್ಣು, ೧ ಟೀ ಚಮಚ ಸಾಸಿವೆ ಬೇಳೆ, ೨ ಚಮಚ ಕೆಂಪು ಮೆಣಸಿನ ಪುಡಿ, ೨ ಚಮಚ (ದೊಡ್ಡ) ಒಳ್ಳೆಣ್ಣೆ, ಉಪ್ಪು, ಬೆಲ್ಲ ರುಚಿಗೆ ತಕ್ಕಷ್ಟು.



ಮಾಡುವ ವಿಧಾನ

ಮೊದಲು ಟೊಮೆಟೊಗಳನ್ನು ದೊಡ್ಡ ದೊಡ್ಡ ಹೋಳುಗಳನ್ನಾಗಿ ಹೆಚ್ಚಿರಿ. ಒಂದು

ಬಾಣಲೆಯಲ್ಲಿ ಎಣ್ಣೆ ಹಾಕಿ ಕಾದ ನಂತರ ಸಾಸಿವೆ, ಅರಿಸಿನ ಪುಡಿ, ಇಂಗು, ಕರಿಬೇವು ಸಹಿತ ಹಾಕಿ ಒಗ್ಗರಣೆ ತಯಾರಿಸಿ. ಅದರಲ್ಲಿ ಹೆಚ್ಚಿಟ್ಟ ಟೊಮೆಟೊ ಹೋಳುಗಳನ್ನು ಹಾಕಿರಿ. ಕುದಿದ ನಂತರ ಹೋಳು ಮೆತ್ತಗಾದ ಮೇಲೆ ಉಪ್ಪು, ಮೆಣಸಿನ ಪುಡಿ, ಬೆಲ್ಲ ಹಾಕಿ ಚೆನ್ನಾಗಿ ಒಂದುಗೂಡುವಂತೆ ತಿರುವಿರಿ. ಆನಂತರ ಎರಡರಿಂದ ಮೂರು ನಿಮಿಷಗಳವರೆಗೆ ಕುದಿಸಿ ಕೆಳಗಿಳಿಸಿ.

ಆರಿದ ನಂತರ ಅನ್ನ, ಚಪಾತಿ, ರೊಟ್ಟಿ ಬರೀ ಬಾಯಲಿ ತಿಂದು ಅದರ ಸ್ವಾದವನ್ನು ಅನುಭವಿಸಿರಿ.

-ರಾಜಶ್ರೀ ವಿನಾಯಕ, ಸಿದ್ಧಾಪುರ

ರಾಗಿ ಮಾಲ್ಟ

ಬೇಕಾಗುವ ಸಾಮಗ್ರಿಗಳು



ಒಂದು ಕೆ.ಜಿ.ರಾಗಿ ಮಾಲ್ಟನ್ನು ತಯಾರಿಸಲು ಬೇಕಾದ ವಸ್ತುಗಳು. ೮೦೦ ಗ್ರಾಂ. ರಾಗಿ, ೫೦ ಗ್ರಾಂ ಬಿಳಿಜೋಳ, ೨೫೦ ಗ್ರಾಂ ಕೆಂಪು ಗೋಧಿ, ೨೫೦ ಗ್ರಾಂ ಸಕ್ಕರೆ.

ಮಾಡುವ ವಿಧಾನ

ಮೇಲಿನ ಧಾನ್ಯಗಳನ್ನು ಸ್ವಚ್ಛ ಮಾಡಿಕೊಂಡು ರಾತ್ರಿ ನೀರಿನಲ್ಲಿ ಬೇರೆ ಬೇರೆಯಾಗಿ ನೆನೆ ಹಾಕಿ ೧೨ ತಾಸುಗಳ ನಂತರ ನೀರನ್ನು ಬಸಿದು ನೆರಳಿನಲ್ಲಿ ಒಣಗಿಸಬೇಕು. ನಂತರ ಮರಳಿನ ತಾಪದಲ್ಲಿ ಚೆನ್ನಾಗಿ ಬೇರೆ ಬೇರೆಯಾಗಿ ಹುರಿದುಕೊಳ್ಳಬೇಕು. ಆಮೇಲೆ ಬೀಸಿ ಹಿಟ್ಟನ್ನು ಬಟ್ಟೆಯಲ್ಲಿ ಸೋಸಿ ಕೊಳ್ಳಬೇಕು. ಈ ಎಲ್ಲಾ ಹಿಟ್ಟನ್ನು ಸಕ್ಕರೆ ಪುಡಿಯೊಂದಿಗೆ ಸೇರಿಸಿ ಚೆನ್ನಾಗಿ ಮಿಶ್ರ ಮಾಡಿಕೊಳ್ಳಬೇಕು. ನಂತರ ಯೋಗ್ಯ ಪ್ರಮಾಣದಲ್ಲಿ ಬಾದಾಮಿ ಬೀಜದ ಪುಡಿ, ಯಾಲಕ್ಕಿ ಪುಡಿ, ಕೇಸರಿ ಬಣ್ಣ, ಪಚ್ಚ ಕರ್ಪೂರಗಳನ್ನು ಮಾಲ್ಟಿನೊಡನೆ ಮಿಶ್ರ ಮಾಡಬೇಕು. ಇದೇ ರಾಗಿ ಮಾಲ್ಟ, ಇದನ್ನು ಸೀಸೆಯಲ್ಲಿ ತುಂಬಿಟ್ಟುಕೊಂಡು ಪ್ರತಿದಿನ ಒಂದು ಲೋಟ ಹಾಲಿಗೆ ಎರಡು ಚಮಚ ಮಾಲ್ಟನ್ನು ಹಾಕಿ ಕುಡಿದರೆ ರುಚಿಕರವಾಗಿರುತ್ತದೆ ಹಾಗೂ ಆರೋಗ್ಯಕ್ಕೂ ಉತ್ತಮ.

- ಎಸ್. ಕೊಟ್ರೇಶ, ಜೆ. ಕೋಡಿಹಳ್ಳಿ,

ಪವರ್ ಕಟ್ ಇನ್ನೂ ಹೆಚ್ಚಲಿ!

○ ಅಂಕೋಲಾ ದೇವಿದಾಸ ಸುವರ್ಣ

ವರುಷದಿಂದ ವರುಷಕ್ಕೆ ಪರೀಕ್ಷೆಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕಾಪಿ ಮಾಡುವುದನ್ನು ತಡೆಗಟ್ಟುವಲ್ಲಿ ಶಿಕ್ಷಣ ಇಲಾಖೆ ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾದಂತೆ, ತಿಂಗಳಿಂದ ತಿಂಗಳಿಗೆ ಏರುತ್ತಿರುವ ವಿದ್ಯುತ್ ಬಿಲ್ ಅನ್ನು ಕಡಿಮೆ ಮಾಡಲು ನನ್ನ ಮನೆಯಲ್ಲಿ ನಾನು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗಿ ಹೋಗಿದ್ದವು. ನನ್ನ ತಿಂಗಳ ಪಗಾರವೆಲ್ಲ ವಿದ್ಯುತ್ ಬಿಲ್ ತುಂಬಿ ನನ್ನ ಕಿಸೆ ಬರಿದಾಗುತ್ತಿರುವುದಕ್ಕೂ ಇತ್ತ ವಿದ್ಯುತ್ ಉತ್ಪಾದಿಸುವ ಜಲಾಶಯದ ನೀರು ಬರಿದಾಗುತ್ತ ಹೋದುದಕ್ಕು ಸರಿ ಹೋದುದರಿಂದ ಕೆ.ಇ.ಬಿ.ಯವರು ದಿನಕ್ಕೆ ನಾಲ್ಕಾರು ತಾಸು ಪವರ್ ಕಟ್ ಜಾರಿಗೆ ತಂದರು. ಈ ಪವರ್ ಕಟ್ ಜಾರಿಗೆ ಬಂದಾಗಿನಿಂದ ನನ್ನ ಮನೆಯ ಇಲೆಕ್ಟ್ರಿಕ್ ಬಿಲ್‌ನಲ್ಲಿ ಭಾರೀ ಇಳಿತವಾಗ ತೊಡಗಿತು. ಅತ್ತ ಜಲಾಶಯದ ನೀರು ತುಂಬದಿದ್ದರೂ ತಿಂಗಳಿಂದ ತಿಂಗಳಿಗೆ ನನ್ನ ಜೇಬು ತುಂಬುತ್ತಾ ಬಂದಿತು. ಈ ಪವರ್ ಕಟ್‌ನಿಂದ ಯಾರಿಗೆ ಏನು ಪ್ರಯೋಜನವಾಗದಿದ್ದರೂ ಈ ಕೆಳಗಿನ ಹಲವು ಅನುಕೂಲತೆಗಳು ನನಗೆ ಆದುದರಿಂದ ನನ್ನ ಮನೆ ಸ್ವರ್ಗವಾಯಿತು

ಪೇಟೆಯಲ್ಲಿ ಎಲ್ಲ ಅಂಗಡಿಗಳಲ್ಲೂ ಸಾಲ ಮಾಡಿ ಮಾಡಿ ಸಾಲ ತೀರಿಸಲಾಗದೇ ಎಲ್ಲಿ ಸಾಲ ಕೊಟ್ಟ ಅಂಗಡಿಯವರು ನನ್ನನ್ನು ಗುರುತಿಸಿ ಸಾಲದ ಹಣ ಕೇಳುತ್ತಾರೋ ಏನೊ! ಎಂದು ಹೆದರಿ ಪೇಟೆ ತಿರುಗುವುದನ್ನೇ ಬಿಟ್ಟು ಬಿಟ್ಟಿದ್ದೆ. ಆದರೆ ಸಾಯಂಕಾಲದ ಈ ಪವರ್ ಕಟ್‌ನ ಕತ್ತಲು ಸಮಯದಲ್ಲಿ ಪೇಟೆಗೆ ಹೋಗಿ ಎಲ್ಲ ಸಾಲಕೊಟ್ಟ ಅಂಗಡಿಯವರ ಮುಂದಿನಿಂದ ನಿರ್ಭೀತಿಯಿಂದ ತಿರುಗಾಡಿ ಬರತೊಡಗಿದೆ.

ಸಾಯಂಕಾಲ ಮನೆಗೆ ಬಂದಾಕ್ಷಣ ಮನೆಯ ತುಂಬ ಟಿ.ವಿ. ನೋಡಲು ನೆರದಿದ್ದ ಅಕ್ಕಪಕ್ಕದ ಮನೆಯ ಮಕ್ಕಳನ್ನು, ಜನರನ್ನು ಬದಿಗೆ ಸರಿಸಿ ಸ್ವತಃ ನನ್ನದೇ ಮನೆಯೊಳಗೆ ಸೇರಲು ನನಗೆ ಸಾಕು ಸಾಕಾಗುತ್ತಿತ್ತು. ನಾನು ನನ್ನ ಸ್ವಂತ ಮನೆಯೊಳಗೆ ಪ್ರವೇಶಿಸುತಿದ್ದೀನೋ ಎಂಬ ಸಂಶಯವೂ ಬರುತ್ತಿತ್ತು. ಆದರೆ ಈಗ ನಿರುಮ್ಮಳವಾಗಿ ನನ್ನ ಮನೆ ಸೇರಿಕೊಳ್ಳುತ್ತಿದ್ದೇನೆ.

ದಿನವೂ ಸಾಯಂಕಾಲ ಆಫೀಸಿನಿಂದ ಮನೆಗೆ ಬಂದಾಕ್ಷಣ ಹೆಂಡತಿಯ ಮುಖ ನೋಡಿ ಪ್ರಸನ್ನವಾಗೋಣವೆಂದರೆ ಅವರ ಮುಖವಂತೂ ಟಿ.ವಿ ಕಾರ್ಯಕ್ರಮ ನೋಡುವುದರಲ್ಲೇ ಮುಳುಗಿರುತಿತ್ತು. ಆದರೆ ಈಗ ಟಿ.ವಿ. ಕಾರ್ಯಕ್ರಮ ಇಲ್ಲದೇ ಹತಾಶಳಾಗಿ ಅವಳು ನನ್ನ ಬರುವನ್ನೇ ನಿರೀಕ್ಷಿಸಿ ಕುಳಿತಿರುವುದರಿಂದ ಮನೆಗೆ ಬಂದದ್ದೇ ಅವಳ ಮುಖ ನೋಡಿ ಸಂತೋಷ ಪಡುವ ಭಾಗ್ಯ ನನಗೆ ಬಂದೊದಗಿದೆ.

ದಿನವೂ ಟಿ.ವಿ. ಹಚ್ಚಿ ಕಾರ್ಯಕ್ರಮ ನೋಡುತ್ತ ಟಿ.ವಿ. ಗರಂ ಆದರೂ ಸಹ ಅದನ್ನು ಬಂದ್ ಮಾಡದೇ ನನ್ನ ಈ ಮನೆಯ ಮಂದಿ ಅತ್ತ ಟಿ.ವಿ.ಯನ್ನೂ ಇತ್ತ ನನ್ನ ತಲೆಯನ್ನೂ ಗರಂ ಮಾಡುತ್ತಿದ್ದರು. ಆದರೆ ದಿನವೂ ಈ ನಾಲ್ಕಾರು ತಾಸು ಪವರ್ ಕಟ್ ನಿಂದ ಟಿ.ವಿ. ಮತ್ತು ನನ್ನ ತಲೆ ಶಾಂತವಾಗ ತೊಡಗಿದೆ.

ಬೇಗ ಬೇಗ ಅಭ್ಯಾಸ ಮುಗಿಸಿರಿ ಹೋಮ್ ವರ್ಕ್ ಮುಗಿಸಿರಿ. ಈಗ ಟಿ.ವಿ.ಯಲ್ಲಿ ಒಳ್ಳೆಯ ಧಾರಾವಾಹಿ ಇದೆ. ಒಳ್ಳೆಯ ಸಿನೇಮಾ ಇದೆ ಎಂದು ನಮ್ಮ ಮನೆಯ ಟಿ.ವಿ. ಧಾರಾವಾಹಿ, ಸಿನೇಮಾ ಪ್ರಿಯರು ಶಾಲೆಗೆ ಹೋಗುವ ಸಣ್ಣಸಣ್ಣ ಮಕ್ಕಳಿಗೆ ಒತ್ತಡ ಹೊರುತ್ತಿದ್ದರು. ಆದರೆ ಈಗ ಆ ಮಕ್ಕಳು ಯಾರಿಂದಲೂ ಯಾವುದೇ ಒತ್ತಡವಿಲ್ಲದೇ ನಗುನಗುತ್ತ ಅಭ್ಯಾಸ ಮಾಡಿ, ಹೋಮ್ ವರ್ಕ್ ಮುಗಿಸಿ ಶಾಲೆಗೆ ಮರುಳುತ್ತಿವೆ.

ಭರ್ರನೆ ಫ್ಯಾನ್ ಹಾಕಿಕೊಂಡು, ಗೊರ್ರನೆ ಗೊರಕೆ ಹೊಡೆಯುತ್ತ ನಮ್ಮ ಮನೆಯ ಮಂದಿ ಎಷ್ಟು ಎಬ್ಬಿಸಿದರೂ ಏಳದೇ ಮುಂಜಾನೆ ಎಂಟು ಗಂಟೆಯವರೆಗೆ ಹಾಯಾಗಿ ನಿದ್ರಿಸುತ್ತಿದ್ದರು. ಆದರೆ ಈಗ ಫ್ಯಾನ್ ಇಲ್ಲದ ಕಾರಣ ಸೊಳ್ಳೆಗಳು ಮ್ಯೂಜಿಕ್‌ನೊಂದಿಗೆ ಬಂದು ಮಲಗಿದವರ ಮೇಲೆ ಸುರಿಯುವ ಮುತ್ತುಗಳನ್ನು ತಾಳಲಾರದೇ ಮನೆ ಮಂದಿಯೆಲ್ಲ ಮುಂಜಾನೆಯೇ ಎಚ್ಚತ್ತುಕೊಳ್ಳುತ್ತಿದ್ದಾರೆ. ●

ಹೆಜ್ಜೆ - ೧೦



ಮುಖ ನೋಡಿ ಮನಸ್ಸು ಓದಬಹುದೇ?


○ 'ಕೃಶಾಂಗ'

ನಮ್ಮ ವ್ಯಕ್ತಿತ್ವ ಅದೆಷ್ಟು ಸಫಲ, ಸಾರ್ಥಕ ಎಂಬುದನ್ನು ತಿಳಿಯುವದು ಸಹಜ ತಾನೇ? ವ್ಯಕ್ತಿತ್ವದ ನಿರ್ಣಾಯಕ ಪರೀಕ್ಷೆಯು ಬೇರೆಯವರ ಮೇಲೆ ಅದು ಬೀರುವ ಪರಿಣಾಮಗಳ ಗುಣಾತ್ಮಕತೆ ಮತ್ತು ಪರಿಧಿಗಳನ್ನವಲಂಬಿಸಿರುತ್ತದೆ. ನಮ್ಮಲ್ಲಿರುವ ನಾಗರೀಕತೆ, ಸಂಸ್ಕೃತಿಗಳನ್ನು ಇತರರಲ್ಲಿದ್ದವುಗಳೊಡನೆ ನಿರಂತರವಾಗಿ ನಾವು ಹೋಲಿಸುತ್ತಿರುತ್ತೇವೆ; ಆ ಮೂಲಕ ನಮ್ಮನ್ನು ಪರೀಕ್ಷೆಗೆ ಒಡ್ಡಿಕೊಳ್ಳುತ್ತಿರುತ್ತೇವೆ. ನಮ್ಮ ಮತ್ತು ಇತರ ವ್ಯಕ್ತಿಗಳ ಸಾಮಾಜಿಕ ಪರಿಣಾಮಗಳನ್ನು, ಪ್ರಭಾವಗಳನ್ನು ತುಲನಾತ್ಮಕವಾಗಿ ಅಭ್ಯಸಿಸುತ್ತಿರುತ್ತೇವೆ. ನಾನು, ನನ್ನ ಕಾರ್ಯಗಳ ಗುಣಮಟ್ಟ ಹಾಗೂ ಪ್ರಮಾಣಗಳನ್ನು ಇತರರು, ಅವರ ಕಾರ್ಯಗಳ ಗುಣಮಟ್ಟ ಹಾಗೂ ಪ್ರಮಾಣಗಳನ್ನು ಅಕ್ಕಪಕ್ಕದಲ್ಲಿರಿಸುವ ಮೂಲಕ ಒಂದೇ ಸವನೆ ದೃಷ್ಟಿಸುತ್ತಿರುತ್ತೇವೆ.

ಹಾಗಾದರೆ ಇಲ್ಲಿ ನಾವು ಮೊದಲು ಉತ್ತರಿಸಬೇಕಾದ ಪ್ರಶ್ನೆ. 'ವ್ಯಕ್ತಿತ್ವವನ್ನಳೆಯುವದು ಹೇಗೆ?' ಎಂಬುದು. ಕಾಲಕಾಲಕ್ಕೆ ಬದಲಾಗುತ್ತ ಬಂದ ವಿಚಾರಧಾರೆಗಳನ್ನು ತಿಳಿಯೋಣ.

ಅತಿ ಹಳೆಯ ಮೋಜಿನ ವಿಚಾರಧಾರೆಯೊಂದಿದೆ. ಪ್ರತಿ ಮಗುವಿನಲ್ಲೂ ದುರ್ಗುಣ, ದುಶ್ಚಟಗಳು ಮೊಳಕೆಯೊಡೆಯುವದು, ಮಗು ಅವುಗಳಿಗೆ ಆಶ್ರಯತಾಣವಾಗುವದೂ ಸ್ವಾಭಾವಿಕ. ಇವುಗಳನ್ನು ತೋರ್ಪಡಿಸಿಕೊಂಡು ಸ್ವಚ್ಛಂದವಾಗಿ ಬದುಕಿ ಬೆಳೆಯಲು ಆ ಮಗುವಿಗೆ ಅವಕಾಶವನ್ನಿತ್ತರೆ ಕಾಲಾಂತರದಲ್ಲಿ ಆ ಮಗು ಸದ್ಗುಣವಂತವಾಗುವದೆಂಬ ನಂಬಿಕೆಯಿತ್ತು. ಕೆಲವು ಉದಾಹರಣೆಗಳಾಧಾರಿತ ಈ 'ಸಮೀಪ ದೃಷ್ಟಿದೋಷ'ದ ತತ್ವ ಒಪ್ಪಲು ಸಾಧ್ಯವಿಲ್ಲದ್ದೆಂಬುದು ಮಕ್ಕಳನ್ನು ಹಾಗೆಯೇ ಬೆಳೆಯಲು ಬಿಟ್ಟಾಗ ಘಟಿಸಿದ ಅನಾಹುತಗಳ ಮುಖಾಂತರ ಬೆಳಕಿಗೆ ಬಂದಿತು. ಅಂಥ ಮಕ್ಕಳಲ್ಲಿ ಸ್ವಚ್ಛಂದ ಪ್ರವೃತ್ತಿ ಬರಬರುತ್ತ ಅಭ್ಯಾಸವಾಗಿಬಿಟ್ಟಿತು; ಮಗು ಸಾಮಾನ್ಯ ಜೀವನಕ್ಕೆ ಹಿಂದಿರುಗುವ ಸಾಧ್ಯತೆ ಕುಗ್ಗುತ್ತ ನಡೆಯಿತು; ಸ್ವಚ್ಛಂದ ಪ್ರವೃತ್ತಿಯ ಕಲೆಗಳು ಆತನ ಸ್ವಭಾವದ ವಿವಿಧ ಪೈಲುಗಳ ಮೇಲೆ ಶಾಶ್ವತವಾಗಿ ಉಳಿದುಬಿಟ್ಟವು; ಆ ವ್ಯಕ್ತಿ ಎಲ್ಲರಿಗೂ ಅಗ್ರಾಹ್ಯನಾದ.

ತಲೆಬುರುಡೆಯ ಆಕಾರದ ಮೇಲೆ ಮನುಷ್ಯನ ಸಾಮರ್ಥ್ಯ, ಗುಣಾವಗುಣಗಳು ಅವಲಂಬಿಸಿವೆ ಎಂದು ಕೆಲಕಾಲ ನಂಬಲಾಗಿದ್ದಿತು. ಮನಸ್ಸು ಮಿದುಳಿನ ಮೂಲಕ ಕಾರ್ಯ ನಿರ್ವಹಿಸುತ್ತದೆಂದೂ ತಿಳಿಯಲಾಗಿತ್ತು. ಇದಕ್ಕೂ ಮೊದಲು ತಾರ್ಕಿಕ, ಸ್ಮರಣ, ಕಲ್ಪಕ ಶಕ್ತಿಗಳು ಶರೀರದ ವಿವಿಧ ಅಂಗಾಂಗಗಳಲ್ಲಿ (ಹೃದಯ, ಯಕೃತ್ತು, ಮೂತ್ರಪಿಂಡ) ಉಗಮಗೊಳ್ಳುತ್ತವೆಯೆಂದೂ ತಿಳಿಯಲಾಗುತ್ತಿತ್ತು. ಈ ವಿವಿಧ ಉಗಮಸ್ಥಾನಗಳೀಗ ಮಿದುಳಿಗೆ ವರ್ಗಾವಣೆಗೊಂಡವು. ತಲೆಬುರುಡೆಯಾಕಾರ ಮತ್ತು ವ್ಯಕ್ತಿಯಲ್ಲಿ ಕಾಣುವ ಗುಣಗಳ ಸಂಬಂಧವನ್ನು ಕೆಲವು ನಂಬಲರ್ಹ ಉದಾಹರಣೆಗಳ ಮೂಲಕ ಸ್ಪಷ್ಟಗೊಳಿಸುವ ಪ್ರಯತ್ನ ನಡೆಯಿತು. ಮಿದುಳಿನ ಆಕಾರವು ತಲೆಬುರುಡೆಯ ಆಕಾರವನ್ನು ನಿರ್ಧರಿಸುವದೆಂದೂ ನಂಬಲಾಯಿತು. ತಲೆಯ ಬೇರೆ ಬೇರೆ ಉಬ್ಬು-



ತಗ್ಗುಗಳು ಆಯಾ ಗುಣ ಲಕ್ಷಣಗಳ ಸಮೃದ್ಧಿ ಅಥವಾ ಕೊರತೆಯನ್ನು ಎತ್ತಿ ತೋರಿಸುತ್ತವೆಯೆಂದೂ ಸಿದ್ಧಪಡಿಸಲು ಪ್ರಯತ್ನ ನಡೆಯಿತು. ಆದರೆ ಮನಸ್ಸಿನ ಮೂಲಸ್ಥಾನ ಮಿದುಳು ಎಂಬುದನ್ನೊಂದುಳಿದು ಇತರೆಲ್ಲ ವಿಚಾರಗಳೂ ಕಾಲಾಂತರದಲ್ಲಿ ಬಿದ್ದುಹೋದವು. ಮನಸ್ಸು ಸ್ಫುಟವಾದ ಸ್ವತಂತ್ರ ಭಾಗಗಳಿಂದೊಡಗೂಡಿದೆಯೆಂಬುದನ್ನು ನಂತರ ನಿರ್ಣಾಯಕವಾಗಿ ಅಲ್ಲಗಳೆಯಲಾಯಿತು. ಆದರೆ ಮೋಜೆಂದರೆ ಇಂದೂ ಸಹ ಹಲವರ ಅಭಿಪ್ರಾಯದಲ್ಲಿ ಎಲ್ಲ ಎತ್ತರದ ಹಣೆಗಳು ಮೇಧಾವಿತನವನ್ನೂ, ಎಲ್ಲ ಇಳಿಜಾರು ಹಣೆಗಳು ದುರ್ಬಲ ಮನಸ್ಸನ್ನೂ ಪ್ರತಿನಿಧಿಸುತ್ತವೆ!

ವ್ಯಕ್ತಿಯ ಸಾಮಾನ್ಯ ದೈಹಿಕ ಲಕ್ಷಣಗಳು ಆತನ ನಡತೆ, ಅಪರಾಧಿ ಮನೋವೃತ್ತಿಗಳನ್ನು ಸೂಚಿಸುತ್ತವೆಯೆಂದೂ ತಿಳಿಯಲಾಗಿತ್ತು. ಅಪರಾಧಿಗಳ ವಿಶಿಷ್ಟ ದೈಹಿಕ ಲಕ್ಷಣಗಳನ್ನು ಗುರುತಿಸಿಡಲಾಗಿದ್ದಿತು: ರೇಖಾಕಾರದ ಮತ್ತು ವಿರಳ ಹುಬ್ಬಿನ ಕೂದಲು; ದೊಡ್ಡ, ಉದ್ದ ಮತ್ತು ದಪ್ಪ ಕಿವಿಗಳು; ದೊಡ್ಡ ಮತ್ತು ಉದ್ದ ಶೂಲದ (ಕೋರೆ) ಹಲ್ಲುಗಳು; ಕಾಂತಿರಹಿತ ಚರ್ಮ ಇತ್ಯಾದಿ ವರ್ತನೆಯಲ್ಲಿ ಮರ್ಕಟ-ಚಾಂಚಲ್ಯ, ನಾಚಿಕೆರಹಿತ ಸ್ವಭಾವ, ದ್ರುತಗತಿಯ ನಡಿಗೆ, ದೀರ್ಘನಿದ್ರಾಸಕ್ತಿಗಳೂ ಸಹ ನೆನಪಿಡತಕ್ಕ ಲಕ್ಷಣಗಳು. ಗದ್ದದ ಮೇಲೆ ಕೂದಲು ಹೊಂದಿದ ಹೆಣ್ಣು, ಉಬ್ಬಿದೆದೆಗಳ ಗಂಡುಗಳೊಡನೆ ವ್ಯವಹಾರದಲ್ಲಿ ಜೋಕೆ ಎನ್ನಲಾಗುತ್ತಿತ್ತು. ಕಾಲಾಂತರದಲ್ಲಿ ಅಂಶಿಕ ಸತ್ಯಾಧಾರಿತ ಮತ್ತು ಅತಾರ್ಕಿಕವಾದ ಈ ವಿಚಾರಧಾರೆ ಅಪಹಾಸ್ಯಕ್ಕೀಡಾಗಿಬಿಟ್ಟಿತು!

ಮುಖಲಕ್ಷಣ ಪರೀಕ್ಷೆ ಮತ್ತು ಮುಖಾಂಗ ಮಾಪನಗಳ ಮೂಲಕವೂ ವ್ಯಕ್ತಿಯ ಸ್ವಭಾವ ಮತ್ತು ನಡತೆಗಳ ಸೂಚನೆಯ ಪ್ರಯತ್ನವೂ ನಡೆಯಿತು. ಕಣ್ಣುಗಳ ನಡುವಿನ ಅಂತರ, ಗದ್ದದ ಆಕಾರ ಮತ್ತು ಗಾತ್ರ, ಕೂದಲಿನ ಬಣ್ಣ, ಇತರ ಲಿಂಗಗಳ ಹೋಲಿಕೆಯಲ್ಲಿ ಕಿವಿಗಳು ಇತ್ಯಾದಿಗಳು ಪರೀಕ್ಷೆಗೆ ಒಳಗಾದವು. ವ್ಯಕ್ತಿಗಳನ್ನು ಮೂರು


ಬಗೆಯಾಗಿ ವಿಭಾಗಿಸಲಾಯಿತು. ಬಹಿರ್‌ವಕ್ರ ಮುಖದ, ದೊಡ್ಡ ಮೂಗಿನ, ಇಳಿಜಾರು ಹಣೆಯ, ಒಳಸೇರಿದ ಗಲ್ಲಗಳ ವ್ಯಕ್ತಿ ಅತ್ಯಂತ ಶಕ್ತಿಯುತ, ಆಶಾವಾದಿ, ಮಹತ್ವಾಕಾಂಕ್ಷಿ ಎಂದೂ; ಅಂತರ್‌ವಕ್ರ ಮುಖದ, ಅಸ್ಫುಟ ಮೂಗಿನ, ಏರುಹಣೆಯ ವ್ಯಕ್ತಿ ಮಂದ ನಿರ್ಧಾರಿ, ಹಿಂದೆ-ಮುಂದೆ ನೋಡುವ, ತಾಳ್ಮೆಯುಳ್ಳವ ಎಂದೂ; ಚಪ್ಪಟೆ ಮುಖದವ ಜಾಗ್ರತೆಯುಳ್ಳ ಸಂಪ್ರದಾಯಸ್ಥ ಎಂದೂ ಕಲ್ಪಿಸಲಾಗಿದ್ದಿತು. ಆದರೆ ಈ ವಿಚಾರಧಾರೆ ಅಪೂರ್ಣ ಮತ್ತು ಅಶುದ್ಧ ಸಾಕ್ಷ್ಯಾಧಾರಿತವಾದುದು. ಅತಾರ್ಕಿಕ ತತ್ವಾಧಾರಿತವಾದುದು. ಈ ಕಾರಣ ಇದು ಅವೈಜ್ಞಾನಿಕವೆಂದು ತಿರಸ್ಕೃತವಾಯಿತು.

ಹಸ್ತಾಕ್ಷರಗಳ ವಿಶಿಷ್ಟ ಗುಣಗಳನ್ನು ಅರ್ಥೈಸುವ ಮೂಲಕ ವ್ಯಕ್ತಿತ್ವದ ಮುಖ್ಯ ಲಕ್ಷಣಗಳನ್ನರಿಯುವ ಪ್ರಯತ್ನವೂ ನಡೆಯಿತು. ವ್ಯಕ್ತಿಯ ಭವಿಷ್ಯವನ್ನರಿಯುವ ಪ್ರಕ್ರಿಯೆ ಪ್ರಾರಂಭವಾಯಿತು. ಈ ಆಧಾರದಲ್ಲಿ ತರುಣ ತರುಣಿಯರಿಗೆ ಹೊಂದುವ ವೃತ್ತಿಯ ಬಗೆಗೆ ಮಾರ್ಗದರ್ಶನ ನೀಡುವದೂ ಸಾಗಿತು. ಕರಾರುರಹಿತ ನಂಬುಗೆಯನ್ನು ಪಡೆಯದ ಈ ವಿಚಾರಗಳು ಕಳೆದ ಮೂರು ಶತಮಾನಗಳಿಂದಲೂ ಪ್ರಚಲಿತವಾಗಿವೆ. ಇಲ್ಲಿ ಹೇಳುವಂತೆ ಕಾಗದವ ಮೇಲೆ ಲೇಖನಿಯನ್ನು ಭಾರವಾಗಿ ಉಪಯೋಗಿಸುವವರೆಲ್ಲರೂ ನಾಚುಗುಳಿಗಳಾಗಲೀ, ಅಂಜುಬುರುಕರಾಗಲೀ ಆಗಿರಲೇಬೇಕಿಲ್ಲ. ಅಲಕ್ಷ್ಯಕ್ಕೊಳಗಾದ ಹಸ್ತಾಕ್ಷರವು ಯಾವಾಗಲೂ ಬೇಜವಾಬ್ದಾರಿತನನ್ನೇ ಎತ್ತಿ ತೋರಿಸಬೇಕಿಲ್ಲ.

ವ್ಯಕ್ತಿಯ ದೇಹದ ಒಟ್ಟಾರೆ ಸಮೀಕ್ಷೆಯಿಂದ ಆ ವ್ಯಕ್ತಿಯ ಮನಸ್ಸಿನ ಸ್ವರೂಪ ಮತ್ತು ಧರ್ಮಗಳನ್ನು ಗೊತ್ತುಪಡಿಸುವ ಪ್ರಯತ್ನವೂ ನಡೆದಿದೆ. ದೇಹದ ಗಾತ್ರ, ಆಕಾರ ಮತ್ತು ಸ್ಥಿತಿಗಳನ್ನಾಧರಿಸಿ ವ್ಯಕ್ತಿಗಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ. ಎತ್ತರವಿದ್ದವರು, ಅಶಕ್ತರಾದವರು, ತಮ್ಮ ಭಾವನೆಗಳನ್ನು ಹತ್ತಿಕ್ಕಿಕೊಂಡವರು, ಗಂಭೀರ ಸ್ವಭಾವದ ಪ್ರಾಮಾಣಿಕರು, ಮೊದಲಿನ ವಿಧದವರು. ಎತ್ತರದ ಶಕ್ತಿವಂತರು, ಹುರಿಗಟ್ಟಿದ ಸ್ನಾಯುವಂತರು, ನರದೌರ್ಬಲ್ಯ ಹೊಂದಿದವರು, ಬೇರೆಯವರೊಡನೆ ಮುಕ್ತವಾಗಿ ಬೆರಯುವ ಚಟುವಟಿಕೆಯವರು ಎರಡನೆಯ ಪ್ರಕಾರದವರು. ಗಿಡ್ಡರು, ದಪ್ಪಗಿನವರು, ತೆಳ್ಳಗಿನ ಎಲುಬಿನವರು, ಚಿಂತೆಯಿಂದ ದೂರವಿರುವ ಒಳ್ಳೆಯ ಸ್ನೇಹಪರರು, ಮೂರನೆಯ ಪ್ರಕಾರದವರು. ಬೃಹದಾಕಾರದ, ಅಸಮರ್ಪಕ ದೇಹ ಲಕ್ಷಣಗಳ ವಿಚಿತ್ರ ದೇಹಿಗಳು ಅಷ್ಟೇ ವಿಚಿತ್ರ ಮನೋವೃತ್ತಿಯವರು ನಾಲ್ಕನೆಯ ವಿಭಾಗದವರು. ಆದರೆ ಈ ಅಭಿಪ್ರಾಯಗಳೂ ಸಹ ವೈಜ್ಞಾನಿಕ ನಿಖರತೆಯನ್ನು ಹೊಂದಿಲ್ಲ. ಎಲ್ಲ ತೆಳ್ಳಗಿನ ಎತ್ತರದ ವ್ಯಕ್ತಿಗಳೂ ಗಂಭೀರ ಸ್ವಭಾವದವರೂ ಮುಕ್ತವಾಗಿ ಬೆರೆಯದವರೂ ಇರಬೇಕಿಲ್ಲ ಎಂಬುದನ್ನು ತಿಳಿಯಲು ಬಹಳ ಜ್ಞಾನಬೇಕಿಲ್ಲ.

ಇನ್ನೂ ಒಂದು ಬಹು ಪುರಾತನ ವಿಚಾರ ಧಾರೆಯಿದೆ. ವ್ಯಕ್ತಿಯ ಗುಣಾವಗುಣಗಳ ಹಾಗೂ ಆಕೆಯ ಗತಕಾಲದ ಬದುಕಿನ ಮತ್ತು ಭವಿಷ್ಯದ ಬದುಕಿನ ಬಗೆಗೆ ಆಕೆಯ ಅಂಗೈಯ ವೈಶಿಷ್ಟ್ಯಗಳನ್ನೂ ಅದರ ಮೇಲಿನ ಗೆರೆಗಳನ್ನೂ ಅರ್ಥೈಸುವ ಮೂಲಕ ತಿಳಿದುಕೊಳ್ಳುವ ಪ್ರಯತ್ನವಿದು. ಇದು ಕಲೆಯೊ ಅಥವಾ ವಿಜ್ಞಾನವೋ ಎಂಬುದು ನಿರಂತರ ಪರೀಕ್ಷೆಗೆ ಒಳಪಡುತ್ತಿರುವ ವಿಷಯ. ಇಲ್ಲಿ ಕೈಬೆರಳುಗಳ ಉದ್ದ, ಗಾತ್ರ, ಕೀಲುಗಳು; ಹೆಬ್ಬೆರಳು ಮತ್ತು ಅದರ ಭಾಗಗಳು ಎಲ್ಲವೂ ಅರ್ಥೈಸಲ್ಪಡುತ್ತವೆ. ಬೆರಳುಗಳ ಕೆಳಗಿನ ಉಬ್ಬುಗಳು, ಅವುಗಳ ಮೇಲಿನ ಗುರುತುಗಳು, ಅಂಗೈಯಲ್ಲಿಯ ರೇಖೆಗಳು ಹೇಳುವದೆಲ್ಲವನ್ನೂ ದಾಖಲಿಸಲಾಗುತ್ತದೆ. ವ್ಯಕ್ತಿಯ ಹಿಂದು, ಮುಂದುಗಳನ್ನು ತಿಳಿಯುವಲ್ಲಿ ಇವುಗಳೇ ಆಧಾರ. ಈ ಅತ್ಯಂತ ವಿವಾದಗ್ರಸ್ತ ವಿಷಯವನ್ನು ಇಲ್ಲಿಗೇ ಮುಕ್ತಾಯಗೊಳಿಸುವ ಮುನ್ನ ನಾವು ತಿಳಿಯಬೇಕಿರುವದು ಇಂಥವುಗಳ ಬಗೆಗೆ ಜನಾಭಿಪ್ರಾಯ ಯಾವ ರೀತಿಯದಾಗಿದೆ ಎಂಬುದು. ಮೇಲೆ ಚರ್ಚಿತವಾದ ವಿಷಯಗಳು ಶಾಸ್ತ್ರೀಯವಾಗಿರಲಿ, ಇಲ್ಲದಿರಲಿ ಜನ ಅವುಗಳನ್ನು ದೊಡ್ಡ ಸಂಖ್ಯೆಯಲ್ಲಿ ನಂಬಿದರೆ ಅವು ವಿಶ್ಲೇಷಿಸಿದ ಗುಣ-ಲಕ್ಷಣಗಳನ್ನು ಹೊಂದಿದ ಅಥವಾ ಹೊಂದದ ವ್ಯಕ್ತಿ ಆ ಸಮಾಜದಲ್ಲಿ

ವ್ಯಕ್ತಿತ್ವ ವಿಕಾಸ



ಪರಿಣಾಮಕಾರಿ ಅಥವಾ ಅಸಫಲ ಜೀವನ ಸಾಗಿಸುವದು ಸತ್ಯ.

ತನ್ನ ಅತ್ಯಂತ ಮೊದಲಿನ ಸ್ತರದಲ್ಲಿ ಜ್ಯೋತಿಷ್ಯಶಾಸ್ತ್ರವು ಖಗೋಲಶಾಸ್ತ್ರದ ಬೆಳವಣಿಗೆಗೆ ಕಾರಣವಾಯಿತು. ಈಗ ಅವೆರಡೂ ಸ್ವತಂತ್ರ ಜ್ಞಾನ ಕ್ಷೇತ್ರಗಳಾಗಿವೆ. ಜ್ಯೋತಿಷ್ಯವು ಮಾನವ ಜೀವನದ ಸಂಭಾವ್ಯ ಘಟನೆಗಳ ಬಗೆಗೆ ಬೆಳಕು ಚೆಲ್ಲುವ ಸಾಧನವೂ ಆಗಿದೆ. ಗ್ರಹ ನಕ್ಷತ್ರಗಳು ದೇವತೆಗಳೆಂಬ ನಂಬುಗೆಯನ್ನಾಧರಿಸಿ ಈ ವಿಚಾರಧಾರೆಯಲ್ಲಿ ವ್ಯಕ್ತಿಯ ಹುಟ್ಟಿನ ಸಮಯದಲ್ಲಿ ಉದಯವಾದ ಗ್ರಹ ನಕ್ಷತ್ರಗಳು ಆತನ ಭಾವೀ ಜೀವನವನ್ನು ಪ್ರಭಾವಿಸುತ್ತವೆಂದು ಘೋಷಿಸಲಾಗಿದೆ. ಈ ಮೂಲಭೂತ ವಿಚಾರಗಳನ್ನೊಪ್ಪದವರು, ಅನುವಂಶೀಯತೆಯ ಬಗೆಗಿನ ನಿಯಮಗಳನ್ನರಿತವರು, ಗ್ರಹ ನಕ್ಷತ್ರಗಳ ಸ್ವರೂಪದ ಬಗೆಗೆ ತಿಳಿದವರು ಈ ವಿಚಾರಧಾರೆಯ ಶಾಸ್ತ್ರೀಯ ತಳಹದಿಯನ್ನು ಶೋಧಿಸುತ್ತಿರುವರು.

ಸಂಖ್ಯಾಶಾಸ್ತ್ರವೆಂಬುದೊಂದಿದೆ. ವ್ಯಕ್ತಿಯ ಸುಖ-ದುಃಖ ಜಯಾಪಜಯಗಳು ಏನನ್ನವಲಂಬಿಸಿವೆ? ವ್ಯಕ್ತಿ ಏನನ್ನು ಮಾಡಬಯಸುತ್ತಾನೆ? ಯಾವುದನ್ನಾತ ಚನ್ನಾಗಿ ಮಾಡಬಲ್ಲ? ಆತನ ಜೀವನ ಪಥದ ರೂಪರೇಷೆಗಳಾವವು? ಇವೇ ಮುಂತಾದ ಪ್ರಶ್ನೆಗಳಿಗೆ ದೊರಕುವ ಉತ್ತರಗಳಿವೆಯೇ? ಈ ಪ್ರಶ್ನೆಗಳಿಗೆ ಉತ್ತರಗಳನ್ನು ಆ ವ್ಯಕ್ತಿಯ ಹೆಸರಿನಲ್ಲಿಯ ಸ್ವರ-ವ್ಯಂಜನಗಳು ಹಾಗೂ ಆತನ ಜನ್ಮದಿನಾಂಕವನ್ನು ಪರೀಕ್ಷಿಸುವದರ ಮೂಲಕ ಕಂಡುಹಿಡಿಯಬಹುದೆಂದು ಸಂಖ್ಯಾಶಾಸ್ತ್ರಿಗಳು ನಂಬುತ್ತಾರೆ.

ಚರ್ಮಚಕ್ಷುಗಳಿಗೆ ಕಾಣದ ಹಿಂದಿನ, ಇಂದಿನ, ಮುಂದಿನ ವಸ್ತುಗಳು ಮತ್ತು ಆಗುಹೋಗುಗಳನ್ನು ಕಾಣುವ ಸಾಮರ್ಥ್ಯದ ಬಗೆಗೆ ಅತೀಂದ್ರಿಯ (ದಿವ್ಯ) ದೃಷ್ಟಿಯ ಆರಾಧಕರು ನಂಬುತ್ತಾರೆ.

ವ್ಯಕ್ತಿ ಸೃಷ್ಟಿಸಿದ ಅಥವಾ ಉಪಯೋಗಿಸಿದ ವಸ್ತುಗಳನ್ನು ಅಭ್ಯಸಿಸುವ ಮೂಲಕ ಆತನ ಗುಣಾವಗುಣಗಳನ್ನು ಕಂಡುಹಿಡಿಯುವದು ಭೌತ ಸಾಮೀಪ್ಯ ವೈಚಾರಿಕರ ಉದ್ದೇಶ.

ಯಾವದೇ ವ್ಯಕ್ತಿಯ ಸಮ್ಮೋಹಕ ಶಕ್ತಿಯಲ್ಲಿ ವಿಶ್ವಾಸವಿಟ್ಟಿರುವವ ಆತನಿಂದ ಸಮ್ಮೋಹಿತನಾಗಬಹುದು. ಸಮ್ಮೋಹಿತನಾದವನ ಕಾಯಿಲೆಗಳ ಸುಪ್ತಕಾರಣಗಳೂ ಇಲ್ಲವಾಗಬಹುದು. ಅದೇ ವೇಳೆ ಸಮ್ಮೋಹಿತನಾದ ವ್ಯಕ್ತಿ ತನ್ನ ಆತ್ಮವಿಶ್ವಾಸ ಕ್ರಮೇಣ ಕ್ಷೀಣಿಸುತ್ತಿರುವದನ್ನೂ ಮನಗಾಣಬಹುದು.

ಜೀವಂತ ವ್ಯಕ್ತಿಗಳು ಮತ್ತು ಬೇರಿನ್ನಾವದೋ ರೂಪದಲ್ಲಿ ಅಸ್ತಿತ್ವದಲ್ಲಿರುವವರ ಮಧ್ಯದಲ್ಲಿ ಸಂಪರ್ಕ ಸಾಧ್ಯವೆಂದು ಅನ್ಯಜೀವ ಸಂಪರ್ಕವಾದಿಗಳ ಅಭಿಪ್ರಾಯ. ಇಂಥ ನಂಬುಗೆಯನ್ನು ಹಂಚಿಕೊಳ್ಳುವವರೆಲ್ಲರೂ ಸೇರಿ ಧಾರ್ಮಿಕ ಸ್ವರೂಪದ ಸಂಘಟನೆಯೊಂದನ್ನು ರೂಪಿಸಿಕೊಂಡಿರುತ್ತಾರೆ.

ನಮಗೆ ಗೊತ್ತಿದ್ದ ಮಾಧ್ಯಮಗಳನ್ನುಳಿದು ಒಂದು ಮನಸ್ಸು ದೂರದ ಇನ್ನೊಂದು ಮನಸ್ಸನ್ನು ಪ್ರಭಾವಗೊಳಿಸುತ್ತದೆ ಎಂದು ದೂರ ಮನಸ್ಪರ್ಶನವಾದದ ಪ್ರಚಾರಕರು ತಿಳಿಯುತ್ತಾರೆ.

ಜಟಿಲವಾದ ಈ ಹಲವು ಬಗೆಯ ಪ್ರಭಾವಗಳಿಂದ ರೂಪುಗೊಳ್ಳುತ್ತಿರುವ ವ್ಯಕ್ತಿತ್ವವನ್ನು ಅಳೆಯುವದು ಎಂಥ ಪ್ರಯಾಸದ ಕೆಲಸ ಎಂದು ಈಗ ತಿಳಿದಿರಬೇಕಲ್ಲ? ಈ ವಿಚಾರಗಳನ್ನೇ ಮೆಲುಕು ಹಾಕುತ್ತ ವಿಶ್ರಮಿಸಿ. ●



ಅಜಿತ್ ಅಗರಕರ್

ಕಪಿಲ್ ಹಾದಿಯಲ್ಲಿ.....

ಕಪಿಲ್‌ದೇವ್ ನಿಖಾಂಜ್ ಅಂತರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ ನಂತರ ಭಾರತಕ್ಕಿನ್ನೂ ಅವರ ಸ್ಥಾನ ತುಂಬಬಲ್ಲ 'ಇನ್ನೊಬ್ಬ ಕಪಿಲ್' ದೊರೆಯದೇ ಇರುವುದು ಗುಟ್ಟಿನ ವಿಷಯ ವೇನಲ್ಲ. ಮೊದಲು ಮನೋಜ್ ಪ್ರಭಾಕರ್ ನಂತರ ಜಾವಗಲ್ ಶ್ರೀನಾಥ್. ರಾಬಿನ್‌ಸಿಂಗ್ ಈ ಸ್ಥಾನ ತುಂಬುವ ಪ್ರಯತ್ನ ಮಾಡಿದರಾದರೂ ಅವರ ಆಲ್‌ರೌಂಡ್ ಸಾಧನೆ 'ಹರ್‍ಯಾನಾ ಬಿರುಗಾಳಿ' ಯ ಸನಿಹ ಸಹ ಬರಲಿಲ್ಲವೆಂದರೆ ತಪ್ಪಾಗಲಾರದು. ಆಯ್ಕೆದಾದರರೂ ಕಪಿಲ್ ಬದಲಿ ಆಟಗಾರರನ್ನು ಹುಡುಕುವುದರಲ್ಲಿ ವಿಫಲರಾದರು.

ಕಪಿಲ್ ಸ್ಥಾನ ತುಂಬಬಲ್ಲ ಕ್ರಿಕೆಟ್ಟಿಗ ದೊರೆಯುವುದೇ ಅಸಾಧ್ಯವೇನೋ ಎಂದೆನಿಸಿದ್ದಾಗ, ಕಾರ್ಮೋಡದ ಮರೆಯಿಂದ ತೂರಿಬಂದ ರವಿಯ ಕಿರಣದಂತೆ ಗೋಚರವಾಗಿರುವವರು ಮುಂಬೈನ ಆಲ್‌ರೌಂಡರ್ ಅಜಿತ್ ಬಾಲಚಂದ್ರ ಅಗರಕರ. ಕಪಿಲ್‌ರಂತಹ 'ಆಳು' ಅಲ್ಲದಿದ್ದರೂ, ಅವರ ಸಾಧನೆಯ ಬಹುಪಾಲನ್ನಾದರೂ ಪುನರಾವರ್ತಿಸಬಲ್ಲ ಸಾಮರ್ಥ್ಯ ತಮಗಿದೆಯೆಂದು ತೋರಿಸಿಕೊಡಲು ಈ ಹುಡುಗ ಬಹಳ ಸಮಯವನ್ನೇನೂ ತೆಗೆದುಕೊಂಡಿಲ್ಲ.

ಮೊನ್ನೆ ಮೊನ್ನೆಯಷ್ಟೇ ಶಾರ್ಜಾದಲ್ಲಿ ಅಜಿತ್ ಸಾಧನೆ 'ಕಪಿಲ್ ದಿನ'ಗಳ ನೆನಪನ್ನು ಮರುಕಳಿಸದೇ ಇರದು. ನ್ಯೂಜಿಲ್ಯಾಂಡ್ ಎದುರಿನ ಪಂದ್ಯ ಕೈ ತಪ್ಪಿಯೇ ಹೋಯಿತೇನೋ ಎಂದೆನಿಸಿದಾಗ ಅಜರ್‌ರಿಂದ ದಾಳಿಗಿಳಿಸಲ್ಪಟ್ಟ ಅವರು ಅಸಾಧ್ಯವೆನಿಸಿದ್ದನ್ನು ಸಾಧಿಸಿಯೂ ಬಿಟ್ಟರು. ೩೫ ಓಟಗಳಿಗೆ ನಾಲ್ವರನ್ನು ಆಹುತಿ ತೆಗೆದುಕೊಳ್ಳುವ ಮೂಲಕ ಅಜಿತ್ ಭಾರತಕ್ಕೆ ಫೈನಲ್ ತಲುಪಲು ನೆರವಾಗಿ ಗೆಲುವು ದೊರಕಿಸಿಕೊಟ್ಟರು.

ಅಜಿತ್‌ರ ೩೫ಕ್ಕೆ ೪ ರ ಸಾಧನೆ, ಆರು ಪಂದ್ಯಗಳಲ್ಲಿ ಅವರ 'ಬಲಿ'ಗಳ ಸಂಖ್ಯೆಯನ್ನು ೧೪ಕ್ಕೇರಿಸಿತು. ಅದರೊಂದಿಗೆ ಅವರು ಲೆಗ್‌ಸ್ಪಿನ್ನರ್ ನರೇಂದ್ರ ಹಿರ್ವಾನಿ ಅವರ ಮೊದಲ ನಾಲ್ಕು ಪಂದ್ಯಗಳಲ್ಲಿ ಅತ್ಯಧಿಕ ಹುದ್ದರಿಗಳು ರಾಷ್ಟ್ರೀಯ ದಾಖಲೆಯನ್ನು ಸರಿಗಟ್ಟಿದರು. (ತಮ್ಮ ಮೊದಲ ೬ ಪಂದ್ಯಗಳಲ್ಲಿ ೧೬ ವಿಕೆಟ್‌ಗಳ ಸಾಧನೆಯ ವಿಶ್ವ ದಾಖಲೆ ದಕ್ಷಿಣ ಆಫ್ರಿಕದ ಆಲನ್ ಡೋನಾಲ್ಡ್ ಅವರ ಹೆಸರಿನಲ್ಲಿದೆ). ವಿಶ್ವ ಸಾಧನೆಯ ಲೆಕ್ಕಾಚಾರ ಹಾಕಿದಲ್ಲಿ ಅಜಿತ್ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ. ಶಾರ್ಜಾದಲ್ಲಿ ಕೀವೀಸ್ ಎದುರು ಇದು ಭಾರತೀಯ ಬೌಲರ್ ಒಬ್ಬರ ಅತ್ಯುತ್ತಮ ಸಾಧನೆಯೂ ಹೌದು. ಹಿಂದೆ, ೧೯೮೮ರ ಮಾರ್ಚ್ ೨೭ರಂದು ನರೇಂದ್ರ ಹಿರ್ವಾನಿ ೪೩ ಓಟ ನೀಡಿ ೪ ವಿಕೆಟ್ ಪಡೆದಿದ್ದರು. ಅಜಿತ್‌ರ ಅತ್ಯಲ್ಪ ಸಮಯದ ಅತ್ಯುತ್ತಮ ಸಾಧನೆಯೂ ಸಹ ಇದೇ. ಇದಕ್ಕೂ ಮೊದಲು ಅವರು ಆಸ್ಟ್ರೇಲಿಯಾದ ಎದುರಿನ ಏಕದಿನ ಅಂತಾರಾಷ್ಟ್ರೀಯ ಪಂದ್ಯದಲ್ಲಿ (ಕಾನಪುರದ ಗ್ರೀನ್‌ಪಾರ್ಕ್‌ನಲ್ಲಿ) ೪೬ ಓಟ ನೀಡಿ ನಾಲ್ಕು ವಿಕೆಟ್‌ನ್ನು ಕೆಡವಿದ್ದನ್ನೂ ಇಲ್ಲಿ ಸ್ಮರಿಸಿಕೊಳ್ಳಬಹುದು.

ಅಜಿತ್ ಅಗರಕರ ಮುಂಬೈನ ಶಿವಾಜಿ ಪಾರ್ಕ್‌ನ 'ಪ್ರಾಡಕ್ಟ್', ತಮ್ಮ ರಣಜಿನಾಯಕ ಸಚಿನ್ ತೆಂಡೂಲ್ಕರ್, ವಿನೋದ ಕಾಂಬ್ಳಿ ಹಾಗೂ ಪ್ರವೀಣ್ ಅಮ್ರೆ ಅವರಂತೆ ರಮಾಕಾಂತ ಆಚರೇಕರರ 'ಗರಡಿ'ಯಿಂದಲೇ ಹೊರ ಬಂದವರು. ಪ್ರಾರಂಭದಲ್ಲೆಲ್ಲ ಅವರ ಗಮನ ಬ್ಯಾಟಿಂಗದತ್ತಲೇ. ತಮ್ಮ ಶಾಲೆ ಶಾರದಾಶ್ರಮದ ಪರ ಆಡುವಾಗ ಅಂತರ ಶಾಲಾ ಕ್ರಿಕೆಟ್ ಟೂರ್ನಿಯಲ್ಲಿ ತ್ರಿಶತಕ (೩೪೫) ಹೊಡೆದಿದ್ದೂ ಇದೆ. ಆದರೆ ಅಜಿತ್ ಕೇವಲ ಬ್ಯಾಟ್ಸಮನ್ ಆಗಿ ಬೆಳೆಯುವುದು ಅವರ 'ಗುರು'ವಿಗೆ ಇಷ್ಟವಿರಲಿಲ್ಲ. ಬೌಲಿಂಗ್ ಬಗ್ಗೆಯೂ ಗಮನ ಹರಿಸುವಂತೆ ಆಜ್ಞಾಪಿಸಿದರು. ಗುರುವಿನಾಣತಿಯನ್ನು ಚಾಚೂ ತಪ್ಪದೇ ಪಾಲಿಸಿದ ಅಜಿತ್ ಈಗ ಕಪಿಲ್‌ರಂತಹ ಮಹಾನ್ ಆಟಗಾರರೊಬ್ಬರ ಸ್ಥಾನ ತುಂಬಬಲ್ಲ ಭರವಸೆ ಮೂಡಿಸಿರುವುದು ಭಾರತೀಯ ಕ್ರಿಕೆಟ್‌ನಲ್ಲಿ ಸಂಭವಿಸಿರಬಹುದಾದ ಸಂತಸದ ಘಟನೆಯೇ ಸರಿ.

ಭಾರತೀಯ 'ಎ' ತಂಡದೊಡನೆ ಪಾಕ್ ಪ್ರವಾಸ ಮಾಡಿದಾಗಲೇ ಅಜಿತ್‌ರ ಸಾಮರ್ಥ್ಯದ ಅರಿವು ಮೂಡಿದ್ದು. ಒಂದು ಭರ್ಜರಿ ಶತಕ ಹಾಗೂ ಸಾಕಷ್ಟು 'ಬಲಿ' ಗಳು ಭಾರತದ ಗೆಲುವಿಗೂ ಕಾರಣವಾದವು. ದಕ್ಷಿಣ ಆಫ್ರಿಕಕ್ಕೆ ಬಸ್ ತಪ್ಪಿಸಿಕೊಂಡ ಹಲವು ಹಿರಿಯ, ಅನುಭವಿ ಪಾಕ್ ಆಟಗಾರರ ಎದುರು 'ಈ ಹುಡುಗ' ನ ಅಸಾಮಾನ್ಯ ಪ್ರದರ್ಶನ ರಾಷ್ಟ್ರೀಯ ಆಯ್ಕೆದಾರರ ಗಮನ ಸೆಳೆಯಲು ಹೆಚ್ಚು ಸಮಯ ತೆಗೆದುಕೊಳ್ಳಲೇ ಇಲ್ಲ. ಆಮೇಲೆ ನಡೆದಿದ್ದೆಲ್ಲವೂ ಕ್ರಿಕೆಟ್ ವಿಶ್ವಕ್ಕೇ ಗೊತ್ತಿರುವ ವಿಷಯ.


ಕಟ್ಟು ಮಸ್ತಾದ ಆಳು ಅಲ್ಲದೇ ಇರುವುದರ ಹಿನ್ನೆಲೆಯಲ್ಲಿ ಅಜಿತ್ ದೊರಕಿಸಿಕೊಳ್ಳುವ ವೇಗ ಹಲವು ಖ್ಯಾತನಾಮರನ್ನೂ ಈ ಅಲ್ಪಾವಧಿಯಲ್ಲೇ ಚಕಿತಗೊಳಿಸಿದೆ. ಪುಟ ಬೀಳುತ್ತಲೇ ಒಮ್ಮೆಲೇ ನುಗ್ಗುವ ಅವರ 'ಎಕ್ಸ್‌ಪ್ರೆಸ್' ಚೆಂಡನ್ನು ಹಲವರು ಅರ್ಥವಾಗದೇ ವಿಕೆಟ್ ಹಿಂದೆಯೋ, ಅಥವಾ ಸ್ಲಿಪ್ ಫೀಲ್ಡರ್‌ಗಳ ಕೈಯಲ್ಲೋ ಚುಚ್ಚಿಕೊಟ್ಟು ನಿರ್ಗಮಿಸಿದ್ದೂ ಇದೆ. ಶಾರ್ಜಾದಲ್ಲಿ ನ್ಯೂಜಿಲಂಡ್ ಎದುರಿನ ಪಂದ್ಯದ ನಂತರ ತೊಡೆನೋವಿನಿಂದ ಮುಂದಿನ ಮೂರು ಪಂದ್ಯ ಆಡದಾದಾಗ ಅವರ ಗೈರು ಹಾಜರಿ ಎದ್ದು ಕಂಡಿದ್ದು ಸುಳ್ಳೇನಲ್ಲ.

ಅಜಿತ್ ಹೆಗಲಿಗೆ ಈಗ ಇನ್ನೊಂದು ಮಹತ್ವದ ಜವಾಬ್ದಾರಿಯಿದೆ. ತಮ್ಮ ಭವಿಷ್ಯದ ಜೀವನವನ್ನೂ ಸೂಕ್ತವಾಗಿ ಯೋಚಿಸಿಕೊಳ್ಳಬೇಕಾದ ಕೆಲಸ ಅವರದೇ. ಪ್ರಾರಂಭದ ಯಶಸ್ಸಿನ ಹುರುಪಿನಲ್ಲಿ 'ಉರಿದುಹೋಗುವ' ರೀತಿಯಲ್ಲಿ ಬೌಲ್ ಮಾಡಿ ನಂತರ ಅಲ್ಪ ಸಮಯದಲ್ಲೇ ಹೇಳ ಹೆಸರಿಲ್ಲದಂತೆ ಮಾಯವಾದ ಎಷ್ಟೋ ಕ್ರಿಕೆಟ್ಟಿಗರ, ಅದರಲ್ಲೂ ಮುಖ್ಯವಾಗಿ ವೇಗದ ಬೌಲರ್‌ಗಳ ಉದಾಹರಣೆ ಅವರ ಎದುರಿನಲ್ಲೇ ಇದೆ. ತಮ್ಮ ತೋಳುಗಳಲ್ಲಿ ಬಲ ತುಂಬಬೇಕಾದ್ದು ಅವರ ಪ್ರಥಮ ಆದ್ಯತೆಯಾಗಬೇಕು ಎಂದು ಹಲವು 'ಪಂಡಿತ'ರು ಹೇಳಿರುವುದು ತಪ್ಪಲ್ಲ. ಚೆನ್ನೈ ನಲ್ಲಿರುವ ಡೆನಿಸ್ ಲಿಲ್ಲಿ ನಿರ್ದೇಶನದ ಎಂ. ಆರ್. ಎಫ್. ಪೇಸ್ ಫೌಂಡೇಷನ್ ಅಥವಾ ಜಾವಗಲ್ ಶ್ರೀನಾಥ ರಂತಹ ಹಿರಿಯರು ಅವರ ನೆರವಿಗೆ ಬರಬಹುದು.

ಅರವತ್ತರ ದಶಕದಲ್ಲಿಯ ರಮಾಕಾಂತ ದೇಸಾಯಿಯವರನ್ನು ನೆನಪಿಸುವಂತೆ ಬೌಲ್ ಮಾಡುವ ಈ 'ಮುಂಬೈಕರ' ನಮ್ಮ ಕ್ರಿಕೆಟನ ಭವಿಷ್ಯದ ಆಸ್ತಿ ಎನ್ನುವುದರಲ್ಲಿ ಎರಡು ಮಾತಿಲ್ಲ. ನಮ್ಮ ಕ್ರಿಕೆಟ್ ನಿಯಂತ್ರಣ ಮಂಡಳಿ, ಅದರ 'ಚಿಂತಕರ ಚಾವಡಿ' ಈ ಪ್ರತಿಭೆಯನ್ನು ಹೇಗೆ ಬಳಸಿಕೊಳ್ಳುತ್ತದೆ ಎನ್ನುವುದೀಗ ಮಿಲಿಯನ್ ಡಾಲರ್‌ಗಳ ಪ್ರಶ್ನೆ!

○ ವಸಂತ ಮುರ್ಡೇಶ್ವರ

ಪದಬಂಧ - ೫



ಪದಬಂಧ ೪ರ ಸರಿಯುತ್ತರ

ಎಡದಿಂದ ಬಲಕ್ಕೆ:

೧. ಸುವರ್ಣಾಕ್ಷರ, ೪. ನಕಲಿ ಜನ, ೭. ಕರಚ, ೯. ತೋರಣ, ೧೦. ಕರ, ೧೧. ನೆನಪುಹಾರು, ೧೪. ತಿಪ, ೧೬. ರಿಕ, ೧೮. ಪರಿಚಾರಕ, ೨೧. ಮಗ, ೨೨. ಪಗಾರ, ೨೩. ಡಮರು, ೨೪. ಜನ ಸಂದಣಿ ೨೫. ಮರಣಾಂತಿಕ.

ಮೇಲಿನಿಂದ ಕೆಳಕ್ಕೆ :

೨. ವರ ಶಂಕರ, ೩. ಕ್ಷಮೆಯಾಚನೆ, ೫. ಕರುಣೆತೋರು, ೬. ಜನಗಣತಿ, ೮. ಸಂಪು, ೧೦. ಕತಾರಿ, ೧೨. ನಗಾರಿ, ೧೩. ಹಾಜರ, ೧೫. ಪತಂಗ, ೧೭. ಕಪಟತನ, ೧೮. ಪರಮಾನಂದ, ೧೯. ಘಾಟಿ, ೨೦. ಕಡಲತೀರ, ೨೧. ಮರುಪಾವತಿ.

ಎಡದಿಂದ ಬಲಕ್ಕೆ


೧. ಭಕ್ತರು ದೇವರಿಗಾಗಿ ಕಟ್ಟಿಸಿದ ಗುಡಿ………… (೪)
೪. ಕಳೆದುಕೊಂಡ ನಂತರ ದುಃಖಿಸಲು ಕಾರಣವಾದ ಬಚ್ಚಿಟ್ಟ ಹಣ… (೪)
೬. ನಾಗರೀಕರಿಂದ ಪೂಜಿಸಿಕೊಳ್ಳುವ ಶ್ರೇಷ್ಠವಾದ ಸರ್ಪ ತಿರುಗಿದೆ… (೨)
೮. ಹಲವಾರು ಜನರು ಸಾಯಲು ಕಾರಣವಾದ ವಿಷವುಳ್ಳ ಗೌಳಿ…… (೨)
೯. ಗಾಡಿ ಮುಂದೆ ಚಲಿಸಲು ಬಳಸಿದ ಚಕ್ರ………… (೨)
೧೦. ಕತೆಯ ನಂತರ ಹೇಳಿದ ಹಾಡು………… (೩)
೧೨. ಬುಡ ಮೇಲಾಗಿ ಬಿದ್ದ ಮರ………… (೨)
೧೫. ಭಾರತದ ಪ್ರಥಮ ಅಂತರಿಕ್ಷ ಯಾತ್ರಿಕ………… (೫)
೧೮. ಆಹಾಕಾರವೆದ್ದಾಗ ಕುಡಿಯಲು ಕೊಟ್ಟ ಕ್ಷೀರ………… (೨)
೧೯. ಅನೇಕಾನೇಕ ಪ್ರಾಣಿಗಳು ವಾಸಿಸುವ ದಟ್ಟವಾದ ಕಾಡು………… (೩)
೨೧. ಒಳ್ಳೆಯ ಸ್ವಭಾವ ಹೊಂದಿದ ಹೆಂಡತಿಯ ಸಹೋದರ………… (೨)
೨೨. ಹಣ ಕೊಟ್ಟು ಕೇಳಿದ ಶಕುನ………… (೨)
೨೩. ಕುಂಡಲಿಯಲ್ಲಿ ಗ್ರಹಗತಿ ತಿಳಿಯಲು ಬಳಸಿದ ಮಂಗಳ………… (೨)
೨೫. ನಿರಂತರವಾಗಿ ದುಃಖ ಅನುಭವಿಸಿದ ಅದೃಷ್ಟ ಹೀನ………… (೪)
೨೬. ಹೊಸದಾಗಿ ದೊರೆತ ಬೆಲೆಬಾಳುವ ಒಂಭತ್ತು ಮುತ್ತುಗಳು… (೪)

ಮೇಲಿನಿಂದ ಕೆಳಕ್ಕೆ

೨. ವರ ಪುರುಷನಂತೆ ಪತ್ರಿಕೆಗಳಿಗೆ ಸುದ್ದಿಗಳನ್ನು ತಂದುಕೊಡುವವನು (೫)
೩. ನಗರದಲ್ಲಿ ಕಳೆದುಕೊಂಡ ಆಭರಣ………… (೨)
೪. ಮಾವಿನಕಾಯಿ ಹರಿಯಲು ಬಳಸಿದ ಬಲೆಯಂತ ಕುಕ್ಕಿ………… (೨)
೫. ಗತ ಕಾಲದವರೆಗೂ ಒಂದಾಗಿ ಬಾಳಿದ ಪತಿ-ಪತ್ನಿ………… (೫)
೭. ಅಮಾಯಕನಂತಿರುವ ಜನರ ಮುಖಂಡ………… (೩)
೮. ಹಣ ಕೊಟ್ಟು ತಂದ ಮಣ್ಣಿನ ದೀವಿಗೆ………… (೩)
೧೧. ವಿಷಯಗಳನ್ನು ತಿಳಿಯಲು ಮಾಡಿದ ಪರದೇಶದ ಪ್ರವಾಸ………… (೫)
೧೩. ಕುಳಿತು ಓದಿದ ಮುಸ್ಲಿಂ ಬಾಂಧವರ ಗ್ರಂಥ………… (೩)
೧೪. ದುರ್ನಡತೆಯವರಿಗಾಗಿಯೇ ಮೀಸಲಾಗಿರುವ ಕೆಟ್ಟದಾರಿ………… (೩)
೧೬. ಮಹಾತ್ಮರು ಆಶ್ರಯಿಸಿದ ಅತೀ ದೊಡ್ಡ ಗುಡ್ಡ………… (೫)
೧೭. ಕಾಲುನೋವಾದರೂ ಕರ್ತವ್ಯ ವಹಿಸಲೇಬೇಕಾದ ಪಹರೆ ಮಾಡುವವ………… (೫)
೧೯. ಕಣ್ಣಿದ್ದವರಿಗೆ ಬಂದ ಹಳದಿ ರೋಗ………… (೩)
೨೦. ಕನಸು ಕಾಣುವ ಅರೋಣದಯ ಕಾಲ………… (೩)
೨೨. ಅಷ್ಟ ದಿಕ್ಪಾಲಕರೂ ಅನುಭವಿಸಿದ ದುಃಖ ತೊಂದರೆ………… (೨)
೨೪. ಅಂಜನ ಹಚ್ಚಿಕೊಂಡು ದ್ರವ್ಯ ಹುಡುಕುವ ಮಂದಿ………… (೨)

○ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)



○ 'ಸಿಸು' ಸಂಗಮೇಶ

ಅಮ್ಮನ ಚಿತ್ರ

ಅಮ್ಮ ನಿನ್ನ ಕುರಿತು ಕವಿತೆ
ಬರೆಯಬೇಕು ಎಂದು,
ಲೆಕ್ಕಣಿಯ ಹಿಡಿದೆ ನಾನು
ಯೋಚಿಸುತ್ತ ಅಂದು.
ನಿನ್ನ ಹೃದಯದಲ್ಲಿ ಹರಿವ
ಮಮತೆ, ಸಹನೆ ಕಂಡು,
ಲೆಕ್ಕಣಿಯೆ ಹೆಳವನಾಯ್ತು
ಅಲ್ಲೇ ನಿಂತು ಕೊಂಡು!
ಅಮ್ಮ ನಿನ್ನ ಕುರಿತು ಚಿತ್ರ
ಬರೆಯಬೇಕು ಎಂದು,
ಹಾಳೆ-ಕುಂಚ ಹಿಡಿದೆ ನಾನು
ಕಲ್ಪನೆಯಲಿ ಅಂದು.
ಬಣ್ಣ, ಗೆರೆಗಳಲ್ಲಿ ಹಿಡಿವ
ಸಾಹಸದಿರೆ ನಾನು,
ಯಾವ ಬಣ್ಣ ಗೆರೆಗಳಲ್ಲೂ
ಸಿಕ್ಕದಾದೆ ನೀನು!
ಅಮ್ಮ ನಿನ್ನ ಕುರಿತು ಮಾತ-
ನಾಡಬೇಕು ಎಂದು,
ಶಾಲೆಯೊಳಗೆ ನಿಂತೆ ನಾನು
ಸ್ಟೇಜನೇರಿ ಅಂದು
ನಿನ್ನ ರಾಗ ರಂಗು ಮಹಿಮೆ
ಹಿರಿಯ ಗುಣಗಳನ್ನು
ಬಣ್ಣಿಸಲು ಶಬ್ದ ಸಿಗದೆ
ಜಿಹ್ವೆಯಾಯ್ತು ಖಿನ್ನ!
ನನ್ನಲಿರುವ ಬಣ್ಣ, ಬರಹ
ನಿನ್ನ ಮಸ್ತಕಕ್ಕೆ
ಇನ್ನು ಸೋತು ನಮಿಸುತಿಹವು
ಬೇಡಿ ಮೌನ ಭಿಕ್ಷೆ.

○ ಗುರುರಾಜ ಬೆಣಕಲ್

ಗೂಡು ಕಟ್ಟಿ ನೋಡು

ಒಂದು ಗುಬ್ಬಚ್ಚಿ ಇತ್ತು. ಅದು ನಿತ್ಯವೂ ಒಣಹುಲ್ಲುಕಡ್ಡಿಗಳನ್ನು ಆರಿಸಿಕೊಂಡು ಬಂದು ಒಂದು ಮರದ ಮೇ(ಲೆ)ಲಿನ ಕೊಂಬೆಯಲ್ಲಿ ಗೂಡನ್ನು ಕಟ್ಟಿಕೊಳ್ಳುತ್ತಿತ್ತು. ಗೂಡನ್ನು ಕಟ್ಟಲು ಮೂರುದಿನಗಳು ಬೇಕಾದವು. ಮೂರು ದಿನಗಳ ಕಾಲ ಕುಶಲತೆಯಿಂದ ಗೂಡನ್ನು ರಚಿಸಿ ಗೂಡಲ್ಲಿ ಅತ್ತಿತ್ತ ಸಂತೋಷದಿಂದ ಹಾಡುತ್ತಾ ಓಡಾಡ ತೊಡಗಿತು. ನಂತರ ನಿತ್ಯವೂ ಮುಂಜಾನೆ ಧಾನ್ಯದ ಕಣಗಳನ್ನು ತರತೊಡಗಿತು.

ಒಂದು ದಿನ ಒಂದು ಕಪಿಯು ಆ ಮರದ ಅದೇ ಟೊಂಗೆಯ ಮೇಲೆ ಕುಳಿತುಕೊಂಡಿತು. ಗುಬ್ಬಿಯ ಗೂಡನ್ನು ಕಂಡಿತು. ಕಪಿ ಚೇಷ್ಟೆಗೆ ತೊಡಗಿತು. ಗೂಡನ್ನು ಕಿತ್ತೆಸೆದು ಓಡಿಹೋಯಿತು.

ಸಂಜೆ ಹೊತ್ತು ಗುಬ್ಬಚ್ಚಿ ಗೂಡಿಗೆ ಹಿಂತಿರುಗಿತು. ಆದರೆ ಅಲ್ಲಿ ಗೂಡೇ ನಾಪತ್ತೆ! ಮತ್ತೆ ಮರುದಿನ ಗೂಡನ್ನು ಕಟ್ಟಲು ತೊಡಗಿತು. ಮತ್ತೆ ಮೂರುದಿನಗಳ ಕಾಲ ಹಗಲಿರುಳೂ ಗೂಡು ಕಟ್ಟಲು ಶ್ರಮಿಸಿತು. ಚೇಷ್ಟೆಯ ಕಪಿ ಮತ್ತೆ ಅಲ್ಲಿಗೆ ಬಂತು. ಗೂಡನ್ನು ಹರಿದೆಸೆದು ಓಡಿಹೋಯಿತು. ಗುಬ್ಬಚ್ಚಿ ಸಂಜೆ ಬಂದಾಗ ಮತ್ತೆ ಈ ದುರಂತವನ್ನು ಕಂಡು ಮನಸಾರೆ ನೊಂದಿತು. ಮೌನವಾಗಿಯೇ ಮನೆಕಟ್ಟಿತು. ಮತ್ತೆ ಮತ್ತೆ ನಾಲ್ಕಾರು ಸಾರೆ ಹೀಗೆಯೇ ನಡೆಯಿತು.

ಒಂದು ದಿನ ಕೋತಿಯು 'ನಾನು ಮತ್ತೆ ಮತ್ತೆ ಗೂಡನ್ನು ಕಿತ್ತೆಸೆದರೂ ಈ ಗುಬ್ಬಚ್ಚಿ ಮತ್ತೆ ಮತ್ತೆ ಹೊಸಗೂಡನ್ನು ಕಟ್ಟುತ್ತಿದೆಯಲ್ಲ! ಅದು ಹೇಗೆ ಗೂಡು ಕಟ್ಟುತ್ತದೆ ನೋಡಿಯೇ ಬಿಡೋಣ' ಎಂದು ಚಿಂತಿಸಿತು.

ಮರದ ಕೊಂಬೆಯ ಹಿಂದೆ ಅವಿತುಕೊಂಡು ಕಾಯುತ್ತಾ ನೋಡುತ್ತಾ ಕುಳಿತಿತು. ಗುಬ್ಬಚ್ಚಿಯು ಒಂದೊಂದೇ ಹಲ್ಲುಕಡ್ಡಿಗಳನ್ನು, ಗರಿಗಳನ್ನು ತರುತ್ತಿತ್ತು. ಗೂಡನ್ನು ಕಟ್ಟಲು ತೊಡಗಿತ್ತು. ಯಾರ ಸಹಾಯವನ್ನೂ ಪಡೆದಿರಲಿಲ್ಲ. ಅದರ ಕೆಲಸವನ್ನು ಕಂಡು ಕಪಿಗೆ ದಯೆಮೂಡಿತು.

ಕಪಿಗೆ ದುಃಖವಾಯಿತು. 'ಛೆ! ನಾನು ಈ ರೀತಿ ಗೂಡನ್ನು ಕಿತ್ತು ಹಾಕಬಾರದಿತ್ತು. ಈಗ ಗೂಡನ್ನು ನಾನೇ ಕಟ್ಟುತ್ತೇನೆ' ಎಂದು ನಿರ್ಧರಿಸಿತು.

ಎಲ್ಲೆಲ್ಲಿಂದಲೋ ಸಾಕಷ್ಟು ಹುಲ್ಲು ಕಡ್ಡಿ ತರಗೆಲೆಗಳನ್ನು ತಂದಿತು. ಅನಂತರ ಕಪಿ ಹುಲ್ಲುಕಡ್ಡಿಗಳನ್ನು ಸೇರಿಸಿ ಗೂಡು ಕಟ್ಟುವ ಪ್ರಯತ್ನಕ್ಕೆ ತೊಡಗಿತು. ಅದೆಷ್ಟು ರೀತಿಯಿಂದ ಕಡ್ಡಿಗಳನ್ನು ಸೇರಿಸಿದರೂ, ಹುಲ್ಲು ತರಗೆಲೆಗಳನ್ನು ಹೊದೆಸಿದರೂ ಕೂಡಿಕೊಳ್ಳುತ್ತಿರಲಿಲ್ಲ. ಗೂಡು ಕಟ್ಟುವುದು ಸಾಧ್ಯವಾಗಲಿಲ್ಲ. ಮನೆ ಕುಟ್ಟುವುದು ಸುಲಭ. ಕಟ್ಟುವುದು ಸುಲಭವಲ್ಲ ಎಂದು ಕಪಿಗೆ ಅರ್ಥವಾಯಿತು.

ಕಟ್ಟುವ ಕೆಲಸ ಮಾಡಲಾಗದಿದ್ದರೂ ಒಡೆಯುವ ಕೆಲಸ ಮಾಡಬಾರದು ಎಂಬುದು ಕಪಿಗೆ ತಿಳಿಯಿತು. 'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ' ಎಂಬ ಗಾದೆಯ ಸಂದೇಶವೂ ಇದೇ ಅಲ್ಲವೆ!

○ ಕೊಕ್ಕಡ ವೆಂಕಟ್ರಮಣ ಭಟ್

ಮಕ್ಕಳೇ, ನೀವೂ ಬರೆಯಿರಿ

ಕಳೆದ ತಿಂಗಳು ವಿದ್ಯಾರ್ಥಿಗಳೆಲ್ಲ ಪರೀಕ್ಷೆಯ ಸಿದ್ಧತೆಯಲ್ಲಿ ಮುಳುಗಿರುತ್ತಾರೆ ಎಂಬ ಕಾರಣದಿಂದ ಏಪ್ರಿಲ್ ಸಂಚಿಕೆಯಲ್ಲಿ ಮಕ್ಕಳಿಗಾಗಿ ಯಾವುದೇ ವಿಷಯ ನೀಡಿರಲಿಲ್ಲ. ಈಗ ಪರೀಕ್ಷೆಗಳೆಲ್ಲಾ ಮುಗಿದು ಮುಂದಿನ ಶೈಕ್ಷಣಿಕ ವರ್ಷದ ಬಗ್ಗೆ ನೀವೆಲ್ಲಾ ಆಲೋಚಿಸುತ್ತಿರಬಹುದು. ಮೇ ತಿಂಗಳು ರಜಾ ಸಮಯವಾದ್ದರಿಂದ ನೀವು ವಿರಾಮವಾಗಿ ಕುಳಿತು 'ಬದುಕು' ಪತ್ರಿಕೆಗೆ ಪುಟ್ಟ ಲೇಖನ ಬರೆಯಬಾರದೇಕೆ? ಈ ಬಾರಿ ನಿಮಗೆ ನೀಡುತ್ತಿರುವ ಬರಹದ ವಿಷಯ: 'ರಜಾ ದಿನಗಳು'. ಏಪ್ರಿಲ್ ತಿಂಗಳ ರಜೆಯ ಸಮಯವನ್ನು ನೀವು ಹೇಗೆ ಕಳೆದಿರಿ ಎಂಬುದರ ಬಗ್ಗೆ ಚಿಕ್ಕದಾಗಿ, ಸ್ಪಷ್ಟವಾಗಿ ಬರೆಯಿರಿ. ಆಯ್ದ ಬರಹಗಳನ್ನು ಮುಂದಿನ ಸಂಚಿಕೆಯಲ್ಲಿ ನಿಮ್ಮ ಹೆಸರಿನೊಂದಿಗೆ ಪ್ರಕಟಿಸುತ್ತೇವೆ. ನೀವು ಈ ಅಂಕಣಕ್ಕೆ ಬರೆಯಲು 'ಕಿಲ ಕಿಲ ಕೂಪನ್' ಕಳಿಸುವ ಅಗತ್ಯವಿಲ್ಲ. ೧೫ ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಮಾತ್ರ ಇದರಲ್ಲಿ ಭಾಗವಹಿಸಲು ಅವಕಾಶವಿದೆ. ನಿಮ್ಮ ಬರಹ ನಮಗೆ ತಲುಪಲು ಅಂತಿಮ ದಿನಾಂಕ: ೧೮.೫.೯೯೮.

ವಿಳಾಸ :

ಸಂಪಾದಕರು, **'ಬಿಸಿಲ ಬದುಕು'**
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ ೭೫೫೧, ಬಸವೇಶ್ವರನಗರ,
ಬೆಂಗಳೂರು - ೫೬೦ ೦೦೭೯

ಯಾರಿವಳು?

ಮನಮೋಹಕ ಚೆಲುವೆ
ನೂರಾರು ಕಣ್ಣುಳ್ಳವಳು
ಕಣ್ಣುಕಟ್ಟುವ ಬಣ್ಣದವಳು
ಮೋಡವುಬಂದರೆ ಬಿಚ್ಚುವಳು ಸೀರೆ
- ಯಾರಿವಳು?

ಅಪ್ಪಿದರೆ ಮುತ್ತಿಕ್ಕುವಳು
ನೂಕಿದೊಡೆ ಓಡುವಳು
ಹೊಡೆದರೆ ಕುಣಿದಾಡುವಳು
ಒತ್ತಿ ಹಿಡಿದರೆ ಮುದುಡುವಳು
- ಯಾರಿವಳು?

ಅವಳಿಗಿಲ್ಲ ಬಾಯಾಗ ಹಲ್ಲು
ಹೊಡೆದರೆ ಮಾಡೋದಿಲ್ಲ ಗುಲ್ಲು
ಆದರೆ ಅವಳೇನು ಮುದುಕಿಯಲ್ಲ
ನೋಡಲು ಸುರಸುಂದರಿಯಂತಿರುವವಳಲ್ಲ
- ಯಾರಿವಳು?

(ಉತ್ತರ: ನವಿಲು: ಚೆಂಡು, ಹಾವುರಾಣಿ)

○ ಅಮೃತ ಎಸ್. ಕುಂಬಾರ, ನಿರ್ಣಾ

ಆಹಾ, ಎಂಥಾ ಸೋಜಿಗ!

ಪುಟ್ಟ ಪುಟ್ಟ ಪುಟಾಣಿ ಹಕ್ಕಿ
ಕಾಡಲಿ ಅಲೆದು ಹುಲ್ಲನು ಹೆಕ್ಕಿ
ಹುಟ್ಟು ಜಾಣ್ಮೆಗೆ ತಾಳ್ಮೆಯ ಬೆರಸಿ
ಕಲಾಕೌಶಲ ಸೌರಭ ಸೂಸಿ
ಗೂಡನು ಕಟ್ಟಿದೆ ಗೀಜಗ!
ಆಹಾ, ಎಂಥಾ ಸೋಜಿಗ!
ಹಳ್ಳಕೊಳ್ಳ ದಡದ ಗಿಡದಲಿ
ಆಳಬಾವಿಯ ಗಿಡಗಂಟಿಯಲಿ
ವೈರಿಯ ಕಾಟವು ಇರದಿರುವಲ್ಲಿ
ಹಾವಿಗೂ ಗೂಡು ಎಟುಕದ ತೆರದಲಿ
ಯುಕ್ತಿಯ ಮಾಡಿದೆ ಗೀಜಗ!
ಆಹಾ; ಎಂಥಾ ಸೋಜಿಗ!
ಎಳೆಸುಳಿಗಾಳಿಗೆ ಜೋಲುವ ಗೂಡನು
ಬಿರುಮಳೆ ಹೊಯ್ದರು ನೆನೆಯದ ಗೂಡನು
ರೇಶಿಮೆ ಹಾಸಿನ ಬೆಚ್ಚನೆ ಗೂಡನು
ಮನುಜ ಸೃಷ್ಟಿಗೆ ನಿಲುಕದ ಗೂಡನು
ಕಟ್ಟಿದೆ ಪುಟಾಣಿ ಗೀಜಗ!
ಆಹಾ; ಎಂಥಾ ಸೋಜಿಗ!

○ ಚಂದ್ರಗೌಡ ಕುಲಕರ್ಣಿ



ಹೂದೋಟವ ನಾ ಮಾಡುವೆನು

ಅಪ್ಪಾ ನಾನೂ
ಮನೆಯ ಮುಂದೆ
ಹೂವಿನ ಗಿಡಗಳ ನೆಡುವೆನು

ಪುಟ್ಟ ಪುಟ್ಟ
ಗಿಡಗಳ ನೆಟ್ಟು
ಬುಡಕೆ ಕಟ್ಟೆಯ ಕಟ್ಟುವೆನು

ದಿನವೂ ತಪ್ಪದೆ
ನೀರನು ಎರೆಯುವೆ
ಪಾಲನೆ ಪೋಷಣೆ ಮಾಡುವೆನು

ಹಚ್ಚ ಹಸುರಾಗಿ
ಗಿಡಗಳನೆಲ್ಲ
ಆಳೆತ್ತರದಿ ನಾ ಬೆಳೆಸುವೆನು

ಜಾಜಿ ಸಂಪಿಗೆ
ಗುಲಾಬಿ ಮಲ್ಲಿಗೆ
ಮನೆಯ ಮುಂದೆಯೆ ಕಾಣುವೆನು

ಅರಳಿದ ಹೂಗಳ
ಚೆಲುವನು ಕಂಡು
ನಾ ಸಂತಸದಿ ನಲಿದಾಡುವೆನು

○ ಗೋಪಾಲಕೃಷ್ಣ ವಂಡ್ಸೆ

ಕೊಡಗಿನ ಕೆಚ್ಚೆದೆಯ ಖಳನಟ ಎಂ. ಎಂ. ಐಯ್ಯಪ್ಪ

ಎಪ್ಪತ್ತರ ದಶಕದಲ್ಲಿ ಅನಿರೀಕ್ಷಿತವಾಗಿ ಸಿನಿಮಾರಂಗಕ್ಕೆ ಪಾದಾರ್ಪಣೆ ಮಾಡಿದ ಕೊಡಗಿನ ಐಯ್ಯಪ್ಪನವರು ಥೇಟ್ ನಾಯಕ ನಟನಂತಿದ್ದರು. ಆರಡಿಯ ಎತ್ತರ. ತಿಳಿಗೆಂಪು ಬಣ್ಣ, ಫಳ ಫಳ ಹೊಳೆಯುವ ಸೂರ್ಯನ ಕಣ್ಣು, ಮಾತು ಮೃದು. ತಲೆಯ ಮೇಲೆ ಅಲೆ ಅಲೆಯಾಗಿ ಮಲಗಿ ಮರೆಯಾಗಿರುವ ಗುಂಗುರು ಕೂದಲು. ಕಳಶಪ್ರಾಯವೆಂಬಂತೆ ಕರಾಟೆಯಲ್ಲಿ ಬ್ಲಾಕ್‌ಬೆಲ್ಟ್ ಬೇರೆ! ಇದಿಷ್ಟು ಅವರ ಬಾಹು ವರ್ಣನೆ. ಬಹಳಷ್ಟು ನಾಯಕ ನಟರು ಬಣ್ಣದಲ್ಲೂ ಹೈಟು ವೆಯಿಟ್‌ನಲ್ಲೂ ಯಾವುದಕ್ಕೂ ಕಡಿಮೆ ಇರುವುದಿಲ್ಲ. ಆದರೆ ಅಂಥವರಲ್ಲಿ ನಟನೆ ಶೂನ್ಯ. ಐಯ್ಯಪ್ಪನವರಿಗೆ ಹಾಗಲ್ಲ. ನಾಯಕನಿಗೆ ಇರಬೇಕಾದ ಹಾವ ಭಾವ, ಯಾವುದೇ ಪಾತ್ರಕ್ಕೆ ಜೀವ ತುಂಬುವ ಅಭಿನಯ, ಇವರಿಗೆ ಸಹಜವಾಗಿ ಸಿದ್ಧಿಸಿತ್ತು. ಆದಾಗ್ಯೂ ಇವರು ಮೊದಲು ಕೆಲಸಕ್ಕೆ ಸೇರಿದ್ದು ಮಿಲಿಟರಿಯಲ್ಲಿ. ೧೯೭೦ನೇ ವರ್ಷದಲ್ಲಿ ಮಿಲಟರಿಯ ಇನ್ ಫೆಂಟ್ರಿಯಲ್ಲಿ ಆಫೀಸರ್ ಆಗಿ ನೇಮಕಗೊಂಡು, ದೇಶ ವಿದೇಶಗಳನ್ನು ಸುತ್ತಿ ಜೀವನಾನುಭವ ಬೆಳೆಸಿಕೊಂಡರು.

> “ ಅದೆಷ್ಟೋ ಸಿನಿಮಾಗಳಲ್ಲಿ ಮಾಡಿದ್ದೇನೆ ಸಾರ್; ತೃಪ್ತಿ ಇದೆ. ಕೆಲವು ಕಹಿ ಘಟನೆಗಳಿಂದ ದುಃಖವೂ ಆಗಿದೆ. ಅದು ಬೇರೆ ವಿಷಯ ಬಿಡಿ. ಆದರೆ, ಬಂಗ್ಲಾದೇಶದಲ್ಲಿ ನಮ್ಮ ದೇಶದ ಪರವಾಗಿ ಯುದ್ಧಕ್ಕೆ ಹೊರಟದ್ದು ನೆನೆದರೆ, ಈಗಲೂ ಪರಮಾನಂದವಾಗುತ್ತದೆ. ”




೧೯೭೧ರ ಸುಮಾರಿಗೆ, ಬಂಗ್ಲಾ- ಇಂಡಿಯಾ ದೇಶಗಳ ಯುದ್ಧ ನಡೆಯುವಾಗ, ಭಾರತದ ಪರವಾಗಿ ಐಯ್ಯಪ್ಪನವರು ಬಂಗ್ಲಾದೇಶಕ್ಕೂ ಹೋಗಿದ್ದರು. ಇದು ಅವರ ಬಹುದೊಡ್ಡ ಸಾಧನೆ. ದೇಶ ಪ್ರೇಮ ಕೂಡ.

"ಅದೆಷ್ಟೋ ಸಿನಿಮಾಗಳಲ್ಲಿ ಮಾಡಿದ್ದೇನೆ ಸಾರ್; ತೃಪ್ತಿ ಇದೆ. ಕೆಲವು ಕಹಿ ಘಟನೆಗಳಿಂದ ದುಃಖವೂ ಆಗಿದೆ. ಅದು ಬೇರೆ ವಿಷಯ ಬಿಡಿ. ಆದರೆ, ಬಂಗ್ಲಾ ದೇಶದಲ್ಲಿ ನಮ್ಮ ದೇಶದ ಪರವಾಗಿ ಯುದ್ಧಕ್ಕೆ ಹೊರಟದ್ದು ನೆನೆದರೆ, ಈಗಲೂ ಪರಮಾನಂದವಾಗುತ್ತದೆ." ಎನ್ನುವ ಐಯ್ಯಪ್ಪನವರು ಅಖಂಡ ದೇಶ ಪ್ರೇಮಿಯಂತೆ ಕಾಣುತ್ತಾರೆ. ಇದೇ ವೃತ್ತಿಯಲ್ಲಿ ಮೂರು ವರ್ಷಗಳ ಸೇವೆ ಮಾಡಿದ ಬಳಿಕ, ಅಂದರೆ ೧೯೭೩ರಲ್ಲಿ 'ಆಫೀಸರ್' ಹುದ್ದೆಗೆ ರಾಜಿನಾಮೆ ಇತ್ತು, ತಮ್ಮ ಊರಿಗೆ ಮರಳಿ ಬಂದರು. ಮನೆಯಲ್ಲಿ ಸುಮ್ಮನೆ ಕೂತಿರಲಾಗದೆ, ಕೆಲವು ವರ್ಷಗಳ ಕಾಲ ಪ್ರಸಿದ್ಧ ತಾಜ್‌ಗ್ರೂಪ್ ಹೋಟೇಲಿನ ಕಾರ್ಯದರ್ಶಿಯಾಗಿಯೂ, ಸ್ಪನ್‌ಸಿಲ್ಕ್ ಇಂಡಿಯಾ ಲಿಮಿಟೆಡ್‌ನಲ್ಲಿ ಪರ್ಸನಲ್ ಮ್ಯಾನೇಜರ್ ಆಗಿಯೂ, ಪೆಪ್ಸಿ, ಕೊಕೋ ಕೋಲಾದಲ್ಲಿಯೂ ಕೂಡ ಪರ್ಸನಲ್ ಮ್ಯಾನೇಜರ್ ಆಗಿಯೂ ಕಾರ್ಯನಿರ್ವಹಿಸಿದ ಇವರು, ವೃತ್ತಿಯಿಂದ ವೃತ್ತಿಗೆ ಅನುಭವವನ್ನು ವಿಸ್ತರಿಸಿಕೊಳ್ಳುತ್ತಲೇ ಹೋದರು.



ವಿವಿಧ ಜನರ ಮನಸ್ತತ್ವ, ಸಂಸ್ಕೃತಿ, ಬೇರೆ ಬೇರೆ ಭಾಷೆಗಳನ್ನು ಸಮರ್ಥವಾಗಿ ಅರ್ಥಮಾಡಿಕೊಂಡಿರುವುದರಿಂದಲೇ ಇಂದು ಐಯ್ಯಪ್ಪನವರು ಯಾವುದೇ ಪಾತ್ರಕ್ಕೂ ಜೀವ ತುಂಬುವ ಅರ್ಹತೆ ಪಡೆದಿದ್ದಾರೆ.

ಈಗಾಗಲೇ ಹೇಳಿದಂತೆ, ಸಿನಿಮಾ ಅವರಿಗೆ



ವೃತ್ತಿಯಾಗಿರಲಿಲ್ಲ. ಪ್ರವೃತ್ತಿ ಯಾಗಿತ್ತು. 'ಸೃಷ್ಟಿಯಲ್ಲಿ ಯಾರು ಏನಾಗು ತ್ತಾರೋ ಹೇಳಲು ಸಾಧ್ಯವಿಲ್ಲ' ಹೀಗೆ ಇರಬೇಕೆಂಬ ನಿಯಮವೂ ಇಲ್ಲ, ಬಂದದ್ದನ್ನು ಇಡಿಯಾಗಿ ಸ್ವೀಕರಿಸು ತ್ತಲೇ ಹೋಗಬೇಕು. ಅದುವೇ ಜೀವನ' ಎಂದು ಮಾರ್ಮಿಕವಾಗಿ ಮಾತನಾಡುವ ಅಯ್ಯಪ್ಪನವರು ೧೯೭೬ರಲ್ಲಿ ಅನಿರೀಕ್ಷಿತವಾಗಿ 'ಸ್ವರ್ಣಮಹಲ್ ರಹಸ್ಯ' ಸಿನಿಮಾದಲ್ಲಿ ನಟಿಸಿದರು. ಇದು ಅವರ ಆರಂಭದ ಚಿತ್ರ ಮಾತ್ರ! ಅರಳುವ ಪ್ರತಿಭೆ ಮೊಳಕೆಯಲ್ಲೇ ಕಾಣು ಎನ್ನುವಂತೆ, ಐಯ್ಯಪ್ಪನವರು ಯಾವುದೇ ಮೈ ಚಳಿ ಇಲ್ಲದೇ ಸಹಜವಾಗಿ ನಟಿಸಿದರಂತೆ.

'ನನಗೆ ಅದೇಕೋ stage fear, ಇಲ್ಲ' ಈಗ ನಟಿಸಿದಂತೆ, ಮೊದಲ ಬಾರಿಗೂ ಅದೇ ರೀತಿ ನಟಿಸಿದ ನೆನಪು. ನಿಜವಾದ ನಟನೆ ಸಹಜವಾಗಿ ಮೂಡಿಬರಬೇಕು. ಅದು ಯಾವುದೇ ವಿಶ್ವವಿದ್ಯಾಲಯದಲ್ಲಿ ಕಲಿಸುವ ವಿದ್ಯೆಯಲ್ಲ; ಈಗಲೂ, ನಿರ್ದೇಶಕ/ನಿರ್ಮಾಪಕ ಗೆಳೆಯರಿಗೆ ಒಂದು ಮಾತನ್ನು ವಿನಂತಿಸಿಕೊಳ್ಳುತ್ತೇನೆ; ಸಿನಿಮಾದಲ್ಲಿ ಯಾವುದೇ ವರ್ಣನೀತಿಗೆ ಬೆಲೆ ಕೊಡಬಾರದು; ಇನ್‌ಫ್ಲುಯೆನ್ಸ್‌ಗೆ ಬಲಿಯಾಗಬಾರದು; ಪಾತ್ರಕ್ಕೆ ಸರಿ ಹೋಗದ ಬೂಟಾಟಿಕೆಯ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳಬಾರದು. ಆದರೆ, ಪಾತ್ರದಲ್ಲಿ ಪಾತ್ರವಾಗಿ ಬಿಡುವ ಪಾತ್ರಕ್ಕೆ ಸರಿಹೊಂದುವ ಎಲ್ಲಕ್ಕಿಂತ ಹೆಚ್ಚಾಗಿ ಪಾತ್ರಕ್ಕೆ ಜೀವ ತುಂಬವ ವ್ಯಕ್ತಿ ಯಾರೇ ಆಗಿರಲಿ; ಅಂಥವನ ಆಯ್ಕೆ ಮಾಡಬೇಕು. ಅಂಥ ಚಿತ್ರ ಯಶಸ್ವಿಯಾಗುತ್ತದೆ. ನಟನೆಗೆ ಭಾಷೆ, ಜಾತಿ ವರ್ಣ ನೀತಿಗಳಿಲ್ಲ; ಅದೊಂದು ಅಪೂರ್ವ ಕಲೆ;' ಎನ್ನುವ ಐಯ್ಯಪ್ಪನವರು ಈಗಾಗಲೇ ಸುಮಾರು ೬೦ ಸಿನಿಮಾಗಳಲ್ಲಿ ನಟಿಸಿದ್ದಾರೆ.

'ಅಜೇಯ' ಚಿತ್ರ ನೋಡಿದವರಿಗೆ ಐಯ್ಯಪ್ಪನವರು ನೆನಪಾಗದೇ ಇರುವುದಿಲ್ಲ. ಮುಖ್ಯ ಖಳನಟನ ಪಾತ್ರ ಮಾಡಿರುವ ಇವರು ನಟಿಸುವಾಗ ತಮ್ಮನ್ನು ತಾವು ಸಂಪೂರ್ಣವಾಗಿ ಮರೆಯುತ್ತಾರಂತೆ. 'ಸಿಡಿದೆದ್ದ ಶಿವ', 'ಜೀವನ ಸಂಘರ್ಷ, ಪರಾಜಿತ, ಜಿಮ್ಮಿಗಲ್ಲು, ತವರು ಬೀಗರು, ಮನ ಮಿಡಿಯಿತು, ಸವ್ಯಸಾಚಿ, ಮದರ್ ಇಂಡಿಯ', ಮುಂತಾದ ಯಶಸ್ವೀ ಚಿತ್ರಗಳಲ್ಲಿ ಮುಖ್ಯ ಪಾತ್ರಧಾರಿಯಾಗಿದ್ದ ಐಯ್ಯಪ್ಪನವರಿಗೆ ಹದಿನಾಲ್ಕು ಭಾಷೆ ಬರುತ್ತವಂತೆ. ಮಿಲಿಟರಿಯಲ್ಲಿರುವಾಗ ಇಷ್ಟೊಂದು ಭಾಷೆ, ಕಲಿತರುವುದಾಗಿ ಹೇಳುವ ಇವರು, ತಮಿಳು, ತೆಲುಗು ಮಲಯಾಳಂನ ಹಲವಾರು ಚಿತ್ರಗಳಲ್ಲಿ ನಟಿಸಿದ್ದಾರೆ.

'ಸೆಲ್ವ, ಸೂರ್ಯನ್' 'ವಾಲ್ಟರ್ ವೆಟ್ರಿವೇಲು' 'ಇಂದೂ, ಸೇತುಪತಿ ಐಪಿ ಎಸ್, ಕಾದಲ್ ಪಿಳ್ಳೈ' ಮುಂತಾದ ಪ್ರಸಿದ್ಧ ತಮಿಳು ಚಿತ್ರಗಳಲ್ಲಿ ಐಯ್ಯಪ್ಪನವರು ಖಳನಾಯಕರಾಗಿ ನಟಿಸಿದ್ದಾರೆ.

ಇವುಗಳಲ್ಲಿ 'ಸೂರ್ಯನ್' ಚಿತ್ರ ಅವರಿಗೆ ಅಪಾರ ಕೀರ್ತಿ, ಹಣ ತಂದು ಕೊಟ್ಟ ಚಿತ್ರ ಮಾತ್ರವಲ್ಲ ಇದು ತಮಿಳುನಾಡಿನಾದ್ಯಂತ ಶತದಿನೋತ್ಸವ ಆಚರಿಸಿತು. ಅದನ್ನು ತೆಲುಗಿಗೆ ಅನುವಾದಿಸಿದಾಗ ಅಲ್ಲೂ ಬಾಕ್ಸಾಫೀಸು ಹಿಟ್ ಆಯಿತು. ಇದರಿಂದ ಐಯ್ಯಪ್ಪನವರು ತೆಲುಗು ಚಿತ್ರಪ್ರೇಮಿಗಳಿಗೂ ಚಿರಪರಿಚಿತರಾದರು. 'ವಾಲ್ಟರ್ ವೆಟ್ರಿವೇಲ್, ಇಂದೂ' ಚಿತ್ರಗಳೂ ಶತದಿನೋತ್ಸವ ಆಚರಿಸಿದಾಗ, ತಮಿಳರ ಮನ್ನಣೆ ಗಳಿಸಿದರು; ಅದು ಅವರ ಶುಕ್ರ ದಶೆಯ ಕಾಲ. ದಕ್ಷಿಣ ಭಾರತದ ಖ್ಯಾತ ನಿರ್ದೇಶಕ ಮಣಿರತ್ನಂ, ಪ್ರಸಿದ್ಧ ನಿರ್ಮಾಪಕ ಕುಂಚುಮೋನ್ ಅವರು ಐಯ್ಯಪ್ಪನವರನ್ನು ತಮಿಳುನಾಡಿನಲ್ಲೇ ಇರಲು ಹೇಳಿದರಂತೆ.

ಕನ್ನಡದ ಕಟ್ಟಾ ಪ್ರೇಮಿಯಾದ ಐಯ್ಯಪ್ಪನವರಿಗೆ ಅದು ರುಚಿಸಲಿಲ್ಲ. 'ಕಲೆಗೆ ಯಾವುದೇ ಎಲ್ಲೆ ಇಲ್ಲವಾದ್ದರಿಂದ ಯಾರೇ ಬಂದು ಕರೆದರೂ ಪಾರ್ಟುಮಾಡಿಬರಬಹುದು. ಆದರೆ, ತಾಯ್ನಾಡನ್ನು ಬಿಟ್ಟು ಅಲ್ಲೆ ಉಳಿಯುವುದು ನನಗೆ ಇಷ್ಟವಿಲ್ಲ. ನನ್ನ ಕೊನೆ ಉಸಿರು ಇರುವವರೆಗೂ ಕನ್ನಡ ಸಿನಿಮಾ ರಂಗದಲ್ಲೇ ಇರುವ ಬಯಕೆ ನನ್ನದು' ಎನ್ನುವ ಐಯ್ಯಪ್ಪನವರಿಗೆ ಕನ್ನಡ ಚಿತ್ರರಂಗದಲ್ಲಿ ಹಲವಾರು ಕಹಿ ಅನುಭವಗಳಾಗಿವೆ. ಕೆಲವು ಜನ ನಿರ್ದೇಶಕ/ನಿರ್ಮಾಪಕರು, ತಮ್ಮ ಸಿನಿಮಾಕ್ಕೆ ಬುಕ್ ಮಾಡಿಕೊಳ್ಳುತ್ತಾರೆ. ತೀರಾ ಷೂಟಿಂಗ್ ಪ್ರದೇಶಕ್ಕೆ ಹೋದಾಗ ಲಿಸ್ಟ್‌ನಲ್ಲಿ ಪರಭಾಷ ನಟರು ಬಂದಿರುತ್ತಾರೆ. ಈ ರೀತಿಯ ಅನಾಗರೀಕರಿಗೆ ಏನೆನ್ನಬೇಕು?

ಪ್ರತಿಭಾವಂತ, ಪರಭಾಷಾನಟ/ನಟಿಯರಿಗೆ ಕನ್ನಡದ ಮೇಲಿನ ಪ್ರೀತಿ ಇದ್ದರೆ ಅಂಥವರನ್ನೂ ಕರೆಸಿಕೊಳ್ಳಲಿ ಆದರೆ, ಓಚರ್‌ಗೆ ಸೈನ್ ಹಾಕಿಸಿಕೊಂಡು ಬಳಿಕ ಇವರನ್ನು ಬಿಟ್ಟು ಅನ್ಯರಿಗೆ ಅವಕಾಶ ಕೊಡುವುದು ಆರೋಗ್ಯಕರ ವಿಷಯವಲ್ಲ.

ಐಯ್ಯಪ್ಪನವರು ನಟಿಸಿರುವ ಅರವತ್ತು ಚಿತ್ರಗಳ ಪೈಕಿ 'ತವರು ಬೀಗರು' ಚಿತ್ರ ಮೆಮರಬಲ್ ಅಂತ ಹೇಳ್ತಾರೆ. 'ಆ ಚಿತ್ರ ನನಗೆ ತುಂಬ ಇಷ್ಟ. ಯಾಕೆಂದ್ರೇ ಅದರಲ್ಲಿ ನನಗೆ ಇಷ್ಟವಾದ ಪಾತ್ರವಿತ್ತು. ಸಾಯಿಕುಮಾರ್‌ಗೆ ಅಣ್ಣನಾಗಿ ನಟಿಸಿದ್ದೆ. ಕೌಟುಂಬಿಕ ಚಿತ್ರವಾದ್ದರಿಂದ ಸೆಂಟಿಮೆಂಟಲ್ ಆಗಿ ನಟಿಸುವಾಗ ಭಾವುಕನಾಗುತ್ತಿದ್ದೆ. ಸೆಟ್‌ನಲ್ಲಿ ಪ್ರತಿಯೊಬ್ಬರೂ ಅದೇ ಥರ ಇದ್ದರು. ಆದರ ನಿರ್ದೇಶಕರು ಆ ಪಾತ್ರವನ್ನು ಮುಲಾಜಿಗೆ ಕೊಡಲಿಲ್ಲ, ಮುಖ

ನೋಡಿ ಕೊಡಲಿಲ್ಲ. ಪಾತ್ರ ನೋಡಿ ಕೊಟ್ಟಿದ್ದರು' ಹೀಗೆ ನೇರ ಹಾಗೂ ಸ್ಪಷ್ಟ ನಡೆ ನುಡಿಯ ಐಯ್ಯಪ್ಪನವರು ತಮ್ಮ ನಿರ್ಭೀತ ತಾತ್ವಿಕತೆಯಿಂದ ಹಲವು, ಅತ್ಯುತ್ತಮ ಪಾತ್ರ ಪಡೆಯಲಾರದೆ ವಂಚಿತರಾಗಿದ್ದಾರೆ.

ನಂಬಿದವರು ಮೋಸ ಮಾಡುವುದು, ನಂಬಿ ನಂಬದಂತಿರುವುದು, ಬಾಯೆಂದು ಬೆನ್ನಿಗೆ ಚೂರಿ ಹಾಕುವುದು, ಮಿತ್ರದ್ರೋಹಿಗಳಾಗುವುದು ಮಾನವನ ಟ್ರಾಜಡಿಯೂ ಹೌದು. ಹಾಗೆಂದು ಐಯ್ಯಪ್ಪನವರು ಯಾವುದೇ ಸೆಂಟಿಮೆಂಟ್ಸ್‌ಗೆ ಒಳಗಾಗುವುದಿಲ್ಲ. ಅವರದು ಕೆಚ್ಚೆದೆ. ಧೈರ್ಯ, ನಂಬುಗೆ, ಕೊಡುಗು ಜನರ ಮೂಲಭೂತ ಗುಣ. ಈ ರೀತಿಯ ದಿಟ್ಟ ಎದೆಗಾರಿಕೆಯನ್ನು ಪ್ರದರ್ಶಿಸಲು, ಮಲಯಾಳಂ ಸಿನಿಮಾ ರಂಗ ನೆರವಾಯಿತು. 'ದಿಸಿಟಿ' ಎಂಬ ಮಲಯಾಳಂ ಚಿತ್ರದಲ್ಲಿ ಐಯ್ಯಪ್ಪನವರದು ಮೆಮನ್ ಪಾತ್ರ. ಅಚ್ಚು ಕಟ್ಟಾಗಿ ಆ ಪಾತ್ರಕ್ಕೆ ಜೀವ ತುಂಬಿರುವುದರಿಂದ ಇಂದಿಗೂ ಮಲಯಾಳೀ ನಿರ್ದೇಶಕ/ನಿರ್ಮಾಪಕರು ಪ್ರೇಕ್ಷಕರು ಇವರನ್ನು 'ಮೆಮನ್ ಸಾಬ್' ಅನ್ನುತ್ತಾರಂತೆ.

ಈ ಎಲ್ಲಾ ಚಿತ್ರಗಳ ವಿಷಯ ಒಂದು ಕಡೆ ಇರಲಿ. ಇವರು ನಟಿಸಿರುವ 'ಏ' ಚಿತ್ರದ ಕಡೆ, ಇಡೀ ಭಾರತದ ಚಿತ್ರರಂಗ ಕಣ್ಣು ಹಾಯಿಸಿದೆ. ಈಗ ಕರ್ನಾಟಕದ ತುಂಬ 'ಏ' ಹುಡುಗರಿಂದ ಹಿಡಿದು ಹಿರಿಯರವರೆಗೆ 'ಏ' ಈ ಖ್ಯಾತಿ ಉಪೇಂದ್ರರಿಗೆ ಮಾತ್ರವಲ್ಲ ಇದರಲ್ಲಿ ನಟಿಸಿರುವ ಎಲ್ಲಾ ಕಲಾವಿದರಿಗೂ ಸಲ್ಲುತ್ತದೆ. ಐಯ್ಯಪ್ಪನವರದೂ ಮುಖ್ಯ ಪಾತ್ರ. ಹೆಚ್ಚಿನ ಮಾತಿನ ತಕಿಮಕಿ ಇಲ್ಲ. ಘನ ಗೌರವ ಫೈನಾನ್ಸ್ ಆಫೀಸರ್ ಪಾತ್ರಕ್ಕೆ ಐಯ್ಯಪ್ಪನವರ ವ್ಯಕ್ತಿತ್ವ ಅಚ್ಚೊತ್ತಿದಂತಿದೆ.

'ಏ' ಚಿತ್ರದ ಬಗ್ಗೆ ಅವರಿಂದಲೇ ಕೇಳಬೇಕು.

'ಏ' ಚಿತ್ರ ಡಿಫರೆಂಟ್ ಆಗಿದೆ. ನನ್ನ ರೋಲ್ ನನಗೆ ತೃಪ್ತಿ ನೀಡಿದೆ. ಹಾಗೇಂತ ನನ್ನ ಬಗ್ಗೆ ನಾನು ಹೊಗಳಿಕೊಳ್ಳುವುದಿಲ್ಲ. ಹೊಗಳಿಕೆಗೆ, ತೆಗಳಿಕೆಗೆ ಉಬ್ಬಿ ಹೋಗುವ ಜಾಯಮಾನ ನನ್ನದಲ್ಲ. ಯಾವಾಗಲೂ ಒಳ್ಳೆಯದನ್ನು ಸ್ವೀಕರಿಸ ಬೇಕಲ್ಲ ಸಾರ್' ೨೫ ವರ್ಷಗಳಿಂದ ಚಿತ್ರರಂಗದಲ್ಲಿದ್ದೇನೆ. ಇಂಥ ಚಿತ್ರದಲ್ಲಿ ನಟಿಸಿರಲಿಲ್ಲ. ಇನ್ನು ಮುಂದೆ ಇದೇ ರೀತಿಯ ವೈವಿಧ್ಯ ಪಾತ್ರಗಳು ಸಿಕ್ಕರೆ, ಇನ್ನೂ ಚೆನ್ನಾಗಿ ಅಭಿನಯಿಸುವ ಆಸೆ ಇದೆ.'


'ಏ' ಚಿತ್ರದಿಂದ ಸಂತಸಗೊಂಡಿರುವ ಇವರಿಗೆ ಈಗ ಕೈತುಂಬ ಕೆಲಸವಿದೆ. 'ಜೈಹಿಂದ್', ಅರ್ಜುನ್ ಅಭಿಮನ್ಯು, ಭಾರತನಾರಿ, ಲವರ್ಸ್, ಮುಂತಾದವು ಮುಂಬರಲಿರುವ ಕನ್ನಡ ಚಿತ್ರಗಳು. ಪ್ರತಿಯೊಂದರಲ್ಲೂ ಡಿಫರಂಟ್ ರೋಲ್. ಕನ್ನಡದಲ್ಲಿ ಮಾಡಿದ ರೋಲನ್ನು 'ಏ' ಚಿತ್ರ ಹಿಂದಿಗೆ ರಿಮೇಕ್ ಆದರೆ, ಕನ್ನಡದಲ್ಲಿ ಮಾಡಿದ ರೋಲನ್ನು ಹಿಂದಿಯಲ್ಲೂ ಮಾಡುವ ಸಾಧ್ಯತೆ ಇದೆಯಂತೆ.


ಇತ್ತೀಚೆಗೆ ತೆಲುಗಿನ ಖ್ಯಾತ ನಿರ್ಮಾಪಕರೊಬ್ಬರು ತಾವು ಮಾಡಲಿರುವ 'ಸದ್ದಾಂ' ಚಿತ್ರಕ್ಕೆ ಇರಾಕಿನ ಅಧ್ಯಕ್ಷ ಸದ್ದಾಂ ಹುಸೇನರ ಪಾತ್ರಕ್ಕೆ ಐಯ್ಯಪ್ಪನವರನ್ನೇ ಆಯ್ಕೆ ಮಾಡಿ ಅಡ್ವಾನ್ಸ್ ಕೊಟ್ಟು ಹೋಗಿದ್ದಾರಂತೆ. ಪೊದೆ ಮೀಸೆ, ದುಂಡುಗಲ್ಲ, ಅಗಲ ಕಂಗಳ, ಆರಡಿ ಎತ್ತರದ ಸದ್ದಾಂನ ಪಾತ್ರಕ್ಕೆ ಇವರೇ ಲಾಯಕ್ಕೂ ಎಂಬುದು ನಿರ್ದೇಶಕರ ವಾದವಂತೆ.

ಹೀಗೆ ಕನ್ನಡದ ಕಲಾವಿದರಾದ ಐಯ್ಯಪ್ಪನವರು ತಮಿಳು, ತೆಲುಗು, ಮಲಯಾಳಂದಲ್ಲೂ ಮಿಂಚುತ್ತಿದ್ದಾರೆ. 'ಸದ್ದಾಂ' ಚಿತ್ರ ಯಶಸ್ವಿಯಾದರೆ, ಇವರು ಇಂಟರ್‌ನ್ಯಾಷನಲ್ ಫಿಗರ್ ಆಗುವುದರಲ್ಲಿ ಅನುಮಾನವೇ ಇಲ್ಲ. 'ಏ' ಚಿತ್ರ ಕೂಡ ಹಿಂದಿಗೆ ರಿಮೇಕ್ ಆಗಿ ಹಿಟ್ ಆದರೆ, ಚಾಕೋಲೇಟ್ ಹೀರೋಗಳ ಮಧ್ಯೆ-ಐಯ್ಯಪ್ಪನವರು ಮಿಂಚುವ ಸಾಧ್ಯತೆ ಇದೆ.

ನಟನೆ, ವೃತ್ತಿ, ವಿವಿಧ ಭಾಷೆ, ದೇಶಪ್ರೇಮ ಮುಂತಾದ ವೈವಿಧ್ಯಮಯ ವ್ಯಕ್ತಿತ್ವ ರೂಪಿಸಿಕೊಂಡಿರುವ ಐಯ್ಯಪ್ಪನವರು 'ದಮಯಂತಿ' ಅವರ ಕೈ ಹಿಡಿದಿದ್ದಾರೆ. ಸುಖ ಸಂಸಾರದಲ್ಲಿರುವ ಈ ದಂಪತಿಗಳಿಗೆ ' ಮಿಥುನ್', 'ರೀಗನ್' ಎಂಬ ಮುದ್ದಾದ ಎರಡು ಹುಡುಗರಿದ್ದಾರೆ. ಇವರಿಗೂ ಕನ್ನಡದ ಭಾಷೆ,ಸಂಸ್ಕೃತಿ, ಸಿನಿಮಾವೆಂದರೆ, ಎಲ್ಲಿಲ್ಲದ ಪ್ರೀತಿ ಇದೆ.

○ ಎಂ. ಮೊಹ್ಮದ್ ಬಾಷ ಗೂಳ್ಯಂ


ಟೋಪಿ
ನ.N. ಪೋಲೇಶಿ
ಗಾಂಧೀಜಿಯವರು ಟೋಪಿ ಹಾಕದೆ ಇರೋ-
-ದನ್ನ ನೀ ನೋಡದೆ ಇದ್ರೇನಾಯ್ತು. ಅವರ
ಹೆಸರಿನಿಂದಲೇ ಅಲ್ವಾ ನಾವು ನಿಮಗೆ ಟೋಪಿ
ಹಾಕ್ತಿರೋದು!
ಸರ್, "ಸುಳ್ಳು ಹೇಳುವ ಸ್ಪರ್ಧೆ"ಯಲ್ಲಿ
ಭಾಗವಹಿಸಿದ್ದೇನೆ, ಒಂದೆರಡು ದಿನ
ಗಳವರೆಗೆ ನಿಮ್ಮ ಟೋಪಿ ಕೊಡ್ತೀರಾ?
ರಾಜಕಾರಣಿಗಳು ತಮಗೂ..
"ತಲೆ" ಇದೆ ಅಂತ ತೋರಿಸಿ-
ಕೊಳ್ಳಲು.. ಟೋಪಿ ಹಾಕ್ತಾರಂತೆ
ಕಾಣುತ್ತೇ ಅಲ್ವಾ..?


SHRI MM SOFTEK LIMITED